ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂತಿಮ ಪಂದ್ಯದಿಂದ ರೋಹಿತ್ ಔಟ್?

ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಅಂತಿಮ ಪಂದ್ಯದಿಂದ ದೂರ ಉಳಿಯುವ ನಿರೀಕ್ಷೆ ಇದೆ. ಈ ಸರಣಿಯ ಬೆನ್ನಿಗೆ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುವ ಮಾತುಗಳು ಕೇಳಿಬರುತ್ತಿವೆ.

ಪುಟ ತೆರೆದಂತೆ...

ನೆನಪುಗಳ ವಾಸನೆ ಮಧುರ
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ರೋಚಕತೆಯನ್ನೇ ಬಯಸುವ ಹೊಸ ದಿನಮಾನ!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ದಾರಿದೀಪೋಕ್ತಿ

ನೀವು ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳಿ ಅದನ್ನು ಪೂರ್ತಿಯಾಗಿ ನೆರವೇರಿಸುವ ತನಕ ಬೇರೆ ಕೆಲಸಗಳತ್ತ ಗಮನವನ್ನು ಕೊಡಬೇಡಿ. ಕೈಗೆತ್ತಿಕೊಂಡ ಕೆಲಸವನ್ನು ಪೂರ್ಣಗೊಳಿಸಿದ ನಂತರವೇ ಬೇರೊಂದು ಕೆಲಸವನ್ನು ಆರಂಭಿಸಿ. ಇಲ್ಲದಿದ್ದರೆ ಯಾವ ಕೆಲಸವೂ ಪೂರ್ಣಗೊಳ್ಳುವುದಿಲ್ಲ.

ವಕ್ರತುಂಡೋಕ್ತಿ

ಕಳೆದ ವರ್ಷ ನಿಮ್ಮ ಜೀವನದಲ್ಲಿ ಗುಣಾತ್ಮಕ ಬದಲಾವಣೆ ಆಗದಿದ್ದರೆ, ಹಿಂದಿನ ವರ್ಷ ಸ್ವೀಕರಿಸಿದ ರೆಸಲ್ಯೂಶನ್ನೇ ಸ್ವೀಕರಿಸಬಹುದು.

5 ವರ್ಷದ ಬಳಿಕ ಕೆಎಸ್ಆರ್‌ಟಿಸಿ, ದಶಕದ ಬಳಿಕ ಬಿಎಂಟಿಸಿ ಬಸ್ ದರ ಏರಿಕೆ

ಶೇ.15ರಷ್ಟು ದರ ಏರಿಸಿದ ಸರಕಾರ, ಜ.5ರಿಂದ ಪರಿಷ್ಕೃತ ಟಿಕೆಟ್ ದರ ಜಾರಿ

ಹೊಸ ವರ್ಷಕ್ಕೆ ದರ ಏರಿಕೆ ಬರೆ

ಬೆಂಗಳೂರು: ನೂತನ ವರ್ಷದ ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ರಾಜ್ಯ ಸರಕಾರ ಜನರಿಗೆ ಶಾಕ್ ನೀಡಿದ್ದು, ನಾಲ್ಕು ಸಾರಿಗೆ ನಿಗಮಗಳ ಟಿಕೆಟ್ ಶುಲ್ಕವನ್ನು ಶೇ.15ರಷ್ಟು ಏರಿಕೆ ಮಾಡಲು ತೀರ್ಮಾನಿಸಿದೆ. ಜ.5ರಿಂದ ಪರಿಷ್ಕೃತ ಟಿಕೆಟ್ ದರ ಜಾರಿಗೆ ಬರಲಿದೆ.

ಟಿಕೆಟ್ ಶುಲ್ಕ ಏರಿಸಬೇಕೆಂದು ಹಲವು ತಿಂಗಳುಗಳಿಂದ ನಾಲ್ಕು ಸಾರಿಗೆ ನಿಗಮಗಳು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೂ ಒಪ್ಪಿಗೆ ನೀಡಿರಲಿಲ್ಲ. ಕೆಲ ದಿನಗಳ ಹಿಂದಷ್ಟೇ ದರ ಏರಿಸುವ ಪ್ರಸ್ತಾಪ ಸರಕಾರದ ಮುಂದಿಲ್ಲವೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದರು. ಆದರೆ ಡಿಸೇಲ್ ದರ ಏರಿಕೆ, ಸಾರಿಗೆ ನೌಕರರ ವೇತನ ಸೇರಿದಂತೆ ಹಲವು ಕಾರಣಗಳಿಂದಾಗಿ ನಾಲ್ಕೂ ನಿಗಮಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದವು. ಆದ್ದರಿಂದ ಅನಿವಾರ್ಯವಾಗಿ ಬಸ್ ದರವನ್ನು ಏರಿಕೆ ಮಾಡಲಾಗಿದೆ ಎಂದು ಸರಕಾರ ಸ್ಪಷ್ಟಪಡಿಸಿದೆ.

ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಎಸ್ಆರ್‌ಟಿಸಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ, ವಾಯವ್ಯ ರಸ್ತೆ ಸಾರಿಗೆ ಹಾಗೂ ಬಿಎಂಟಿಸಿ ನಿಗಮ ಟಿಕೆಟ್ ದರವನ್ನು ಶೇ.15ರಷ್ಟು ಏರಿಕೆ ಮಾಡಲು ತೀರ್ಮಾನಿಸಲಾಗಿದೆ. ಬಿಎಂಟಿಸಿ ನಿಗಮ ದರ ಪರಿಷ್ಕರಣೆಯಾಗಿ 10 ವರ್ಷ ಕಳೆದಿದ್ದರೆ, ಇನ್ನುಳಿದ ನಿಗಮಗಳ ದರ ಏರಿಕೆಯಾಗಿ ಐದು ವರ್ಷ ಕಳೆದಿವೆ. ಆದ್ದರಿಂದ ಅನುದಾನ ಏರಿಕೆ ಮಾಡುವುದು ಅನಿವಾರ್ಯವಾಗಿತ್ತು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. → 4

ಸಂಪುಟದ ಇತರ ಪ್ರಮುಖ ತೀರ್ಮಾನ

- ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಾಲದ ಮಿತಿ 500- 5000 ಕೋಟಿಗೆ ಹೆಚ್ಚಳ
- ಬಿಬಿಎಂಪಿ ಮೂರನೇ ಹಂತದ ವೈಟ್ ಟ್ಯಾಪಿಂಗ್ ಕಾಮಗಾರಿ ಆದೇಶ ಹಿಂಪಡೆಯಲು ಒಪ್ಪಿಗೆ
- ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಪ್ರತ್ಯೇಕಿಸಿ, ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ
- 10 ಕೋಟಿ ವೆಚ್ಚದಲ್ಲಿ ರಾಗಿ ಬೆಳೆಯ ಸಂಗ್ರಹಣೆಗೆ ಸೆಣಬಿನ ಗೋಣಿ ಚೀಲಗಳ ಖರೀದಿಗೆ ಒಪ್ಪಿಗೆ

ಟಿಕೆಟ್ ದರದಲ್ಲಿ ಏರಿಕೆಯಾಗುವುದೆಷ್ಟು?

ಕರ್ನಾಟಕ ಸಾರಿಗೆ

ಎಲ್ಲಿಂದ ಎಲ್ಲಿಗೆ	ಪ್ರಸ್ತುತ	ಪರಿಷ್ಕೃತ
ಬೆಂಗಳೂರು-ಮಂಗಳೂರು	424	488
ಬೆಂಗಳೂರು- ಹುಬ್ಬಳ್ಳಿ	521	600
ಬೆಂಗಳೂರು- ಬೆಳಗಾವಿ	651	749
ಬೆಂಗಳೂರು- ಕಲಬುರಗಿ	726	835

ನಾನ್ ಎಸಿ ಸ್ಲೀಪರ್

ಎಲ್ಲಿಂದ ಎಲ್ಲಿಗೆ	ಪ್ರಸ್ತುತ	ಪರಿಷ್ಕೃತ
ಬೆಂಗಳೂರು-ಮಂಗಳೂರು	917	1055
ಬೆಂಗಳೂರು- ಹುಬ್ಬಳ್ಳಿ	840	966
ಬೆಂಗಳೂರು- ಬೆಳಗಾವಿ	942	1082
ಬೆಂಗಳೂರು- ಕಲಬುರಗಿ	954	1085

ಐರಾವತ ಕ್ಲಬ್‌ಕ್ಲಾಸ್

ಎಲ್ಲಿಂದ ಎಲ್ಲಿಗೆ	ಪ್ರಸ್ತುತ	ಪರಿಷ್ಕೃತ
ಬೆಂಗಳೂರು-ಮಂಗಳೂರು	1013	1165
ಬೆಂಗಳೂರು- ಹುಬ್ಬಳ್ಳಿ	1000	1150
ಬೆಂಗಳೂರು- ಬೆಳಗಾವಿ	1053	1160
ಬೆಂಗಳೂರು- ಕಲಬುರಗಿ	1100	1165

ಎಸಿ ಸ್ಲೀಪರ್

ಎಲ್ಲಿಂದ ಎಲ್ಲಿಗೆ	ಪ್ರಸ್ತುತ	ಪರಿಷ್ಕೃತ
ಬೆಂಗಳೂರು-ಮಂಗಳೂರು	1212	1394
ಬೆಂಗಳೂರು- ಹುಬ್ಬಳ್ಳಿ	999	1150
ಬೆಂಗಳೂರು- ಬೆಳಗಾವಿ	1186	1364
ಬೆಂಗಳೂರು- ಕಲಬುರಗಿ	1065	1160

ಬಿಜೆಪಿ ಅಧಿಕಾರಾವಧಿಯಲ್ಲಿ ಮಾಡಿದ್ದ 5900 ಕೋಟಿ ರು. ಸಾಲ ನಾಲ್ಕು ನಿಗಮಗಳಿಗೆ ಹೊರೆಯಾಗುತ್ತಿದೆ. ಆದ್ದರಿಂದ ನಾಲ್ಕು ವಿಭಾಗಗಳಿಂದಲೂ ದರ ಹೆಚ್ಚಳದ ಬಗ್ಗೆ ಕಳೆದ ಐದಾರು ತಿಂಗಳಿಂದ ಪ್ರಸ್ತಾಪ ಬಂದಿತ್ತು. ಈಗ ಶೇ.15 ಒಪ್ಪಿಗೆ ಸಿಕ್ಕಿದೆ. ಈ ಹೆಚ್ಚಳದಿಂದ ಸಾವಿರ ಕೋಟಿ ರುಪಾಯಿ ಹೆಚ್ಚುವರಿಯಾಗಿ ಬರಬಹುದು. ಇದರಿಂದಾಗಿ ನಷ್ಟದ ಪ್ರಮಾಣ ಕಡಿಮೆಯಾಗುತ್ತದೆ. ಆದ್ದರಿಂದ ಹೆಚ್ಚಿಸೋದು ಅನಿವಾರ್ಯ. **- ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

2024ರ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಪಟ್ಟಿ ಪ್ರಕಟ

ಜ.17ರಂದು ರಾಷ್ಟ್ರಪತಿ ಭವನದಲ್ಲಿ ಪ್ರಶಸ್ತಿ ಪ್ರದಾನ

ಮನು, ಗುಕೇಶ್ ಸೇರಿ ನಾಲ್ವರಿಗೆ ಖೇಲ್ ರತ್ನ ಪ್ರಶಸ್ತಿ

ದೆಹಲಿ: 2024ರ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ವಿಜೇತರ ಪಟ್ಟಿ ಗುರುವಾರ ಪ್ರಕಟಿಸಿದ್ದು, ಶೂಟರ್ ಮನು ಭಾಕರ್, ಚೆಸ್ ವಿಶ್ವ ಚಾಂಪಿಯನ್ ಡಿ.ಗುಕೇಶ್, ಭಾರತ ಹಾಕಿ ಪುರುಷರ ತಂಡ ನಾಯಕ ಹರ್ಮನ್‌ಪ್ರೀತ್ ಸಿಂಗ್, ಪ್ಯಾರಾ ಅಥ್ಲೀಟ್ ಪ್ರವೀಣ್ ಕುಮಾರ್ ಅವರಿಗೆ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ ಲಭಿಸಿದೆ. ಜ.17ರಂದು ರಾಷ್ಟ್ರಪತಿ ಭವನದಲ್ಲಿ ನಡೆಯಲಿರುವ ವಿಶೇಷ ಸಮಾ ರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕ್ರೀಡಾ ಇಲಾಖೆ ತಿಳಿಸಿದೆ.

ಮನು ಭಾಕರ್ ಒಲಿಂಪಿಕ್ಸ್‌ನ ಒಂದೇ ಆವೃತ್ತಿ ಯಲ್ಲಿ ಎರಡು ಪದಕಗಳನ್ನು ಗೆದ್ದು ಇತಿಹಾಸ ಬರೆದಿದ್ದರು. 10 ಮೀಟರ್ ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗ ಹಾಗೂ 10 ಮೀಟರ ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಮನು ಕಂಚು ಜಯಿಸಿದ್ದರು. ಇದೇ ಒಲಿಂಪಿಕ್ಸ್ ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ಭಾರತದ ಹಾಕಿ ಪುರುಷರ ತಂಡವು ಕಂಚಿನ ಸಾಧನೆ ಮಾಡಿತ್ತು. 18 ವರ್ಷದ ಗುಕೇಶ್ ಚೆಸ್ ಚಾಂಪಿಯನ್‌ಶಿಪ್ ನಲ್ಲಿ ಗೆಲುವು ಸಾಧಿಸಿ ದಾಖಲೆ ಬರೆದಿದ್ದರು.

• ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ

ಗುಕೇಶ್.ಡಿ
ಚೆಸ್

ಮನು ಭಾಕರ್
ಶೂಟಿಂಗ್

ಪ್ರವೀಣ್ ಕುಮಾರ್
ಪ್ಯಾರಾ ಅಥ್ಲೆಟಿಕ್ಸ್

ಹರ್ಮನ್‌ಪ್ರೀತ್ ಸಿಂಗ್
ಹಾಕಿ

ಮಂಡಿ ಕೆಳಗಿನ ಕಾಲು ಕಳೆದುಕೊಂಡಿರುವ ಹೈ ಜಂಪ್ ಪಟು ಪ್ರವೀಣ್, ಪ್ಯಾರಾ ಒಲಿಂಪಿಕ್ಸ್ ನಲ್ಲಿ ಟಿ64 ಚಾಂಪಿಯನ್ ಆಗಿ ಹೊರ ಹೊಮ್ಮಿದ್ದರು. → 4

ಬೆಳ್ಳಿತಟ್ಟೆಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ

ಬೆಂಗಳೂರು: ವಿಶ್ವವಾಣಿ ಸುದ್ದಿ ಸಂಪಾದಕ ಶಿವಕುಮಾರ್ ಬೆಳ್ಳಿತಟ್ಟೆ ಸೇರಿದಂತೆ ಹಲವು ಹಿರಿಯ ಪತ್ರಕರ್ತರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದೆ. ಈ ಬಗ್ಗೆ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ ತಿಳಿಸಿದ್ದು, ಶೀಘ್ರದಲ್ಲೇ ಪ್ರಶಸ್ತಿ ಪ್ರದಾನ ದಿನಾಂಕವನ್ನು ತಿಳಿಸಲಾಗುವುದು ಎಂದು ಹೇಳಿದ್ದಾರೆ.

ಸಂಗೀತ ನಿರ್ದೇಶಕ ಬಾಲಿ ನಿಧನ



ಬೆಂಗಳೂರು: ಹಿರಿಯ ತಾಳವಾದ್ಯ ಕಲಾವಿದ, ಸಂಗೀತ ನಿರ್ದೇಶಕ, ಆಯೋಜಕ ಎಸ್. ಬಾಲಸುಬ್ರಹ್ಮಣ್ಯಂ (ಬಾಲಿ) ಅವರು ಗುರುವಾರ ಕೊನೆಯುಸಿರು ಎಳೆದಿದ್ದಾರೆ. ಬಹುವಾದ್ಯ ಪರಿಣತರಾಗಿದ್ದ 71 ವರ್ಷದ ಬಾಲಿ ಅವರು ಅಲ್ಪಕಾಲಿಕ ಅನಾರೋಗ್ಯದಿಂದ ಬಳಲುತ್ತಿದ್ದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಅವರೆ ಬೇಳೆ ಮೇಳದಲ್ಲಿ ವಿವಿಧ ಖಾದ್ಯ ಸವಿದ ರಾಜಕೀಯ ಮುಖಂಡ

ವಿರೋಧಿಗಳಿಗೆ ಯಾವಾಗ್ಲೂ 'ನಿಮ್ ಬೇಳೆ ಬೇಯೊಲ್ಲ ನನ್ನ ಬಳಿ' ಅಂತಿರ್ತೀರಲ್ಲ... ಅದಕ್ಕೆ ಬೇಳೆ ಚೆನ್ನಾಗಿ ಬೇಯ್ಸಿ ತಂದಿದೀನಿ ನಿಮಗೋಸ್ಕರ...

ಆರೋಪ-ಪ್ರತ್ಯಾರೋಪ, ಒಳ ಏಟಿನಿಂದ ಸುಸ್ತಾದ ಶಿಸ್ತಿನ ಪಕ್ಷ

ಶೀಘ್ರದಲ್ಲೇ 2ನೇ ಹಂತದ ಹೋರಾಟಕ್ಕೆ ಯತ್ನಾಳ್ ತಂಡ ಸಿದ್ಧ

ಮುಂದುವರಿದ ಬಿಜೆಪಿ ಬಣದಾಟ

ಬೆಂಗಳೂರು: ಸಿ.ಟಿ.ರವಿ ಮತ್ತು ಲಕ್ಷ್ಮಿ ಹೆಬ್ಬಾಳ್ಕರ್ ನಡುವಿನ ಗಲಾಟೆ ಸಂದರ್ಭದಲ್ಲಿ ರಾಜ್ಯ ಬಿಜೆಪಿಯಲ್ಲಿದ್ದ ಬಣ ಬಡಿದಾಟ ತಣ್ಣಗಾಗಿತ್ತು ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ ಬಸನಗೌಡ ಯತ್ನಾಳ ಮತ್ತು ಬಿ.ವಿ.ವಿಜಯೇಂದ್ರ ನಡುವೆ ಮತ್ತೆ ಆರೋಪ ಪ್ರತ್ಯಾರೋಪ ಮುಂದುವರಿದಿದ್ದು, ಒಳ ಏಟಿನಿಂದ ಶಿಸ್ತಿನ ಪಕ್ಷ ಸುಸ್ತಾಗಿದೆ.

ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರು ಬೆಂಗಳೂರಿನಲ್ಲಿ ಇರುವಾಗಲೇ 'ನಾನು ಯಾರ ಜತೆಯೂ ಹೊಂದಾಣಿಕೆ ರಾಜಕಾರಣ ಮಾಡಿಲ್ಲ' ಎಂದು ಯತ್ನಾಳ್ ಹೇಳಿರುವುದು ಪಕ್ಷಕ್ಕೆ ಇರುಸುಮುರಿಸು ಉಂಟು ಮಾಡಿದೆ. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಬಸನಗೌಡ ಯತ್ನಾಳ, ಬಿಜೆಪಿಯಿಂದ ನನ್ನನ್ನು ಯಾಕೆ ಉಚ್ಚಾಟನೆ ಮಾಡುತ್ತಾರೆ. ನನ್ನನ್ನು ಉಚ್ಚಾಟಿಸಲಾಗುತ್ತದೆ ಎಂಬುದು ಕೇವಲ ಮಾಧ್ಯಮಗಳ ಸೃಷ್ಟಿ. ನಾನು ಯಾರ ಜತೆಯೂ ಹೊಂದಾಣಿಕೆ ರಾಜ ಕಾರಣ ಮಾಡಿಕೊಂಡಿಲ್ಲ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್, ಸಚಿವ ಜಮೀರ್ ಖಾನ್ ಜತೆಗೂ ನನಗೆ ಅಡ್ಜಸ್ಟ್‌ಮೆಂಟ್ ಇಲ್ಲ. ವಿಜಯೇಂದ್ರ ರಾಜ್ಯಾಧ್ಯಕ್ಷರು. ಹಾಗಾಗಿ ಅವರು ಪದೇ ಪದೆ ದೆಹಲಿ ನಾಯಕರನ್ನು ಭೇಟಿ ಮಾಡುತ್ತಾರೆ. ನಾನು ಯಾರ ಅಪಾಯಿಟ್‌ಮೆಂಟ್ ಕೇಳಿಲ್ಲ. ಯಾರ ಮೇಲೂ ದೂರು ಕೊಡಲ್ಲ. ನಮ್ಮ ಹೋರಾಟ ಏನಿ ದ್ದರೂ ಜನರ ಆಂದೋಲನ, ದೆಹಲಿ ಆಂದೋಲನ ವಲ್ಲ. ನನ್ನಂಥ ಪಕ್ಷನಿಷ್ಠ ಯಾರೂ ಇಲ್ಲ. ನಾನು ಕಾಂಗ್ರೆಸ್ ಭಿಕ್ಷೆಯಿಂದ ಶಾಸಕನಾಗಿಲ್ಲ ಎಂದು ಹೇಳಿದ್ದಾರೆ. → 4

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿ ಮಾಡುವ ಅಗತ್ಯ ನನಗಿಲ್ಲ. ನಮಗೆ ಹೊಸ ವರ್ಷ ಯುಗಾದಿ. ವಿಜಯೇಂದ್ರ ಅವರಿಗೆ ಯಾವುದು ಹೊಸ ವರ್ಷ ಎಂದು ನನಗೆ ಗೊತ್ತಿಲ್ಲ. **- ಬಸನಗೌಡ ಪಾಟೀಲ್ ಯತ್ನಾಳ್**

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೂಗುಚ್ಛ ನೀಡಿ ಸ್ವಾಗತಿಸಿದರು.

ಬೆಂಗಳೂರಿಗೆ ನಡ್ಡಾ

ಕೇಂದ್ರ ಸಚಿವರಾಗಿರುವ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಬೆಂಗಳೂರಲ್ಲಿ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಬಿ.ವೈ. ವಿಜಯೇಂದ್ರ, ಆರ್.ಅಶೋಕ ಸೇರಿದಂತೆ ಪಕ್ಷದ ಪ್ರಮುಖರು ಸ್ವಾಗತಿಸಿದರು. ಗುರುವಾರ ರಾಜಧಾನಿಯಲ್ಲಿ ತಂಗಲಿರುವ ನಡ್ಡಾ ಶುಕ್ರವಾರ ನಿಮಾನ್ಸ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿ ದೆಹಲಿಗೆ ತೆರಳಲಿದ್ದಾರೆ. ಈ ವೇಳೆ ಒಂದೆರಡು ಗಂಟೆ ಬಿಡುವಿನ ವೇಳೆಯಲ್ಲಿ ರಾಜ್ಯದ ಪ್ರಮುಖರು ಭೇಟಿ ಮಾಡುವ ಸಾಧ್ಯತೆ ಇದ್ದರೂ ಅಧಿಕೃತವಾಗಿ ಯಾವುದೇ ಸಭೆ ಹಾಗೂ ಚರ್ಚೆಗಳ ಕಾರ್ಯಪಟ್ಟಿ ಇಲ್ಲ.

12 ವರ್ಷಗಳಿಗೊಮ್ಮೆ ನಡೆಯುವ ಮಹಾಕುಂಭಮೇಳ ಜ.13ರಿಂದ (ಪೌಶ್ ಪೂರ್ಣಿಮಾ) ಫೆ.26ರವರೆಗೆ (ಮಹಾ ಶಿವರಾತ್ರಿ) ನಡೆಯಲಿದ್ದು, ಈಗಾಗಲೇ ನಾಗಾಸಾಧುಗಳು ಮೆರವಣಿಗೆ ಮೂಲಕ ಪ್ರಯಾಗ್‌ರಾಜ್‌ಗೆ ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ.

ಮಣಿಕಂಠ ರಾಥೋಡ್ ಆಡಿಯೊ ಬಿಡುಗಡೆ ಮಾಡಿದ ಪ್ರಿಯಾಂಕ್

ಖರ್ಗೆ ಕುಟುಂಬಕ್ಕೆ ಮಸಿ ಬಳಿಯಲು ಹೋರಾಟ

ಬೆಂಗಳೂರು: ಮಲ್ಲಿಕಾರ್ಜುನ ಖರ್ಗೆ ಹಾಗೂ ನನಗೆ ಮಸಿ ಬಳಿಯಬೇಕು ಎನ್ನುವ ಕಾರಣಕ್ಕೆ ಬಿಜೆಪಿಯವರು ಹೋರಾಟ ಮಾಡುತ್ತಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನನ್ನ ವಿರುದ್ಧ ಆಪಾದನೆ ಮಾಡುವುದಾದರೆ ಸರಿಯಾದ ದಾಖಲೆ ಸಮೇತವಾಗಿ ಮಾಡಲಿ. ಸಚಿನ್ ಸಾವಿನ ಪತ್ರದಲ್ಲಿ ಎಲ್ಲಿಯೂ ನನ್ನ ಹೆಸರನ್ನು ಉಲ್ಲೇಖಿಸಿಲ್ಲ. ಬಿಜೆಪಿಗರು ಸುಖಾಸುಮ್ಮನೆ ನನ್ನ ಬಗ್ಗೆ ವಾದ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ್ ನೇತೃತ್ವದಲ್ಲಿ ಕಲಬುರಗಿಯಲ್ಲಿ ನನ್ನ ವಿರುದ್ಧ ಮುತ್ತಿಗೆ ಹಾಕಲು ಮುಂದಾಗುತ್ತಿದ್ದಾರೆ. ರಾಠೋಡ್ ವಿರುದ್ಧ 20-30 ಕೇಸ್ ಇದ್ದರೂ ಕ್ರಮ ಆಗಿಲ್ಲ. ಆತ ಈ ಹಿಂದೆ ನನಗೆ ಜೀವ ಬೆದರಿಕೆ ಕೂಡ ಹಾಕಿದ್ದ. ಇದೀಗ ಆತನ ನೇತೃತ್ವದಲ್ಲಿ ಕಲಬುರಗಿ ಚಲೋ ಹಮ್ಮಿಕೊಂಡಿದ್ದಾರೆ ಎಂದ ಸಚಿವರು ಆಡಿಯೊವೊಂದನ್ನು ಬಿಡುಗಡೆ ಮಾಡಿದರು.

ಪತಿಯನ್ನೇ ಪೀಸ್ ಪೀಸ್ ಮಾಡಿದ ಪತ್ನಿ

ಚಿಕ್ಕೋಡಿ: ಕ್ಷುಲ್ಲಕ ಕಾರಣಕ್ಕೆ ಗಂಡನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿ ನಂತರ ದೇಹವನ್ನು ತುಂಡರಿಸಿ ಕಬ್ಬಿನ ಗದ್ದೆಗೆ ಎಸೆದ ಅಮಾನವೀಯ ಘಟನೆ ಬೆಳಗಾವಿಯ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಉಮರಾಣಿ ಗ್ರಾಮದಲ್ಲಿ ನಡೆದಿದೆ. ಶ್ರೀಮಂತ ಇಟ್ನಾಳೆ (50) ಕೊಲೆಯಾದ ವ್ಯಕ್ತಿ. ಕೊಲೆ ಮಾಡಿರುವ ಸಾವಿತ್ರಿ ಇಟ್ನಾಳೆಯನ್ನು (30) ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ವಿವರಪುಟ→ 4

ಗಿಲ್ ಸೇರಿ ನಾಲ್ವರಿಗೆ ಸಿಐಡಿ ಸಮನ್ಸ್

ಅಹಮದಾಬಾದ್: ಅತಿ ಹೆಚ್ಚು ಬಡ್ಡಿ ನೀಡುವ ಆಮಿಷ ವೊಡ್ಡಿ ಗ್ರಾಹಕರಿಗೆ ವಂಚನೆ ಮಾಡಿರುವ ಗುಜರಾತ್‌ನ ಬಿಝಡ್ ಗ್ರೂಪ್‌ನ ಮಾಲೀಕನ ಹೇಳಿಕೆ ಆಧರಿಸಿರುವ ಸಿಐಡಿ ಅಧಿಕಾರಿಗಳು, ಗುಜ ರಾತ್ ಟೈಟನ್ಸ್‌ನ ನಾಯಕ ಶುಭಮನ್ ಗಿಲ್, ಇತರೆ ಆಟಗಾರರಾದ ಸಾಯಿ ಸುದರ್ಶನ್, ರಾಹುಲ್ ಟೆವಾಟಿಯಾ ಹಾಗೂ ಮೋಹಿತ್ ಶರ್ಮಾ ಅವರಿಗೆ ಸಮನ್ಸ್ ಜಾರಿ ಮಾಡಿದೆ.

ವಿಶ್ವವಾಣಿ ಪುಸ್ತಕ

ಸಂಪಾದಕರ ಸಂಪ್ರೀತಿಯ
ಹೊಸ ಪುಸ್ತಕ

10% ಕಡಿತ
ಖರೀದಿಸಲು ಸುಲಭ
QR ಕೋಡ್‌ಗೆ ಹಣ ಪಾವತಿಸಿ,
ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರಗೆ ಕಳಿಸಿ.
6362393966
ರಿಯಾಯಿತಿ ದರ ₹ 225 (ಅಂಚೆ ವೆಚ್ಚ ಸೇರಿ)
amazon ನಲ್ಲೂ ಈಗ ಲಭ್ಯ
ಎಲ್ಲ ಪುಸ್ತಕ ಮಳಿಗೆಗಳಲ್ಲಿ ಲಭ್ಯ

ಸರಕಾರದ ಅನುದಾನವನ್ನು ಮಾತ್ರ ನೆಚ್ಚಿಕೊಳ್ಳದೇ ವೈಯಕ್ತಿಕವಾಗಿಯೂ ಅನೇಕರಿಗೆ ಸಹಾಯ

ಕ್ಷೇತ್ರದ ಅಭಿವೃದ್ಧಿಗೆ ಪ್ರದೀಪ್ ಹೊಸ ಸಂಕಲ್ಪ

ಬೆಂಗಳೂರು: ಹಲವು ವಿನೂತನ ಯೋಜನೆಗಳ ಮೂಲಕ 'ಮಾದರಿ' ಎನಿಸಿರುವ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರು, ಹೊಸ ವರ್ಷಕ್ಕೆ ಹೊಸ ಆಲೋಚನೆಗಳೊಂದಿಗೆ ವರ್ಷ ಆರಂಭಿಸಲು ಮುಂದಾಗಿದ್ದಾರೆ.

ಚಿಕ್ಕಬಳ್ಳಾಪುರಕ್ಕೆ ಮೆಟ್ರೋ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ಮಾಡುವುದು, ಚಿಕ್ಕಬಳ್ಳಾಪುರಕ್ಕೆ ಹೆಚ್ಚೆಚ್ಚು ಕೈಗಾರಿಕೆಗಳನ್ನು ತರುವ ನಿಟ್ಟಿನಲ್ಲಿ ಪ್ರಯಾಣಿಕ ಪ್ರಯತ್ನ ಮಾಡುವುದು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ಕೋಚಿಂಗ್ ನೀಡಲು ಕ್ರಮ ವಹಿಸುವುದು ಸೇರಿದಂತೆ ಹತ್ತು ಹಲವು ಹೊಸ ಸಂಕಲ್ಪಗಳನ್ನು ಮಾಡಿದ್ದಾರೆ.

ವಿಶ್ವವಾಣಿ ವಿಶೇಷ

ನಮ್ಮೂರಿಗೆ ನಮ್ಮ ಶಾಸಕ ಕನಸಿನ ಯೋಜನೆ ಯಶಸ್ವಿ: ಶಾಸಕರಾಗಿ ಆಯ್ಕೆಯಾದ ಕ್ಷಣ ಆರಂಭಿಸಿದ್ದ 'ನಮಸ್ತೆ ಚಿಕ್ಕಬಳ್ಳಾಪುರ' ಅಭಿಯಾನ ಮನೆಮಾತಾಗಿತ್ತು. ಅದಾದ ಬಳಿಕ ಆರಂಭಿಸಿದ 'ನಮ್ಮೂರಿಗೆ ನಮ್ಮ ಶಾಸಕ ಕನಸಿನ ಯೋಜನೆ' ಆರಂಭಿಸಿದ ಕೆಲವೇ ತಿಂಗಳಲ್ಲಿ ನೂರು ಗ್ರಾಮಗಳಿಗೆ ಭೇಟಿ ನೀಡಿ, ಜನರ ಸಂಕಷ್ಟವನ್ನು ಆಲಿಸಿದ್ದಾರೆ. ಪ್ರದೀಪ್ ಈಶ್ವರ್ ಆರಂಭಿಸಿದ ನಮ್ಮೂರಿಗೆ ನಮ್ಮ ಶಾಸಕ ಅಭಿಯಾನವನ್ನು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ಲಾಘಿಸಿದ್ದರು. ಇದೀಗ ಈ ಅಭಿಯಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುನ್ನಡೆಸಲು ಪ್ರದೀಪ್ ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ನಮ್ಮೂರಿಗೆ ನಮ್ಮ ಶಾಸಕ ಅಭಿಯಾನದಲ್ಲಿ ಕೇವಲ ಪ್ರದೀಪ್ ಈಶ್ವರ್ ಮಾತ್ರವಲ್ಲದೇ, ತಾಲೂಕಿನ ಎಲ್ಲ ಅಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಆದ್ದರಿಂದ ಗ್ರಾಮಗಳಲ್ಲಿರುವ ಶೇ.60ಕ್ಕೂ ಹೆಚ್ಚು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಸಿಗುತ್ತಿದೆ. ಇದರೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ರಸ್ತೆ, ಚರಂಡಿ, ಸಾರಿಗೆ ಸಮಸ್ಯೆ ಇದ್ದಂತೆ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ನೀಡಲು ಕ್ರಮವಹಿಸಲಾಗಿದೆ. ಈ ಮೂಲಕ ಜನತೆ ಅನುಭವಿಸುತ್ತಿರುವ ನೈಜ ಸಮಸ್ಯೆಗಳಿಗೆ ಪರಿಹಾರ ನೀಡುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. → 4

ಹೊಸ ಆಲೋಚನೆಗಳೇನು?

- ಚಿಕ್ಕಬಳ್ಳಾಪುರಕ್ಕೆ ಮೆಟ್ರೋ ಸಂಪರ್ಕ ಕಲ್ಪಿಸುವಂತೆ ಸರಕಾರಕ್ಕೆ ಮನವಿ; ಈ ನಿಟ್ಟಿನಲ್ಲಿ ಗಂಭೀರ ಪ್ರಯತ್ನ
- ಚಿಕ್ಕಬಳ್ಳಾಪುರಕ್ಕೆ ಹೆಚ್ಚೆಚ್ಚು ಕೈಗಾರಿಕೆಗಳನ್ನು ತರುವ ನಿಟ್ಟಿನಲ್ಲಿ ಪ್ರಯಾಣಿಕ ಪ್ರಯತ್ನ
- ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ಕೋಚಿಂಗ್ ನೀಡಲು ಕ್ರಮ
- ಪ್ರಾಯೋಗಿಕವಾಗಿ ಇಸ್ರೇಲ್ ಮಾದರಿಯ ಕೃಷಿ ಆರಂಭ
- 2027ರ ವೇಳೆಗೆ ಎತ್ತಿನಹೊಳೆ ನೀರು ಚಿಕ್ಕಬಳ್ಳಾಪುರಕ್ಕೆ ಬರುವುದಕ್ಕೆ ಅಗತ್ಯ ತಯಾರಿ
- ಸರಕಾರಿ ಮಕ್ಕಳನ್ನು ಏಮ್ಸ್, ಐಐಟಿಯಲ್ಲಿ ಪ್ರವೇಶ ಪಡೆಯುವಂತೆ ಮಾಡಲು ಉಚಿತ ಕೋಚಿಂಗ್
- ವೈಯಕ್ತಿಕವಾಗಿ ಸಾವಿರ ವಿದ್ಯಾರ್ಥಿಗಳಿಗೆ ಸಿಇಟಿ, ನೀಟ್ ಕೋಚಿಂಗ್ (ಪ್ರತಿಯೊಬ್ಬರಿಗೂ 50 ಸಾವಿರ ವೆಚ್ಚ)

ಚಿಕ್ಕಬಳ್ಳಾಪುರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಭವಿಷ್ಯದಲ್ಲಿ ಬೆಂಗಳೂರಿಗೆ ಪರ್ಯಾಯವಾಗಿ ಚಿಕ್ಕಬಳ್ಳಾಪುರವನ್ನು ಬೆಳೆಸುವುದು ನಮ್ಮ ಆಲೋಚನೆಯಾಗಿದೆ. ಇದಕ್ಕೆ ಬೇಕಿರುವ ಬುನಾದಿಯನ್ನು 2025ರಲ್ಲಿ ಹಾಕುವೆ. **- ಪ್ರದೀಪ್ ಈಶ್ವರ,** ಶಾಸಕ

ಸಮಾಚಾರ ಸಣ್ಣದಲ್ಲ

ಪ್ರಾಧಿಕಾರದಿಂದ ಶೇ.50ರಷ್ಟು ರಿಯಾಯಿತಿ

ದಾವಣಗೆರೆ: ಗಣರಾಜ್ಯೋತ್ಸವದ ದಿನಾಚರಣೆ ಅಂಗವಾಗಿ ಜನವರಿ ತಿಂಗಳು ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ ಹಾಗೂ ಎಲ್ಲ ಜಿಲ್ಲೆಗಳ ಕನ್ನಡ, ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲ ಪುಸ್ತಕ ಶೇ.50ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುವುದು. ಕನ್ನಡ ಪುಸ್ತಕ ಪ್ರಾಧಿಕಾರದ ಆನ್ ಲೈನ್ ಜಠಿಠಟಃ:// ೪ಟಟ.೪ಜ್ಞಚಿಠಿಚುಚ.ಜಟಡ.ಜ್ಞಿ ನಲ್ಲಿ ಕೂಡ ಈ ಶೇ.50 ರಿಯಾಯಿತಿ ಲಭ್ಯವಿದೆ. ಮಾಹಿತಿಗಾಗಿ ದೂ: 080-22107705 ಸಂಪರ್ಕಿಸಲು ಆಡಳಿತಾಧಿಕಾರಿ ಕಿರಣ್ ಸಿಂಗ್ ತಿಳಿಸಿದ್ದಾರೆ.

ರಿಯಾಯಿತಿ ದರದ ಬಸ್ ಪಾಸ್

ದಾವಣಗೆರೆ: ಪ್ರಸಕ್ತ ಸಾಲಿನ ವಿಕಲಚೇತನ ಫಲಾನುಭವಿಗಳು ರಿಯಾಯಿತಿ ದರದ ಬಸ್‌ಪಾಸ್ (ಹೊಸ, ನವೀಕರಣ) ಪಡೆಯಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಸೇವಾ ಸಿಂಧು ಪೋರ್ಟಲ್ ನಲ್ಲಿ http://serviceonline.gov.in/karnatka/ ನಲ್ಲಿ ಘಟಕ ವ್ಯವಸ್ಥಾಪಕರ ಕೌಂಟರ್ (ಐಡಿ) ಗೆ ಅರ್ಜಿ ಸಲ್ಲಿಸಬಹುದು. ಮತ್ತು ಹೊಸ ಪಾಸ್ ಪಡೆಯಲು ವಿಭಾಗೀಯ ನಿಯಂತ್ರಣಾಧಿಕಾರಿಗಳು ದಾವಣಗೆರೆ ವಿಭಾಗ ರವರ ಕೌಂಟರ್ (ಐಡಿ) ಗೆ ಅರ್ಜಿ ಸಲ್ಲಿಸಬೇಕು. ಪಾಸ್ ನವೀಕರಣ ಮಾಡಿಸಿಕೊಳ್ಳುವ ವಿತರಣಾ ಕೇಂದ್ರ: ಜ. 1ರಿಂದ ಫೆ. 28ರ ವರೆಗೆ ದಾವಣಗೆರೆ ಬಸ್ ನಿಲ್ದಾಣದಲ್ಲಿ ದಾವಣಗೆರೆ, ಜಗಳೂರು, ಚನ್ನಗಿರಿ ಫಲಾನುಭವಿಗಳು ನವೀಕರಣ ಮಾಡಿಸಿಕೊಳ್ಳಬಹುದು. ಜ. 1ರಿಂದ ಫೆ. 28 ರವರೆಗೆ ಹರಿಹರ ಬಸ್ ನಿಲ್ದಾಣದಲ್ಲಿ ಹರಿಹರ ಫಲಾನುಭವಿಗಳು ಪಾಸ್ ನವೀಕರಣ ಮಾಡಿಸಿಕೊಳ್ಳಬಹುದು.

ಪದವೀಧರರಿಗೆ ತರಬೇತಿ ಭತ್ಯೆ

ದಾವಣಗೆರೆ: 2024-25ನೇ ಸಾಲಿನ ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಭತ್ಯೆ ನೀಡಲು ಅರ್ಹ ಕಾನೂನು ಪದವೀಧರರಿಂದ ಅರ್ಜಿ ಅಹ್ವಾನಿಸಲಾಗಿದೆ. ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ -577006 ಅರ್ಜಿ ಕಚೇರಿಯಲ್ಲಿ ಪಡೆದು ದಾಖಲೆಗಳೊಂದಿಗೆ ಜ. 18ರೊಳಗಾಗಿ ಕಚೇರಿಗೆ ಸಲ್ಲಿಸಬೇಕು.

ಪಿಎಚ್.ಡಿ ವ್ಯಾಸಂಗ ವೇತನಕ್ಕಾಗಿ ಅರ್ಜಿ

ದಾವಣಗೆರೆ: 2024-25ನೇ ಸಾಲಿನ ಪ್ರಥಮ ವರ್ಷದಲ್ಲಿ ಪೂರ್ಣಾವಧಿ ಪಿಎಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ,3.ಬಿ ಗೆ ಸೇರಿದ ಹೊಸ ವಿದ್ಯಾರ್ಥಿಗಳಿಗೆ ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್ ನೀಡಲು ಅರ್ಹ ವಿದ್ಯಾರ್ಥಿಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜ.20 ಕೊನೆ. ವಿವರಗಳಿಗೆ ವೆಬ್ ಸೈಟ್ http://www.bcwd.karnataka.gov.in ಅಥವಾ ಸಹಾಯವಾಣಿ ಸಂ: 8050770004 ಸಂಪರ್ಕಿಸಿ.

ವಾರ್ಷಿಕ ಪ್ರಶಸ್ತಿಗೆ ಐವರು ಪತ್ರಕರ್ತರು ಆಯ್ಕೆ

ದಾವಣಗೆರೆ: ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗೆ ದಾವಣಗೆರೆ ಜಿಲ್ಲೆಯ ಮಹಿಳಾ ಪತ್ರಕರ್ತೆ ಸೇರಿದಂತೆ ಐವರು ಪತ್ರಕರ್ತರು ಆಯ್ಕೆಯಾಗಿದ್ದಾರೆ. ಪ್ರಜಾವಾಣಿ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ, ದೂರದರ್ಶನದ ಎ.ಎಲ್.ತಾರಾನಾಥ, ವಿಜಯವಾಣಿ ಹಿರಿಯ ವರದಿಗಾರ ರಮೇಶ ಜಹಗೀರದಾರ್, ಸುಭಾಷಿತ ಪತ್ರಿಕೆ ಸಂಪಾದಕ ಡಾ.ಕೆ.ಜೈಮುನಿ ಹಾಗೂ ಹರಿಹರದ ಲೋಕಪ್ರಭ ಪತ್ರಿಕೆ ಸಂಪಾದಕಿ ಡಿ.ಎನ್. ಶಾಂಭವಿ ನಾಗರಾಜ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಸೋಮವಾರ

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅಹಿತಕರ ಪ್ರಕರಣ | ಸಂಸದ ಕಾರಜೋಳ ಕಿಡಿ

ಅಧಿಕಾರಿ, ಗುತ್ತಿಗೆದಾರರ ಆತ್ಮಹತ್ಯೆ ಹೆಚ್ಚು

ಚಿತ್ರದುರ್ಗ: ಸಿದ್ದರಾಮಯ್ಯ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಸಂವಿಧಾನದ ಆಶಯದಂತೆ ಆಡಳಿತ ನಡೆಯುತ್ತಿಲ್ಲ. ಅಧಿಕಾರಿಗಳು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಸಿಎಂ ವಿರುದ್ಧ ಗುಡುಗಿದ್ದಾರೆ.

ಚಿತ್ರದುರ್ಗ ನಗರದ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದು, ಸ್ಪಷ್ಟವಾಗಿ ಕಾಣುತ್ತದೆ. ಖರ್ಗೆ ಬಂಟರು ಆತ್ಮಹತ್ಯೆಗೆ ಕಾರಣ ಆಗಿದ್ದಾರೆ. 5% ಹಣ ಕೊಡಿ ನಾವು ಟೆಂಡರ್ ಮಾಡಿ ಕೊಡುತೇವೆ ಎಂದು ಕಿರುಕುಳ ಕೊಟ್ಟಿದ್ದರಿಂದ ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾತ್ಸರದ ಉತ್ತರ ಕೊಡುತ್ತಾರೆ ಇವರಿಗೆ ಅಧಿಕಾರ ನಡೆಸುವ ನೈತಿಕತೆ ಇಲ್ಲ ಎಂದರು.

ಬಿಜೆಪಿಯವರು ಹಗರಣಗಳ ಬಗ್ಗೆ ಮಾತನಾಡಿದರೆ ದ್ವೇಷದ ರಾಜಕಾರಣ ಎಂದು ಹೇಳುತ್ತಾರೆ. ಹೊರತು ಯಾವುದೇ ಕ್ರಮ ಕೈಗೊಂಡಿಲ್ಲ. ಕಲುಬುರ್ಗಿಯಲ್ಲಿ ಬೃಹತ್ ಹೋರಾಟ ಮಾಡಲಿದ್ದಾವೆ. ಪೊಲೀಸರು ಕಾನೂನು ರೀತಿಕೆಲಸ ಮಾಡುತ್ತಿಲ್ಲ. ಕಾಂಗ್ರೆಸ್ ನಾಯಕರು ಮುಖಂಡರು ಹೇಳಿದಂತೆ ಕೆಲಸ ಮಾಡುತ್ತಿದ್ದಾರೆ. ಸರಿಯಾಗಿ ತನಿಖೆ ಮಾಡುತ್ತಿಲ್ಲ. ಆದ್ದರಿಂದ ಸಿದ್ದರಾಮಯ್ಯ ಅವರೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಮತ್ತು ಸಿಬಿಐಗೆ ತನಿಖೆ ವಹಿಸಬೇಕು ಎಂದು ಒತ್ತಾಯಿಸಿದರು.

ಕೆಲವೇ ದಿನಗಳ ಹಿಂದೆ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣವು ರಾಜ್ಯ ಮಾತ್ರವಲ್ಲ. ದೇಶಾದ್ಯಂತ ಸುದ್ದಿಯಾಗಿದೆ. ಅವರು ಬರೆದಿಟ್ಟ 7 ಪುಟಗಳ ಡೆತ್ ನೋಟಿನಲ್ಲಿ ಕಿರುಕುಳದ ಉಲ್ಲೇಖವಿದೆ. ರಾಜ್ಯ ಸರಕಾರದ ಕುಮ್ಮಕ್ಕಿನ ಆತ್ಮಹತ್ಯೆ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿದೆ. ಸರಕಾರ, ಸಚಿವರು, ಆಡಳಿತ ಪಕ್ಷದ ಶಾಸಕರ ಕುಮ್ಮಕ್ಕಿನಿಂದ ಹಿಂದೆಂದೂ ಇಂಥ ಸರಣಿ ಆತ್ಮಹತ್ಯೆ ಪ್ರಕರಣಗಳನ್ನು ಕೇಳಿರಲಿಲ್ಲ. ಟೆಂಡರ್ ಮಾಡಿಕೊಡಲು ಶೇ 5 ದುಡ್ಡಿನ ಬೇಡಿಕೆ ಇಟ್ಟಿರುತ್ತಾರೆ..ಪ್ರಿಯಾಂಕ್ ಖರ್ಗೆ ನಾನು ಹೇಳಿದ ಮಾತನ್ನು ಮೀರುವುದಿಲ್ಲ. ಸಚಿವರ ಬೆಂಬಲ ಇದೆ ಎಂದು ರಾಜು ಕಪನೂರ್ ಹೇಳಿದ್ದಾಗಿ ಸಚಿನ್ ಡೆತ್ ನೋಟಿನಲ್ಲಿ ಬರೆದಿದ್ದಾರೆ.

ಗೋಷ್ಠಿಯಲ್ಲಿ ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ತಿಪ್ಪೇಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಎ.ಮುರಳಿ, ಪ್ರಧಾನ ಕಾರ್ಯದರ್ಶಿಗಳಾದ ಸುರೇಶ್ ಸಿದ್ದಾಪುರ, ಸಂಪತ್ ಕುಮಾರ್, ರಾಜ್ಯ ರೈತ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್. ಮುಖಂಡರಾದ ಲಕ್ಷ್ಮೀಕಾಂತ್, ಮಾಧ್ಯಮ ವಕ್ತಾರ ಛಲವಾದಿ ತಿಪ್ಪೇಸ್ವಾಮಿ, ಇತರರು ಭಾಗವಹಿಸಿದ್ದರು.

ಚಿತ್ರದುರ್ಗ ನಗರದ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಸಂಸದ ಗೋವಿಂದ ಕಾರಜೋಳ ಮಾತನಾಡಿದರು.

ತನಿಖೆಗೆ ಸಹಕರಿಸಲು ಆಗ್ರಹ

ರಾಜ್ಯದ ಪೊಲೀಸ್ ಇಲಾಖೆಯಿಂದ ಅತ್ಯಂತ ಶಕ್ತಿಶಾಲಿ ಖರ್ಗೆ ಕುಟುಂಬದ ವಿರುದ್ಧ ತನಿಖೆ ಮಾಡಲು ಸಾಧ್ಯವಿಲ್ಲ. ಪ್ರಿಯಾಂಕ ಖರ್ಗೆಯವರಿಗೆ ಮರೆವು ಜಾಸ್ತಿ. ಪ್ರಿಯಾಂಕ ಖರ್ಗೆ, ಲಕ್ಷ್ಮಿ ಹೆಬ್ಬಾಳ್ಕರ್ ಅಷ್ಟೇ ಅಲ್ಲದೇ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ ತನಿಖೆಗೆ ಸಹಕರಿಸಬೇಕು ಎಂದು ಸಂಸದ ಗೋವಿಂದ ಕಾರಜೋಳ ಆಗ್ರಹಿಸಿದರು.

ಕಲಬುರಗಿಯಲ್ಲಿ ಪ್ರತಿಭಟನೆ ನಾಳೆ

ವಿಧಾನ ಪರಿಷತ್ ಸದಸ್ಯ ಕೆ.ಎಸ್ ನವೀನ್ ಮಾತನಾಡಿ, ಒಂದುವರೆ ವರ್ಷದ ಅವಧಿಯಲ್ಲಿ 06 ಜನ ಅಧಿಕಾರಿಗಳ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಪ್ರತಿಯೊಬ್ಬ ಅಧಿಕಾರಿಯ ಪ್ರಕರಣದಲ್ಲಿ ಒಬ್ಬ ಸಚಿವರ ಹೆಸರು ತಳುಕು ಹಾಕಿಕೊಂಡಿದೆ. ಈ ಸರಕಾರ ಅಧಿಕಾರಕ್ಕೆ ಬಂದಾಗ ಎಸ್.ಎಸ್ (ಸಿದ್ದರಾಮಯ್ಯ ಹಾಗೂ ಶಿವಕುಮಾರ್) ಸರಕಾರ ಅನ್ನುತಿದ್ದರು. ಈಗ ಎಸ್ ಎಸ್ ಸರಕಾರ ಆಗಿದೆ.. (ಸುಸೈಡ್ ಮತ್ತು ಸುಪಾರಿ, ಸುಳ್ಳು ಮತ್ತು ಸಾಲ ಸರಕಾರ). ಸುಸೈಡ್ ನಲ್ಲಿ ಭಾಗಿಯಾಗಿರುವ ಮಂತ್ರಿಗಳ ಬೆಂಗಾವಲಿಗೆ ಸ್ವತಃ ಸಿಎಂ ನಿಂತಿದ್ದಾರೆ. ಪ್ರಿಯಾಂಕ ಖರ್ಗೆ ಸಂಪುಟದಲ್ಲಿ ಕೂರಲು ಅರ್ಹತೆ ಇಲ್ಲ. ರಾಜ್ಯ ಬಿಜೆಪಿ ಪಕ್ಷ ರಾಜೀನಾಮೆ ಆಗ್ರಹಿಸಿ ಜ. 04 ರಂದು ಕಲಬುರ್ಗಿಯಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು ಹಾಗೂ ಜಿಲ್ಲಾ ಕೇಂದ್ರಗಳಲ್ಲೂ ಸಹಾ ಪ್ರತಿಭಟನೆ ನಡೆಯಲಿದೆ ಎಂದರು.

ರಸ್ತೆ ಸವಾರರಿಗೆ ತಪ್ಪದ ಸಂಚಕಾರ

ಹೆಚ್ಚುತ್ತಿರುವ ಅಪಘಾತ | ಸುರಕ್ಷತಾ ಫಲಕ ಅಳವಡಿಸಿ

ಜಗಳೂರು: ತಾಲೂಕಿನ ಮುಸ್ಟೂರು ಮಲ್ಲಾಪುರದಿಂದ ಹಾದಿರುವ ಮೊಳಕಾಲ್ಮೂರು ರಸ್ತೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಮಾರ್ಗದಲ್ಲಿ ಅಪಘಾತಗಳ ಸಂಖ್ಯೆ ದಿನೇದಿನೆ ಹೆಚ್ಚಾಗುತ್ತಿವೆ.

ಮಲ್ಪೆ- ಮೊಳಕಾಲ್ಮೂರು ರಾಜ್ಯ ಹೆದ್ದಾರಿ ಮಲ್ಲಾಪುರದಿಂದ ಹಾದು ಹೋಗಿ ಚಿತ್ರದುರ್ಗ ಗಡಿ ಹಂಚಿಕೊಂಡಿದೆ. ಈ ಮಾರ್ಗವಾಗಿ ಬರುವ ರಸ್ತೆ ತಿರುವುಗಳಲ್ಲಿ ಚಿನ್ಹೆ ಅಳವಡಿಸಿಲ್ಲ, ಅಗತ್ಯವಿರುವ ಕಡೆ ರಸ್ತೆ ಹಂಪ್‌ಗಳ ನಿರ್ಮಾಣ ಮಾಡಿಲ್ಲ.

ಅಲ್ಲದೆ, ಕೆಲವು ಸೇತುವೆ ಅಕ್ಕ ಪಕ್ಕದಲ್ಲಿ ತಡೆಗೋಡೆ ನಿರ್ಮಾಣ ಮಾಡಿಲ್ಲ. ಹೀಗೆ ಅವಸಾನದಿಂದ ಕೂಡಿದ 3 ಕಿ.ಮೀ ರಸ್ತೆಯಲ್ಲಿ ತಿಂಗಳಿಗೆ ನಾಲ್ಕೈದು ಅಪಘಾತಗಳು ಸಂಭವಿಸುತ್ತಿವೆ..

ಅಪಘಾತ ವಲಯ: ಮುಖ್ಯವಾಗಿ ಮಲ್ಲಾಪುರದಿಂದ ಹೊರಹೊಲಯದ ಬಿಜಕೆರೆ ಮಾರ್ಗವಾಗಿ ತೊರೆಕೊಲಮ್ಮನಹಳ್ಳಿ ಮಲ್ಲಾಪುರ ರಸ್ತೆ ಮಧ್ಯೆದಲ್ಲಿ ಪದೇಪದೆ ಅಪಘಾತ ಸಂಭವಿಸುತ್ತಿವೆ. ಮೂರು ತಿಂಗಳ ಹಿಂದಷ್ಟೆ ಇಬ್ಬರು ಯುವಕರ ಬೈಕ್ ಮುಖಾಮುಖಿ ಡಿಕ್ಕಿ ಸಂಭವಿಸಿ ಸ್ಥಳದಲ್ಲಿಯೇ ಮೃತಪಟ್ಟರು. ಕಳೆದ ತಿಂಗಳು ಆಟೋ ಪಲ್ಟಿಯಾಗಿ ಅನೇಕರು ಗಾಯಗೊಂಡರು.

ಹೀಗೆ ನಿತ್ಯವೂ ಒಂದಿಲ್ಲೊಂದು ಅಪಘಾತ ನಡೆಯುತ್ತಿದ್ದು ಅಪಘಾತ ವಲಯವಾಗಿ ಪರಿಣಮಿಸಿದೆ. ಪೊಲೀಸ್ ಇಲಾಖೆ ಸುರಕ್ಷತೆ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮಅನುಸರಿಸಬೇಕಿದೆ.

ರಸ್ತೆ ತಿರುವುಗಳಲ್ಲಿ ಹಂಪ್ ನಿರ್ಮಿಸಲಿ:

ರಾಜ್ಯ ಹೆದ್ದಾರಿಯಲ್ಲಿ 3 ಕಿ.ಮೀನಲ್ಲಿ ತುಂಬಾ ತಿರುವುಗಳಿದ್ದು, ಈ ಸ್ಥಳಗಳಲ್ಲಿ ವಾಹನ ಚಲಾಯಿಸುವವರಿಗೆ ಅನುಕೂಲವಾಗುವಂತೆ ಚಿನ್ಹೆಗಳ ಅಳವಡಿಕೆ ಮಾಡಬೇಕು. ಕೆಲವೆಡೆ ರಸ್ತೆ ಹಂಪ್‌ಗಳ ನಿರ್ಮಿಸಬೇಕಿದೆ.

ಮಲ್ಲಾಪುರ ಹೊರ ವಲಯದಲ್ಲಿ ಮಲ್ಪೆ- ಮೊಳಕಾಲ್ಮೂರು ರಾಜ್ಯ ಹೆದ್ದಾರಿಯಲ್ಲಿ ಈಚೆಗೆ ಖಾಸಗಿ ಬಸ್ ಲಾರಿ ಮುಖಾಮುಖಿ ಡಿಕ್ಕಿಯಾಗಿರುವುದು.

ಮಲ್ಲಾಪುರ ರಸ್ತೆ ಮಾರ್ಗವಾಗಿ ತೊರೆಕೊಲಮ್ಮನಹಳ್ಳಿ ಬೆಸೆಯುವ ರಸ್ತೆ ಮಧ್ಯೆದಲ್ಲಿ ತಿಂಗಳಿಗೆ ನಾಲ್ಕೈದು ಅಪಘಾತಗಳಾಗುತ್ತಿವೆ. ಆದ್ದರಿಂದ ಈ ಕೂಡಲೇ ರಸ್ತೆ ಸುರಕ್ಷತಾ ಫಲಕ, ಹಂಪ್ಸ್ ಅಳವಡಿಸಬೇಕಿದೆ.
-ಸಂದೀಪ್ ಆರ್., ಕಾರು ಚಾಲಕ, ಚಿಕ್ಕಮಲ್ಲನಹೊಳೆ

ಧರ್ಮದ ಹಾದಿಯಲ್ಲಿ ನಡೆದರೆ ಯಶಸ್ಸು

ಶ್ರೀಗಳ 75ನೇ ಜನ್ಮದಿನ | ಶ್ರೀ ಶರಣ ಡಾ. ಬಸವಲಿಂಗ ಶಿವಯೋಗಿಗಳು

ಹರಿಹರ: ಧರ್ಮದ ಹಾದಿಯಲ್ಲಿ ನಡೆದರೆ ಕೈಗೊಂಡ ಕಾರ್ಯಗಳು ಯಶಸ್ಸಿನತ್ತ ಸಾಗುತ್ತವೆ ಎಂದು 108 ಲಿಂಗೇಶ್ವರ ದೇವಸ್ಥಾನದ ಶ್ರೀ ಶರಣ ಡಾ. ಬಸವಲಿಂಗ ಶಿವಯೋಗಿಗಳು ಹೇಳಿದರು.

ನಗರದ ಭರಂಪುರದ ಶ್ರೀ ಕುಂಬಳೇಶ್ವರ 108 ಲಿಂಗೇಶ್ವರ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್‌ನಿಂದ ಬುಧವಾರ ಶ್ರೀಗಳ 75ನೇ ಜನ್ಮದಿನ ಮತ್ತು ಶ್ರೀ ಗುಡ್ಡಾಪುರ ದಾನಮ್ಮ ದೇವಿಯ ಪ್ರವಚನ ಮುಕ್ತಯ ಸಮಾರಂಭದಲ್ಲಿ ಶ್ರೀಗಳು ಜನ್ಮದಿನದ ಅಂಗವಾಗಿ ಸನ್ಮಾನಿತರಾಗಿ ಮಾತನಾಡಿದರು.

ನಾವು ಧರ್ಮ ರಕ್ಷಣೆ ಮಾಡಿದಾಗ ಧರ್ಮ ನಮ್ಮನ್ನು ರಕ್ಷಣೆ ಮಾಡುತ್ತದೆ. ಧರ್ಮದ ಹಾದಿಯಲ್ಲ ನಡೆದ ಮನುಷ್ಯನು ಸನ್ಮಾರ್ಗದಲ್ಲಿ ಸಾಗುತ್ತಾನೆ. ಸತ್ಯ, ಶಾಂತಿ, ಧೇಯ್ಯ, ಪರೋಪಕಾರ ಗುಣಗಳೊಂದಿಗೆ ಭೇದಭಾವ ಇಲ್ಲದೆ ಎಲ್ಲರೂ ಒಂದೇ ಎಂಬ ಭಾವನೆಯಿಂದ ಮುನ್ನಡೆದಾಗ ಆ ವ್ಯಕ್ತಿ ಎತ್ತರ ಸ್ಥಾನದಲ್ಲಿರುತ್ತಾನೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕ ಎಚ್. ಎಸ್ ಶಿವಶಂಕರ್, ಶ್ರೀಗಳು ಭಕ್ತರ ಸಮ್ಮುಖದಲ್ಲಿ ಜನ್ಮದಿನ ಆಚರಣೆ ಮಾಡಿಕೊಳ್ಳುವ ಮೂಲಕ ನೂರು ಕಾಲ ನಾಡಿಗೆ ಸಂಸ್ಕಾರ, ಸನ್ಮಾರ್ಗ ಪ್ರೇರೇಪಿಸಲಿ ಎಂದು ಹಾರೈಸಿದರು. ಕೆಲ ಮಠಮಾನ್ಯಗಳು ಜನರಿಗೆ ಭಕ್ತಿ ಮಾರ್ಗ ನೀಡುವುದು ಬಿಟ್ಟು ಯಾವ ಸರಕಾರ ಅಧಿಕಾರಕ್ಕೆ ಬರುತ್ತೋ ಆ ಸರಕಾರದ ಪರ ನಿಂತು ಮಠಕ್ಕೆ ಅನುದಾನ ಪಡೆಯುವುದೇ ಸಾಧನೆ ಎನ್ನುವಂತಾಗಿದೆ ಎಂದರು.

ನಗರಸಭೆ ಉಪಾಧ್ಯಕ್ಷ ಎಂ. ಜಂಬಣ್ಣ, ಸರ್ವೋದಯ ಮಠದ ಶಿವಕುಮಾರ ಶ್ರೀ, ಪಂಚಾಕ್ಷರಯ್ಯ ಶ್ರೀ, ಮಂಜುನಾಥ ಅಪ್ಪಯ್ಯ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕ ಅಧ್ಯಕ್ಷ ಡಿ.ಜಿ ಶಿವಾನಂದಪ್ಪ, ನಗರಸಭಾ ಸದಸ್ಯರಾದ ಪಿ.ಎಂ ವಿರುಪಾಕ್ಷಿ, ನಿಂಬಕ್ಕ ಚಂದಾಪುರ, ಕೆ.ಬಿ ರಾಜಶೇಖರ್, ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷ ಜಿ.ನಂಜಪ್ಪ. ಉದ್ಯಮಿ ಜ್ಯೋತಿಪ್ರಕಾಶ್, ಎಸ್.ಎಸ್.ಕೆ ಸಮಾಜದ ಪರಶುರಾಮ ಕಾಟ್ವೆ, ಮುಖಂಡರಾದ ಕುರುವತ್ತಿ ನಾಗರಾಜ್ ಇತರರಿದ್ದರು.

ಹರಿಹರದಲ್ಲಿ 108 ಲಿಂಗೇಶ್ವರ ದೇವಸ್ಥಾನದ ಶ್ರೀ ಶರಣ ಡಾ. ಬಸವಲಿಂಗ ಶಿವಯೋಗಿ ಅವರನ್ನು ಗೌರವಿಸಲಾಯಿತು. ಮಾಜಿ ಶಾಸಕರಾದ ಎಚ್.ಎಸ್. ಶಿವಶಂಕರ್, ರಾಮಪ್ಪ ಇತರರಿದ್ದರು.

ಪೂಜೆ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಆಯೋಜನೆಗೆ ಯಾವುದೇ ಆದಾಯವಿಲ್ಲದ ಈ ದೇವಸ್ಥಾನದಲ್ಲಿ. ಮಳಿಗೆ ನಿರ್ಮಾಣ, ಸಮುದಾಯ ಭವನ ನಿರ್ಮಾಣ ಮಾಡುವ ಮೂಲಕ ಆದಾಯದ ವೃದ್ಧಿಗೆ ಯೋಜನೆಯನ್ನು ರೂಪಿಸಿರುವುದು ಶ್ಲಾಘನೀಯ.
-ಎಸ್. ರಾಮಪ್ಪ, ಮಾಜಿ ಶಾಸಕ

ಚಿತ್ರದುರ್ಗ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗೆ ಜ.12 ರಂದು ನಿರ್ದೇಶಕರ ಆಯ್ಕೆಗೆ ನಡೆಯುವ ಚುನಾವಣೆಗೆ ಸಾಲಗಾರರಲ್ಲದ ಕ್ಷೇತ್ರದಿಂದ ಮಾರಘಟ್ಟದ ನಂದಿ ನಾಗರಾಜ್ ಜ.1 ರಂದು ಪಿಎಲ್‌ಡಿ ಬ್ಯಾಂಕ್‌ನಲ್ಲಿ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು.

ಸರಕಾರಿ ಶಾಲೆ ಅಭಿವೃದ್ಧಿಗೆ ಭರವಸೆ: ಗ್ರಾಪಂ ಅಧ್ಯಕ್ಷ

ಚಳ್ಳಕೆರೆ: ಶಾಲೆಗೆ ಮೂಲಭೂತ ಸೌಲಭ್ಯಗಳನ್ನು ಗ್ರಾಮ ಪಂಚಾಯತಿಯಿಂದ ಅನುದಾನ ಹೊದಗಿಸಿ ಮಕ್ಕಳ ಹಿತದೃಷ್ಟಿಯಿಂದ ಶೀಘ್ರದಲ್ಲೇ ಸೌಲಭ್ಯ ಹೊದಗಿಸಿ ಅಭಿವೃದ್ಧಿ ಪಡಿಸುವೆ ಎಂದು ಗ್ರಾಮ ಪಂಚಾಯತಿ ಅಧ್ಯಕ್ಷ ಎಂ.ಓಬಣ್ಣ ಹೇಳಿದರು.

ತಾಲೂಕಿನ ಗೌರಸಮುದ್ರ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡುವ ಸಲುವಾಗಿ ಶಾಲೆಗೆ ಬೇಟಿನೀಡಿ ಮಾತನಾಡಿದ ಅವರು, ನಮ್ಮ ಶಾಲೆ ನಮ್ಮ ಧ್ಯೇಯ ಎಂಬ ಘೋಶವಾಖ್ಯದೊಂದಿಗೆ ಗಡಿಭಾಗದ ಸರಕಾರಿ ಶಾಲೆಗಳು ಮೂಲ ಭೂತ ಸೌಲಭ್ಯಗಳಿಂದ ವಂಚಿತವಾಗಬಾರದು, ನಮ್ಮ ಧ್ಯೆಯ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಮುಖ್ಯ ಪಾತ್ರ ವಹಿಸಬೇಕು, ಅದರಂತೆ ಶಾಲೆಯ ಶಿಕ್ಷಕರು ಇಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಪಟ್ಟಿ ಮಾಡಿ ಕೊಟ್ಟರೆ ಗ್ರಾಮ ಪಂಚಾಯತಿ ಹಾಗೂ ಸ್ಥಳೀಯ ಶಾಸಕರ ಅನುದಾನ ಒದಗಿಸಿ ಮಕ್ಕಳ ಹಿತ ದೃಷ್ಟಿಯಿಂದ ಅಭಿವೃದ್ಧಿ ಪಡಿಸಲಾಗುತ್ತದೆ, ಇಲ್ಲಿ ಅಗತ್ಯವಾಗಿ ಹೈಟೆಕ್ ಶೌಚಾಲಯ, ಬಿಸಿಯೂಟದ ಕೊಠಡಿ, ಕುಡಿಯುವ ನೀರಿನ ವ್ಯವಸ್ಥೆ ಈಗೆ ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಪ್ರಯತ್ನ ಪಡಲಾಗುತ್ತದೆ, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರೆತಾಗ ಮಾತ್ರ ಗಡಿಭಾಗದ ಗ್ರಾಮಗಳು ಅಭಿವೃದ್ಧಿ ಪಥದತ್ತ ಸಾಗುತ್ತವೆ ಎಂದರು.

ಸಂದರ್ಭದಲ್ಲಿ ಸದಸ್ಯರಾದ ಶಶಿಕುಮಾರ್, ಚಂದ್ರಣ್ಣ ,ತಿಪ್ಪೇಸ್ವಾಮಿ , ವೀರಣ್ಣ ಹಾಗೂ ಮುಖ್ಯ ಶಿಕ್ಷಕ ತಿಪ್ಪೇಸ್ವಾಮಿ,ಸಹ ಶಿಕ್ಷಕ ನಾಗರಾಜ್ ಹಾಗೂ ಶಾಲಾ ಮಕ್ಕಳು ಇತರರು ಪಾಲ್ಗೊಂಡಿದ್ದರು.

ದಾವಣಗೆರೆಯಲ್ಲಿ ಆಟೋ ಎಕ್ಸ್‌ಪೋ

ದಾವಣಗೆರೆ: ನಗರದ ಸರ್ದನ್ ಹೋಟೆಲ್ ಆವರಣದಲ್ಲಿ ಜ.4 ಮತ್ತು 5ರಂದು ಬೃಹತ್ ಆಟೋ ಎಕ್ಸ್ ಪೋ ಆಯೋಜಿಸಲಾಗಿದೆ ಎಂದು ಅಮೃತಾ ಐಎನ್‌ಸಿ ಸಂಸ್ಥಾಪಕರಾದ ಆ್ಯನಿ ಅಮೃತಾ ಶ್ರೀನಿವಾಸ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಆಟೋ ಎಕ್ಸ್ ಪೋ ಆಯೋಜಿಸಿದ್ದು, ಸಾರ್ವಜನಿಕರಿಗೆ ಮಲ್ಟಿ ಬ್ರಾಂಡ್ ಕಾರು ಹಾಗೂ ದ್ವಿಚಕ್ರ ವಾಹನಗಳ ಪ್ರದರ್ಶನ, ಮಾಹಿತಿ ನೀಡಲಾಗುವುದು ಎಂದರು.

ಜ.4ರ ಬೆಳಗ್ಗೆ 11ಕ್ಕೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಆಟೋ ಎಕ್ಸ್ ಪೋಗೆ ಚಾಲನೆ ನೀಡುವರು. ಸರ್ದನ್ ಹೋಟೇಲ್ ವ್ಯವಸ್ಥಾಪಕ ನಿರ್ದೇಶಕ ಅಭಿಜಿತ್ ಆಗಮಿಸುವರೆಂದರು.

ಎರಡು ದಿನಗಳ ಕಾಲ ವಿವಿಧ ಕಂಪನಿಯ ಕಾರುಗಳು, ಬೈಕ್‌ಗಳ ಪ್ರದರ್ಶನ ಇದ್ದು, 15ಕ್ಕೂ ಹೆಚ್ಚಿನ ಬ್ರ್ಯಾಂಡ್ ಕಂಪನಿಯ ಕಾರು ಹಾಗೂ ದ್ವಿಚಕ್ರ ಪ್ರದರ್ಶನಗೊಳ್ಳುವವು. ಬೆಂಗಳೂರು, ದಾವಣಗೆರೆ, ಚಿತ್ರದುರ್ಗ, ತುಮಕೂರು ಸೇರಿದಂತೆ ರಾಜ್ಯದ ಪ್ರತಿಷ್ಠಿತ ಕಾರು, ಬೈಕ್ ಕಂಪನಿ ಇದರಲ್ಲಿ ಪಾಲ್ಗೊಳ್ಳಲಿವೆ ಎಂದು ಮಾಹಿತಿ ನೀಡಿದರು.

ಆಸಕ್ತರು ಭೇಟಿ ನೀಡಿ ವಾಹನಗಳ ವಿಶೇಷತೆ, ಸಾಲ ಸೌಲಭ್ಯ, ಬುಕ್ಕಿಂಗ್ ಕುರಿತು ಮಾಹಿತಿ ಪಡೆಯಬಹುದು ಎಂದರು.

ಸರ್ದನ್ ಹೋಟೆಲ್ ವ್ಯವಸ್ಥಾಪಕ ಅಭಿಜಿತ್ ಮಾತನಾಡಿ, ದಾವಣಗೆರೆ ಜಿಲ್ಲೆ ಜನತೆ ಆಟೋ ಎಕ್ಸ್‌ಪೋ ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಎ.ಕೆ. ಚನ್ನಪ್ಪ, ಎಸ್.ಪಿ. ಲೋಹಿತ್ ಪ್ರಸಾದ್, ಬಿ.ಜಿ. ತಿಮ್ಮಾರೆಡ್ಡಿ, ಆಂಥೋನಿ ರಾಜ್ ಇತರರಿದ್ದರು.

ತಿಪ್ಪೇಶಪ್ಪ ಸರಕಾರಿ ನೌಕರರ ಸಂಘದ ಅಧ್ಯಕ್ಷ

ಚಳ್ಳಕೆರೆ: ಹೊಳಲ್ಕೆರೆ: ಕರ್ನಾಟಕ ರಾಜ್ಯ, ಸರಕಾರಿ ನೌಕರರ ಸಂಘದ ಹೊಳಲ್ಕೆರೆ ತಾಲೂಕು ಶಾಖೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಪಶು ಸಂಗೋಪನ ಇಲಾಖೆಯ ತಿಪ್ಪೇಶಪ್ಪ. ಖಜಾಂಚಿಯಾಗಿ ಶಿಕ್ಷಣ ಇಲಾಖೆಯ ಗಿರೀಶ್, ಅವಿರೋಧವಾಗಿ ಆಯ್ಕೆಯಾಗಿದ್ದು.

ರಾಜ್ಯ ಪರಿಷತ್ ಸದಸ್ಯರಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯದ ಸಿದ್ದರಾಮಪ್ಪನವರು ನಡೆದ ಚುನಾವಣೆಯಲ್ಲಿ 30 ಮತಗಳನ್ನು ಪಡೆಯುವುದರ ಮೂಲಕ ಗೆಲುವು ಸಾಧಿಸಿದ್ದಾರೆಂದು, ಚುನಾವಣಾಧಿಕಾರಿಗಳು ಮೌನೇಶ್ವರಪ್ಪ, ರುದ್ರಪ್ಪ ತಿಳಿಸಿದ್ದಾರೆ. ಹಿಂದಿನ ಅಧ್ಯಕ್ಷ ಲೋಕೇಶ್, ರಾಜ್ಯ ಪರಿಷತ್ ಸದಸ್ಯ ಎನ್.ಶಿವಮೂರ್ತಿ, ಆರ್,ಅಣ್ಣಪ್ಪ, ಎ. ಜಯಪ್ಪ, ನಾಗರಾಜಯ್ಯ, ಶಿಕ್ಷಕರ ಸಂಘದ ನಿರ್ದೇಶಕರುಗಳು, ನೌಕ ರರು, ಶಿಕ್ಷಕರು ಹಾಗೂ ನೂತನವಾಗಿ ಆಯ್ಕೆಯಾದ ಸರ್ವ ನಿರ್ದೇಶಕರುಗಳು ಹಾಜರಿದ್ದು. ನೂತನ ಅಧ್ಯಕ್ಷರಾದ ತಿಪ್ಪೇಶಪ್ಪ, ಖಜಾಂಚಿ ಬಿ. ಗಿರೀಶ್, ರಾಜ್ಯ ಪರಿಷತ್ ಸದಸ್ಯರಾದ ಹೆಚ್. ಎನ್. ಸಿದ್ದರಾಮಪ್ಪ ಅವರಿಗೆ ಹೊಳಲ್ಕೆರೆ ಪಟ್ಟಣ ದಲ್ಲಿ ಇರುವ ಸರಕಾರಿ ನೌಕರರ ಭವನದಲ್ಲಿ ಪುಷ್ಪ ಮಾಲೆಯನ್ನು ಹಾಕಿ ಶುಭಾಶಯ ತಿಳಿಸಿದರು.



ಆತ್ಮಹತ್ಯೆ ಪ್ರಕರಣದಲ್ಲಿ ಸಚಿವರ ಪಾತ್ರವಿಲ್ಲ

ದಾವಣಗೆರೆ: ಸಚಿನ್ ಎಂಬುವವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ ಖರ್ಗೆ ವಿರುದ್ಧ ಕೇವಲ ರಾಜಕೀಯ ದ್ವೇಷದಿಂದ ಆರೋಪ ಮಾಡಲಾಗುತ್ತಿದ್ದು, ಈ ಪ್ರಕರಣದಲ್ಲಿ ಅವರ ಪಾತ್ರ ಇಲ್ಲ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆತ್ಮಹತ್ಯೆ ಮಾಡಿಕೊಂಡಿರುವ ಸಚಿನ್ ಬರೆದಿರುವ ಡೆತ್ ನೋಟ್‌ನಲ್ಲೂ ಅವರ ಹೆಸರಿಲ್ಲ. ಆದರೂ, ಅವರು ದಲಿತರು ಎಂಬ ಕಾರಣಕ್ಕಾಗಿ ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ವಾಸ್ತವವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಸಚಿನ್ ಗುತ್ತಿಗೆದಾರರೇ ಅಲ್ಲ. ಉತ್ತರ ಕರ್ನಾಟಕ ಭಾಗದವರು ಗುತ್ತಿಗೆದಾರರಾಗಲು ಧಾರವಾಡದಲ್ಲಿನ ಲೋಕೋಪಯೋಗಿ, ಪಂಚಾಯತ್ ರಾಜ್ ಇಲಾಖೆಯ ಮುಖ್ಯ ಅಧೀಕ್ಷಕರ ಕಚೇರಿಯಲ್ಲಿ ನೋಂದಣಿ ಮಾಡಿಸಬೇಕು. ಸಚಿನ್ ಎಲ್ಲಿಯೂ ನೋಂದಣಿ ಮಾಡಿಸಿಲ್ಲ. ಹಾಗಾಗಿ, ಅವರು ಗುತ್ತಿಗೆದಾರ ಅಲ್ಲ ಎಂದು ತಿಳಿಸಿದರು. ರಾಜ್ಯದಲ್ಲಿ ಏನೇ ಪ್ರಕರಣ ನಡೆದರೂ ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಹೋರಾಟ ಮಾಡುತ್ತಾರೆ. ಸಿಬಿಐನವರು ಏನಾದರೂ ಬಿಜೆಪಿಯ ನೆಂಟರಾ? ಎಂದು ಲೇವಡಿ ಮಾಡಿದರು. ಪ್ರಿಯಾಂಕ ಖರ್ಗೆಯವರು ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಬಾರದು ಎಂದು ಒತ್ತಾಯಿಸಿದರು. ಕೆ.ಎಂ. ಮಂಜುನಾಥ್, ಲಿಯಾಖತ್ ಅಲಿ, ಗುರು ರೇವಣಕರ್, ಪ್ರಭಾಕರ್, ಬಿ.ಎಚ್. ಉದಯ್ ಕುಮಾರ್, ಡಿ. ಶಿವಕುಮಾರ್ ಇತರರು ಇದ್ದರು.

ದಾವಣಗೆರೆ ಜಿಲ್ಲಾಡಳಿತ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಚರಿಸಲಾಯಿತು. ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ., ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಪಾಲಿಕೆ ಉಪಮಹಾಪೌರರಾದ ಸೋಗಿ ಶಾಂತಕುಮಾರ್, ಆಯುಕ್ತರಾದ ರೇಣುಕಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಇತರರು ಇದ್ದರು.

ನಮ್ಮ ನಡೆ ಸರಕಾರಿ ಶಾಲೆ ಕಡೆಗೆ ಅಭಿಯಾನ ಇಂದು

ದಾವಣಗೆರೆ: ಸ್ವಾಭಿಮಾನಿ ಬಳಗದ ಶಿಕ್ಷಣ ಅದಾಲತ್-ನಮ್ಮ ನಡೆ ಸರಕಾರಿ ಶಾಲೆಗಳ ಕಡೆಗೆ ಅಭಿಯಾನವು ಜ.3ರಂದು ನ್ಯಾಮತಿ-ಹೊನ್ನಾಳಿ ತಾಲೂಕುಗಳ ಹತ್ತು ಸರಕಾರಿ ಶಾಲೆಗಳಲ್ಲಿ ಮುಂದುವರಿಯಲಿದೆ. ಶುಕ್ರವಾರದಂದು ಬೆಳಗ್ಗೆ 9.30ರಿಂದ ಸವಳಂಗದಿಂದ ಆರಂಭವಾಗಲಿದೆ. ಬಳಿಕ ಸೋಗಿಲು, ಫಲವನಹಳ್ಳಿ, ಕಂಚಿಗಾರನಹಳ್ಳಿ, ಗಂಜೀನಹಳ್ಳಿ, ಚಟ್ನಹಳ್ಳಿ-2, ನ್ಯಾಮತಿ, ದೊಡ್ಡೆತ್ತಿನಹಳ್ಳಿ, ಕಂಕನಹಳ್ಳಿ ಹಾಗೂ ಕೊಡಚಗೊಂಡನಹಳ್ಳಿ ಗ್ರಾಮಗಳಲ್ಲಿನ ಸರಕಾರಿ ಶಾಲೆಗಳಲ್ಲೂ ಅಭಿಯಾನ ನಡೆಯಲಿದೆ. ಕಳೆದ ತಿಂಗಳು 18ರಂದು ನ್ಯಾಮತಿ ತಾಲೂಕಿನ ಸೂರಗೊಂಡನಕೊಪ್ಪ, ಜೋಗ 1 ಮತ್ತು 2, ಚಿನ್ನಿಕಟ್ಟೆ, ಮಾದಾಪುರ, ಕೊಡತಾಳ ಹಾಗೂ ಸವಳಂಗ ಗ್ರಾಮದ ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಶಾಲಾ ಕೊಠಡಿ, ಆಟದ ಮೈದಾನ, ಬಿಸಿಯೂಟದ ಯೋಜನೆ, ಶೌಚಗೃಹ, ಭದ್ರತೆ, ಶಿಕ್ಷಣದ ಗುಣಮಟ್ಟಗಳ ಬಗ್ಗೆ ಮುಖ್ಯಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳ ಜತೆ ಚರ್ಚೆ ನಡೆಸಲಾಯಿತು ಎಂದು ತಿಳಿಸಿದ್ದಾರೆ. ಎಸ್ಎಸ್ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ಹೆಚ್ಚಿಸುವ ಕಲಿಕಾ ಕಾರ್ಯಾಗಾರಗಳನ್ನು ಇನ್‌ಸೈಟ್ಸ್ ಐ.ಎ.ಎಸ್. ಅಕಾಡೆಮಿ ಸಹಯೋಗದೊಂದಿಗೆ ಸ್ವಾಭಿಮಾನಿ ಬಳಗವು ಆಯೋಜಿಸಲಿದೆ ಎಂದು ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ **ಗೋವಿಂದ ಕಾರಜೋಳ** } ಸಂಸದ

ಸಿದ್ದರಾಮಯ್ಯ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಸಂವಿಧಾನದ ಆಶಯದಂತೆ ಆಡಳಿತ ನಡೆಯುತ್ತಿಲ್ಲ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ . ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದು, ಸ್ಪಷ್ಟವಾಗಿ ಕಾಣುತ್ತದೆ. ಖರ್ಗೆ ಬಂಟರು ಆತ್ಮಹತ್ಯೆಗೆ ಕಾರಣ ಆಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಉಪಾಧ್ಯಕ್ಷರಾಗಿ ವಿಷ್ಣುದಾಸ್ ಆಯ್ಕೆ

ಮಂಗಳೂರು: ಭಾರತೀಯ ದಂತ ರೋಗ ಲಕ್ಷಣ ಶಾಸ್ತ್ರದ ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಮಂಗಳೂರಿನ ಖ್ಯಾತ ದಂತ ವೈದ್ಯರಾದ ಡಾ.ವಿಷ್ಣುದಾಸ್ ಪ್ರಭು ರವರು ಅವಿರೋಧವಾಗಿ ಆಯ್ಕೆ ಯಾಗಿರುತ್ತಾರೆ. ಈ ಆಯ್ಕೆ ಯು ಭಾರತೀಯ ದಂತ ರೋಗ ಲಕ್ಷಣ ಶಾಸ್ತ್ರ ಸಂಸ್ಥೆಯ ರಾಷ್ಟ್ರೀಯ ಸಮ್ಮೇಳನದಲ್ಲಿ ನಡೆಯಿತು. ಡಾ. ವಿಷ್ಣುದಾಸ್ ಪ್ರಭು ರವರು ಯೆನೆಪೋಯ ದಂತ ಮಹಾ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ .

ನೀರಿನ ಸೆಳೆತಕ್ಕೆ ಸಿಕ್ಕ ಯಾತ್ರಾರ್ಥಿ ರಕ್ಷಣೆ

ಸುಳ್ಯ: ಬೆಳಗಾವಿಯಿಂದ ಶಬರಿಮಲೆ ಯಾತ್ರೆ ಕೈಗೊಂಡಿದ್ದ ಯಾತ್ರಾರ್ಥಿಗಳು ಪಯಸ್ವಿನಿ ನದಿಯಲ್ಲಿ ಸ್ನಾನಕ್ಕಿಳಿದು ನೀರಿನ ಸೆಳೆತಕ್ಕೆ ಸಿಲುಕಿ ಮುಳುಗುತ್ತಿದ್ದ ವೇಳೆ ಸ್ಥಳೀಯ ಯುವಕರು ಸೇರಿ ಅವರನ್ನು ರಕ್ಷಿಸಿದ ಘಟನೆ ಜಾಲ್ಸೂರು ಸಮೀಪದ ಪಂಜಿಕಲ್ಲಿನಲ್ಲಿ ಮಂಗಳವಾರ ನಡೆದಿದೆ. ಬೆಳಗಾವಿಯಿಂದ ಶಬರಿಮಲೆಗೆ ತೆರಳುತ್ತಿದ್ದ ಅಯ್ಯಪ್ಪ ಭಕ್ತರ ತಂಡ ಪಂಜಿಕಲ್ಲು ತೂಗುಸೇತುವೆಯ ಬಳಿ ತಮ್ಮ ವಾಹನ ನಿಲ್ಲಿಸಿ, ಪಯಸ್ವಿನಿ ನದಿಯಲ್ಲಿ ಸ್ನಾನಕ್ಕೆ ಇಳಿದಿದ್ದರು. ಈ ವೇಳೆ ಯಾತ್ರಾರ್ಥಿಗಳಲ್ಲಿ ಇಬ್ಬರು ಮಾಲಾಧಾರಿಗಳು ನದಿಯಲ್ಲಿ ಈಜಾಡುತ್ತಿದ್ದ ವೇಳೆ ನೀರಿನ ಸೆಳೆತಕ್ಕೆ ಸಿಲುಕಿದ್ದು, ದಡದಲ್ಲಿ ನಿಂತಿದ್ದ ಇತರೆ ಯಾತ್ರಾರ್ಥಿಗಳು ಬೊಬ್ಬೆ ಹೊಡೆದರೆನ್ನಲಾಗಿದೆ. ಈ ವೇಳೆ ಅಲ್ಲೇ ರಸ್ತೆ ಬದಿ ಇದ್ದ ಸ್ಥಳೀಯ ಯುವಕರಾದ ಚೇತನ್ ಪ್ರಸಾದ್, ಮುಬಶೀರ್ ಹಾಗೂ ಜುಬೈರ್ ಅವರು ಬೊಬ್ಬೆ ಕೇಳಿ ತಕ್ಷಣ ಬಂದು ನೀರಿಗೆ ಧುಮುಕಿ ಇಬ್ಬರು ಯಾತ್ರಾರ್ಥಿಗಳನ್ನು ನೀರಿನಿಂದ ರಕ್ಷಿಸಿ, ದಡಕ್ಕೆ ತಂದು ಆರೈಕೆ ಮಾಡಿದರು. ಸ್ಥಳೀಯ ಯುವಕರ ರಕ್ಷಣಾ ಕಾರ್ಯಕ್ಕೆ ಶ್ಲಾಘನೆ ವ್ಯಕ್ತವಾಗಿದೆ.

ಕವನಗಳು ಜೀವನ್ಮುಖಿ ಆಗಿಸಿ ನೆರವಾಗುತ್ತವೆ

ಸುಳ್ಯ: ಬದುಕಿನ ವಿವಿಧ ಮಗ್ಗುಲುಗಳಲ್ಲಿ ಪ್ರಭಾವಿಸುತ್ತಿರುವ ವಿವಿಧ ಭಾವನೆಗಳನ್ನು ಪೂರ್ಣವಾಗಿ ಅನುಭವಿಸಿ ಪ್ರಸ್ತುತಪಡಿಸಲಾಗಿರುವ ಕವನಗಳು ಓದುಗರನ್ನು ಆತ್ಮೀಯವಾಗಿ ಸಂತೈಸಿ ಜೀವನ್ಮುಖಿ ವಾಗಿಸುವಲ್ಲಿ ನೆರವಾಗಬಲ್ಲುದು ಎಂದು ಡಾ.ಶೋಭಾ ತಲೆಂಗಳ ಹೇಳಿದರು. ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವ ಮೊದಲ ಕವನ ಸಂಕಲನ ಎಕ್ಸ್‌ಪ್ರೆಶನ್ಸ್ ಕೃತಿಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಹಲವು ಅತ್ಮಹತ್ಯೆಗಳು | ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ

ಸಚಿವ ಖರ್ಗೆ ರಾಜೀನಾಮೆ ಕೊಡುವ ನಿರೀಕ್ಷೆ ಇಲ್ಲ

ಮಂಗಳೂರು: ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ ಅವರು ಸಾರ್ವಜನಿಕ ಬದುಕಿನ ಎಲ್ಲ ಮಟ್ಟವನ್ನು ಮೀರಿದ್ದಾರೆ ಕಾಂಗ್ರೆಸ್ ಸರಕಾರ ಎಂದರೆ ಹತ್ಯೆ ಆತ್ಮಹತ್ಯೆಯ ಹೆಗ್ಗುರುತಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದ್ದಾರೆ.

ರಾಜ್ಯದ ಮುಖ್ಯಮಂತ್ರಿ ಸೇರಿ ಅನೇಕ ಸಚಿವರ ವಿರುದ್ಧ ಭ್ರಷ್ಟಾಚಾರ, ಅತ್ಮಹತ್ಯೆಗೆ ಪ್ರಚೋದನೆಯ, ಕಿರುಕುಳದಂತಹ ಗಂಭೀರ ಆರೋಪಗಳಿವೆ. ಈಶ್ವರಪ್ಪ ಹಾಗೂ ಯಡಿಯೂರಪ್ಪ ಪ್ರಕರಣದಲ್ಲಿ ಆಡಿದ ಮಾತುಗಳನ್ನ ಸಿಎಂ ಒಮ್ಮೆ ನೆನಪು ಮಾಡಿಕೊಳ್ಳಿ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಖರ್ಗೆ ಸುಪುತ್ರ ರಾಜೀನಾಮೆ ಕೊಡ್ತಾರೆ ಅನ್ನೋ ನಿರೀಕ್ಷೆ ನಮಗಿಲ್ಲ. ಆದರೆ ನಾವು ಜನರನ್ನ ಜಾಗೃತಗೊಳಿಸಲು ಹೋರಾಟ ಮುಂದುವರಿಸುತ್ತೇವೆ ಎಂದರು. ಚಂದ್ರಶೇಖರ್ ಆತ್ಮಹತ್ಯೆ ಕಾರಣದಿಂದ ವಾಲ್ಮೀಕಿ ಹಗರಣ ಹೊರಬಂತು, ಲಕ್ಷ್ಮಿ ಹೆಬ್ಬಾಳ್ಕರ್ ಪಿಎ ಹೆಸರು ಬರೆದಿಟ್ಟು ರುದ್ರಣ್ಣ ಆತ್ಮಹತ್ಯೆ ಮಾಡಿಕೊಂಡರು.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಇಂಥ ಹಲವು ಅತ್ಮಹತ್ಯೆಗಳು ನಡೆದಿವೆ, ನಡೆಯುತ್ತಿವೆ. ಸಿದ್ದಲಿಂಗ ಸ್ವಾಮೀಜಿ ಹಾಗೂ ಹಲವರ ಕೊಲೆಗೆ ಸಂಚು ರೂಪಿಸಿದ ಬಗ್ಗೆ ಡೆತ್ ನೋಟ್‌ನಲ್ಲಿದೆ. ಕೇಂದ್ರದಲ್ಲಿ ಖರ್ಗೆ ಸೋನಿಯಾ, ರಾಹುಲ್ ಮೆಚ್ಚಿಸಲು ಏನೇನೋ ಮಾತನಾಡ್ತಾರೆ. ಆದರೆ ಖರ್ಗೆ ಅವರ ಹಿಂದಿನ ರಾಜಕಾರಣದಲ್ಲಿ ಈ ರೀತಿ ಇರಲಿಲ್ಲ. ಇತ್ತ ರಾಜ್ಯ ರಾಜಕಾರಣದಲ್ಲಿ ಖರ್ಗೆ ಸುಪುತ್ರ ಪ್ರಿಯಾಂಕ್ ಖರ್ಗೆ ಈಗಲೇ ದುರಹಂಕಾರದಿಂದ ವರ್ತಿಸುತ್ತಿದ್ದಾರೆ. ಇದರ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ. ನಾವು ಎಲ್ಲರೂ ಜೊತೆಯಾಗಿಯೇ ಹೋರಾಟ ಮಾಡುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಮಾತನಾಡಿದರು.

ರಾಜ್ಯಾಧ್ಯಕ್ಷರ ಬದಲಾವಣೆ ಬಗ್ಗೆ ಹೇಳಿಕೆ ನೀಡಲ್ಲ

ನಾನು ಕರ್ನಾಟಕ ರಾಜ್ಯವನ್ನು ಕೇಂದ್ರದಲ್ಲಿ ಪ್ರತಿನಿಧಿಸುತ್ತಿರೋದು. ರಾಜ್ಯಾಧ್ಯಕ್ಷರ ಬದಲಾವಣೆ ಆಗುತ್ತದೆ ಅಂತಾ ನಾನು ಹೇಳಲ್ಲ.ಇಡೀ ದೇಶಾದ್ಯಂತ ಮಂಡಲ, ಬೂತ್, ಜಿಲ್ಲಾಧ್ಯಕ್ಷ, ರಾಜ್ಯಾಧ್ಯಕ್ಷ, ರಾಷ್ಟ್ರಾಧ್ಯಕ್ಷ ಬದಲಾವಣೆ ಪ್ರೋಸೆಸ್ ಆಗ್ತದೆ. ಎಲ್ಲ ಕಡೆಯಲ್ಲೂ ಅದರ ಪ್ರಕ್ರಿಯೆ ನಡೆಯುತ್ತೆ. ಅದರಲ್ಲಿ ಇದ್ದವರೇ ಮತ್ತೊಮ್ಮೆ ಆಯ್ಕೆ ಆಗಬಹುದು. ನಾಲ್ಕೈದು ತಿಂಗಳ ಹಿಂದೆ ಕೆಲವು ಕಡೆ ರಾಜ್ಯಾಧ್ಯಕ್ಷರ ಆಯ್ಕೆಯೂ ನಡೆದಿದೆ. ಅಲ್ಲೂ ಮತ್ತೆ ಪ್ರಕ್ರಿಯೆ ನಡೆಯುತ್ತೆ. ಸದ್ಯ ಬೂತ್ ಅಧ್ಯಕ್ಷರ ಚುನಾವಣೆ ಆಗಿದೆ. ಇನ್ನು ಮಂಡಲ ಅಧ್ಯಕ್ಷರ ಚುನಾವಣೆ ಆಗಲಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು.

ಆರ್ಥಿಕ ಸಂಕಷ್ಟದಲ್ಲಿ ಗುತ್ತಿಗೆದಾರರು

ಮಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗುತ್ತಿಗೆದಾರರು ಅತ್ಯಂತ ಆತಂಕ ಸ್ಥಿತಿ ಎದುರಿಸುತ್ತಿದ್ದಾರೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ಸಾಲದ್ದಕ್ಕೆ ಸರಕಾರದ ಕೃಪಾಕಟಾಕ್ಷ ಹೊಂದಿರುವ ಪ್ರಭಾವಿ ಕಾಂಗ್ರೆಸ್ ನಾಯಕರುಗಳ ಆಪ್ತರ ಕಿರುಕುಳ, ಬೆದರಿಕೆಗೆ ಮಣಿದು ಉಸಿರುಗಟ್ಟಿಸುವಂತಹ ವಾತಾವರಣದಲ್ಲಿ ಬದುಕಲಾಗದೇ ಹಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದಕ್ಕೆ ಮತ್ತೊಂದು ಉದಾಹರಣೆಯಾಗಿ ಸಚಿವ ಪ್ರಿಯಾಂಕ್ ಖರ್ಗೆ ಆಪ್ತರ ಕಿರುಕುಳಕ್ಕೆ ಹೆದರಿ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ಬೀದರ್ ನ ಗುತ್ತಿಗೆದಾರ ಸಚಿನ್ ಪಂಚಾಳ್ ಪ್ರಕರಣವೇ ಸಾಕ್ಷಿ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಗುತ್ತಿಗೆದಾರ ಸಚಿನ್ ಅವರು 7 ಪುಟಗಳ ಡೆತ್ ನೋಟ್ ಬರೆದು ಅದನ್ನು ಸಾಮಾಜಿಕ ಜಾಲತಾಣದಲ್ಲೂ ಹಾಕಿದ್ದಾರೆ. ಅದರಲ್ಲಿ ಪ್ರಿಯಾಂಕ್ ಖರ್ಗೆ ಅವರ ಆಪ್ತ ದುಷ್ಟ ಕೂಟದ ಸದಸ್ಯರು ತನಗೆ ಮಾಡಿದ ಮಹಾ ಮೋಸ, ನೀಡಿದ ಚಿತ್ರಹಿಂಸೆ, ಅಲ್ಲದೇ ಸನಾತನ ಧರ್ಮ ರಕ್ಷಣೆಗೆ ಬದುಕು ಮೀಸಲಿಟ್ಟಿರುವ ಆಂದೋಲ ಸ್ವಾಮೀಜಿ, ಬಿಜೆಪಿ ಮುಖಂಡ ಚಂದು ಪಾಟೀಲ, ಬಿಜೆಪಿ ಶಾಸಕ ಬಸವರಾಜ ಮತ್ತಿಮೂಡ ಸೇರಿದಂತೆ ಹಲವು ಹಿಂದೂ ನಾಯಕರನ್ನು ಸುಪಾರಿ ಕೊಟ್ಟು ಹತ್ಯೆ ಮಾಡುವ ಸಂಚಿನ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಸಾಯುವ ಅಂತಿಮ ಕ್ಷಣದಲ್ಲಿ ಇಂತಹ ವಿಷಯದಲ್ಲಿ ಯಾವ ವ್ಯಕ್ತಿಯೂ ಸುಳ್ಳು ಹೇಳಲು ಸಾಧ್ಯವೇ? ಇದೊಂದು ಅತ್ಯಂತ ಆತಂಕಕಾರಿ ವಿಷಯವಾಗಿದೆ ಎಂದರು. ಎಲ್ಲಾ ಆರೋಪಗಳು ಸಚಿವ ಪ್ರಿಯಾಂಕ್ ಖರ್ಗೆಯವರ ಸುತ್ತವೇ ಗಿರಕಿ ಹೊಡೆಯುತ್ತಿದ್ದು ಈ ಕೂಡಲೇ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಎಲ್ಲಾ ತಪ್ಪಿತಸ್ಥರಿಗೆ ಶಿಕ್ಷೆಯಾ ಗುವಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸುತ್ತೇನೆ ಎಂದರು.

ಈ ಹಿಂದೆ ಬಿಜೆಪಿ ಸರಕಾರ ಇದ್ದಾಗ ಕೆ. ಎಸ್ ಈಶ್ವರಪ್ಪನವರ ಪ್ರಕರಣ ಸೇರಿದಂತೆ ಸಣ್ಣಪುಟ್ಟ ವಿಷಯಕ್ಕೂ ಸಿದ್ದರಾಮಯ್ಯ ಆದಿಯಾಗಿ, ಪ್ರಿಯಾಂಕ ಖರ್ಗೆ ಸಹಿತ ಕಾಂಗ್ರೆಸ್ ನಾಯಕರು ಬೀದಿ ಬೀದಿಯಲ್ಲಿ ರಾಜೀನಾಮೆ ಕೊಡಿ ಎಂದು ಆರ್ಭಟಿಸುತ್ತಿದ್ದರು. ಈಗ ಅವರ ಸರ್ಕಾರವೇ ಆರೋಪಿ ಸ್ಥಾನದಲ್ಲಿರುವಾಗ ಎಲ್ಲರೂ ಮೌನ ವಹಿಸಿದ್ದಾರೆ. ಸರ್ಕಾರಿ ಅಧಿಕಾರಿಗಳು, ಗುತ್ತಿಗೆದಾರರು, ಅಮಾಯಕರು ಸರ್ಕಾರದ ಕಾರಣದಿಂದಲೇ ಸಾಯುತ್ತಿದ್ದರೂ ಭಂಡ ಕಾಂಗ್ರೆಸ್ ಸರಕಾರ ಮಾತ್ರ ಕಿಂಚಿತ್ತೂ ಮಾನ, ಮರ್ಯಾದೆ ಇಲ್ಲದಂತೆ ವರ್ತಿಸುತ್ತಿದೆ.

-ವೇದವ್ಯಾಸ ಕಾಮತ್, ಶಾಸಕ

ಸೋಮೇಶ್ವರೋತ್ಸವ ನೆಲದ ಸಾಂಸ್ಕೃತಿಕ ಉತ್ಸವ

ಡಿಸೆಂಬರ್, ಜನವರಿ ತಿಂಗಳು ಬಂತೆಂದರೆ ಶಾಲಾ ವಾರ್ಷಿಕೋತ್ಸವದ ದಿನಗಳು ಆರಂಭ. ಎಲ್ಲ ಶಾಲೆಗಳು ತಮ್ಮ ವಾರ್ಷಿಕೋತ್ಸವವನ್ನು ಒಂದು ಶಾಲಾ ಕಾರ್ಯಕ್ರಮವಾಗಿ ಮಾಡಿ ಮುಗಿಸಿದರೆ, ಸೋಮೇಶ್ವರ ವಿದ್ಯಾಲಯ ಮಾತ್ರ ಸೋಮೇಶ್ವರೋತ್ಸವ ಹೆಸರಲ್ಲಿ ಆಳ್ವಾಸ್ ನುಡಿ ಸಿರಿ ಮಾದರಿಯಲ್ಲಿ ನಾಡಿನಲ್ಲಿ ಹೆಸರು ಮಾಡಿದ ಸಾಧಕರು, ಸಾಂಸ್ಕೃತಿಕ ನಾಯಕರನ್ನು ಕರೆಸಿ ಸಾಂಸ್ಕೃತಿಕ ಉತ್ಸವವಾಗಿ ಮೂರು ದಿನ ನಡೆಸಿಕೊಂಡು ಬರುತ್ತಿದೆ. ಒಂದು ಶಾಲಾ ಉತ್ಸವಕ್ಕೆ ದೇಶ ಕಂಡ ಅಪ್ರತಿಮ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರನ್ನು ಕರೆಸಿದ್ದು, ಹಾಡಿಸಿದ್ದು ಇದಕ್ಕೆ ಸಾಕ್ಷಿ.

ಹಾಗಾಗಿ ದಾವಣಗೆರೆಯ ಶೈಕ್ಷಣಿಕ ವಲಯದಲ್ಲಿ ಸೋಮೇಶ್ವರೋತ್ಸವವಂದು ಸಾಂಸ್ಕೃತಿಕ ನಾಡಿ ಮಿಡಿತವಾಗಿದೆ. ಜನ ಕೂಡ ಈ ಬಾರಿ ಸೋಮೇಶ್ವರೋತ್ಸವದಲ್ಲಿ ಏನಿರುತ್ತದೆ, ಯಾವ ಸಾಧಕರು, ಯಾವ ಸಾಂಸ್ಕೃತಿಕ ನಾಯಕರು ಬರುತ್ತಾರೆ, ಈ ಬಾರಿಯ ವಿಶೇಷವೇನು ಎಂಬ ಕುತೂಹಲದಿಂದ ಕಾಯುತ್ತಾರೆ. ಧಪರಿಣಾಮಲಗಳೆಲ್ಲಾ ಮನದ ಪರಿಣಾಮವೇ ಚೆಲುವುಭ ಎಂಬ ಅಲ್ಲಮ ಪ್ರಭು ಸೊಲ್ಲಿನ ರೀತಿಯಲ್ಲಿ ಸೋಮೇಶ್ವರೋತ್ಸ ಮನದ ಮೇಲೆ ಚೆಲುವಿನ ಪರಿಣಾಮ ಬೀರುವ ಉತ್ಸವವಾಗಿದೆ.

ಸಾಧನೆಗೆ ಸ್ಫೂರ್ತಿ

ಹಾಡುವುದು, ರಂಜಿಸುವುದು ಅಷ್ಟೇ ಉತ್ಸವದ ಕೇಂದ್ರ ಬಿಂದು ಆಗಿರುವುದಿಲ್ಲ. ಕೈಯಿಲ್ಲದಿದ್ದರೂ, ಕಾಲಿಲ್ಲದಿದ್ದರೂ, ಕಿವಿ ಕೇಳದಿರುವ ವಿಕಲ ಚೇತನರು ದೇಹ ಊನಗೊಂಡರು, ಸಾಧನೆಗೆ ಯಾವುದೂ ಅಡ್ಡಿಯಲ್ಲ ಎಂದು ನಾನಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಕರೆಸಿ ಅವರನ್ನು ಮಕ್ಕಳು, ಪೋಷಕರ ಕಣ್ಮುಂದೆ ನಿಲ್ಲಿಸಿ ಅವರು ಊನಗೊಂಡ ಬದುಕನ್ನು ಗೆದ್ದು ಸಾಧನೆ ಮಾಡಿದ ರೀತಿಯನ್ನು ಅವರ ಬಾಯಿಂದಲೇ ಹೇಳಿಸಿ ಸ್ಫೂರ್ತಿ ತುಂಬುವ ಕೆಲಸವನ್ನು ಉತ್ಸವ ಮಾಡುತ್ತಿರುವುದು ವಿಶೇಷ.

ಕೈಯಿಲ್ಲದಿದ್ದರೂ ಅಂತರಾಷ್ಟ್ರೀಯ ಈಜು ಪಟುವಾಗಿ ಬೆಳೆದ ವಿಶ್ವಾಸ್, ಎಂ.ಕೆ. ಶ್ರೀಧರ್, ಡಾ. ಮಹಾಜಬಿನ್, ಕು. ಅಶ್ವಿನಿ ಅಂಗಡಿ, ಕಿವಿ ಕೇಳದಿದ್ದರೂ ದೊಡ್ಡ ಪತ್ರಕರ್ತ, ಅಂಕಣಕಾರರಾಗಿ ಗುರುತಿಸಿಕೊಂಡಿರುವ ಎ.ಆರ್. ಮಣಿಕಾಂತ್, ಸ್ಕೇಟಿಂಗ್ ಪ್ರತಿಭೆ ಬೆಳಗಾವಿಯ ಅಭಿಷೇಕ ನವಿಲೆ, ಗಿನ್ನಿಸ್ ದಾಖಲೆ ಮಾಡಿದ ಮಾಸ್ಟರ್ ಕಿಶನ್ ಇಂತಹ ಅನೇಕ ನ್ಯೂನತೆ ಮೆಟ್ಟಿ ನಿಂತು ಸಾಧನೆ ಮಾಡಿದ ಸಾಧಕರು ಸೋಮೇಶ್ವರೋತ್ಸವ ವೇದಿಕೆ ಬಂದು ತಮ್ಮ ಸಾಧನೆಯ ಹಾದಿ ಬಿಚ್ಚಿಟ್ಟು ಮಕ್ಕಳಿಗೆ ಸ್ಫೂರ್ತಿ ನೀಡಿದ್ದಾರೆ. ಚೆಸ್ ಚಾಂಪಿಯನ್ ಈ ವೇದಿಗೆ ಬಂದು ಹೋದ ಮೇಲೆ ಅವರಿಂದ ಸ್ಫೂರ್ತಿ ಪಡೆದ ಇಬ್ಬರು ಶಾಲೆಯ ವಿದ್ಯಾರ್ಥಿಗಳು ಚೆಸ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಹೋಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಭಾವ ಜಗತ್ತಿನ ಶುದ್ಧಿ

ಮಕ್ಕಳ ಭಾವ ಜಗತ್ತಿನ ಶುದ್ಧಿಗೆ ಒಂದಷ್ಟು ಸಾಂಸ್ಕೃತಿಕ, ಧಾರ್ಮಿಕ ಪ್ರೇರಣೆ ಬೇಕು. ನಾಡಿನ ನಾನಾ ಭಾಗದಿಂದ ಧಾರ್ಮಿಕ, ಸಾಂಸ್ಕೃತಿಕ ನಾಯಕರನ್ನು ಸೋಮೇಶ್ವರೋತ್ಸವಕ್ಕೆ ಕರೆಸಿ ಬಸವಣ್ಣ ಆಶಿಸಿದಂತೆ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಯ ಕಲ್ಪನೆಯಲ್ಲಿ ಭಾವ ಜಗತ್ತಿನ ಶುದ್ಧಿಗೆ ಪ್ರೇರಣೆ ಉತ್ಸವ ನೀಡುತ್ತಾ ಬಂದಿದೆ. ನಾಡಿನ ಸಾಂಸ್ಕೃತಿಕ ರಾಯಭಾರಿಗಳಾದ ಸಂಗೀತದ ಮೇರು ಪ್ರತಿಭೆ ಎಸ್.ಪಿ.ಬಾಲಸುಬ್ರಹ್ಮಣ್ಯಂ, ಗಾಯಕಿ ಎಂ.ಡಿ. ಪಲ್ಲವಿ, ರಾಜೇಶ್ ಕೃಷ್ಣನ್, ಹೇಮಂತ್‌ಕುಮಾರ್, ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡರು, ಮೇರು ಸಾಹಿತಿಗಳಾದ ಜಯಂತ್ ಕಾಯ್ಕಿಣಿ, ಸಾಹಿತಿ ಮತ್ತು ಅಮೆರಿಕಾ, ಅಮೆರಿಕಾ ಸಿನಿಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಬಿ.ಆರ್. ಲಕ್ಷ್ಮಣರಾವ್ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಸೋಮೇಶ್ವರೋತ್ಸವ ಸಂಸ್ಥೆ ಕಾರ್ಯದರ್ಶಿ ಕೆ. ಎಂ.ಸುರೇಶ್ ಅವರ ಕನಸು. ಇಂತಹ ಉತ್ಸವ ನಡೆಸಲು ಬೇ ಕಾದ ಲಕ್ಷಾಂತರ ವೆಚ್ಚವನ್ನು ಸಂಸ್ಥೆ ಯಾವುದೇ ಲಾಭಾಕಾಂಕ್ಷೆಯಿಲ್ಲದೆ ಮಾಡುತ್ತಿದೆ. ಶಾಲೆ ಮಕ್ಕಳು, ಪೋಷಕರು ನನ್ನೂರಿನ ಜನರನ್ನು ಸಾಂಸ್ಕೃತಿಕವಾಗಿ ಎಚ್ಚರವಾಗಿಟ್ಟು ಅವರನ್ನು ನೈತಿಕವಾಗಿ ಗಟ್ಟಿಗೊಳಿಸಬೇಕು ಎಂಬ ಉದಾತ್ತ ಆಲೋಚನೆಯಿದೆ.

ಶಿಕ್ಷಣ ಸಿರಿ ಸಮ್ಮಾನ

ಸೋಮೇಶ್ವರೋತ್ಸವದ ಮತ್ತೊಂದು ಹೈಲೈಟ್ ಶಿಕ್ಷಣ ಸಿರಿ ಸಮ್ಮಾನ, ಎಲ್ಲ ರಂಗದಲ್ಲೂ ಸಾಧನೆ ಮಾಡಿ ಸ್ಫೂರ್ತಿಯಾದವರಿಗೆ ನೀಡುವ ಈ ಸಮ್ಮಾನ ನೀಡಲಾಗುತ್ತದೆ. ಭಾವ-ಬೇಧವಿಲ್ಲದೆ ಎಲ್ಲರ ಎದೆಗೆ ಆಕ್ಷರ ಬಿತ್ತಿದ ಮೇಷ್ಟು, ಗಾಂಧಿವಾದಿ ಬೆಳಗೆರೆ ಕೃಷ್ಣಶಾಸ್ತ್ರಿ, ಬೆಂಗಳೂರಿನ ಡಾ. ಶ್ರೀಧರ್, ಹುಬ್ಬಳ್ಳಿಯ ಆದರ್ಶ ಶಿಕ್ಷಕ ರಾಮು ಮುಲಗಿ, ಜಾನಪದ ತಜ್ಞ ದಾವಣಗೆರೆ ಡಾ.ಎಂ.ಜಿ.ಈಶ್ವರಪ್ಪ ಹೀಗೆ ಪಟ್ಟಿ ಬೆಳೆಯುತ್ತದೆ.

ಸೋಮೇಶ್ವರೋತ್ಸವದಲ್ಲಿ 3 ದಿನಗಳ ಕಾಲ ಪಾಲ್ಗೊಳ್ಳುವ ಪೂಜ್ಯರು, ಗಣ್ಯರು ಮತ್ತು ಸಾಧಕರು

ಈ ಬಾರಿ ಅಮೃತ ವರ್ಷಿಣಿ ಖ್ಯಾತಿಯ ರಮೇಶ್ ಅರವಿಂದ್ ಮತ್ತು ಗಾಯಕಿ ಎಂ.ಡಿ. ಪಲ್ಲವಿ

ಈ ಬಾರಿ ಸೋಮೇಶ್ವರೋತ್ಸವ ಜನವರಿ 3 ರಿಂದ ಆರಂಭ ಆಗಲಿದೆ. ಅಮೃತ ವರ್ಷಿಣಿ ಖ್ಯಾತಿಯ ರಮೇಶ್ ಅರವಿಂದ್ ಮತ್ತು ಗಾಯಕಿ ಎಂ.ಡಿ. ಪಲ್ಲವಿ ಪ್ರಮುಖ ಆಕರ್ಷಣೆಯಾಗಿದ್ದಾರೆ. ಇವರು ಉತ್ಸವದಲ್ಲಿ ಜ. 5, ಭಾನುವಾರ ಸಂಜೆ ಹೃದಯಸ್ಪರ್ಶಿ ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ.

SRI SOMESHWARA COMPOSITE SCIENCE PU COLLEGE

ಸೋಮೇಶ್ವರ ನೂತನ ಪಿಯು ಕಾಲೇಜು ಆರಂಭ

ಪಿಯು ಕಾಲೇಜುಗಳೆಂದರೆ ಅದೊಂದು ವಿದ್ಯಾರ್ಥಿಗಳನ್ನು ಯಾಂತ್ರಿಕವಾಗಿ ನೀಟ್, ಜೆಇಇ, ಸಿಇಟಿಗೆ ತಯಾರು ಮಾಡುವ ಕಾರ್ಖಾನೆಗಳಂತಾಗಿವೆ. ಹೈಸ್ಕೂಲ್‌ವರೆಗೂ ಕಲೆ, ಸಂಗೀತ, ಸಂಸ್ಕೃತಿ, ಸಂಸ್ಕಾರದೊಟ್ಟಿಗೆ ಬೆಳೆದು ಬರುವ ವಿದ್ಯಾರ್ಥಿಗಳು ಪಿಯುಸಿಗೆ ಬಂದ ತಕ್ಷಣ ಇವ್ಯಾವುದಕ್ಕೂ ಅವಕಾಶ ನೀಡದೆ ಅವರನ್ನು ಜೆಇಇ, ನೀಟ್ ಪರೀಕ್ಷೆಯೇ ಓದಿನ ಗುರಿ ಎಂಬಂತೆ ತಯಾರು ಮಾಡಲಾಗುತ್ತದೆ. ನೆಲದ ಸಂಸ್ಕೃತಿಯೊಟ್ಟಿಗೆ ಡಿ ಲಿಂಕ್ ಆಗುವ ಈ ವಿದ್ಯಾರ್ಥಿಗಳು ದೇಶ, ಭಾಷೆ, ಸಂಸ್ಕೃತಿ, ಸಂಸ್ಕಾರಕ್ಕೆ ವಿಮುಖವಾಗುತ್ತಾರೆ. ಹಾಗಾಗಿ ಈ ಮಕ್ಕಳನ್ನು ಮತ್ತೆ ಈ ಮಣ್ಣು, ಸಂಸ್ಕೃತಿ, ಸಂಸ್ಕಾರದೊಟ್ಟಿಗೆ ಬೆಸೆಯುವ ಕೆಲಸದ ಜತೆ ಜೆಇಇ, ನೀಟ್ ತರಬೇತಿ ನೀಡಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಇದಕ್ಕಾಗಿ ಪಿಯು ಕಾಲೇಜಿನಲ್ಲಿ ಪ್ರತಿ ತಿಂಗಳು ಸಂಸ್ಕಾರ ಕುರಿತು ನಾಡಿನ ಪ್ರಮುಖ ಚಿಂತಕರಿಂದ ಉಪನ್ಯಾಸ ನಡೆಸಲಾಗುವುದು. ಇದರೊಟ್ಟಿಗೆ ಇಂದಿನ ಎಲ್ಲ ಆಧುನಿಕ ಶಿಕ್ಷಣವೂ, ಆಕಾಶಕ್ಕೆ ಹಾರುವ ಕನಸುಗಳನ್ನು ಕೂಡ ಬಿತ್ತಲಾಗುತ್ತದೆ. ಗ್ರಾಮೀಣ ಪ್ರದೇಶದ ಯುವಕ, ಯುವತಿಯರಿಗೂ ಕೂಡ ಉತ್ತಮ ಶಿಕ್ಷಣ ಕೊಡಬೇಕು, ಅವರಿಗೂ ಕೂಡ ನೀಟ್, ಜೆಇಇ, ಸಿಇಟಿ ತರಬೇತಿ ಅವರಿರುವ ಸ್ಥಳದಲ್ಲಿಯೇ ದೊರೆತು ನಗರದ ಮಕ್ಕಳಂತೆ ಅವರು ಸಾಧನೆ ಮಾಡಬೇಕು ಎಂಬ ಮತ್ತೊಂದು ಉದಾತ್ತ ಉದ್ದೇಶ ಹೊಂದಲಿ.

16 ವರ್ಷದಿಂದ ಹಡ್ರೆಂಡ್ ಪರ್ಸೆಂಟ್

ಎಸ್‌ಎಸ್‌ಎಲ್‌ಸಿಯಲ್ಲಿ ನಿರಂತರ 16 ವರ್ಷದಿಂದ ಶೇ. 100 ಫಲಿತಾಂಶ ಪಡೆಯುತ್ತಿರುವುದು ಇಲ್ಲಿನ ಶಿಕ್ಷಣ ಮತ್ತು ಬೋಧನೆ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಇನ್ನೂ ವಿಶೇಷವೆಂದರೆ ಪರೀಕ್ಷೆ ಬರೆಯುವ ಮಕ್ಕಳಲ್ಲಿ ತೃತೀಯ ದರ್ಜೆಯಲ್ಲಿ ಪಾಸಾಗಿರುವ ಮಕ್ಕಳ ಸಂಖ್ಯೆಯೇ ಇರುವುದಿಲ್ಲ, ಒಂದೆರಡು ಮಕ್ಕಳು ಮಾತ್ರ ದ್ವಿತೀಯ ದರ್ಜೆಯಲ್ಲಿ ಪಾಸಾಗುತ್ತಾರೆ. 25 ರಿಂದ 30 ಮಕ್ಕಳು ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆಯುತ್ತಾರೆ. ಉಳಿದವರು ಪ್ರಥಮ ದರ್ಜೆಯಲ್ಲಿ ಪಾಸಾಗುತ್ತಾರೆ ಎಂದರೆ ಇದು ಇಲ್ಲಿನ ಬೋಧನೆಯ ಶಕ್ತಿಯನ್ನು ಇತರೆ ಶಾಲೆಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ.

ಶಿಕ್ಷಣ ಎಂಬ ಪದಕ್ಕೆ ಹೊಸ ಅರ್ಥ ಹುಡುಕುವ ಹೊತ್ತಲ್ಲಿ ನೆಲದ ಸಂಸ್ಕೃತಿ, ನಮ್ಮ ಕಳ್ಳುಬಳ್ಳಿಯ ನಂಟಿನೊಂದಿಗೆ ಇಂದಿನ 4 ಜಿ ತಲೆಮಾರಿಗೆ ಆಧುನಿಕೋತ್ತರ ಶಿಕ್ಷಣದ ಸಮನ್ವಯತೆ ಸಾಧಿಸಿಕೊಂಡು ಶಿಕ್ಷಣ ನೀಡುವುದು ಕೂಡ ಇಂದಿನ ಸವಾಲು, ಈ ವಿಷಯದಲ್ಲಿ ಬೇರೆ ಶಾಲೆಗಳು ಹೇಗಿವೆಯೋ ಗೊತ್ತಿಲ್ಲ, ಆದರೆ ನಗರದ ಹೃದಯದ ಮಧ್ಯಭಾಗದಲ್ಲಿರುವ ದಾವಣಗೆರೆಯ ಪ್ರತಿಷ್ಠಿತ ಮತ್ತು ಜನರ ಮನೆ, ಮನೆಗಳಲ್ಲಿ ತುಂಬಿರುವ ಸೋಮೇಶ್ವರ ವಿದ್ಯಾಲಯ ಎಲ್ಲ ಶಾಲೆಗಳಂತಲ್ಲ. ಹಿಂದಣ ಅನಂತವನ್ನು ಮುಂದಣ ಅನಂತವನ್ನೂ ಒಂದು ದಿನ ಒಳಗೊಂಡಿತ್ತು ನೋಡು ಬಾ ಎಂಬ ಅಲ್ಲಮನ ಸೊಲ್ಲಿನಂತೆ ಹಿಂದಣವನ್ನು ಮತ್ತು ಮುಂದಣವನ್ನು ಸಮನ್ವಯ ಸಾಧಿಸಿಕೊಂಡು ಅರಿವಿನ ಶಿಕ್ಷಣ ನೀಡುತ್ತಿದೆ. ಸ್ವಂತಕ್ಕಿಷ್ಟು ಸಮಾಜಕ್ಕೆ ಇನ್ನಷ್ಟು ಎಂಬಂತೆ ಸದಾ ಮಾನವೀಯ ತುಡಿತದಲ್ಲಿ ಸಾಗುತ್ತಿರುವ ಈ ಶಾಲೆಯ ಕಾರ್ಯದರ್ಶಿ ಕೆ.ಎಂ. ಸುರೇಶ್ ಅವರ ಕನಸು, ಸಂಕಲ್ಪ ಶಕ್ತಿಯೇ ಇದಕ್ಕೆ ಕಾರಣ.

KARNATAK LINGAYAT EDUCATION SOCIETY
Since 1916
KLE Society
Belagavi

- 310 Institutions
- 1,45,000+ Students
- 18,000+ Faculty

www.klesociety.org

CANCER CARE REVOLUTIONIZED
Inauguration of
KLE CANCER HOSPITAL, BELAGAVI
(DR. SAMPATKUMAR S. SHIVANAGI CANCER HOSPITAL)
Friday 3rd January, 2025 at 4.00 pm
District Stadium (JNMC Campus), Nehru Nagar, Belagavi



Shri Pralhad Joshi
Hon'ble Minister for Consumer Affairs, Food and Public Distribution, New & Renewable Energy, Government of India

Dr. Prabhakar Kore
Hon'ble Chairman, KLE Society, Chancellor, KAHER, Belagavi

Shri Mahantesh S. Koujalgi
Hon'ble President, KLE Society, Belagavi

Dr. Sharanprakash Patil
Hon'ble Minister for Medical Education & Skill Development, Govt of Karnataka

Shri Satish Jarakiholi
Hon'ble Minister for Public Works Govt of Karnataka

Shri Jagadish Shettar
Hon'ble Former Chief Minister of Karnataka & Member of Parliament, Lok Sabha

Shri Asif (Raju) Sait
Hon'ble MLA, Belagavi North

Dr. Nitin Gangane
Hon'ble Vice Chancellor, KAHER

Shri Abhay Patil
Hon'ble MLA, Belagavi South

DONORS Dr. Sampatkumar S. Shivanagi Dr. (Smt.) Udaya S. Shivanagi

Chief Guest
SMT DROUPADI MURMU
Hon'ble President of India

CLINICAL STRENGTHS
16 Hospital Locations | 4,500+ Healthcare Beds | 1,400 Free Healthcare Beds
3,000 Professional Staff | 970+ Doctors

KLE FAMILY

Pre-primary & School Education | Collegiate Education | Engineering & Technological University | Agricultural Education | KAHER (Deemed-to-be-University) | Management Education | Education in Law

ಸಮಾಚಾರ ಸಣ್ಣದಲ್ಲ

ಕೆರೆಗೆ ಕಾರು ಬಿದ್ದು ಇಬ್ಬರ ಸಾವು

ಚಾಮರಾಜನಗರ: ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಕಾರು ಕೆರೆಗೆ ಬಿದ್ದು ಇಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ಕೊಳ್ಳೇಗಾಲ ತಾಲೂಕಿನ ಕುಂತೂರಿನಲ್ಲಿ ನಡೆದಿದೆ. ಮೈಸೂರಿನಲ್ಲಿ ಟೆಲಿಕಾಲರ್ ಆಗಿ ಕೆಲಸ ಮಾಡುತ್ತಿದ್ದ ಶುಭಾ ಮತ್ತು ಕಾರು ಚಾಲಕ ಊರ್ಜಿತ್ ಮೃತಪಟ್ಟ ದುರ್ದೈವಿಗಳು. ಖಾಸಗಿ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿರುವ ಮನೀತ್ ಎಂಬುವರನ್ನು ರಕ್ಷಿಸಲಾಗಿದೆ. ಮನೀತ್ ಕಾರಿನ ಬಾನೆಟ್ ಮೇಲೆ ನಿಂತು ಕೂಗುತ್ತಿದ್ದುದನ್ನು ಗಮನಿಸಿದ ಸ್ಥಳೀಯರಿಂದ ಮಾಹಿತಿ ಪಡೆದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಮನೀತ್‌ನನ್ನು ಕೆರೆಯಿಂದ ಮೇಲೆತ್ತಿದ್ದಾರೆ. ಆದರೆ ಶುಭಾ ಹಾಗೂ ಊರ್ಜಿತ್ ಸ್ಥಳದಲ್ಲೇ ಮೃತಪಟ್ಟಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಬಸ್‌ನಲ್ಲಿ ದಿಢೀರ್ ಬೆಂಕಿ: ತಪ್ಪಿದ ಅನಾಹುತ



ಸಕಲೇಶಪುರ: ಚಲಿಸುತ್ತಿದ್ದ ಖಾಸಗಿ ಬಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ದಿಢೀರ್ ಬೆಂಕಿ ಕಾಣಿಸಿ ಕೊಂಡಿದ್ದು, ಚಾಲಕನ ಸಮಯ ಪ್ರಜ್ಞೆಯಿಂದ ಭಾರಿ ಅನಾಹುತವೊಂದು ತಪ್ಪಿದ ಘಟನೆ ತಾಲೂಕಿನ ಶಿರಾಡಿಘಾಟ್ ರಸ್ತೆಯ, ಎತ್ತಿನಹಳ್ಳ ಬಳಿ ಗುರುವಾರ ಮುಂಜಾನೆ ನಡೆದಿದೆ. ಬೆಂಗಳೂರಿನಿಂದ ಸುಬ್ರಹ್ಮಣ್ಯಕ್ಕೆ ತೆರಳುತ್ತಿದ್ದ ಸ್ಲೀಪಿಂಗ್ ಕೋಚ್ ಎಸಿ ಬಸ್‌ನಲ್ಲಿ 30 ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಮುಂಜಾನೆ 5 ಗಂಟೆ ವೇಳೆ ಶಿರಾಡಿಘಾಟ್ ರಸ್ತೆಯಲ್ಲಿ ತೆರಳುವಾಗ ಬಸ್‌ನ ಇಂಜಿನ್‌ನಲ್ಲಿ ಬೆಂಕಿ ಕಾಣಸಿಕೊಂಡಿದೆ. ತಕ್ಷಣವೇ ವಾಹನ ನಿಲ್ಲಿಸಿದ ಚಾಲಕ ಯೋಗೀಶ್ ಪ್ರಯಾಣಿಕರನ್ನು ಕೆಳಗಿಳಿಸಿದ್ದಾನೆ. ನಂತರ ಇಡೀ ಬಸ್‌ಗೆ ಬೆಂಕಿ ವ್ಯಾಪಿಸಿದ್ದು, ರಸ್ತೆಯಲ್ಲಿಯೇ ಧಗಧಗನೆ ಹೊತ್ತಿ ಉರಿದಿದೆ. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಬೆಂಕಿ ನಂದಿಸಿದ್ದಾರೆ.

ಮಣಿಕಂಠ ರಾಥೋಡ್ ಆಡಿಯೊ ಬಿಡುಗಡೆ ಮಾಡಿದ ಪ್ರಿಯಾಂಕ್

ಖರ್ಗೆ ಕುಟುಂಬಕ್ಕೆ ಮಸಿ ಬಳಿಯಲು ಹೋರಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಲ್ಲಿಕಾರ್ಜುನ ಖರ್ಗೆ ಹಾಗೂ ನನಗೆ ಮಸಿ ಬಳಿಯಬೇಕು ಎನ್ನುವ ಕಾರಣಕ್ಕೆ ಬಿಜೆಪಿಯವರು ಹೋರಾಟ ಮಾಡುತ್ತಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ವಿರುದ್ಧ ಆಪಾದನೆ ಮಾಡುವುದಾದರೆ ಸರಿಯಾದ ದಾಖಲೆ ಸಮೇತವಾಗಿ ಮಾಡಲಿ. ಸಚಿನ್ ಸಾವಿನ ಪತ್ರದಲ್ಲಿ ಎಲ್ಲಿಯೂ ನನ್ನ ಹೆಸರನ್ನು ಉಲ್ಲೇಖಿಸಿಲ್ಲ. ಬಿಜೆಪಿಗರು ಸುಖಾಸುಮ್ಮನೆ ನನ್ನ ಬಗ್ಗೆ ವಾದ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ್ ನೇತೃತ್ವದಲ್ಲಿ ಕಲಬುರಗಿಯಲ್ಲಿ ನನ್ನ ವಿರುದ್ಧ ಮುತ್ತಿಗೆ ಹಾಕಲು ಮುಂದಾಗುತ್ತಿದ್ದಾರೆ. ರಾಠೋಡ್ ವಿರುದ್ಧ 20-30 ಕೇಸ್ ಇದ್ದರೂ ಕ್ರಮ ಆಗಿಲ್ಲ. ಆತ ಈ ಹಿಂದೆ ನನಗೆ ಜೀವ ಬೆದರಿಕೆ ಕೂಡ ಆಗಿದ್ದ ಎಂಬ ಆಡಿಯೊವನ್ನು ಇದೇ ವೇಳೆ ಸಚಿವರು ಬಿಡುಗಡೆ ಮಾಡಿದ್ದರು. ಇದೀಗ ಆತನ ನೇತೃತ್ವದಲ್ಲಿ ಕಲಬುರಗಿ ಚಲೋ ಹಮ್ಮಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ನನ್ನ ಹೆಸರಿನ ಉಲ್ಲೇಖವಿಲ್ಲ. ಇದಕ್ಕೂ ನನಗೆ ಸಂಬಂಧವಿಲ್ಲ. ಹಾಗಿದ್ದರೂ ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

- ಬಿಜೆಪಿ ವಿರುದ್ಧ ವಾಗ್ದಾಳಿ ಮುಂದುವರಿಸಿದ ಖರ್ಗೆ
- ಮಾಧ್ಯಮದ ಮುಂದೆ ಆರೋಪ ಮಾಡುವವರು ಈವರೆಗೆ ದಾಖಲೆ ನೀಡಿಲ್ಲವೇಕೆ?
- ಸಚಿನ್ ಸಾವಿನ ಪತ್ರದಲ್ಲಿ ಎಲ್ಲಿಯೂ ನನ್ನ ಹೆಸರನ್ನು ಉಲ್ಲೇಖಿಸಿಲ್ಲ

ಇದೇ ವೇಳೆ ಗುತ್ತಿಗೆದಾರರ ಸಂತೋಷ್ ಪಾಟೀಲ್ ಬರೆದ ಡೆತ್ ನೋಟ್ ಓದಿದ ಅವರು, ಸಂತೋಷ್ ಪಾಟೀಲ್ ನನ್ನ ಸಾವಿಗೆ ನೇರ ಕಾರಣ ಕೆ.ಎಸ್.ಈಶ್ವರಪ್ಪ. ಅವರಿಗೆ ತಕ್ಕ ಶಿಕ್ಷೆ ಆಗಬೇಕು ಎಂದು ಸಂತೋಷ್ ಪಾಟೀಲ್ ತಮ್ಮ ಡೆತ್ ನೋಟ್‌ನಲ್ಲಿ ಉಲ್ಲೇಖ ಮಾಡಿದ್ದರು. ಇದುವರೆಗೂ ಅವರ ಕುಟುಂಬವನ್ನು ಭೇಟಿ ಮಾಡಿಲ್ಲ ಎಂದು ಟೀಕಿಸಿದರು.

ನನ್ನ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ನಾಯಕರು ಪತ್ರ ಬರೆದಿರುವ ಕುರಿತು ಮಾತನಾಡಿದ ಅವರು, ಸಂಪುಟದಲ್ಲಿ ಯಾರನ್ನು ಇಟ್ಟುಕೊಳ್ಳುವುದು, ಬಿಡುವುದು ಎಂಬುದು ಮುಖ್ಯಮಂತ್ರಿಗಳ ವಿಚಾರಕ್ಕೆ ಬಿಟ್ಟಿದ್ದು ಎಂದು ತಿರುಗೇಟು ನೀಡಿದರು.

ಬ್ಯಾಟ್ ಹಿಡಿಯಲು ಬಾರದವರು ಐಸಿಸಿ ಅಧ್ಯಕ್ಷ

ಬ್ಯಾಟ್ ಹಿಡಿಯಲು ಬಾರದವರು ಐಸಿಸಿ ಅಧ್ಯಕ್ಷರಾಗಿದ್ದಾರೆ ಮಲ್ಲಿಕಾರ್ಜುನ ಖರ್ಗೆ ಅವರ ಮಗ ಎನ್ನುವ ಕಾರಣಕ್ಕೆ ಸಚಿವನಾದೇ ಎನ್ನುವ ವಿಜಯೇಂದ್ರ ಅವರು ಹೇಗೆ ಬಿಜೆಪಿ ರಾಜ್ಯಾಧ್ಯಕ್ಷರಾದರೂ? ಅವರೆಷ್ಟು ಬಾರಿ ಆರ್ ಎಸ್‌ಎಸ್‌ನ ಶಾಖೆಗಳಲ್ಲಿ ಭಾಗವಹಿಸಿದ್ದಾರೆ? ಖರ್ಗೆ ಪುತ್ರ ಎಂಬ ಹೆಮ್ಮೆ ನನಗಿದೆ. ಬಿಜೆಪಿಯವರಿಗೆ ಏಕೆ ಅವರ ಅಪ್ಪಂದಿರ ಬಗ್ಗೆ ಗೌರವ ಇಲ್ಲ ಎಂದು ಟೀಕಿಸಿದರು. ಬ್ಯಾಟ್ ಹಿಡಿಯಲು ಬಾರದವರನ್ನು ಐಸಿಸಿ ಅಧ್ಯಕ್ಷರನ್ನಾಗಿ ಮಾಡಿದರು. ಅವರಾದರೆ ಹಾಗೆ ನೇಮಕವಾಗಬಹುದು. ನಾವೂ ಆದರೆ ಆಗಬಾರದ? ಕುಟುಂಬ ರಾಜಕಾರಣದ ಬಗ್ಗೆ ಅವರು ಮಾತನಾಡುತ್ತಾರೆ. ಕುಟುಂಬ ರಾಜಕಾರಣ ಎಂಬುದು ನಮ್ಮಲ್ಲಿದ್ಯಾ ಅವರಲ್ಲಿದ್ಯಾ? ಎಂದು ಪ್ರಶ್ನಿಸಿದರು.

ಚಾಕು ಇರಿತಕ್ಕೆ ತಂಗಿ ಬಲಿ

ಚಾಮರಾಜನಗರ: ಜ್ವರ ಬಂದಿದ್ದ ಮಗುವಿಗೆ ಸೌತೆಕಾಯಿ ತಿನ್ನಿಸಬೇಡ ಎಂದಿದ್ದಕ್ಕೆ ಕಲಹ ಉಂಟಾಗಿ ಮನೆಮಂದಿಗೆಲ್ಲಾ ಚಾಕು ಇರಿದಿರುವ ಘಟನೆ ಕೊಳ್ಳೇಗಾಲದ ಈದ್ಗಾ ಮೊಹಲ್ಲಾದಲ್ಲಿ ನಡೆದಿದೆ. ಚಾಕು ಇರಿತಕ್ಕೊಳಗಾದ ಐಮಾನ್ ಬಾನು(26) ಸ್ಥಳದಲ್ಲೇ ಮೃತಪಟ್ಟಿದ್ದು ಸೈಯದ್ (60) ಮತ್ತು ತಸ್ಲಿಮಾ ತಾಜ್(25) ಗಂಭೀರವಾಗಿ ಗಾಯಗೊಂಡು ಸಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಚಾಕು ಇರಿದಿದ್ದ ಫರ್ಮಾನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಫರ್ಮಾನ್ ತನ್ನ ಅಣ್ಣನ ಮಗುವಿಗೆ ಸೌತೆಕಾಯಿ ತಿನ್ನಿಸುತ್ತಿದ್ದ ವೇಳೆ ತಂಗಿ ಐಮಾನ್ ಳು, ಜ್ವರ ಬಂದಿರುವ ಮಗುವಿಗೆ ಸೌತೆಕಾಯಿ ಏಕೆ ತಿನ್ನಿಸುತ್ತಿದ್ದಿಯಾ ಎಂದು ಪ್ರಶ್ನಿಸಿದ್ದಾಳೆ. ಈ ಮಾತಿಗೆ ಮಾತು ಬೆಳೆದು ಐಮಾನ್ ಗೆ ಚಾಕುವಿನಿಂದ ಕುತ್ತಿಗೆಗೆ ಇರಿದಿದ್ದಾನೆ. ಬಳಿಕ, ತಂದೆ ಸೈಯದ್ ಮತ್ತು ಅತ್ತಿಗೆಗೂ ಚಾಕುವಿನಿಂದ ಇರಿದಿದ್ದಾನೆ.

ಬಿಜೆಪಿ ಬಣದಾಟ...

← ಮೊದಲಪುಟದಿಂದ

ರೆಬೆಲ್ ತಂಡದ ಕೋಪಕ್ಕೆ ಕಾರಣವೇನು?: ಅಧಿ ಕಾರಿಗಳು, ಗುತ್ತಿಗೆದಾರರು, ಗರ್ಭಿಣಿಯರ ಸಾವಿನ ವಿರುದ್ಧ ಹೋರಾಟಕ್ಕೆಂದು ರಚಿಸಲಾಗಿದ್ದ ಎರಡು ಸಮಿತಿಗಳಲ್ಲಿ ಭಿನ್ನರ ಬಣದವರಿಗೆ ಅವಕಾಶ ನೀಡಿಲ್ಲ. ಅಲ್ಲದೆ ರೆಬೆಲ್ ಟೀಮ್ ನಾಯಕರನ್ನು ದೂರ ಇಟ್ಟು ರಾಜ್ಯ ಬಿಜೆಪಿ ಸಮಿತಿ ಮಾಡಿದೆ. ಆಂದೋಲನ ಸಮಿತಿಯಲ್ಲಿ ಛಲವಾದಿ ನಾರಾಯಣಸ್ವಾಮಿ, ಆರಗ ಜ್ಞಾನೇಂದ್ರ, ಎನ್. ಮಹೇಶ್, ಅಶ್ವಥ್ ನಾರಾಯಣಗೌಡ, ಬಸವರಾಜ್ ಮುತ್ತಿಮೋಡ್, ಎನ್. ರವಿಕುಮಾರ್ ಇದ್ದರೆ, ಬಾಣಂತಿಯರ ಸಾವಿನ ಸತ್ಯಶೋಧನಾ ಸಮಿತಿಯಲ್ಲಿ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ, ಡಾ.ಅವಿನಾಶ್ ಜಾಧವ್, ಡಾ.ಚಂದ್ರ ಲಮಾಣಿ ನಿವೃತ್ತ ಅಧಿಕಾರಿ ಡಾ. ಅಶ್ವಿನಿಗೌಡ ಹಾಗೂ ಮುಖಂಡರಾದ ಡಾ.ಬಸವರಾಜ್ ಕೆಲಗಾರ್ ಇದ್ದಾರೆ. ಎಲ್ಲಿಯೂ ಕೂಡ ರೆಬೆಲ್ ಟೀಂ ನ ಯಾರೊಬ್ಬರನ್ನೂ ಈ ಸಮಿತಿಯಲ್ಲಿ ಸೇರಿಸಿಲ್ಲ ಎನ್ನುವುದು ರೆಬೆಲ್ ತಂಡದ ಕೋಪಕ್ಕೆ ಕಾರಣವಾಗಿದೆ ಎನ್ನಲಾಗಿದೆ.

ನಾನು, ಪ್ರಜ್ವಲ್ ಹಾಸನದ ಋಣ ತೀರಿಸುತ್ತೇವೆ: ಸೂರಜ್

ಹಾಸನ: ಸೂರ್ಯ ಹುಟ್ಟುವುದು ಒಂದೇ ಸಲ ಅಲ್ಲ, ಸೂರ್ಯ ಪ್ರಜ್ವಲಿಸುತ್ತಾನೆ. ನಿಮ್ಮ ಪ್ರಜ್ವಲ್ ಅಣ್ಣ, ಸೂರಜ್ ಅಣ್ಣನೂ ಅಷ್ಟೇ. ಈ ಜಿಲ್ಲೆಯ ಋಣ ತೀರಿಸುವ ಕೆಲಸ ಮಾಡೇ ಮಾಡುತ್ತೇವೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಹೇಳಿದ್ದಾರೆ.

ತಮ್ಮ ಹುಟ್ಟುಹಬ್ಬದ ಅಂಗ ವಾಗಿ ಚನ್ನರಾಯಪಟ್ಟಣ ದಲ್ಲಿ ಬುಧವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಕೆಲವು ಅಧಿಕಾರಿಗಳು, ವಿರೋಧಿಗಳು ನಮ್ಮ ಕಾರ್ಯಕರ್ತರಿಗೆ ಯಾವ ರೀತಿ ತೊಂದರೆ ಕೊಡುತ್ತಿದ್ದಾರೆ ಎಂದು ನೋಡುತ್ತಿದ್ದೇವೆ. ಯಾವುದೂ ಶಾಶ್ವತವಲ್ಲ. ಯಾವ ಸರಕಾರವೂ ಶಾಶ್ವತ ಅಲ್ಲ. ನಾನು, ನನ್ನಿಂದ ಮಾಡಿದ್ದು ಅಂತ ಹೇಳಿದವರು ಒಮ್ಮೆ ಸ್ಮಶಾನಕ್ಕೆ ಹೋಗಿ ಬನ್ನಿ. ಎಂತೆಂಥ ವರೋ ಏನೇನೋ ಆಗಿದ್ದಾರೆ ಅನ್ನೋದು ಗೊತ್ತಾಗುತ್ತದೆ.

ನಾವು ಮಾಡುವ ಒಳ್ಳೆಯ ಕೆಲಸ ಮಾತ್ರ ಈ ಭೂಮಿ ಮೇಲೆ ಉಳಿಯುತ್ತದೆ. ಈ ದ್ವೇಷದ ರಾಜಕಾರಣ ಉಳಿಯಲ್ಲ ಎಂದರು.

ಕೆಲಸ ಮಾಡಲಿ, ಜನಕ್ಕೆ ಒಳ್ಳೆಯದು ಮಾಡಲಿ ಎಂದು ನಿಮಗೆ 135 ಸೀಟ್ ಕೊಟ್ಟಿದ್ದು. ಅದನ್ನು ಬಿಟ್ಟು ದಿನ ಬೆಳಗ್ಗೆಯಾದರೆ ರೇವಣ್ಣ ಅವರನ್ನು ಹೇಗೆ ತುಳಿಯೋದು, ದೇವೇಗೌಡರ ಕುಟುಂಬ ವನ್ನು ಹೇಗೆ ಮುಗಿಸೋದು ಬರೀ ಇದೇ ಆಗಿದೆ ಎಂದು ವಾಗ್ದಾಳಿ ನಡೆಸಿದರು.

ಹೊಸ ವರ್ಷಕ್ಕೆ ದರ ಏರಿಕೆ ಬರೆ

← ಮೊದಲಪುಟದಿಂದ

ಸಚಿವ ಸಂಪುಟ ಸಭೆಯ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಲೀಟರ್ ಡೀಸೆಲ್‌ಗೆ 2015ರ ಜ.10ಕ್ಕೆ 60.98 ರುಪಾಯಿ ಇತ್ತು. ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಅಂದಿನ ಡೀಸೆಲ್ ವೆಚ್ಚ 9 ಕೋಟಿ 16 ಲಕ್ಷವಿತ್ತು. ಆದರೀಗ ಅದು 13.21 ಕೋಟಿ ಹೆಚ್ಚಳವಾಗಿದೆ. ನಾಲ್ಕು ಸಾರಿಗೆ ನಿಗಮಗಳಿಂದ ಸಿಬ್ಬಂದಿ ವೆಚ್ಚ 12.85 ಕೋಟಿ ಇದ್ದದ್ದು ಪ್ರಸ್ತುತ 18.36 ಕೋಟಿಯಾಗಿದೆ. ಆದ್ದರಿಂದ ಪ್ರತಿದಿನ 9.56 ಕೋಟಿ ಹೆಚ್ಚುವರಿ ಹೊರೆ ಉಂಟಾಗಿದೆ. ಆ ಹಿನ್ನೆಲೆಯಲ್ಲಿ ದರ ಪರಿಷ್ಕರಣೆಯಾಗಿದೆ ಎಂದು ಸ್ಪಷ್ಟಪಡಿಸಿದರು.

ಹೆಚ್ಚುವರಿ 74 ಕೋಟಿ ಆದಾಯ: ಎಲ್ಲ ಕಾರ್ಪೋರೇಷನ್‌ಗಳು, ನಗರ ಬಸ್ಸುಗಳು, ಐಷಾರಾಮಿ ಬಸ್ಸುಗಳು ಸೇರಿದಂತೆ ಎಲ್ಲರಿಗೂ ಶೇ.15ರಷ್ಟು ಪರಿಷ್ಕರಿಸಲಾಗಿದೆ. ಇದರಿಂದ ಪ್ರತಿ ತಿಂಗಳು 74.85 ಕೋಟಿಗಳಷ್ಟು ಆದಾಯ ಹೆಚ್ಚಾಗಲಿದೆ. ಶಕ್ತಿ ಯೋಜನೆಗಾಗಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ 5015 ಕೋಟಿಗಳನ್ನು ಮೀಸಲಿರಿಸಿದೆ. ಪ್ರತಿ ತಿಂಗಳು ನಾಲ್ಕೂ ನಿಗಮಗಳಿಗೆ 417.92 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುವುದಿಲ್ಲ. ಕರ್ನಾಟಕ ಅತ್ಯುತ್ತಮ ಆರ್ಥಿಕ ಹೊಣೆಗಾರಿಕೆಯನ್ನು ಅನುಷ್ಠಾನ ಮಾಡಿರುವ ರಾಜ್ಯ ಎಂದು ಸ್ಪಷ್ಟಪಡಿಸಿದರು.

ಸಾರಿಗೆ ನಿಗಮಗಳ ಸಾಲಕ್ಕೆ ಸರಕಾರದ 'ಗ್ಯಾರಂಟಿ': ಆರ್ಥಿಕ ಸಂಕಷ್ಟದಲ್ಲಿರುವ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಸಾಲ ಪಡೆಯಲು ಈಗಾಗಲೇ ನೀಡಿರುವ ಅನುಮೋದನೆಗೆ ಘಟನೋತ್ತರ ಅನುಮತಿ ನೀಡಲಾಯಿತು. ಸಾರಿಗೆ ಸಂಸ್ಥೆಗಳ ಭವಿಷ್ಯನಿಧಿ ಬಾಕಿ ಹಾಗೂ ಇಂಧನ ಬಾಕಿ ಹೊಣೆಗಾರಿಕೆ ಪಾವತಿಸಲು ಒಟ್ಟು 2000 ಕೋಟಿ ರು.ಗಳನ್ನು ಸರಕಾರದ ಖಾತರಿ ಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಡಿ.31ಕ್ಕೆ ಅನುಮೋದನೆ ನೀಡಲಾಗಿತ್ತು.

ನಾಮನಿರ್ದೇಶಕ ಸಿಎಂ ವಿವೇಚನೆಗೆ: ಫೆಬ್ರವರಿಯೊಳಗೆ ನಾಲ್ಕು ವಿಧಾನಪರಿಷತ್ ಸ್ಥಾನಗಳು ಖಾಲಿಯಾಗಲಿವೆ. ಜ.27ಕ್ಕೆ ಖಾಲಿಯಾಗಲಿರುವ ತಿಪ್ಪೇಸ್ವಾಮಿ ಅವರ ಸ್ಥಾನಕ್ಕೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಪುಟ ನೀಡಿದೆ. ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರಿ ಚಳವಳಿ ಮತ್ತು ಸಮಾಜ ಸೇವೆ ವಿಷಯಗಳಲ್ಲಿ ವಿಶೇಷ ಜ್ಞಾನವನ್ನು ಅಥವಾ ಕಾರ್ಯ ರೂಪದ ಅನುಭವ ಹೊಂದಿರುವವರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಸಿಎಂಗೆ ನೀಡಲಾಗಿದೆ.

ಮುಂದಿನ ವಾರ ಬೆಂಗಳೂರಲ್ಲಿ ನೀರಿನ ದರ ಏರಿಕೆ?: ಜನವರಿ ಎರಡನೇ ವಾರದಲ್ಲಿ ನೀರಿನ ದರ ಹೆಚ್ಚಳವಾಗುವ ಸಾಧ್ಯತೆಯಿದ್ದು, ಈ ಕುರಿತು ಶಾಸಕರ ಜತೆ ಡಿಸಿಎಂ ಡಿ.ಕೆ. ಶಿವಕುಮಾರ್ ಸಭೆ ನಡೆಸಿ ನಿರ್ಧರಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಜಲಮಂಡಳಿ 1000 ಲೀ. ನೀರು ಪೂರೈಕೆ ಮಾಡುವುದಕ್ಕೆ 52 ರುಪಾಯಿ ಖರ್ಚು ಮಾಡುತ್ತಿದೆ. ಆದರೆ, 25 ರಿಂದ 40 ರು ಮಾರುತ್ತಿದ್ದೇವೆ. ಇದರಿಂದ ಜಲಮಂಡಳಿಗೆ ನಷ್ಟವಾಗುತ್ತಿದೆ. ಪ್ರತಿ ತಿಂಗಳಿಗೆ ಜಲಮಂಡಳಿಗೆ 41 ಕೋಟಿ ರು. ನಷ್ಟವಾಗುತ್ತಿದೆ. ಕಾವೇರಿ 5ನೇ ಹಂತದ ಬಳಿಕ 82 ಕೋಟಿ ನಷ್ಟ ಆಗುತ್ತದೆ. ವಾರ್ಷಿಕವಾಗಿ ಸಾವಿರಾರು ಕೋಟಿ ನಷ್ಟ ಆಗುತ್ತಿದೆ. ಹಾಗಾಗಿ ದರ ಏರಿಕೆ ಮಾಡಬೇಕಿದೆ. ಜಲಮಂಡಳಿಗೆ ಆರ್ಥಿಕ ಹೊರೆಯಾಗುತ್ತಿದ್ದು, ಶಾಸಕರ ಸಭೆ ಬಳಿಕ ನೀರಿನ ದರ ಏರಿಕೆ ಆಗುತ್ತದೆ ಎಂದರು.

> ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕಲ್ಯಾಣ ಕರ್ನಾಟಕ, ವಾಯುವ್ಯ ಕರ್ನಾಟಕ ಸಂಸ್ಥೆಗಳ ಬಸ್‌ಗಳ ಟಿಕೆಟ್ ದರ ಹೆಚ್ಚಳ ಮಾಡಲಾಗುತ್ತಿದೆ. ಜನವರಿ 5ರಿಂದ ಹೊಸ ಟಿಕೆಟ್ ದರ ಜಾರಿಯಾಗಲಿದೆ. 2015ರಲ್ಲಿ ಡಿಸೇಲ್ ದರ 60.98 ಇತ್ತು. 9.16 ಕೋಟಿ ಡಿಸೇಲ್ ವೆಚ್ಚವಿತ್ತು. ಸಿಬ್ಬಂದಿ ವೆಚ್ಚ 12 ಕೋಟಿಯಿಂದ 18.36 ಕೋಟಿಗೆ ಏರಿಕೆಯಾಗಿದೆ. ಆದ್ದರಿಂದ ಬಸ್ ದರ ಏರಿಕೆ ಅನಿವಾರ್ಯ.
> -ಎಚ್.ಕೆ.ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ

ಕ್ಷೇತ್ರದ ಅಭಿವೃದ್ಧಿಗೆ ಪ್ರದೀಪ್ ಹೊಸ ಸಂಕಲ್ಪ

← ಮೊದಲಪುಟದಿಂದ

ವೈಯಕ್ತಿಕವಾಗಿಯೂ ಸಹಾಯ: ಬಹು ತೇಕ ಶಾಸಕರು ತಮ್ಮ ಕ್ಷೇತ್ರಕ್ಕೆ ಸರಕಾರದಿಂದ ಬರುವ ಅನುದಾನವನ್ನು ಪಡೆದು ಅಭಿವೃದ್ಧಿಪಡಿಸುತ್ತಾರೆ. ಆದರೆ ಇದಕ್ಕೆ ಅಪವಾದ ಎನ್ನುವ ರೀತಿಯಲ್ಲಿ ಪ್ರದೀಪ್ ಈಶ್ವರ್ ಅವರು ತಮ್ಮ ವೈಯಕ್ತಿಕ ಹಣದಿಂದ ವಿದ್ಯಾರ್ಥಿಗಳಿಗೆ ಸಿಇಟಿ, ನೀಟ್ ವಿಶೇಷ ತರಬೇತಿ, ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ವಿಶೇಷ ತರಬೇತಿ, ಗ್ರಾಮಗಳಲ್ಲಿ ಉಚಿತ ಆರೋಗ್ಯ ತಪಾಸಣೆ, ತಮ್ಮ ತಾಯಿಯ ನೆನಪಿ ನಲ್ಲಿ 'ಅಮ್ಮ' ಆಂಬ್ಯುಲೆನ್ಸ್ ಸೇವೆ, ಉಚಿತ ಶಸ್ತ್ರಚಿಕಿತ್ಸೆ ಸೇರಿದಂತೆ ಹಲವು ಯೋಜನೆಗಳನ್ನು ಕಳೆದ ವರ್ಷ ಕೈಗೆತ್ತಿಕೊಂಡಿದ್ದರು. ಇದರೊಂದಿಗೆ ಇಡೀ ಕ್ಷೇತ್ರದ ಮಹಿಳೆಯರಿಗೆ ಸೀರೆಯನ್ನು ವಿತರಿಸಿದ್ದಾರೆ.

ಪ್ರದೀಪ್ ಈಶ್ವರ್ ಕಾರ್ಯಚರಣೆ ಬಗ್ಗೆ ರೇಣುಮಾಕಲಹಳ್ಳಿಯ ಮಾರಪ್ಪ ಮಾತನಾ ಡಿದ್ದು, ಈ ಹಿಂದೆ ಶಾಸಕರನ್ನು ಚುನಾವಣೆಯ ಸಮಯದಲ್ಲಿ ಮಾತ್ರ ನೋಡುತ್ತಿದ್ದೆವು. ಆದ ರೀಗ ಶಾಸಕರೇ ನಮ್ಮ ಮನೆಗೆ ಆಗಮಿಸಿ ಕಷ್ಟಗ ಳನ್ನು ಆಲಿಸುತ್ತಿದ್ದಾರೆ. ಇಂತಹ ಶಾಸಕರಿದ್ದರೆ ಕ್ಷೇತ್ರದ ಅಭಿವೃದ್ಧಿ ಸಾಧ್ಯ. ರಾಜಕೀಯದಲ್ಲಿ ಇನ್ನ ಷ್ಟು ಎತ್ತರದ ಸ್ಥಾನ ಅವರಿಗೆ ಸಿಕ್ಕರೆ ಕ್ಷೇತ್ರದ ಅಭಿವೃದ್ಧಿಗೆ ಸಹಾಯವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

200 ಕೋಟಿ ರು. ಅನುದಾನ ಹಂಚಿಕೆ: ಶಾಸಕರಾಗಿ ಆಯ್ಕೆಯಾದ ದಿನದಿಂದ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಭೆ ನಡೆಸಿರುವ ಅವರು, ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ 200 ಕೋಟಿ ರು.ಗೂ ಹೆಚ್ಚುವರಿ ಅನುದಾನವನ್ನು ಕ್ಷೇತ್ರಕ್ಕೆ ತಂದಿದ್ದಾರೆ. ಅನುದಾನ ಬಿಡುಗಡೆಯಾದ ಎಲ್ಲ ಯೋಜನೆಗಳು ಕಾಲಮಿತಿಯಲ್ಲಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಇದರೊಂದಿಗೆ ಬಹುನಿರೀಕ್ಷಿತ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಸಿಎಂ, ಡಿಸಿಎಂ ಅವರೊಂದಿಗೆ 10ಕ್ಕೂ ಹೆಚ್ಚು ಬಾರಿ ಸಭೆ ನಡೆಸಿದ್ದಾರೆ.

ದಲಿತ ಕೇರಿಯಲ್ಲಿಯೇ ಊಟ, ತಿಂಡಿ

ನಮ್ಮೂರಿಗೆ ನಮ್ಮ ಶಾಸಕ ಅಭಿಯಾನ ಕೇವಲ ನಾಮ್‌ಕೆವಾಸ್ತೆಗೆ ನಡೆಯುತ್ತಿಲ್ಲ. ಶಾಸಕ ಪ್ರದೀಪ್ ಚಿಕ್ಕಬಳ್ಳಾಪುರದಿಂದ ಬೆಳಗ್ಗೆ 5 ಗಂಟೆಗೆ ಗ್ರಾಮಗಳಿಗೆ ಹೊರಟರೆ ಮಧ್ಯಾಹ್ನ ಒಂದು ಗಂಟೆಯವರೆಗೆ ವಿವಿಧ ಗ್ರಾಮಗಳಿಗೆ ಭೇಟಿ ನೀಡುತ್ತಾರೆ. ಈ ವೇಳೆ ಇಡೀ ತಾಲೂಕಿನ ಆಡಳಿತವೇ ಅವರೊಂದಿಗೆ ಇರುತ್ತದೆ. ಇನ್ನು ಗ್ರಾಮಗ ಳಿಗೆ ಭೇಟಿ ನೀಡಿದ ಸಮಯದಲ್ಲಿ ದಲಿತ ಕೇರಿಗಳಿಗೆ ತೆರಳಿ ಅಲ್ಲಿಯೇ ಊಟ, ತಿಂಡಿ, ಕಾಫಿಯನ್ನು ಸೇವಿಸುವುದು ಮತ್ತೊಂದು ವಿಶೇಷ.

ಮನು, ಗುಕೇಶ್ ಸೇರಿ ನಾಲ್ವರಿಗೆ ಖೇಲ್ ರತ್ನ ಪ್ರಶಸ್ತಿ ಘೋಷಣೆ

← ಮೊದಲಪುಟದಿಂದ

ಪ್ರಶಸ್ತಿ ವಿಜೇತರ ಪಟ್ಟಿ	
ಮೇಜರ್ ಧ್ಯಾನ್ ಚಂದ್	ಖೇಲ್ ರತ್ನ
ಗುಕೇಶ್.ಡಿ	ಚೆಸ್
ಹರ್ಮನ್‌ಪ್ರೀತ್ ಸಿಂಗ್	ಹಾಕಿ
ಪ್ರವೀಣ್ ಕುಮಾರ್	ಪ್ಯಾರಾ ಅಥ್ಲೆಟಿಕ್ಸ್
ಮನು ಭಾಕರ್	ಶೂಟಿಂಗ್
ಅರ್ಜುನ ಪ್ರಶಸ್ತಿ	
ಜ್ಯೋತಿ ಯರ್ರಾಜಿ	ಅಥ್ಲೆಟಿಕ್ಸ್
ಅನ್ನು ರಾಣಿ	ಅಥ್ಲೆಟಿಕ್ಸ್
ನೀತು	ಬಾಕ್ಸಿಂಗ್
ಸವೀಟಿ	ಬಾಕ್ಸಿಂಗ್
ವಂತಿಕಾ ಅಗರವಾಲ್	ಚೆಸ್
ಸಲೀಮಾ ಟೆಟೆ	ಹಾಕಿ
ಅಭಿಷೇಕ್	ಹಾಕಿ
ಸಂಜಯ್	ಹಾಕಿ
ಜರ್ಮನ್‌ಪ್ರೀತ್ ಸಿಂಗ್	ಹಾಕಿ
ಸುಖಜೀತ್ ಸಿಂಗ್	ಹಾಕಿ
ರಾಕೇಶ್ ಕುಮಾರ್	ಪ್ಯಾರಾ-ಆರ್ಚರಿ
ಪ್ರೀತಿ ಪಾಲ್	ಪ್ಯಾರಾ-ಅಥ್ಲೆಟಿಕ್ಸ್
ದೀಪ್ತಿ ಜೀವಾಂಜಿ	ಪ್ಯಾರಾ-ಅಥ್ಲೆಟಿಕ್ಸ್
ಅಜೀತ್ ಸಿಂಗ್	ಪ್ಯಾರಾ-ಅಥ್ಲೆಟಿಕ್ಸ್
ಸಚಿನ್ ಸರ್ಜೆರಾವ್ ಖಿಲಾರಿ	ಪ್ಯಾರಾ-ಅಥ್ಲೆಟಿಕ್ಸ್
ಧರಂವೀರ್	ಪ್ಯಾರಾ-ಅಥ್ಲೆಟಿಕ್ಸ್
ಪ್ರಣವ್ ಸೂರ್ಮಾ	ಪ್ಯಾರಾ-ಅಥ್ಲೆಟಿಕ್ಸ್
ಎಚ್.ಹೊಕಾಟೊ ಸೆಮಾ	ಪ್ಯಾರಾ-ಅಥ್ಲೆಟಿಕ್ಸ್
ಸಿಮ್ರನ್	ಪ್ಯಾರಾ-ಅಥ್ಲೆಟಿಕ್ಸ್
ನವದೀಪ್	ಪ್ಯಾರಾ-ಅಥ್ಲೆಟಿಕ್ಸ್
ನಿತೇಶ್ ಕುಮಾರ್	ಪ್ಯಾರಾ-ಬ್ಯಾಡ್ಮಿಂಟನ್
ತುಳಸಿಮತಿ ಮುರುಗೇಶನ್	ಪ್ಯಾರಾ-ಅಥ್ಲೆಟಿಕ್ಸ್
ನಿತ್ಯಶ್ರೀ ಸುಮತಿ ಶಿವನ್	ಪ್ಯಾರಾ ಬ್ಯಾಡ್ಮಿಂಟನ್
ಮನೀಶಾ ರಾಮದಾಸ್	ಪ್ಯಾರಾ-ಬ್ಯಾಡ್ಮಿಂಟನ್
ಕಪಿಲ್ ಪರ್ಮಾರ್	ಪ್ಯಾರಾ ಜೂಡೋ
ಮೋನಾ ಅಗರ್ವಾಲ್	ಪ್ಯಾರಾ-ಶೂಟಿಂಗ್
ರುಬಿನಾ ಫ್ರಾನ್ಸಿಸ್	ಪ್ಯಾರಾ-ಶೂಟಿಂಗ್
ಸ್ವಪ್ನಿಲ್ ಸುರೇಶ್ ಕುಸಾಲೆ	ಶೂಟಿಂಗ್
ಸರಬ್ಜೋತ್ ಸಿಂಗ್	ಶೂಟಿಂಗ್
ಅಭಯ್ ಸಿಂಗ್	ಸ್ಕ್ವಾಷ್
ಸಜನ್ ಪ್ರಕಾಶ್	ಈಜು
ಅಮನ್ ಸೆಹ್ರಾವತ್	ಕುಸ್ತಿ
ಅರ್ಜುನ ಪ್ರಶಸ್ತಿ (ಜೀವಮಾನ)	
ಸುಚಾ ಸಿಂಗ್	ಅಥ್ಲೆಟಿಕ್ಸ್
ಮುರಳಿಕಾಂತ್ ರಾಜಾರಾಂ ಪೇಟ್ಕರ್	ಪ್ಯಾರಾ-ಈಜು
ದ್ರೋಣಾಚಾರ್ಯ ಪ್ರಶಸ್ತಿ	
ಸುಭಾಷ್ ರಾಣಾ	ಪ್ಯಾರಾ-ಶೂಟಿಂಗ್
ದೀಪಾಲಿ ದೇಶಪಾಂಡೆ	ಶೂಟಿಂಗ್
ಸಂದೀಪ್ ಸಾಂಗ್ವಾನ್	ಹಾಕಿ
ದ್ರೋಣಾಚಾರ್ಯ ಪ್ರಶಸ್ತಿ (ಜೀವಮಾನ)	
ಎಸ್.ಮುರಳೀಧರನ್	ಬ್ಯಾಡ್ಮಿಂಟನ್
ಅರ್ಮಾಂಡೊ ಆಗ್ನೆಲೊ ಕೊಲಾಕೊ	ಫುಟ್‌ಬಾಲ್

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ,
ಲಲಿತಮಹಲ್ ರಸ್ತೆ, ಮೈಸೂರು-570 011
ಸಂಖ್ಯೆ:SIRDPR- ADM0STOR/14/2024 ದಿನಾಂಕ: 31.12.2024

ಪ್ರಕಟಣೆ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು 2024-2025ನೇ ಸಾಲಿನ ತರಬೇತಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಪುಸ್ತಕವನ್ನು ಮುದ್ರಿಸುವ ಸಂಬಂಧ KTTP ಅಧಿನಿಯಮ 1999 ನಿಯಮಗಳು 2000 ರಂತೆ ಕರ್ನಾಟಕ ಸರ್ಕಾರದ e-procurement portal ಮೂಲಕ ಮಾತ್ರ ಏಜೆನ್ಸಿಗಳಿಂದ ಟೆಂಡರ್ಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ಗಳನ್ನು ದಿನಾಂಕ: 29.01.2025ರ ಸಂಜೆ 5.30 ಗಂಟೆ ವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಅಥವಾ ಸಂಸ್ಥೆಯ ದೂರವಾಣಿ ಸಂಖ್ಯೆ: 0821-2522903 /906 ಅನ್ನು ಸಂಪರ್ಕಿಸಬಹುದು.

ಸಹಿ/- ಉಪನಿರ್ದೇಶಕರು, ಅನಸಾರಾಗಾ&ಪಂ.ರಾ.ಸಂಸ್ಥೆ, ಮೈಸೂರು
DIPR/DDMYS/1034/KSMCA/697/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎಫ.ಐ.ಸಿ ವಿಭಾಗ ನಂ-2, ಹೊರ್ತಿ. ತಾ: ಇಂಡಿ ಜಿ: ವಿಜಯಪುರ
ಇ-ಮೇಲ್:kbjnlhortidivision@gmail.com.
ಸಂ:ಕಾನಿಅ/ಕೃಭಾಜನಿನಿ.ಎಫ್.ಐ.ಸಿ/ವಿ-2/ಯೋಶಾ/HRLIS-ಹಂತ-III/2024-25/421
ದಿನಾಂಕ:31.12.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ, ಈ ಕೆಳಗೆ ಸಹಿ ಮಾಡಿದ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎಫ್.ಐ.ಸಿ ವಿಭಾಗ ನಂ.2, ಹೊರ್ತಿ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಟರ್ನ್‌ಕೀ ಆಧಾರದಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಮಾದರಿಯಲ್ಲಿ ಟೆಂಡರ್ ಕರೆಯಲಾಗಿದೆ. Name of Work:"Survey, Investigation, Preparation of Design & Drawings, Installation, Testing and commissioning of Pipe Distribution Network with MS/HDPE pipes including Structures all along the pipe distribution network and SCADA arrangements with Compatible sluice valves, Butterfly valves, Flow Meters, Discharge Control Meters and Air Valves, Scour Valves wherever necessary in complete manner etc, for Irrigable Command Area of 28,000 Ha in Indi and Chadchan Taluks of Vijayapura District under Horti - Revanasiddeswara Lift Irrigation Scheme - Stage-III including Supply of Spares, Accessories and Tools including Operation and Maintenance of the Entire System for Five years from the date of Successful Commissioning of the entire system on Turnkey Basis".(KBJNL/2024-25/IW/WORK_INDENT1390) Amount for Rs.111700.00 Lakhs[excluding GST].

ಇ-ಟೆಂಡರನಲ್ಲಿ ದಾಖಲಾತಿಗಳನ್ನು ಸ್ವಿಕರಿಸುವ ಹಾಗೂ ಸಲ್ಲಿಸುವ ವಿವರಗಳು.

1. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ;**30.01.2025** ಸಾಯಂಕಾಲ **5.00 ಗಂ** ವರೆಗೆ.
2. ಬಿಡ್‌ಪೂರ್ವ ಸಭೆಯನ್ನು ದಿನಾಂಕ:**10.01.2025** ರಂದು ಮದ್ಯಾಹ್ನ:**12.15 ಗಂ** ಮುಖ್ಯ ಇಂಜಿನೀಯರರು ಕೃಭಾಜನಿನಿ ಆಣೆಕಟ್ಟು ವಲಯ ಆಲಮಟ್ಟಿ ತಾ:ನಿಡಗುಂದಿ ಜಿ:ವಿಜಯಪೂರ ಇವರ ಕಚೇರಿಯಲ್ಲಿ ಜರುಗಿಸಲಾಗುವುದು ಹಾಗೂ ಗುತ್ತಿಗೆದಾರರ ಕ್ವಾರೀಸ್ [ಪ್ರಶ್ನಾವಳಿಗಳು] ಇದ್ದಲ್ಲಿ ದಿನಾಂಕ:**10.01.2025** ರ ಬೆಳಗ್ಗೆ **11.00 ಗಂ** ಒಳಗಾಗಿ ಈ ಕೆಳಕಂಡ ಇ-ಮೇಲ್ ಮುಖಾಂತರ ಸಲ್ಲಿಸಬಹುದಾಗಿದೆ kbjnlhortidivision@gmail.com/ cedam_almatti@yahoo.co.in
3. **ಲಕೋಟೆ-1 [ತಾಂತ್ರಿಕ ಬಿಡ್]** ನ್ನು ಕಾರ್ಯನಿರ್ವಾಹಕ ಅಭಿಯಂತರು ಕೃಭಾಜನಿನಿ, ಎಫ್.ಐ.ಸಿ ವಿಭಾಗ ನಂ.2, ಹೊರ್ತಿ ಇವರ ಕಚೇರಿಯಲ್ಲಿ **ದಿನಾಂಕ: 03.02.2025** ರ ಬೆಳಗ್ಗೆ **11.00 ಗಂಟೆಗೆ** ತೆರೆಯಲಾಗುವುದು.
4. **ಲಕೋಟೆ-2 [ಆರ್ಥಿಕ ಬಿಡ್]** ನ್ನು ಕಾರ್ಯನಿರ್ವಾಹಕ ಅಭಿಯಂತರು ಕೃಭಾಜನಿನಿ, ಎಫ್.ಐ.ಸಿ. ವಿಭಾಗ ನಂ.2,ಹೊರ್ತಿ ಇವರ ಕಚೇರಿಯಲ್ಲಿ **ದಿನಾಂಕ: 05.02.2025** ರ ಬೆಳಗ್ಗೆ **11.00 ಗಂಟೆಗೆ** ತೆರೆಯಲಾಗುವುದು.

ಇ-ಟೆಂಡರಿಂಗ್ ಕುರಿತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in, ಕ್ಲಿಕ್ ಮಾಡಿ ಅಥವಾ KBJNL ವೆಬ್ ಸೈಟ್ www.kbjnl.karnataka.gov.in ಮತ್ತು ಈ ಕೆಳಗಿನ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎಫ್.ಐ.ಸಿ ವಿಭಾಗ ನಂ.2, ಹೊರ್ತಿ.
ವಾಸಾಸಂಇ/ವಿಜಯಪುರ/567/ಕೆಎಸ್‌ಎಂಸಿಎ/2024-25

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560009.
ಫೋನ್ : 080-22341230/35, ಇ-ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ-01/53/2024-25/1461 ದಿನಾಂಕ: 02.01.2025

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಬ್ರಹ್ಮಾನಂದ ರೆಡ್ಡಿ ಕೆ. ಬಿನ್ ಕೃಷ್ಣ ರೆಡ್ಡಿ, ಶ್ರೀ ಶ್ರೀನಿವಾಸ ಎಂ. ಬಿನ್ ಲೇ॥ ಮುನಿನಾರಾಯಣಪ್ಪ, ಶ್ರೀ ಚಂದ್ರು ಎಂ. ಬಿನ್ ಲೇ॥ ಮುನಿನಾರಾಯಣಪ್ಪ ಇವರುಗಳು ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಬೆರಟೇನ ಅಗ್ರಹಾರ ಗ್ರಾಮದ ಸರ್ವೆ ಸಂಖ್ಯೆ:48/18ರ 0ಎ-13.08ಗು ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ಕೈಗಾರಿಕಾ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ - ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/4076/ಎಸ್‌ಎಸ್‌ಸಿ/2024-25

ಜಿಲ್ಲಾ ಪಂಚಾಯತ್, ತುಮಕೂರು.
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ತುಮಕೂರು. ದೂರವಾಣಿ: 0816-2273724
ಮೌಲಾನಾ ಆಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು-572102
website:gokdom.karnataka.gov.in/TUMAKURU E-mail:domtumkur@gmail.com
ಸಂಖ್ಯೆ:ಅಸಂಕಇ/ತು/ಆ.ಟೆಂ/ಸಿಆರ್-92/2023-24 ದಿನಾಂಕ:26/12/2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಿಗೆ ಹಾಗೂ ಮೊರಾರ್ಜಿದೇಸಾಯಿ ವಸತಿಶಾಲೆ/ ಕಾಲೇಜುಗಳಿಗೆ ಆಹಾರ, ತರಕಾರಿ ಮತ್ತು ಇತರೆ ಸಾಮಗ್ರಿಗಳ ಸರಬರಾಜುಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ನಿಯಮಗಳನ್ವಯ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ದ್ವಿ-ಲಕೋಟೆಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್‌ಗೆ ಇಟ್ಟ ಮೊತ್ತ **ರೂ.955.24 ಲಕ್ಷ**ಗಳು.
2) ಇ.ಎಮ್.ಡಿ. ಮೊತ್ತ **ರೂ.14.32 ಲಕ್ಷ**ಗಳು.
3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **26/12/2024.**
4) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **09/01/2025.**

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **26/12/2024 ರಿಂದ ದಿನಾಂಕ:-09/01/2025 ರ ವರೆಗೆ** website: **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಹಾಗೂ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು-572102. (ದೂರವಾಣಿ ಸಂಖ್ಯೆ: 0816-2273724) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಶಬ್ಬೀರ ಅಹ್ಮದ
ಜಿಲ್ಲಾ ಅಧಿಕಾರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ತುಮಕೂರು.
DIPR/TUM/RO- 131/24-25/Oysters

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್:22/2024-25 ದಿ: 26.12.2024
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ KPWD Class-IV & above ದರ್ಜೆಯ ಗುತ್ತಿಗೆದಾರರಿಂದ (ಕ್ರಮ ಸಂಖ್ಯೆ 01 ರಿಂದ ಕ್ರಮ ಸಂಖ್ಯೆ 04 ಕಾಮಗಾರಿಗಳಿಗೆ SC Category ಗುತ್ತಿಗೆದಾರರು ಹಾಗೂ ಕ್ರಮ ಸಂಖ್ಯೆ 05 ಮತ್ತು ಕ್ರಮ ಸಂಖ್ಯೆ 06 ಕಾಮಗಾರಿಗೆ ST Category ಗುತ್ತಿಗೆದಾರರು ಮಾತ್ರ ಭಾಗವಹಿಸತಕ್ಕದ್ದು) ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ. ಸೊರಬ ತಾಲ್ಲೂಕು ವ್ಯಾಪ್ತಿಯಲ್ಲಿ ಕೆರೆ, ಕಾಲುವೆ ಮತ್ತು ಕೋಡಿ ದುರಸ್ತಿ ಅಭಿವೃದ್ಧಿ ಕಾಮಗಾರಿಗಳ (19 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ.59.76 ಲಕ್ಷಗಳಿಂದ ರೂ. 24.70 ಲಕ್ಷಗಳು & ಇ.ಎಂ.ಡಿ ಮೊತ್ತ ರೂ.0.85 ಲಕ್ಷಗಳಿಂದ ರೂ.0.25 ಲಕ್ಷಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 02-01-2025 ರಿಂದ 10-01-2025 ಸಂಜೆ 5.30 ರವರೆಗೆ, 2) ಟೆಂಡರ್ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 09-01-2025 ಸಂಜೆ 5.30 ರ ವರೆಗೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 13-01-2025 ಬೆಳಿಗ್ಗೆ 11.00 ಗಂಟೆಗೆ. 4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/-ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/04/01/1338

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ 17, "ವಾರ್ತಾಸೌಧ", ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು 560 001.
ಸಂ: ವಾಸಾಸಂ/ಆಆಶಾ/ನ.ಗ.ಸ್ತ.ಚಿ/2024-25 ದಿನಾಂಕ : 31-12-2024

ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸುವ ಸ್ತಬ್ಧಚಿತ್ರವನ್ನು ನಿರ್ಮಿಸಿ, ನಿರ್ವಹಿಸುವ ಕಾರ್ಯಗಳಿಗಾಗಿ ಅಲ್ಪಾವಧಿ ಇ-ಟೆಂಡರ್

2025ರ ಜನವರಿ 26 ರಂದು ನವದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಇಲಾಖೆಯು "Lakkundi - Cradle of Stone Craft" ವಿಷಯಾಧಾರಿತ ಸ್ತಬ್ಧಚಿತ್ರದೊಂದಿಗೆ ಭಾಗವಹಿಸುತ್ತಿದ್ದು, ಸ್ತಬ್ಧಚಿತ್ರವನ್ನು ವಿನ್ಯಾಸದಲ್ಲಿರುವಂತೆ ಬಾಡಿಗೆ ಆಧಾರದಲ್ಲಿ ನಿರ್ಮಿಸಿ, ನಿರ್ವಹಿಸಿಕೊಡಲು ಇ-ಆಡಳಿತ ಇಲಾಖೆಯು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಟೆಂಡರ್‌ದಾರರಿಂದ ಅಲ್ಪಾವಧಿ ಇ-ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ : 01-01-2025ರ ಮಧ್ಯಾಹ್ನ 3.00 ಗಂಟೆ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ಗಳನ್ನು ದಿ: 09-01-2025ರ ಮಧ್ಯಾಹ್ನ 3.00 ಗಂಟೆಯೊಳಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 10.01.2025 ಮಧ್ಯಾಹ್ನ 3.01 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ : 10.01.2025 ಸಂಜೆ 5.00 ಗಂಟೆಗೆ. ಟೆಂಡರ್‌ನಲ್ಲಿ ಭಾಗವಹಿಸಲಿಚ್ಛಿಸುವ ಟೆಂಡರ್‌ದಾರರು ಅರ್ಹತೆ, ಷರತ್ತುಗಳ ವಿವರ ಇತ್ಯಾದಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in. ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080- 22028068 ನ್ನು ಸಂಪರ್ಕಿಸಬಹುದು. ಟೆಂಡರ್‌ನ ಅಂದಾಜು ಮೊತ್ತ ರೂ 200.00 ಲಕ್ಷ

ಸಹಿ/-
ಜಂಟಿ ನಿರ್ದೇಶಕರು ಹಾಗೂ ನೋಡಲ್ ಅಧಿಕಾರಿ,
ನವದೆಹಲಿ ಗಣರಾಜ್ಯೋತ್ಸವ ಸ್ತಬ್ಧಚಿತ್ರ 2025ರ ಉಸ್ತುವಾರಿ ಅಧಿಕಾರಿ.
DIPR/CP/4072/2024-25

ಟ್ವೀಟೂ-ಖಾರಾ

ಕಾಂಗ್ರೆಸ್ ಕರ್ನಾಟಕ

ಕೇಂದ್ರ ಮತ್ತು ಬಿಜೆಪಿ ಪ್ರಾಬಲ್ಯದ ಕೆಲವು ರಾಜ್ಯಗಳಲ್ಲಿ ಮನುವಾದದ ಮನೋಧರ್ಮ ವಂಚಿತ ಜನಾಂಗದ ಪ್ರಗತಿಗೆ ಅಡ್ಡಿಯಾಗಿದೆ. ಸಂಸತ್ತಿನಲ್ಲಿ ಅಂಬೇಡ್ಕರ್ ಅವರನ್ನು ಟೀಕಿಸಿದವರ ಮನಸ್ಥಿತಿ ಮನುವಾದವೇ ಕಾರಣ.

ಸುಕುಮಾರ್ ಉಡುಪಿ

ಮನುವಾದವನ್ನು ಸುಟ್ಟುಹಾಕಿದ ಮೇಲೆ ಕಾಂಗ್ರೆಸ್ ವಾದ ಅದಕ್ಕಿಂತ ಕೆಟ್ಟದಾಗಿ ಅವರನ್ನು ಸಂಕಷ್ಟಕ್ಕೀಡು ಮಾಡಿತು. ರಾಜಕಾರಣಿ ಮಂಗ ತುಪ್ಪ ತಿಂದು ಮತದಾರ ಕುರಿಗಳ ಮೂತಿಗೆ ಸವರಿ ಭಾಗ್ಯ ನೀಡಿತು.



ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಶಿವಾಜಿನಗರ ಬಸ್ ನಿಲ್ದಾಣದ ಕುಡಿಯುವ ನೀರಿನ ಘಟಕದ ಅವ್ಯವಸ್ಥೆ.
- **ಪರಿಹಾರ:** ಶಿವಾಜಿನಗರ ಬಸ್ ನಿಲ್ದಾಣದ ಕುಡಿಯುವ ನೀರಿನ ಘಟಕ ಹೊಸ ಫಿಲ್ಟರ್ ಪೈಪ್ ಅಳವಡಿಸಲಾಗಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ಸಮಾಚಾರ ಸಣ್ಣದಲ್ಲ

ಮಾಲೆ ಧರಿಸಿದ ಮುಸ್ಲಿಂ ಯುವಕ

ರಾಯಚೂರು: ಜಿಲ್ಲೆಯ ದೇವದುರ್ಗ ಪಟ್ಟಣದ ಮುಸ್ಲಿಂ ಸಮುದಾಯದ ವ್ಯಕ್ತಿ ಅಯ್ಯಪ್ಪ ಸ್ವಾಮಿ ಮಾಲೆ ಧರಿಸುವ ಮೂಲಕ ಭಾವೈಕ್ಯತೆ ಮೆರೆದಿದ್ದಾನೆ. ಅಯ್ಯಪ್ಪ ಮಾಲೆ ಧರಿಸಿದ ವ್ಯಕ್ತಿಯನ್ನು ದೇವದುರ್ಗ ಪಟ್ಟಣದ ಬಾಬು ಗೌರಂಪೇಟ ಎಂದು ಗುರುತಿಸಲಾಗಿದೆ. ಪ್ರತೀ ವರ್ಷ ಮಾಲೆ ಧರಿಸಿ ಅಯ್ಯಪ್ಪನ ದರ್ಶನಕ್ಕೆ ತೆರಳುವ ಬಾಬು ಸರತಿ ಸಾಲಲ್ಲಿ ನಿಂತು ಅಯ್ಯಪ್ಪನ ದರ್ಶನ ಪಡೆದು ಪುನೀತರಾಗಿ ಬಂದಿದ್ದಾರೆ. ಬಾಬು ಕಳೆದ 10 ವರ್ಷಗಳಿಂದ ಮಾಲೆ ಧರಿಸಿ ಶಬರಿಮಲೆಗೆ ತೆರಳುತ್ತಿದ್ದಾರೆ. ಸ್ಥಳೀಯ ಅಯ್ಯಪ್ಪ ಮಾಲಾಧಾರಿಗಳ ಜೊತೆ ಮಾಲೆ ಧರಿಸಿ ಶಬರಿಮಲೆ ಯಾತ್ರೆ ಮುಗಿಸಿ ಬಂದಿದ್ದು, ಬಾಬು ಭಕ್ತಿ ಭಾವಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ

ಗೊ.ರು.ಚ.ಗೆ ಸಿದ್ಧಗಂಗಾಶ್ರೀ ಪ್ರಶಸ್ತಿ

ತುಮಕೂರು: ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಕೊಡಮಾಡುವ 2024ನೇ ಸಾಲಿನ ಸಿದ್ದಗಂಗಾ ಶ್ರೀ ಪ್ರಶಸ್ತಿಗೆ ಹಿರಿಯ ವಿದ್ವಾಂಸ ಗೊ.ರು.ಚನ್ನಬಸಪ್ಪ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 1 ಲಕ್ಷ ನಗದನ್ನು ಒಳಗೊಂಡಿದೆ. ಸಿದ್ದಗಂಗಾ ಮಠದಲ್ಲಿ ಜ.21ರಂದು ನಡೆಯುವ ಶಿವಕುಮಾರ ಸ್ವಾಮೀಜಿಯವರ 6ನೇ ವರ್ಷದ ಪುಣ್ಯಸ್ಮರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಮಂಡ್ಯದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಗೊರುಚ ಅವರು ಜಾನಪದ ಹಾಗೂ ಶರಣ ಸಾಹಿತ್ಯಕ್ಕೆ ನೀಡಿದ ಕೊಡುಗೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಘದ ಕಾರ್ಯದರ್ಶಿ ಕೆ.ಎಚ್.ಶಿವರುದ್ರಯ್ಯ ತಿಳಿಸಿದ್ದಾರೆ.



ಗೋಶಾಲೆಗಳ ಬಲವರ್ಧನೆಗೆ ಕ್ರಮ

ಬಿಜೆಪಿ ಸರಕಾರದ ಅವಧಿಯಲ್ಲಿ ಘೋಷಿಸಿದ್ದ ಗೋಶಾಲೆಗಳಿಗೆ ಕೊಕ್

ಆರಂಭವಾಗದ ನೂತನ ಗೋಶಾಲೆಗಳ ಆರಂಭಕ್ಕಿಲ್ಲ ಅನುಮತಿ

ಬೆಂಗಳೂರು: ಬಸವರಾಜ ಬೊಮ್ಮಾಯಿ ಸರಕಾರದ ಅವಧಿಯಲ್ಲಿ ಜಿಲ್ಲೆಗೊಂದು ಗೋಶಾಲೆ ಆರಂಭಿಸುವುದಾಗಿ ಘೋಷಿಸಲಾಗಿತ್ತು. ಆದರೆ ಹಲವು ಜಿಲ್ಲೆಗಳಲ್ಲಿ ಆರಂಭವಾಗಿರಲಿಲ್ಲ. ಆದ್ದರಿಂದ ಆರಂಭಗೊಳ್ಳದ ಗೋಶಾಲೆಗಳ ಪ್ರಸ್ತಾಪವನ್ನು ಕೈಬಿಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಯಾವ ಜಿಲ್ಲೆಗಳಲ್ಲಿ ಘೋಷಿತ ಗೋಶಾಲೆಗಳು ಆರಂಭವಾಗಿಲ್ಲವೋ ಅಲ್ಲಿ ನಿರ್ಮಿಸುವ ಬದಲು ಹಾಲಿ ಕಾರ್ಯನಿರ್ವಹಿಸುತ್ತಿರುವ ಗೋಶಾಲೆಗಳ ಅಭಿವೃದ್ಧಿಗೆ ಅನುದಾನವನ್ನು ನೀಡಲು ತೀರ್ಮಾನಿಸಲಾಗಿದೆ. ಹೊಸ ಗೋಶಾಲೆಗೆ ಮೀಸಲಾಗಿದ್ದ ನಿಧಿಯಲ್ಲಿ ಉಳಿಯದಿರುವ 10.5 ಕೋಟಿ ರು. ಅನುದಾನವನ್ನು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 14 ಜಿಲ್ಲೆಗಳ ಗೋಶಾಲೆಗಳ ಬಲವರ್ಧನೆಗೆ ಬಳಸಲು ತೀರ್ಮಾನಿಸಿದೆ.

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕಾರವಾರ, ಹಾಸನ, ಬೆಂಗಳೂರು ನಗರ, ಮಂಡ್ಯ, ಬೆಂಗಳೂರು (ಗ್ರಾಮಾಂತರ), ದಕ್ಷಿಣಕನ್ನಡ, ಧಾರವಾಡ, ಉಡುಪಿ, ಮೈಸೂರು, ತುಮಕೂರು, ಉಡುಪಿ, ಬೀದರ, ದಕ್ಷಿಣಕನ್ನಡ, ಬೆಳಗಾವಿಯಲ್ಲಿ ಟೆಂಡರ್ ಕರೆದು ಕಾಮಗಾರಿ ಆರಂಭಿಸಲು ಸಂಪುಟದಲ್ಲಿ ಅನುಮತಿ ನೀಡಲಾಗಿದೆ.

137.85 ಕೋಟಿ ವಿನಿಯೋಗಿಸಲು ಅನುಮೋದನೆ: ಭಾರತ ಸರಕಾರದ ಆರ್ಥಿಕ ಸಚಿವಾಲಯ ವಿಶೇಷ ಬಂಡವಾಳ ನೆರವಿನ ಯೋಜನೆಯ ಭಾಗ 7 (ಎ) ಅಡಿ ಕರ್ನಾಟಕದ ರಾಜ್ಯಕ್ಕೆ ಬಂಡವಾಳ ವೆಚ್ಚಕ್ಕಾಗಿ ದೀರ್ಘಾವಧಿ ಸಾಲದ ರೂಪದಲ್ಲಿ ನೀಡಿರುವ 137.85 ಕೋಟಿಗಳ ಅನುದಾನವನ್ನು ವಿನಿಯೋಗಿಸಲು ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ 2022-23ನೇ ಸಾಲಿನ ಎಸ್‌ಸಿಪಿ, ಟಿಎಸ್‌ಪಿ ಯೋಜನೆಗಳ 56ಕೋಟಿ 92ಲಕ್ಷ ರು.ಗಳ ವೆಚ್ಚದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ವಸತಿ ಶಾಲೆಗಳ ಹಾಗೂ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಬೆಡ್ ಶೀಟ್ ಸೊಳ್ಳೆ ಪರದೆಗಳು ಟ್ರ್ಯಾಕ್ ಸೂಟ್ ಮತ್ತು ನೈಟ್ ಡ್ರೆಸ್ ಗಳ ಸಾಮಗ್ರಿಗಳನ್ನು ಪೂರೈಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿನ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯ 209.13 ಕೋಟಿ ರು. ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದರೊಂದಿಗೆ ಹಾಲಿಯಿರುವ ಮೀನುಗಾರಿಕೆ ಬಂದರುಗಳ ಆಧುನೀಕರಣ, ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿ ಗಳ 84.57 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

- ಎಚ್.ಕೆ. ಪಾಟೀಲ್
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಸಂಪುಟದ ಇತರೆ ಪ್ರಮುಖಾಂಶ

- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲದ ಮಿತಿಯನ್ನು 500 ಕೋಟಿಗಳಿಂದ 5000 ಕೋಟಿಗೆ ಏರಿಸಲು ಒಪ್ಪಿಗೆ.
- ಚಿಂತಾಮಣಿ ತಾಲೂಕಿನ ವಡಗನಹಳ್ಳಿ ಗ್ರಾಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಕಟ್ಟಡ ಕಾಮಗಾರಿಗಳನ್ನು 149.75 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.
- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಾಯಕ ವಿದ್ಯಾರ್ಥಿ ನಿಲಯಕ್ಕೆ ರಿಯಾಯಿತಿ ದರದಲ್ಲಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ 523.99 ಚ.ಮೀ ವಿಸ್ತೀರ್ಣದ ನಾಗರಿಕ ಸೌಲಭ್ಯ ನಿವೇಶ ಮಂಜೂರು
- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ದಾವಣಗೆರೆ ತಾಲೂಕಿನ ಅವರಗೆರೆ ಗ್ರಾಮದಲ್ಲಿ 591.43 ಚ.ಮೀ ವಿಸ್ತೀರ್ಣದ ಸಿಎ ಸೈಟ್ ಹಂಚಿಕೆಗೆ ಒಪ್ಪಿಗೆ.
- ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಲ್ಲಿ 34 ವೃಂದದ ಒಟ್ಟು 1768 ಹುದ್ದೆಗಳು ಮಂಜೂರಾಗಿದ್ದು, ಖಾಲಿ ಹುದ್ದೆಗಳನ್ನು ತುಂಬಲು ಇಲಾಖೆಗೆ ಕರ್ನಾಟಕ ಸಣ್ಣ ನೀರಾವರಿ ಇಲಾಖೆ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಕ್ಕೆ ಒಪ್ಪಿಗೆ
- ಮೈಸೂರಿನ ಬನ್ನಿ ಮಂಟಪದಲ್ಲಿ ಆಧುನಿಕ ಬಸ್ ನಿಲ್ದಾಣಕ್ಕೆ 120 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಅನುಮೋದನೆ
- ಬಾಡಿಗೆ ಮತ್ತು ಶಿಥಿಲಾವಸ್ಥೆಯಲ್ಲಿರುವ 200 ಪಶು ವೈದ್ಯ ಸಂಸ್ಥೆಗಳಿಗೆ ನೂರು ಕೋಟಿ ಅಂದಾಜು ವೆಚ್ಚದಲ್ಲಿ ನೂತನ ಕಟ್ಟಡಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ.

ಗೋಣಿ ಚೀಲ ಖರೀದಿಗೆ ಒಪ್ಪಿಗೆ

2024-25ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ರಾಜ್ಯದ ರೈತರಿಂದ ಭತ್ತ ಮತ್ತು ಬಿಳಿ ಜೋಳ ಖರೀದಿಸಲು ಅವಶ್ಯವಿರುವಂತಹ 580 ಗ್ರಾಂ ತೂಕದ 15 ಲಕ್ಷ ಸೆಣಬಿನ ಗೋಣಿ ಚೀಲಗಳನ್ನು 10 ಕೋಟಿ 88ಲಕ್ಷ ಗಳ ಅಂದಾಜು ವೆಚ್ಚದಲ್ಲಿ ಹಾಗೂ ರಾಗಿಯನ್ನು ಖರೀದಿಸಲು ಅವಶ್ಯವಿರುವ 775 ಗ್ರಾಂ ತೂಕದ 74.82 ಲಕ್ಷ ಸೆಣಬಿನ ಗೋಣಿ ಚೀಲಗಳನ್ನು ಜೆಮ್ ಪೋರ್ಟಲ್ ಮೂಲಕ ಖರೀದಿಸಲು ಅನುಮೋದನೆ ನೀಡಲಾಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜನೆ

ಬಹುವರ್ಷದ ಬೇಡಿಕೆಯಾಗಿದ್ದ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸುವ ಮಹತ್ವದ ತೀರ್ಮಾನವನ್ನು ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ತಗೆದುಕೊಳ್ಳಲಾಗಿದೆ. ಹುಬ್ಬಳ್ಳಿಯಿಂದ ಧಾರವಾಡವನ್ನು ಪ್ರತ್ಯೇಕ ಮಾಡಿ ಮಹಾನಗರ ಪಾಲಿಕೆ ರಚಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ ಪ್ರಸ್ತುತವಿರುವ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯ ವಾರ್ಡ್ ನಂ.1 ರಿಂದ 26 ಅನ್ನು ಸೇರಿಸಿ ಪ್ರತ್ಯೇಕ ಧಾರವಾಡ ಮಹಾನಗರ ಪಾಲಿಕೆ ರಚಿಸಲಾಗುತ್ತದೆ. ಇನ್ನುಳಿದ ವಾರ್ಡ್ ನಂ.27 ರಿಂದ 82 ರವರೆಗಿನ ಪ್ರದೇಶಗಳನ್ನು ಹುಬ್ಬಳ್ಳಿ ಮಹಾನಗರ ಪಾಲಿಕೆಯನ್ನಾಗಿ ಮುಂದುವರಿಸಲು ಅನುಮತಿ ನೀಡಲಾಗಿದೆ. 2014ರಲ್ಲೇ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜನೆ ಮಾಡಬೇಕೆಂಬ ಒತ್ತಾಯ ಕೇಳಿಬಂದಿತ್ತು. ಧಾರವಾಡದ ಜನಸಂಖ್ಯೆ 6.5 ಲಕ್ಷ ದಾಟಿರುವುದರಿಂದ ಪ್ರತ್ಯೇಕ ಮಹಾನಗರ ಪಾಲಿಕೆಬೇಕೆನ್ನುವ ಆಗ್ರಹ ಕೇಳಿಬಂದಿತ್ತು. ಪಾಲಿಕೆಯ ರಚನೆಗೆ 3.5 ಲಕ್ಷ ಜನಸಂಖ್ಯೆಯ ಮೇಲಿರಬೇಕು. ಹೀಗಾಗಿ, ಇದೀಗ ಧಾರವಾಡವನ್ನು ಪ್ರತ್ಯೇಕ ಮಹಾನಗರ ಪಾಲಿಕೆಯಾಗಿ ಘೋಷಿಸಲು ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ.

ಕುಂದಾನಗರಿಯಲ್ಲಿ ಮೂರ್ತಿ ವಿವಾದ

ಬೆಳಗಾವಿ: ಕುಂದಾನಗರಿಯಲ್ಲಿ ಮತ್ತೊಮ್ಮೆ ಮೂರ್ತಿ ವಿವಾದ ಭುಗಿಲೆದ್ದಿದ್ದು ಛತ್ರಪತಿ ಸಂಭಾಜಿ ಮಹಾರಾಜರ ಮೂರ್ತಿ ಉದ್ಘಾಟನೆ ವಿಚಾರವಾಗಿ ಎರಡು ಬಣಗಳ ನಡುವೆ ಜಗಳ ಏರ್ಪಟ್ಟಿದೆ.

ನಗರದ ಅನಗೋಳದ ಡಿವಿಎಸ್ ಚೌಕ್ ನಲ್ಲಿ 21 ಅಡಿ ಎತ್ತರದ ಧರ್ಮವೀರ ಸಂಭಾಜಿ ಅವರ ಪ್ರತಿಮೆ ಅನಾವರಣ ಹಿನ್ನಲೆಯಲ್ಲಿ ಸಿದ್ದತೆ ಕೈಗೊಂಡಿದ್ದು ಬರುವ ಜನವರಿ 5 ರಂದು ಉದ್ಘಾಟನೆಗೆ ದಿನಾಂಕ ನಿಗದಿ ಮಾಡಲಾಗಿತ್ತು.

ಆದರೆ ಗುರುವಾರ ಬೆಳಗ್ಗೆ ಬೆಳಗಾವಿ ಮಹಾನಗರ ಪಾಲಿಕೆ ಮೇಯರ್ ಸವಿತಾ ಕಾಂಬಳೆ ತರಾತುರಿಯಲ್ಲಿ ಉದ್ಘಾಟನೆಗೆ ಆಗಮಿಸಿದ್ದಾರೆ. ಇದಕ್ಕೆ ಹಿಂದೂ ಸಂಘಟನೆ ಮುಖಂಡ ರಮಾಕಾಂತ ಕೊಂಡಸ್ಕರ್ ನೇತೃತ್ವದ ಬಣ ತೀವ್ರ ವಿರೋಧ ಮಾಡಿದ್ದು, ಕಾಮಗಾರಿ ಪೂರ್ಣ ಆಗುವವರೆಗೂ ಪ್ರತಿ ಅನಾವರಣ ಆಗಬಾರದು ಎಂದು ಆಕ್ರೋಶ ಹೊರಹಾಕಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ತೆರಳುವುದನ್ನು ಅರಿತ ಪೊಲೀಸರು ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಮುಡಾ ಹಗರಣ: ರಾಮದಾಸ್, ನಾಗೇಂದ್ರ ಹೇಳಿಕೆ ದಾಖಲು

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಗರಣ ಕುರಿತಂತೆ ಮಾಜಿ ಶಾಸಕರಾದ ಎಸ್.ಎ. ರಾಮದಾಸ್ ಹಾಗೂ ಎಲ್. ನಾಗೇಂದ್ರ ಗುರುವಾರ ಸಂಜೆ ಮೈಸೂರು ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿದ್ದರು.

ರಾಮದಾಸ್ ಅವರು ಕೆ.ಆರ್. ಕ್ಷೇತ್ರದ ಶಾಸಕರಾಗಿದ್ದ ಅವಧಿಯಲ್ಲಿ ಮುಡಾ ಸದಸ್ಯರಾಗಿದ್ದ ಹಿನ್ನೆಲೆಯಲ್ಲಿ 50:50 ನಿವೇಶನ ಹಂಚಿಕೆ ಹಗರಣದ ವಿಚಾರಣೆ ಎದುರಿಸಿದರು. ವಿಚಾರಣೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಅವರು,ನಾನು ಮುಡಾ ವಿಚಾರವಾಗಿ ಹಿಂದೆಯೂ ಕಾಮೆಂಟ್ ಮಾಡಿಲ್ಲ ಮತ್ತು ಈಗಲೂ ಮಾಡುವುದಿಲ್ಲ ಎಂದು ಯಾವುದೇ ಹೇಳಿಕೆ ನೀಡದೆ ಸ್ಥಳದಿಂದ ನಿರ್ಗಮಿಸಿದರು.

ನಂತರ ಮಾಜಿ ಶಾಸಕ ಎಲ್. ನಾಗೇಂದ್ರ ಕೂಡ ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿದರು. ಮುಡಾ ಅಧ್ಯಕ್ಷರಾಗಿದ್ದ ಎಲ್. ನಾಗೇಂದ್ರ ಅವರು, ಚಾಮರಾಜ ಕ್ಷೇತ್ರದ ಶಾಸಕರಾಗಿದ್ದ ವೇಳೆ ಮುಡಾ ಸದಸ್ಯರೂ ಕೂಡ ಆಗಿದ್ದರು. ಹೀಗಾಗಿ ಲೋಕಾಯುಕ್ತ ವಿಚಾರಣೆಗೆ ಹಾಜರಾಗುವಂತೆ ನಾಗೇಂದ್ರ ಅವರಿಗೆ ನೋಟಿಸ್ ನೀಡಿದ್ದ ಹಿನ್ನೆಲೆಯಲ್ಲಿ ವಿಚಾರಣೆ ಎದುರಿಸಿದರು. ಈ ನಡುವೆ ಲೋಕಾಯುಕ್ತ ವಿಚಾರಣೆಗೆ ಹಾಜರಾಗಿದ್ದ ರಾಮದಾಸ್ ಹಾಗೂ ನಾಗೇಂದ್ರ ಅವರುಗಳು ಬಹುದಿನಗಳ ಬಳಿಕ ಮುಖಾಮುಖಿಯಾದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಹೋರಾಟ ತೀವ್ರ: ಜೋಶಿ

ಮಂಗಳೂರು: ರಾಜ್ಯದ ಮುಖ್ಯಮಂತ್ರಿ ಸೇರಿ ಅನೇಕ ಸಚಿವರ ವಿರುದ್ಧ ಭ್ರಷ್ಟಾಚಾರ, ಆತ್ಮಹತ್ಯೆಗೆ ಪ್ರಚೋದನೆಯ, ಕಿರುಕುಳದಂತಹ ಗಂಭೀರ ಆರೋಪಗಳಿವೆ. ಈಶ್ವರಪ್ಪ ಹಾಗೂ ಯಡಿಯೂರಪ್ಪ ಪ್ರಕರಣದಲ್ಲಿ ಆಡಿದ ಮಾತುಗಳನ್ನು ಸಿಎಂ ಒಮ್ಮೆ ನೆನಪು ಮಾಡಿಕೊಳ್ಳಿ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಿಯಾಂಕ್ ಖರ್ಗೆ ಸಾರ್ವಜನಿಕ ಬದುಕಿನ ಎಲ್ಲ ಮಟ್ಟವನ್ನೂ ಮೀರಿದವರು. ಎಷ್ಟು ಕೆಳಗಿಳಿಯಲು ಬೇಕಾದರೂ ಅವರು ಸಿದ್ಧರಿದ್ದಾರೆ. ಹೀಗಾಗಿ ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಮಲ್ಲಿಕಾರ್ಜುನ ಖರ್ಗೆಯವರ ಪುತ್ರ ರಾಜೀನಾಮೆ ಕೊಡ್ತಾರೆ ಅನ್ನೋ ನಿರೀಕ್ಷೆ ನಮಗಿಲ್ಲ. ಆದರೆ ನಾವು ಜನರನ್ನು ಜಾಗೃತಗೊಳಿಸಲು ಹೋರಾಟ ಮುಂದುವರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಖರ್ಗೆ ಅಹಂಕಾರದ ವರ್ತನೆ: ಚಂದ್ರಶೇಖರ್ ಆತ್ಮಹತ್ಯೆ ಕಾರಣದಿಂದ ವಾಲ್ಮೀಕಿ ಹಗರಣ ಹೊರಬಂತು, ಲಕ್ಷ್ಮೀ ಹೆಬ್ಬಾಳ್ಕರ್ ಪಿಎ ಹೆಸರು ಬರೆದಿಟ್ಟು ರುದ್ರಣ್ಣ ಆತ್ಮಹತ್ಯೆ ಮಾಡಿಕೊಂಡರು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಇಂಥ ಹಲವು ಆತ್ಮಹತ್ಯೆಗಳು ನಡೆದಿವೆ. ಇತ್ತ ರಾಜ್ಯ ರಾಜಕಾರಣದಲ್ಲಿ ಪ್ರಿಯಾಂಕ್ ಖರ್ಗೆ ಈಗಲೇ ದುರಹಂಕಾರದಿಂದ ವರ್ತಿಸುತ್ತಿದ್ದಾರೆ. ಇದರ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ. ನಾವು ಎಲ್ಲರೂ ಜೊತೆಯಾಗಿಯೇ ಹೋರಾಟ ಮಾಡುತ್ತೇವೆ ಎಂದು ಪ್ರಲ್ಹಾದ ಜೋಶಿ ಸ್ಪಷ್ಟವಾಗಿ ಹೇಳಿದರು.

ನಾನು ಕರ್ನಾಟಕವನ್ನು ಕೇಂದ್ರದಲ್ಲಿ ಪ್ರತಿನಿಧಿಸುತ್ತಿದ್ದೇನೆ.ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಆಗುತ್ತದೆ ಅಂತಾ ನಾನು ಹೇಳಲ್ಲ.ಇಡೀ ದೇಶಾದ್ಯಂತ ಮಂಡಲ, ಬೂತ್, ಜಿಲ್ಲಾಧ್ಯಕ್ಷ, ರಾಜ್ಯಾಧ್ಯಕ್ಷ, ರಾಷ್ಟ್ರಾಧ್ಯಕ್ಷ ಬದಲಾವಣೆ ಆಗುತ್ತದೆ. ಎಲ್ಲ ಕಡೆಯಲ್ಲೂ ಅದರ ಪ್ರಕ್ರಿಯೆ ನಡೆಯುತ್ತದೆ. ಅದರಲ್ಲಿ ಇದ್ದವರೇ ಮತ್ತೊಮ್ಮೆ ಆಯ್ಕೆ ಆಗಬಹುದು.

-ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ಹನಿಟ್ರ್ಯಾಪ್ ಖೆಡ್ಡಾಗೆ ಬಿದ್ದ ಪೊಲೀಸ್ ಪೇದೆ

ಕಲಬುರಗಿಯಲ್ಲಿ ಮತ್ತೊಂದು ಪ್ರಕರಣ ಬೆಳಕಿಗೆ

ಕಲಬುರಗಿ: ಇತ್ತೀಚಿಗೆ ಕಲಬುರಗಿಯಲ್ಲಿ ಬಾರಿ ಸದ್ದು ಮಾಡಿದ ಹನಿಟ್ರ್ಯಾಪ್ ಪ್ರಕರಣಗಳ ಬೆನ್ನಲ್ಲೇ ಇದೀಗ ಮತ್ತೊಂದು ಹನಿಟ್ರ್ಯಾಪ್ ಪ್ರಕರಣ ಬೆಳಕಿಗೆ ಬಂದಿದೆ.

ಪೂಜಾ ಡೊಂಗರಗಾಂವ್ ಎಂಬ ಮಹಿಳೆ ಕಲಬುರಗಿಯ ಸೆನ್ ಪೊಲೀಸ್ ಠಾಣೆಯ ಪೇದೆಯೊಬ್ಬರನ್ನು ಹನಿಟ್ರ್ಯಾಪ್ ಖೆಡ್ಡಾಗೆ ಕೆಡವಿ, ಪೇದೆ ಪತ್ನಿಯಿಂದ ಎಂಟು ಲಕ್ಷ ರುಪಾಯಿ ವಸೂಲಿ ಮಾಡಿದ್ದಾಳೆ ಎಂದು ಹೇಳಲಾಗಿದೆ.

ಪೂಜಾ ಕಾಟಕ್ಕೆ ಬೇಸತ್ತ ಪೊಲೀಸ್ ಕಾನ್ಸ್‌ಟೇಬಲ್ ಪತ್ನಿ ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ನಡೆದಿದೆ ಎಂದು ತಿಳಿದುಬಂದಿದೆ. ಪೂಜಾ ಡೊಂಗರಗಾಂವ್ ಮತ್ತು ಅಮರ್‌ಸಿಂಗ್ ಎಂಬುವರು 15 ಲಕ್ಷಕ್ಕೆ ಬೇಡಿಕೆ ಇಟ್ಟು 8 ಲಕ್ಷ ರು.ಗಳನ್ನು ಪೇದೆ ಪತ್ನಿಯಿಂದ ವಸೂಲಿ ಮಾಡಿದ್ದಾರೆ ಎನ್ನಲಾಗಿದೆ. ಈ ಕುರಿತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಕಿ ಪಡೆಗೆ ಮುಜುಗರ

ಪೂಜಾ ಡೊಂಗರಗಾಂವ್ ಈ ಹಿಂದೆ ಕಲಬುರಗಿಯಲ್ಲಿ ನಡೆದ ಹನಿಟ್ರ್ಯಾಪ್ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದಳು. ಈ ಪ್ರಕರಣದಲ್ಲಿ ಪೊಲೀಸ್ ಪೇದೆಯನ್ನೇ ಹನಿಟ್ರ್ಯಾಪ್ ಖೆಡ್ಡಾಗೆ ಕೆಡವಿ ರಾಜ್ಯದಲ್ಲಿ ಸದ್ದು ಮಾಡಿತ್ತು. ಇದೀಗ ಮತ್ತೊಮ್ಮೆ ಪೊಲೀಸ್ ಪೇದೆಯನ್ನೇ ಮಾಯಾಜಾಲಕ್ಕೆ ಬೀಳಿಸಿದ್ದರಿಂದ ಕಲಬುರಗಿ ಖಾಕಿ ಪಡೆಗೆ ಮುಜುಗರ ಉಂಟುಮಾಡಿದೆ.

ಪ್ರಿನ್ಸೆಸ್ ರಸ್ತೆಗೆ ಪೂರಕ ದಾಖಲೆ ಸಲ್ಲಿಸಿದ ಯದುವೀರ್

ಮೈಸೂರು: ಮೈಸೂರಿನ ರಸ್ತೆಯೊಂದಕ್ಕೆ ಸಿಎಂ ಸಿದ್ದರಾಮಯ್ಯ ಅವರ ಹೆಸರಿಡುವ ಸಂಬಂಧ ಉಂಟಾಗಿರುವ ಗೊಂದಲ ಹಿನ್ನೆಲೆಯಲ್ಲಿ ರಸ್ತೆಗೆ ಈ ಹಿಂದೆ ಇದ್ದ ಪ್ರಿನ್ಸೆಸ್ ರಸ್ತೆ ಕುರಿತು ಪೂರಕವಾದ ದಾಖಲೆಗಳನ್ನು ಸಂಸದ ಯದುವೀರ್ ನಗರಪಾಲಿಕೆಗೆ ಸಲ್ಲಿಸಿದರು.

ಹೆಸರು ಬದಲಾವಣೆ ಕೈ ಬಿಡುವಂತೆ ಪಾಲಿಕೆ ಆಯುಕ್ತರಿಗೆ ಮನವಿ

ಮೈಸೂರಿನ ಪಿಕೆಟಿಬಿ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿರುವ ಬಗ್ಗೆ ಪಾಲಿಕೆ ಆಯುಕ್ತರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದಾಖಲೆ ಸಲ್ಲಿಸಿದ್ದಾರೆ.

ಪಿಕೆಟಿಬಿ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿರುವ ಬಗ್ಗೆ ದಾಖಲೆಗಳಿಲ್ಲ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಪಾಲಿಕೆ ಆಯುಕ್ತರನ್ನು ಭೇಟಿಯಾದ ಸಂಸದ ಯದುವೀರ್, ಪ್ರಿನ್ಸೆಸ್ ರಸ್ತೆ ಎಂಬುದಕ್ಕೆ ಹಲವು ದಾಖಲೆಗಳನ್ನು ಸಲ್ಲಿಕೆ ಮಾಡಿ, ಹೆಸರು ಬದಲಾವಣೆ ಕೈ ಬಿಡುವಂತೆ ಮನವಿ ಮಾಡಿದರಲ್ಲದೆ, ಈ ಬಗ್ಗೆ ಪುನರ್ ಪರಿಶೀಲನೆ ನಡೆಸುವಂತೆ ಸಲಹೆ ನೀಡಿದರು.

ಪಾಲಿಕೆ ಆಯುಕ್ತರ ಭೇಟಿ ಬಳಿಕ ಮಾತನಾಡಿದ ಸಂಸದ ಯದುವೀರ್, ಪ್ರಿನ್ಸೆಸ್ ರಸ್ತೆಗೆ ಸಿದ್ದರಾಮಯ್ಯ ಹೆಸರಿಡಲು ಹೊರಟಿದ್ದಾರೆ. ಈ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು. ಪ್ರಿನ್ಸೆಸ್ ರಸ್ತೆಗೆ ಯಾವುದೇ ದಾಖಲೆ ಇಲ್ಲ ಎಂದಿದ್ರು. ಅದಕ್ಕೆ ಪೂರಕವಾದ ದಾಖಲೆ ಸಂಗ್ರಹ ಮಾಡಿದ್ದೆವು. ಎಲ್ಲಾ ದಾಖಲೆಗಳನ್ನು ಪಾಲಿಕೆ ಆಯುಕ್ತರಿಗೆ ಸಲ್ಲಿಸಿದ್ದೇವೆ. ಇದು ರಾಜಕೀಯ ಉದ್ದೇಶದಿಂದ ಕೂಡಿದೆ ಎಂದು ಹೇಳಿದರು.

ಸಿದ್ದರಾಮಯ್ಯನವರು ಮುಡಾ ನಿವೇಶನ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವುದೇ ರಸ್ತೆಗೂ ಅವರ ಹೆಸರು ಇಡಬಾರದು. ಪಾಲಿಕೆಯಲ್ಲಿ ಪಾಲಿಕೆ ಸದಸ್ಯರು ಇಲ್ಲ, ಚುನಾವಣೆ ನಡೆದಿಲ್ಲ. ಈ ವೇಳೆ ಕೌನ್ಸಿಲ್ ನಿರ್ಣಯವಿಲ್ಲದೆ ಮಹತ್ವದ ನಿರ್ಧಾರ ಕೈಗೊಳ್ಳಬಾರದು. ನಗರಪಾಲಿಕೆ ಸದಸ್ಯರಿಲ್ಲದಿರುವಾಗ ರಸ್ತೆಯ ನಾಮಕರಣಕ್ಕೆ ಮುಂದಾಗಿರುವುದು ಸರಿಯಲ್ಲ.

-ಯದುವೀರ್ ಒಡೆಯರ್ ಸಂಸದ

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಇದೆಯೋ ಇಲ್ಲವೋ

ನೇತ್ರಾವತಿ ನದಿಯಲ್ಲಿ ಗೋಮಾಂಸ ಪತ್ತೆಗೆ ಸಿ.ಟಿ. ರವಿ ಕಿಡಿ

ಚಿಕ್ಕಮಗಳೂರು: ಧರ್ಮಸ್ಥಳದ ನೇತ್ರಾವತಿ ನದಿಯಲ್ಲಿ ಗೋಮಾಂಸ ಪತ್ತೆ ಪ್ರಕರಣವು ಲಕ್ಷಾಂತರ ಭಕ್ತರು ಬರುವ ಧಾರ್ಮಿಕ ಕ್ಷೇತ್ರವನ್ನು ಅಪವಿತ್ರಗೊಳಿಸಬೇಕು ಎನ್ನುವ ದುಷ್ಟಮನಸ್ಥಿತಿಗಳ ಮತಾಂಧತೆ ತೋರಿಸುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬರೀ ನೇತ್ರಾವತಿ ಮಾತ್ರವಲ್ಲ, ರಾಜ್ಯದ ಉದ್ದಗಲಕ್ಕೂ ಇದೆ ಪರಿಸ್ಥಿತಿ ಇದೆ. ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಇದೆಯೋ ಇಲ್ಲವೋ ಎಂಬ ಅನುಮಾನ ಮೂಡಿಸುತ್ತದೆ. ಕಾಯ್ದೆ ಇದೆ ಎಂದಾದರೇ, ಗೋಹತ್ಯೆ ಹೇಗಾಗುತ್ತದೆ ಎಂದು ರಾಜ್ಯ ಸರಕಾರ ಸ್ಪಷ್ಟಪಡಿಸಬೇಕು ಎಂದರು.

ಪ್ರಕರಣಗಳನ್ನು ಗಮನಿಸಿದರೆ ರಾಜ್ಯ ಸರಕಾರ ಗೋಹತ್ಯೆ ಕಾಯ್ದೆಯನ್ನು ಸರಿಯಾಗಿ ಅನುಷ್ಠಾನ ಮಾಡುತ್ತಿಲ್ಲ ಎನ್ನುವುದು ತೋರಿಸುತ್ತಿದೆ. ಗೋ ಕಳ್ಳರು ರಸ್ತೆ, ಕೊಟ್ಟಿಗೆಯಲ್ಲಿರುವ ಹಸುಗಳನ್ನು ಬಿಟ್ಟಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಇದು ನಮ್ಮದೆ ಸರಕಾರವೆಂದು ಗೋಕಳ್ಳರು ರಾಜಾರೋಷವಾಗಿ ಗೋಹತ್ಯೆ, ಕಳ್ಳತನ ಮಾಡುತ್ತಿದ್ದಾರೆ ಎಂದು ದೂಷಿಸಿದರು.

ಇಂದಿಗೂ ಎಫ್‌ಆರ್‌ಐ ಆಗಿಲ್ಲ

ಸುವರ್ಣಸೌಧದಲ್ಲಿ ಘಟನೆ ಸಂಬಂಧ ದೂರು ನೀಡಿಲ್ಲವೆಂಬ ಕುರಿತು ಪ್ರತಿಕ್ರಿಯಿಸಿ, ಅವರ ಬಗ್ಗೆ ನಾನು ಮಾತನಾಡಲು ಬಯಸಲ್ಲ. ಕಾನೂನು ಪ್ರಕಾರ ಏನು ಮಾಡಬೇಕೋ ಮಾಡುತ್ತೇನೆ. ಚಾಣಕ್ಯ ನೀತಿಯಂತೆ ಯಾವುದರಿಂದ ದೂರ ವಿರಬೇಕೆಂದು ಅಂದೆ ಹೇಳಿದ್ದೇನೆ. ನಾನು ನೀಡಿದ ದೂರು ಇಂದಿಗೂ ಎಫ್‌ಐಆರ್ ಆಗಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಗೊಂದು ಕಾನೂನು, ಬಿಜೆಪಿಗೊಂದು ಕಾನೂನು ಇಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ನನ್ನ ವಿರುದ್ಧ ದೂರು ಕೊಟ್ಟರೇ ದಾಖಲಾಗುತ್ತದೆ, ಅರೆಸ್ಟ್ ಮಾಡುವಂತಿಲ್ಲ, ಆದರೂ ಅರೆಸ್ಟ್ ಮಾಡ್ತಾರೆ. ಅರೆಸ್ಟ್ ಮಾಡಿದ ಮೇಲೆ ರಾತ್ರಿ ಕಬ್ಬಿನಗದ್ದೆ, ಜಲ್ಲಿ ಕ್ರಷರ್, ಕಾಡಿನೊಳಗೆ ಕರೆದುಕೊಂಡು ಹೋಗ್ತಾರೆ. ರಾಜ್ಯದಲ್ಲಿ ಯಾರಿಗೆ ರಕ್ಷಣೆ ಬೇಕಾದರೂ ಪೊಲೀಸ್ ಸ್ಟೇಷನ್‌ನಲ್ಲಿ ರಕ್ಷಣೆ ಸಿಗಲ್ಲ. ಕಬ್ಬಿನಗದ್ದೆ, ಜಲ್ಲಿ ಕ್ರಷರ್‌ಗೆ ಹೋಗಬೇಕು. ನಾನು ಡಿಜಿಪಿ, ಐಜಿ, ಸಿಎಂಗೆ ದೂರು ನೀಡಿದ್ದೇನೆ. ಸಂವಿಧಾನ ಬದ್ಧವಾಗಿ ನಡೆದುಕೊಳ್ಳುವವರಿ ದ್ದರೇ, ಒಬ್ಬರಿಗೊಂದು ಒಬ್ಬರಿಗೊಂದು ಮಾಡುವುದಿಲ್ಲ ಎಂದರು.

ರಾಜ್ಯದಲ್ಲಿ ಫಿಸಿಕಲ್ ಸರ್ವೇ ನಡೆಸಿಲ್ಲ

ಕಸ್ತೂರಿ ರಂಗನ್ ವರದಿ ಸಂಬಂಧ ಸಂಸದೆ ಶೋಭಾ ಕರಂದ್ಲಾಜೆ ಹೇಳಿಕೆ

ಸುಬ್ರಹ್ಮಣ್ಯ: ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ಫಿಸಿಕಲ್ ಸರ್ವೇ ನಡೆಸಿದಾಗ ಮಾತ್ರ ಯಥಾಸ್ಥಿತಿ ತಿಳಿಯಲಿದೆ. ಆದರೆ ಕೇರಳ ರಾಜ್ಯ ಹೊರತುಪಡಿಸಿ ಯಾವುದೇ ರಾಜ್ಯ ಸರ್ವೇ ನಡೆಸಿ ವರದಿ ನೀಡಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇದು ಹಿಂದಿನವರು ಮಾಡಿರುವ ತಪ್ಪು. ಏರಿಯಲ್ ಸರ್ವೇ ಮಾಡಿ ಈ ವರದಿ ಮಾಡಲಾಗಿದೆ. ಫಿಸಿಕಲ್ ಸರ್ವೇ ಮಾಡಬೇಕು. ಗ್ರಾಮಗಳಿಗೆ ಭೇಟಿ ನೀಡಿ ಎಷ್ಟು ತೋಟ, ಕಾಡು ಇದೆ ಎಂಬ ಸರ್ವೇ ಆಗಬೇಕು ಎಂಬುದು ನಮ್ಮ ಅಪೇಕ್ಷೆಯಾಗಿತ್ತು. ಆದರೆ ಕಸ್ತೂರಿ ರಂಗನ್ ವರದಿ ಸರ್ವೇ ಮಾಡಿರುವುದು ಹೆಲಿಕಾಪ್ಟರ್ ಮೂಲಕ ಎಂದ ಅಸಮಾಧಾನ ವ್ಯಕ್ತಪಡಿಸಿದರು.

ತೋಟಗಳು ಇರುವೆಡೆ ಹಸಿರು ಉಲ್ಲೇಖ: ಎಲ್ಲಿ ಕಾಫಿ, ಅಡಕೆ, ತೆಂಗಿನ ಮತ್ತಿತರ ತೋಟ ಇದೆಯೋ ಅಲ್ಲಿ ಹಸಿರು ಬಂದಿದೆ. ಈ ಕಾರಣದಿಂದ ಈ ಎಲ್ಲವನ್ನೂ ಕಾಡು ಎಂದು ಅವರು ತೀರ್ಮಾನ ಮಾಡಿದ್ದಾರೆ. ಇದು ತಪ್ಪು ಎಂಬುದನ್ನು ನಾವು ಬಹಳ ಹಿಂದೆಯೇ ತಿಳಿಸಿದ್ದೆವು ಎಂದು ಸಚಿವರು ಸ್ಪಷ್ಟಪಡಿಸಿದರು.

ಈ ಹಿಂದೆ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗಲೂ ತಿಳಿಸಿದ್ದೆವು. ಆದರೆ ಕೇರಳ ಒಂದೇ ರಾಜ್ಯ ಫಿಸಿಕಲ್ ಸರ್ವೇ ಮಾಡಿ ವರದಿ ನೀಡಿದೆ. ಕರ್ನಾಟಕದಲ್ಲಿ ಈವರೆಗೆ ಸರ್ವೇ ಆಗಿಲ್ಲ. ಸಮೀಕ್ಷೆಯಲ್ಲಿ ಮಾತ್ರ ಈ ಭಾಗದಲ್ಲಿರುವ ತೋಟ, ವಿದ್ಯಾಸಂಸ್ಥೆ, ಕಲ್ಚರಲ್ ಸೆಂಟರ್, ಕಾಡು, ತೋಟ ಇರುವುದು ತಿಳಿಯುತ್ತದೆ ಎಂದು ಸಚಿವೆ ಶೋಭಾ ನುಡಿದರು.

ಕಾಡು-ತೋಟ ಬೇರ್ಪಡಿಸಬೇಕು

ಕಾಡು, ತೋಟವನ್ನು ಪ್ರತ್ಯೇಕಿಸುವ ಮಾಡುವ ಕೆಲಸ ಆಗಬೇಕಿತ್ತು. ಈ ರೀತಿಯ ಯಥಾಸ್ಥಿತಿ ವರದಿಯನ್ನು ಕೇರಳ ರಾಜ್ಯ ಹೊರತುಪಡಿಸಿ ಉಳಿದ ಯಾವ ರಾಜ್ಯವೂ ನೀಡಿಲ್ಲ, ಈ ವರದಿ ನೀಡಬೇಕು ಎಂಬುದು ಸುಪ್ರೀಂ ಕೋರ್ಟ್ ಅಪೇಕ್ಷೆ. ಅದನ್ನು ನಾವು ಹಿಂದಿನಿಂದ ಹಾಗೂ ಇವತ್ತೂ ಒತ್ತಾಯಿಸುತ್ತೇವೆ. ಆಗ ಮಾತ್ರ ಇದಕ್ಕೆ ನ್ಯಾಯ ಸಿಗಲು ಸಾಧ್ಯ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ರಾಜ್ಯದಲ್ಲಿ ಹದಗೆಟ್ಟ ಹಣಕಾಸು ಪರಿಸ್ಥಿತಿ: ಎಚ್. ವಿಶ್ವನಾಥ್

ಮೈಸೂರು: ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಅಧೋಗತಿಯಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಗ್ಗೆ ಶ್ವೇತಪತ್ರ ಹೊರಡಿಸಿ, ರಾಜ್ಯದಲ್ಲಿರುವ ಆರ್ಥಿಕ ಪರಿಸ್ಥಿತಿಯನ್ನು ಬಹಿರಂಗ ಪಡಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಸರಕಾರದಲ್ಲಿ ಸರಿಯಾದ ಹಿಡಿತ ಇಲ್ಲ. ಹುಚ್ಚು ಹುಚ್ಚಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆಡಳಿತದಲ್ಲಿ ಬಿಗಿ ಹಿಡಿತ ಇಲ್ಲದ ಕಾರಣ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ, ಐಪಿಎಸ್ ಅಧಿಕಾರಿ ಡಿ. ರೂಪಾ ಬೀದಿಜಗಳ ರಂಪಾಟವಾದಾಗಲೂ ಕ್ರಮ ತೆಗೆದುಕೊಳ್ಳಲಿಲ್ಲ. ಈಗ ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂಬುದನ್ನು ಮುಖ್ಯಮಂತ್ರಿಗಳು ಶ್ವೇತಪತ್ರ ಹೊರಡಿಸಿ ಬಹಿರಂಗ ಪಡಿಸಬೇಕು ಎಂದರು.

ವಿಶ್ವವಾಣಿ

ಸಂಪಾದಕೀಯ

ಭದ್ರಾವತಿ ಬಂಗಾರಕ್ಕೂ ಜೀವ ನೀಡಿ

ಖಾಸಗೀಕರಣದ ಅಂಚಿನಲ್ಲಿದ್ದ, 'ಭಾರತೀಯ ರಾಷ್ಟ್ರೀಯ ಉಕ್ಕು ನಿಗಮ'ದ ವೈಜಾಗ್ ಸ್ಟೀಲ್ ಕಾರ್ಖಾನೆಗೆ ಪ್ರಸಕ್ತ ವರ್ಷದಲ್ಲಿ ಮರುಜೀವ ನೀಡುವ ನಿಟ್ಟಿನಲ್ಲಿನ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿಯವರ ಪ್ರಯತ್ನ ಕೊನೆಗೂ ಫಲ ನೀಡಿದ್ದು, ಸದ್ಯದಲ್ಲೇ ಈ ಕಾರ್ಖಾನೆಯ ಪುನರಾರಂಭದ ಘೋಷಣೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಈ ಉಪಕ್ರಮವು ಯಶಸ್ವಿಯಾಗಿ ಕೈಗೂಡಿದಲ್ಲಿ ದೇಶದಲ್ಲಿನ ಉಕ್ಕಿನ ಉತ್ಪಾದನೆಯ ಪ್ರಮಾಣ ಗಣನೀಯವಾಗಿ ಹೆಚ್ಚುವುದರ ಜತೆಗೆ, ಸಾವಿರಾರು ಕಾರ್ಮಿಕ ಕುಟುಂಬಗಳಿಗೆ ಒಳಿತಾಗಲಿದೆ ಎಂಬುದರಲ್ಲಿ ಸಂದೇಹವಿಲ್ಲ. 'ಕಬ್ಬಿಣ ಮತ್ತು ಉಕ್ಕು' ಎನ್ನುತ್ತಿದ್ದಂತೆ ಅಪ್ರಯತ್ನವಾಗಿ ನೆನಪಾಗುವುದು ಕರ್ನಾಟಕದ ಭದ್ರಾವತಿಯಲ್ಲಿನ 'ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ'. ನೂರು ವರ್ಷಕ್ಕೂ ಹಳೆಯ ಈ ಕಾರ್ಖಾನೆಯ ಪುನಶ್ಚೇತನಕ್ಕೆ ಹತ್ತು ಹಲವು ಕಸರತ್ತುಗಳನ್ನು ಮಾಡಿದರೂ ಅದು ಫಲ ನೀಡಲಿಲ್ಲ ಎಂಬುದು ವಿಷಾದದ ಸಂಗತಿ. ನಿರಂತರ ನಷ್ಟ, ಅದಿರಿನ ಅಲಭ್ಯತೆ, ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಉನ್ನತೀಕರಿಸಲ್ಪಡದ ಯಂತ್ರೋಪಕರಣಗಳು ಮತ್ತು ದೀರ್ಘಕಾಲದವರೆಗೆ ಅವು ಸ್ಥಗಿತಗೊಂಡಿದ್ದ ಕಾರಣಕ್ಕೆ ಅನುತ್ಪಾದಕವಾಗಿ ಮಾರ್ಪಟ್ಟಿದ್ದು- ಹೀಗೆ ಭದ್ರಾವತಿಯ ಕಾರ್ಖಾನೆಯು ಉಸಿರು ನಿಲ್ಲಿಸುವಂತಾಗಿದ್ದಕ್ಕೆ ಹಲವು ಕಾರಣಗಳಿವೆ ಎನ್ನಲಾಗುತ್ತಿದೆ. 1918-1919ರ ಕಾಲಘಟ್ಟದಲ್ಲಿ ಶುರುವಾಗಿ ಭವ್ಯ ಇತಿಹಾಸ ಹೊಂದಿದ್ದ ಈ ಕಾರ್ಖಾನೆಯಲ್ಲಿ ಒಂದು ಕಾಲಕ್ಕೆ ಗಣನೀಯ ಸಂಖ್ಯೆಯ ಕಾರ್ಮಿಕರು ಕೆಲಸ ಮಾಡುತ್ತಿದ್ದರು; ಕಾರಣವಲ್ಲದ ಕಾರಣಕ್ಕೆ ಅದು ಏದುಸಿರು ಬಿಡುವಂತಾದಾಗ, ತಮ್ಮ ಅನ್ನಕ್ಕೆ ಆಸರೆಯಾಗಿದ್ದ ಕಾರ್ಖಾನೆಯನ್ನು ಉಳಿಸಿಕೊಳ್ಳಲು ಅಲ್ಲಿನ ಕಾರ್ಮಿಕರು ಸತತ 10 ವರ್ಷಗಳವರೆಗೆ ಹೋರಾಟ ನಡೆಸಿದ್ದುಂಟು. ಈ ಕಾರ್ಖಾನೆಯ ದುಸ್ಥಿತಿಗೆ, ಅದು ನಷ್ಟಕ್ಕೆ ಒಡ್ಡಿಕೊಳ್ಳುವಂತಾಗಿದ್ದಕ್ಕೆ ಕಾರಣಗಳೇನೇ ಇರಬಹುದು; ಆದರೆ ಇದು ನಮ್ಮ ನಾಡಿನ ಹೆಮ್ಮೆಯ ಅಸ್ತಿತ್ವಗಳಲ್ಲೊಂದು ಎಂಬ ಸತ್ಯವನ್ನಂತೂ ತಳ್ಳಿಹಾಕಲಾಗದು. ಆದ್ದರಿಂದ, ವೈಜಾಗ್ ಕಾರ್ಖಾನೆಗೆ ಮರುಜೀವ ನೀಡಿದಂತೆ 'ಭದ್ರಾವತಿ ಬಂಗಾರ'ಕ್ಕೂ ಅಂಥದೊಂದು ಭಾಗ್ಯ ನೀಡಲು ಕೇಂದ್ರ ಸಚಿವರು ಯತ್ನಿಸಲಿ ಎಂಬುದು ಸಹೃದಯಿಗಳ ಆಶಯ ಮತ್ತು ನಿರೀಕ್ಷೆ.

ಸೊಂಪಾದಕೀಯ

'ಥರ್ಟಿ ಫಸ್ಟ್' ಕುಡುಕರ 'ಥರ್ಸ್ಟಿ'

ಹೊಸ ವರ್ಷದ ಆಚರಣೆ ಅನ್ನೋದು ಎಲ್ಲರಿಗೂ ಖುಷಿ ಕೊಡೋ ವಿಷ್ಯ. ಇಡೀ ವರ್ಷ ಏನೇ ಆದ್ರೂ, ಮುಂದಿನ ವರುಷ ಹರುಷ ಕಾದಿದೆ ಅನ್ನೋದೇ ಎಲ್ಲರ ನಂಬಿಕೆ. ಹಾಗಾಗಿ ಹೊಸ ವರ್ಷ ಎಲ್ಲರಲ್ಲೂ ಹುರುಪು ತುಂಬುತ್ತದೆ. ಆದರೆ ಅದನ್ನು ಆಚರಣೆ ಮಾಡೋ ರೀತಿ ಮಾತ್ರ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ಕೆಲವರು ವರ್ಷದ ಮಧ್ಯದಲ್ಲಿ ಏನೇ ಆಗಿರಲಿ, ವರ್ಷದ ಕೊನೆಯ ದಿನವನ್ನು ಮಾತ್ರ ಮದ್ಯದೊಂದಿಗೇ ಆಚರಿಸಬೇಕು ಅನ್ನೋ ಧೋರಣೆ ಹೊಂದಿದವರು. ಅಂಥವರು ಇಡೀ ವರ್ಷ 'ಮ್ಯೂಟ್ ಮೋಡ್'ನಲ್ಲಿ ಇದ್ದರೂ ಡಿಸೆಂಬರ್ 31ಕ್ಕೆ ಮಾತ್ರ 'ಆಕ್ಟಿವೇಟ್' ಆಗುತ್ತಾರೆ. 'ಡಿಸೆಂಬರ್ ಥರ್ಟಿ ಫಸ್ಟ್‌ಗೆ, ಥರ್ಟಿ ಆದ್ರೂ ಹಾಕಲೇಬೇಕು' ಅಂತ ಡಿಸೈಡ್ ಮಾಡಿರುತ್ತಾರೆ. ಇಂಥ 'ಥರ್ಟಿ ಫಸ್ಟ್' ಕುಡುಕರ 'ಥರ್ಸ್ಟಿ'ಯಿಂದಾಗಿ ಈ ಬಾರಿ ಮದ್ಯ ಮಾರಾಟದಲ್ಲಿ ಸಿಕ್ಕಾಪಟ್ಟೆ ಏರಿಕೆ ಕಂಡುಬಂದಿದೆಯಂತೆ. ಈ ವರ್ಷ ದಾಖಲೆ ಮೊತ್ತದ ಮದಿರೆ ಮಾರಾಟ ಆಗಿದೆಯಂತೆ. ಸಿನಿಮಾ ಭಾಷೆಯಲ್ಲಿ ಹೇಳೋದಾದ್ರೆ, ಇದುವರೆಗಿನ ಎಲ್ಲ ದಾಖಲೆಗಳನ್ನೂ ಮುರಿದು, ಮದ್ಯ ಮಾರಾಟ ಈ ಬಾರಿ ಬಾರ್‌ಗಳಲ್ಲಿ ಭರಾಟೆ ಜಾಸ್ತಿ ಆಗಿ, ಒಟ್ಟು ಕಲೆಕ್ಷನ್ ಇಂಡಸ್ಟ್ರಿ ಹಿಟ್ ಆಗುವಷ್ಟಾಗಿದೆಯಂತೆ. ಹಾಗಾಗಿ ಆ ಬಾರಿ ಅಬಕಾರಿ ಇಲಾಖೆ ಮಾತ್ರ ಹೊಸ ವರ್ಷದ ಆಗಮನದಿಂದಾಗಿ ಫುಲ್ ಖುಷ್. ಇದು ಮದ್ಯಪ್ರಿಯರ ಕಥೆ ಆದರೆ ಇನ್ನು ಹೊಸ ವರ್ಷದ ಮುನ್ನಾದಿನ ದೇವರ ಮೊರೆಹೋಗುವ ಆಸ್ತಿಕರದ್ದು ಇನ್ನೊಂದು ವಿಷಯ. ಡಿಸೆಂಬರ್ 31ರಂದು ಬಾರ್‌ಗಳನ್ನು ಬಿಟ್ಟರೆ ಹೌಸ್‌ಫುಲ್ ಆಗಿರೋದು ಅಂದ್ರೆ, ದೇವಸ್ಥಾನ ಮತ್ತು ಚರ್ಚುಗಳು. ಬಾರ್‌ಗಳೂ ಒಂಥರ ದೇವಸ್ಥಾನ ಇದ್ದಂಗೆ ಅನ್ನೋದು ಕುಡುಕರ ಅನಿಸಿಕೆ ಎಂಬುದು ಬೇರೆ ವಿಷಯ. ಆದರೆ ನಿಜವಾದ ದೈವಭಕ್ತರು ದೇವರ ಆಶೀರ್ವಾದ ಪಡೆದಿದ್ದಾರೆ. ಆದರೆ ಚರ್ಚುಗಳು ಫುಲ್ ಆಗೋದು ಓಕೆ, ಯಾಕಂದ್ರೆ ಈ ಹೊಸ ವರ್ಷ ಅನ್ನೋದು ಕ್ರಿಶ್ಚಿಯನ್ ಕ್ಯಾಲೆಂಡರ್ ಪ್ರಕಾರ ಆಚರಣೆ ಆಗೋ ವಿಷ್ಯ. ಆದರೆ ಅಪ್ಪಟ ಹಿಂದೂ ಆಸ್ತಿಕರು ನಮ್ಮ ಹೊಸ ವರ್ಷ ಯುಗಾದಿಗೆ ಅಂತ ಹೇಳಿಕೊಳ್ಳೋದನ್ನು ನಾವು ಕೇಳಿದ್ದೇವೆ. ಈ ದೇವಸ್ಥಾನಕ್ಕೆ ಭೇಟಿ ಕೊಟ್ಟವರಲ್ಲಿ ಅಂಥವರೂ ಇದ್ದರಾ ಅನ್ನೋದರ ಬಗ್ಗೆ ಮಾತ್ರ ಮಾಹಿತಿ ಇಲ್ಲ.

ಸಂಪಾದಕರ ಸದ್ಯಶೋಧನೆ

ಟೊಯೋಟಾ ಮಾದರಿ

ಟೊಯೋಟಾ ಮೋಟಾರ್ ಕಾರ್ಪೊರೇಷನ್ ಬಗ್ಗೆ ನಾನು ಕೇಳಿದ ಮತ್ತಷ್ಟು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಜಪಾನ್ ಅಷ್ಟೇ ಅಲ್ಲ, ಜಾಗತಿಕ ಉದ್ಯಮಗಳಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿರುವ ಟೊಯೋಟಾ ತನ್ನ ನಿರ್ವಹಣಾ ತಂತ್ರಗಳು ಮತ್ತು ನಿರಂತರ ಸುಧಾರಣೆಯ ತತ್ವಗಳಿಂದ ಅಸಾಧಾರಣ ಯಶಸ್ಸನ್ನು ಗಳಿಸಿರುವುದು ಸರ್ವವಿದಿತ. 1980ರ ದಶಕದಲ್ಲಿ, ಟೊಯೋಟಾದ ಕಾರ್ಖಾನೆಯಲ್ಲಿ ಒಂದು ಘಟನೆ ಸಂಭವಿಸಿತು. ಕಾರಿನ ಚಕ್ರಗಳನ್ನು ಅಳವಡಿಸುವ ಪ್ರಕ್ರಿಯೆಯಲ್ಲಿ ನಿರಂತರವಾಗಿ ವಿಳಂಬವಾಗುತ್ತಿತ್ತು. ಈ ಸಮಸ್ಯೆಯನ್ನು ವಿವರವಾಗಿ ಪರಿಶೀಲಿಸಲು ಟೊಯೋಟಾ 5 Why's ವಿಧಾನವನ್ನು ಬಳಸಿತು. ಚಕ್ರ ಅಳವಡಿಸುವ ಸಮಯ ಹೆಚ್ಚು ತೆಗೆದುಕೊಳ್ಳುತ್ತಿದೆ ಏಕೆ? ಯಂತ್ರಗಳು ಸರಿಯಾದ ದಾರಿಗೆ ಬಂದಿಲ್ಲ ಏಕೆ? ಯಂತ್ರದ ನಿರ್ವಹಣೆ ನಿಯತವಾಗಿಲ್ಲ ಏಕೆ? ನಿರ್ವಹಣೆಗಾಗಿ ನಿಗದಿತ ಕಾಲಮಿತಿ ಇಲ್ಲ ಏಕೆ? ನಿರ್ವಹಣಾ ಯೋಜನೆಯನ್ನು ಸರಿಯಾಗಿ ರೂಪಿಸಿಲ್ಲ ಏಕೆ? ಈ ಪ್ರಶ್ನೋತ್ತರದ ಮೂಲಕ, ಕಂಪನಿಯು ತುರ್ತು ನಿರ್ವಹಣಾ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಪ್ರತಿದಿನ ಯಂತ್ರಗಳನ್ನು ಪರಿಶೀಲಿಸುವ ನಿಯಮವನ್ನು ಜಾರಿಗೊಳಿಸಿತು. ಇದರ ಪರಿಣಾಮವಾಗಿ ಚಕ್ರ ಅಳವಡಿಸುವ ಸಮಯವನ್ನು ಶೇ.50 ಕಡಿಮೆ ಮಾಡಿತು. ಒಮ್ಮೆ ಟೊಯೋಟಾ ಕಾರ್ಖಾನೆಯಲ್ಲಿ ಪೂರೈಕೆದಾರರಿಂದ ಒಂದು ಪ್ರಮುಖ ಭಾಗದ ಸರಬರಾಜು ವಿಳಂಬವಾಯಿತು. ಇದು ಕಾರು ಉತ್ಪಾದನೆಯಲ್ಲಿ ತೊಂದರೆ ಉಂಟುಮಾಡುವ ಸಾಧ್ಯತೆಯಿತ್ತು. ಸಮಸ್ಯೆಯನ್ನು ತಕ್ಷಣ ಗಮನಿಸಿದ ನಿರ್ವಹಣಾ ತಂಡ, ಜಸ್ಟ್-ಇನ್-ಟೈಮ್ ತಂತ್ರವನ್ನು ಬಳಸಿ ಬದಲಿಗೆ ಸ್ಥಳೀಯ ಪೂರೈಕೆದಾರರೊಂದಿಗೆ ಸಹಕಾರ ನಡೆಸಿತು. ಇದರ ಪಾಠವೇನು? ಈ ಘಟನೆಯಿಂದ, ಟೊಯೋಟಾ ತನ್ನ ಪೂರೈಕೆದಾರರ ಜಾಲವನ್ನು ವೃದ್ಧಿಗೊಳಿಸಿತು. ಈ ತ್ವರಿತ ತೀರ್ಮಾನ ತೆಗೆದುಕೊಳ್ಳುವ ಶಕ್ತಿ, ವ್ಯರ್ಥವನ್ನು ಕಡಿಮೆ ಮಾಡಿ ಕಾರುಗಳನ್ನು ಸಮಯಕ್ಕೆ ಮಾರುಕಟ್ಟೆಗೆ ಬಿಡುಗಡೆ ಮಾಡಲು ಸಹಾಯ ಮಾಡಿತು. 'ಸ್ಥಳಕ್ಕೆ ಹೋಗಿ ನೋಡುವುದು' ಆ ಸಂಸ್ಥೆಯ ಇನ್ನೊಂದು ಕಾರ್ಯವಿಧಾನ. ಈ ತತ್ವವು ಪ್ರತಿಯೊಬ್ಬ ನಿರ್ವಹಣಾ ಸಿಬ್ಬಂದಿಗೆ ಸ್ಥಳಕ್ಕೆ ಹೋಗಿ ಸತ್ಯದ ಸಮೀಕ್ಷೆ ಮಾಡಲು ಪ್ರೋತ್ಸಾಹಿಸುತ್ತದೆ. ಒಮ್ಮೆ ಟೊಯೋಟಾದ ಕಾರ್ಯನಿರ್ವಹಣೆ ವಿಭಾಗದ ಮುಖ್ಯಸ್ಥನು ಕಾರ್ಖಾನೆಗೆ ಭೇಟಿ ನೀಡಿದ. ಅಲ್ಲಿರುವ ಉದ್ಯೋಗಿಗಳು ಹೊಸ ಎಂಜಿನ್ ಅಳವಡಿಸುವಲ್ಲಿ ತೊಂದರೆ ಅನುಭವಿಸುತ್ತಿದ್ದರು. ಅವರು ನೇರವಾಗಿ ಸ್ಥಳಕ್ಕೆ ಹೋಗಿ ಎಂಜಿನ್ ಅಳವಡಿಕೆ ತಂತ್ರವನ್ನು ವೀಕ್ಷಿಸಿದರು. ಅವರು ತಕ್ಷಣವೇ ಒಂದು ಸರಳ ಯಂತ್ರೋಪಕರಣವನ್ನು ವಿನ್ಯಾಸಗೊಳಿಸುವ ಸೂಚನೆ ನೀಡಿದರು. ಇದರ ಫಲವಾಗಿ ಸ್ಥಳದಲ್ಲಿಯೇ ಸಮಸ್ಯೆ ಬಗೆಹರಿಯಿತು. ಉತ್ಪಾದನಾ ದಕ್ಷತೆಯನ್ನು ಶೇ. 30 ಹೆಚ್ಚಿಸಿತು. ಒಮ್ಮೆ ಟೊಯೋಟಾದ ಕಾರ್ಖಾನೆಯಲ್ಲಿ ಒಂದು ಚಕ್ರದ ಬೋಲ್ಟ್ ಸರಿಯಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಇದರಿಂದ, ಕಾರು ಅಂದವಾಗಿ ಕಾಣುತ್ತಿರಲಿಲ್ಲ. ಈ ಸಮಸ್ಯೆಯನ್ನು ಕಂಡ ಕಾರ್ಮಿಕನೊಬ್ಬ ತಕ್ಷಣ ಯಂತ್ರವನ್ನು ನಿಲ್ಲಿಸಿ ಮ್ಯಾನೇಜರ್‌ಗೆ ತಿಳಿಸಿದ. ಇದರಿಂದ ದೋಷವನ್ನು ಯಾರು ಬೇಕಾದರೂ ಕಂಡುಹಿಡಿಯಬಹುದು ಎಂಬ ತತ್ವವನ್ನು ಸಾರಿದಂತಾಯಿತು. ಟೊಯೋಟಾ ಮಾರುಕಟ್ಟೆಗೆ ಕಳಿಸುವ ಪ್ರತಿಯೊಂದು ಕಾರು ನೂರಕ್ಕೆ ನೂರರಷ್ಟು ದೋಷರಹಿತವಾಗಿರುತ್ತದೆ. ಟೊಯೋಟಾದಲ್ಲಿ ಕೆಲಸ ಮಾಡುವ ಕಾರ್ಮಿಕನೊಬ್ಬ, ತನ್ನ ಕೆಲಸದ ಸಮಯದಲ್ಲಿ ಪರ್ಯಾಯ ಮಾರ್ಗವನ್ನು ಪ್ರಸ್ತಾಪಿಸಬಹುದು. ಇದರಿಂದ ಒಂದು ಪ್ರಕ್ರಿಯೆಯಲ್ಲಿ 10 ನಿಮಿಷಗಳಷ್ಟು ಸಮಯ ಉಳಿತಾಯ ಮಾಡಬಹುದು. ಟೊಯೋಟಾದ ನಿರ್ವಹಣಾ ತಂಡ ಈ ಸಲಹೆಯನ್ನು ತಕ್ಷಣವೇ ಅನುಸರಿಸಿ, ಆ ಪ್ರಕ್ರಿಯೆಯನ್ನು ಸುಧಾರಿಸುತ್ತದೆ. ಇದು ಸಿಬ್ಬಂದಿ ಸೃಜನಶೀಲತೆಯನ್ನು ಹೆಚ್ಚಿಸಲು ಸಹಾಯಕವಾಗಿದೆ. 2000ರಲ್ಲಿ ಟೊಯೋಟಾ ಹೈಬ್ರಿಡ್ ಕಾರುಗಳ ಉತ್ಪಾದನೆಯನ್ನು ಆರಂಭಿಸಲು ನಿರ್ಧರಿಸಿತು. ಈ ಯೋಜನೆಯನ್ನು ತ್ವರಿತಗೊಳಿಸಲು, ಟೊಯೋಟಾ ತಕ್ಷಣವೇ ತಂಡಗಳನ್ನು ವಿಭಜಿಸಿ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಉತ್ಪಾದನಾ ಘಟಕಗಳ ಮಧ್ಯೆ ಸಮನ್ವಯ ಸಾಧಿಸಿತು. ಪರಿಣಾಮವಾಗಿ, ಪ್ರಪಂಚದ ಮೊದಲ ಹೈಬ್ರಿಡ್ ಕಾರು ಪ್ರಿಯಸ್ ವಿಶ್ವದೆಲ್ಲೆಡೆ ಯಶಸ್ವಿಯಾಯಿತು, ಇದರಿಂದಾಗಿ ಹಸಿರು ತಂತ್ರಜ್ಞಾನದಲ್ಲಿ ಟೊಯೋಟಾ ಮುಂಚೂಣಿಗೆ ಬಂದಿತು.

ನೆನಪುಗಳ ವಾಸನೆ, ವಾಸನೆಗಳ ನೆನಪು ಎರಡೂ ಮಧುರ

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಕುಮಟಾದ ಬುಧವಾರ ಸಂತೆಗೆ ಅದರದೇ ಆದ ಎರಡು ವಾಸನೆಗಳಿವೆ. ಬಿರು ಬೇಸಿಗೆಯಲ್ಲಿ ಸಂತೆ ತಳೆಯುವ ವಾಸನೆಯೇ ಬೇರೆ, ಗಿಜಿಗಿಜಿ-ಹಠ ಹಿಡಿದಂತೆ ಸುರಿಯುವ ಮಳೆಯಲ್ಲಿ ತೊಯ್ದ ಸಂತೆಯ ವಾಸನೆಯೇ ಬೇರೆ. ಒಂದೊಂದು ಊರಿನ ಸಂತೆಗೂ ಒಂದು ಅನನ್ಯ ವಾಸನೆಯಿರುತ್ತದೆ. 'ವಾಸನೆ'- ವೆಂಕಟಸುಬ್ಬಯ್ಯನವರು ಗುರುತಿಸುವಂತೆ ಒಂದು ವಿಚಿತ್ರ ಶಬ್ದ ಹೌದು. ಸಂಸ್ಕೃತದಲ್ಲಿ ವಾಸ ಎಂದರೆ ಸುವಾಸನೆ. ವಾಸನಾ ಬೇರೆ. ಹಾಗಂತ ಸುವಾಸನಾ, ದುರ್ವಾಸನಾ ಎಂಬ ಶಬ್ದಗಳು ಸಂಸ್ಕೃತ ಕಾವ್ಯದಲ್ಲಿ ಕೇಳಿಬರುವುದು ಅಪರೂಪ. ದುರ್ಗಂಧ, ಸುಗಂಧ ಎಂಬ ಪ್ರಯೋಗವೇ ಜಾಸ್ತಿ. ಈಗ ಕನ್ನಡದಲ್ಲಂತೂ ವಾಸನೆ ಎಂದರೆ ದುರ್ವಾಸನೆ ಎಂದೇ ಅರ್ಥಪಡೆದುಕೊಂಡಿದೆ. ಸುವಾಸನೆ ಎಂದರೆ ಹಾಗೆ, ದುರ್ವಾಸನೆ ಎಂದರೆ ಹೀಗೆ, ಆದರೆ ಬರೀ ವಾಸನೆ ಎಂದರೆ ಹೆಚ್ಚಿನಂಶ ಅರ್ಥವಾಗುವುದು ದುರ್ವಾಸನೆ ಎಂದೇ. ಈ ಲೇಖನದ ಮಟ್ಟಿಗೆ ವಾಸನೆ ಎಂದು ಬಂದಾಗಲೆಲ್ಲ ಅದು ನಿಷ್ಪಕ್ಷಪಾತ 'ವಾಸನೆ' ಎಂದಷ್ಟೇ ಗ್ರಹಿಸಿ ಓದಿಕೊಳ್ಳಬೇಕು. ಸುವಾಸನೆ, ದುರ್ವಾಸನೆ, 'ಹೂ-ಸು'ವಾಸನೆ ಎಂಬೆಲ್ಲ ಗುಣ ವಿಶೇಷ ಇಲ್ಲಿ ಸಂಬಂಧವಿಲ್ಲದ ವಿಷಯ. ಈ ಲೇಖನದಲ್ಲಿ ವಾಸನೆ ಎಂದಾಗಲೆಲ್ಲ ಅದು ಪಕ್ಷಪಾತಿಯಲ್ಲದ, ಒಂಟಿಯಾದರೂ ನಿರ್ಲಿಪ್ತವಾಗಿಯೇ ಉಳಿಯುವ ಶಬ್ದ- smell.

ಹೊನ್ನಾವರ ಸಂತೆಯ ವಾಸನೆಯೇ ಬೇರೆ, ಗಾಮನಗಟ್ಟಿ ಎಪಿಎಂಸಿ ವಾಸನೆಯೇ ಬೇರೆ, ಬ್ರಹ್ಮಾವರದ ಹೂವಿನಂಗಡಿಯ ಮಲ್ಲಿಗೆ ಅಟ್ಟೆಯ ವಾಸನೆಯೇ ಬೇರೆ, ಸಿಗಂದೂರಿನ ದೇವಸ್ಥಾನದ ಮಲ್ಲಿಗೆಯ ವಾಸನೆಯೇ ಬೇರೆ. ಹುಬ್ಬಳ್ಳಿಯ ದುರ್ಗದ ಬೈಲಿನ ವಾಸನೆ ಕೆಆರ್ ಮಾರುಕಟ್ಟೆಗಿಲ್ಲ. ಅಮೆರಿಕದ ಸಿಯಾಟಲ್ಲಿನ ಮೀನು ಮಾರುಕಟ್ಟೆಯ ವಾಸನೆ ಮಂಗಳೂರಿನ ಮೀನು ಮಾರುಕಟ್ಟೆಯಲ್ಲಿ ಬರುವುದಿಲ್ಲ. ಬಾಳೆದಿಂಡು, ಸಗಣಿ, ಕುತ್ತುಂಬ್ರಿ ಸೊಪ್ಪು, ಕರ್ಪೂರ, ಕೊಳೆತ, ಕೊಲೆಯಾದ ಹೂವು, ಗೇರುಬೀಜ, ಜನರ ಬೆವರು ಇವೆಲ್ಲ ವಾಸನೆಗಳ ಮಿಸಾಳ ಭಾಜಿಯಾಗಿ ಅನುಭವಕ್ಕೆ ಬರುವ ನಮ್ಮೂರಿನ ಸಂತೆಗೆ ಅನನ್ಯ ವಾಸನೆ ಇದೆ, ಹೌದು. ಆದರೆ ನಾ ಕಂಡಂತೆ ಎಲ್ಲಾ ದೇಶಗಳ ಊರುಗಳ ಸಂತೆಗಳಿಗೆ ಯಾವುದೋ ಒಂದು ವಾಸನೆ ಸಾಮಾನ್ಯವಾಗಿರುತ್ತದೆ, ಅನುಭವಕ್ಕೆ ಬರುತ್ತದೆ. ಹೂವುಗಳಲ್ಲಿ ಪ್ರತಿಯೊಂದರ ವಾಸನೆ ಅನನ್ಯವಾಗಿದ್ದರೂ ಎಲ್ಲ ಹೂವುಗಳ ವಾಸನೆಯಲ್ಲಿ ಒಮ್ಮತವಿದೆ. ಹಾಗೆಯೇ ಎಲ್ಲ ವಸ್ತುಗಳಿಗೂ.

ಪ್ರತಿ ಊರಿಗೂ ಒಂದೊಂದು ವಾಸನೆಯಿದೆ. ನೀವು ಹಳಿಯಾಳದ ದಾಂಡೇಲಿಗೆ ಹೋದರೆ, ಇಡೀ ಊರಿಗೆ ಊರೇ ಪೇಪರ್ ಮಿಲ್ಲಿನ ವಾಸನೆ ತಳೆದದ್ದು ಅನುಭವಕ್ಕೆ ಬರುತ್ತದೆ. ದಾಂಡೇಲಿಯನ್ನು ಪೇಪರ್ ಮಿಲ್‌ನಲ್ಲಿ ಮರದ ಪುಡಿಯನ್ನು ಪಲ್ಪ್ ಆಗಿಸುವ ಪ್ರಕ್ರಿಯೆಯಲ್ಲಿ ಹುಟ್ಟುವ ರಾಸಾಯನಿಕದ ವಾಸನೆಯಿಂದ ಪ್ರತ್ಯೇಕಿಸಿ ಕಲ್ಪಿಸಿಕೊಳ್ಳುವಂತಿಲ್ಲ. ಕಾಶಿಗೆ, ರಾಮೇಶ್ವರಕ್ಕೆ, ಗೋಕರ್ಣಕ್ಕೆ, ಅಥಣಿಗೆ ಹೀಗೆ ಒಂದೊಂದು ಊರಿಗೆ ಒಂದೊಂದು ವಾಸನೆ. ಯಾವುದೇ ಊರಿರಲಿ, ಅವುಗಳನ್ನು ಅವುಗಳ ಅಸಲಿ ವಾಸನೆಯಿಂದ ಪ್ರತ್ಯೇಕಿಸಿ ನೋಡುವುದು ಅಪರಾಧ. ಫೋಟೋ-ವಿಡಿಯೋದಲ್ಲಿ ಅನುಭವಕ್ಕೆ ಬಾರದ್ದು ಊರಿನ ವಾಸನೆ. ಅದನ್ನು ಮಾತ್ರ ಅಲ್ಲಿಗೆ ಹೋಗಿಯೇ ಅನುಭವಿಸಬೇಕು, ಪರ್ಯಾಯವಿಲ್ಲ. ಬ್ಯಾಂಕಾಕ್, ಫಿಲಿಪೈನ್ಸ್‌ನ ಮನಿಲಾ, ಅಮೆರಿಕದ ಫ್ಲೋರಿಡಾ ದಕ್ಷಿಣ ಭಾಗ ಇವೆಲ್ಲ ಊರಿಗೆ ಊರೇ ಮೀನಿನ ವಾಸನೆಯವು. ಮೈಸೂರಿಗೊಂದು ವಾಸನೆಯಿದೆ, ಕೊಡಗಿನ ವಿರಾಜಪೇಟೆಗೆ ಇನ್ನೊಂದು. ಸುಮಾರು ಹತ್ತು ವರ್ಷದ ಹಿಂದೆ ನೆದರ್ಲ್ಯಾಂಡಿನ ಆಮ್‌ಸ್ಟರ್ಡ್ಯಾಮ್‌ನ ಬೆಳಗೆಂದರೆ ಬೇಕರಿಯ ಬ್ರೆಡ್ಡುಗಳನ್ನು ತಯಾರಿಸುವಾಗಿನ, ಕಾಫಿಯ ಘಮ. ಅದೇ ಆಮ್‌ಸ್ಟರ್ಡ್ಯಾಮ್ ಈಗ ಬೇರೆಯದೇ ವಾಸನೆ ಹೊಡೆಯುತ್ತದೆ. ಧರಿಸಿದ ಬಟ್ಟೆಗೆ ವಾಸನೆ ಹತ್ತುವಷ್ಟು ಗಾಂಜಾ ವಾಸನೆ ಇಡೀ ಊರಿನ ಕಲ್ಚರಲ್ ಶಿಫ್ಟ್- ಸಾಂಸ್ಕೃತಿಕ ಸ್ಥಿತ್ಯಂತರವನ್ನು ಸಾರಿ ಹೇಳುತ್ತದೆ. ಬೆಂಗಳೂರಿಗೆ ಒಂದು ವಾಸನೆಯಿದ್ದರೆ ಅದರೊಳಗೆ ಶಿವಾಜಿನಗರಕ್ಕೆ, ರಸಲ್ ಮಾರ್ಕೆಟಿಗೆ, ಎಸ್‌ಪಿ ರೋಡಿಗೆ ಕೂಡ ಪ್ರತ್ಯೇಕವಾದ ವಾಸನೆಯಿದೆ.

'ವಾಸನೆ' ಶಬ್ದದಂತೆಯೇ ವಿಚಿತ್ರವಾದ ಗ್ರಹಿಕೆ. ನೀವೇ ಸ್ವಲ್ಪ ಅಂತರ್ಮುಖಿಯಾಗಿ ಗ್ರಹಿಸಿ ನೋಡಿ. ನಮ್ಮೆಲ್ಲರ ಬಾಲ್ಯದ ಬಹುತೇಕ ನೆನಪುಗಳು ವಾಸನೆಯ ಜತೆಯಲ್ಲಿ ಹೊಂದಿಕೊಂಡಿರುತ್ತವೆ. ನನ್ನ ಅಜ್ಜ ನಿತ್ಯ ಬೆಳಗ್ಗೆ ಸ್ನಾನ ಮಾಡಿ ಮಡಿಯುಟ್ಟು ಪೂಜೆಗೆ ಗಂಧ ತೇಯುತ್ತಿದ್ದರು. ಕೊರಡಿನ ಮೇಲಿದ್ದ ಗಂಧ ಮತ್ತು ಚಂದನದ ಮಿಶ್ರಣದ ವಾಸನೆ ದೇವರ ಕೋಣೆಯಾಚೆಯೂ ಆವರಿಸುತ್ತಿತ್ತು. ಇವತ್ತಿಗೂ ಪ್ರತಿ ಬಾರಿ ದೇವಸ್ಥಾನದಲ್ಲಿ ಗಂಧ-ಮಂಗಳ ತೆಗೆದುಕೊಳ್ಳುವಾಗಿನ ಕ್ಷಣಾರ್ಧದಲ್ಲಿ ಆ ಘಮ, ಅಜ್ಜನೆದುರು ಕೂತ ನನ್ನೆದುರಿಗಿದ್ದ 360 ಡಿಗ್ರಿ ದೃಶ್ಯ ಪ್ರಕಟಗೊಳಿಸುತ್ತದೆ. ಉತ್ಪ್ರೇಕ್ಷೆಗೆ ಹೇಳುತ್ತಿಲ್ಲ, ಇದೆಲ್ಲ ನಿಮ್ಮ ಅನುಭವಕ್ಕೂ ಬಂದಿರುತ್ತದೆ- ವಾಸನೆಯ ಜತೆಗಿನ ನೆನಪುಗಳೇ ಹಾಗೆ, ಅಷ್ಟು ಉತ್ಕಟ. ಇವತ್ತಿಗೂ ಧೂಪದ ಪರಿಮಳ ಬಾಲ್ಯದ ಮುಸ್ಸಂಜೆಯ ಸೀನ್ ಕಣ್ಣೆದುರು ತರುತ್ತದೆ. ನಮ್ಮೂರ ತೋಟಗಳಲ್ಲಿ ಕೇನೆ ಗಡ್ಡೆ ಎಂಬ ಒಂದು ಕೊಳವೆಯಾಕೃತಿಯ ಹೂವು ಮಳೆಗಾಲದಲ್ಲಿ ಅರಳುತ್ತದೆ. ಅದನ್ನ ಇಂಗ್ಲಿಷಿನಲ್ಲಿ Corpse Flower ಎಂದೇ ಕರೆಯುವುದು. Corpse ಎಂದರೆ ಹೆಣ. ಅಷ್ಟು ಗಬ್ಬು ನಾರುವ ವಾಸನೆಯ ಹೂವು ಅದು. ಅದು ಮೂಡುವುದು ಹೆಚ್ಚು ಕಡಿಮೆ ಗಣೇಶ ಚತುರ್ಥಿಯ ಸಮಯದಲ್ಲಿ. ಆ ಗಬ್ಬು ವಾಸನೆಯ ಹೂವು ಅಮೆಜಾನ್ ಕಾಡಿನಲ್ಲಿ ತಿರುಗುವಾಗ ಕಾಣಿಸಿತು. ಆಗ, ಆ ಕ್ಷಣ ಆ ವಾಸನೆಗೆ ನನಗೆ ನೆನಪಾದದ್ದು ನಮ್ಮೂರಿನ ಗಣೇಶ ಚತುರ್ಥಿಯ ಪೂರ್ಣ ಸನ್ನಿವೇಶ. ಅಪ್ಪನ ಕಬ್ಬಿಣದ ಕಪಾಟಿಗೆ, ಅಂಗಿಗೆ, ಅಮ್ಮನ ಸೀರೆಗೆ, ದೊಡ್ಡಪ್ಪನ ಪಂಚೆಗೆ, ಸೋದರತ್ತೆಯ ಉಸಿರಿಗೆ, ಎಲೆ ಚಿವುಟಿದ ತಮ್ಮನ ಉಗುರಿಗೆ, ಎಲ್ಲದಕ್ಕೂ ಅನನ್ಯ ವಾಸನೆಗಳಿದ್ದವು. ನಮ್ಮ ಮನೆಯಲ್ಲಿ ನೆಂಟರು ಬಂದಾಗ ಬಳಸುವ ಚಾದರ, ಬೆಡ್ ಶೀಟ್‌ಗಳನ್ನು ಚಿಕ್ಕದೊಂದು ಕಪಾಟಿನಲ್ಲಿರಿಸುತ್ತಿದ್ದರು. ಅದರ ಜತೆಯಲ್ಲಿ ಅಗರಬತ್ತಿಯ ಖಾಲಿಯಾದ ಕವರ್ ಅನ್ನು ಒಳಗೆ ಎಸೆದಿಡುವುದಿತ್ತು. ಅವು ತೊಳೆದಿಟ್ಟ ಚಾದರದ ಸೋಪಿನ ವಾಸನೆಯ ಜತೆ ಸೇರಿ ಒಂದು ಅನನ್ಯ ವಾಸನೆಯನ್ನು ಪಡೆಯುತ್ತಿದ್ದವು. ಆ ಚಾದರವನ್ನು ನಾವು ಮಕ್ಕಳು, ಮನೆಯವರೇ ಬಳಸುವ ಸನ್ನಿವೇಶ ಅಪರೂಪಕ್ಕೆ ಬರುತ್ತಿತ್ತು. ಅದೊಂದು ಫ್ರೆಶ್‌ನೆಸ್-ತಾಜಾತನದ ವಾಸನೆ. ಆ ವಾಸನೆ ಇವತ್ತಿಗೂ ತಾಜಾತನದ ಅನುಭವ ಕೊಡಬಲ್ಲದು ಇತ್ಯಾದಿ ಇತ್ಯಾದಿ.. ಅಸಂಖ್ಯ ನೆನಪುಗಳಂತೆಯೇ ಅಸಂಖ್ಯ ವಾಸನೆಗಳು.

ಅಮ್ಮ ಮಾಡಿದ ಉಪ್ಪಿನಕಾಯಿಯ ಘಮ, ಸಾರಿನ ಘಮ ಇತ್ಯಾದಿ ಟಿವಿಗಳಲ್ಲಿ ಜಾಹೀರಾತಾಗುವುದನ್ನು ಕಾಣುತ್ತೇವೆ. ವಾಸನೆ ಎಂದರೆ ನೆನಪುಗಳು, ಏನೇನೋ ಎಮೋಷನ್-ಭಾವಲಹರಿ. ಪುನಃ ಅಘ್ರಾಣಿಸಿದಾಗ ಟೈಮ್ ಟ್ರಾವೆಲ್. ಗತಿಸಿದ ಕಾಲಘಟ್ಟಕ್ಕೆ ಧುತ್ತನೆ ಒಯ್ಯುವ ನೆನಪಿನ ವ್ಯವಸ್ಥೆಯಲ್ಲಿ ವಾಸನೆಗೆ ಒಂದು ವಿಶೇಷ ಜಾಗವಿದೆ. ಹಾಗಾದರೆ, ವಾಸನೆಗೂ ನೆನಪಿಗೂ ಇರುವ ಸಂಬಂಧವನ್ನು ಆಧುನಿಕ ವಿಜ್ಞಾನ ಹೇಗೆ ವಿವರಿಸುತ್ತದೆ? ಅಸಲಿಗೆ ನಾವು ವಾಸನೆಯನ್ನು ಗ್ರಹಿಸುವುದು ಹೇಗೆ?

ನಾವು ಉಸಿರಾಡುವ ಗಾಳಿಯಲ್ಲಿ ಬಹುಪಾಲು ನೈಟ್ರೋಜನ್, ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್ ಮತ್ತು ಆರ್ಗಾನ್. ಈ ನಾಲ್ಕು ಅನಿಲಗಳು ಶೇ. 99ಕ್ಕಿಂತ ಜಾಸ್ತಿ. ಈ ಯಾವ ಅನಿಲಕ್ಕೂ ವಾಸನೆಯಿಲ್ಲ, ವಾಸನೆ ಇಲ್ಲ ಎಂದರೇನು ಅರ್ಥ? ಅವು ಮೂಗಿನೊಳಕ್ಕೆ ಹಾಯುವಾಗ ನಮ್ಮ ಗ್ರಾಹ್ಯ ಅಂಗ ಅವನ್ನು ಗುರುತಿಸುವುದಿಲ್ಲ. ಅವನ್ನು ವಾಸನೆಯಾಗಿ ಗ್ರಹಿಸಬೇಕಾದ ಅವಶ್ಯಕತೆಯಿಲ್ಲದ್ದರಿಂದ ಅವನ್ನು ಮೂಗು-ವ್ಯವಸ್ಥೆ ವಾಸನೆಯಾಗಿ ಗ್ರಹಿಸುವುದನ್ನು ಕಲಿತಿಲ್ಲ. ಈ ನಾಲ್ಕು ಅನಿಲ ಮಿಶ್ರಣ ಖಾಲಿ ಕ್ಯಾನ್ವಾಸ್ ಇದ್ದಂತೆ. ಇವು ಬಿಟ್ಟು ಉಳಿದ ಯಾವುದೇ ರಾಸಾಯನಿಕಗಳು ವಾಸನೆಗಳಾಗಿ ಗ್ರಹಿಸಲ್ಪಡುವವು. ಆ ಕ್ಯಾನ್ವಾಸಿನ ಮೇಲೆ ವ್ಯಕ್ತವಾಗುವ ಬಣ್ಣಗಳಂತೆ. ಅದೇ ಕಾರಣಕ್ಕೆ ಸಂತೆಯಲ್ಲಿ ನಡೆಯುವುದೆಂದರೆ ವಾಸನೆಗಳ ಸಂಗೀತ ಕಛೇರಿಯಂಥ ಅನುಭವವಾಗುವುದು. ಊರಿಗೆ ಹೋದಾಗಲೆಲ್ಲ ಕುಮಟಾದ ಸಂತೆ ಮತ್ತು ಬೆಂಗಳೂರಿನ ಗಾಂಧಿಬಜಾರಿನಲ್ಲಿ ತಿರುಗಾಡದೇ ಇರಲಾಗುವುದಿಲ್ಲ. ಏಕೆಂದರೆ ಗ್ರಂಧಿಗೆ ಅಂಗಡಿಗಳ ಮಧ್ಯೆ ನಡೆಯುವಾಗಿನ ವಾಸನೆಯ ಅನುಭವ ಅಮೆರಿಕದ ಬದುಕಿನಲ್ಲಿ ಸಿಗುವುದಿಲ್ಲ.

ವಾಸನೆಯ ಗ್ರಹಿಕೆ ವಿಕಸನದಲ್ಲಿ ಎಲ್ಲ ಪ್ರಾಣಿಗಳಿಗೂ ಅತ್ಯಂತ ಮಹತ್ವದ್ದು. ನಮ್ಮ ಪೂರ್ವಜರಿಗೆ ಕೂಡ. ಅವರು ಬದುಕಿದ್ದ ಜಗತ್ತು ಅಂಥದ್ದಾಗಿತ್ತು. ಲಕ್ಷ ವರ್ಷ ಹಿಂದಿನ ಜಗತ್ತು- ಪ್ರಾಣಿಗಳಿಂದಾಗಿ, ವಿಷಕಾರಿ ಸಸ್ಯಗಳಿಂದಾಗಿ ಅಪಾಯ ಎಲ್ಲೆಡೆ. ಕಣ್ಣಿಗೆ ಕಾಣದೇ, ಅಡಗಿ ಕುಳಿತ ಭಕ್ಷಕ ಪ್ರಾಣಿಯ ಇರುವನ್ನು ಗ್ರಹಿಸುವುದು ಸಾವು ಬದುಕಿನ ವಿಷಯವಾಗಿತ್ತು. ವಾಸನೆಗಳ ಚಿಕ್ಕ ವ್ಯತ್ಯಾಸ ಗ್ರಹಿಸುವುದು ಕೂಡ ತೀರಾ ಅವಶ್ಯವಿತ್ತು. ಉದಾಹರಣೆಗೆ, ನಾಗರಹಾವಿಗೊಂದು ವಾಸನೆಯಿದೆ, ಅದರ ಇರುವು ಅನುಭವಕ್ಕೆ ಬರುತ್ತದೆ. ಅದು ಹೆಚ್ಚು ಕಡಿಮೆ ಭತ್ತ ಮತ್ತು ಅಕ್ಕಿಗೊಂದು ವಾಸನೆಗೆ ಹೋಲುವಂಥದ್ದು. ಸಣ್ಣಕ್ಕಿಯ ವಾಸನೆ, ನಾಗರಹಾವಿನ ವಾಸನೆ ಅವೆರಡೂ ಒಂದೇ ವಾಸನೆ. ಅಕ್ಕಿಯ, ಹುಲ್ಲಿನ ವಾಸನೆ ಬಂದು ಅಲ್ಲೆಲ್ಲೂ ಭತ್ತದ ಕುತ್ರಿ(ರಾಶಿ) ಇಲ್ಲವೆಂದರೆ ಅಲ್ಲಿ ನಾಗರಹಾವಿದೆ ಎಂದು ಎಚ್ಚರವಾಗಬಹುದು. ಆದರೆ ಅಕ್ಕಿಯ ರಾಶಿಯ ಪಕ್ಕದಲ್ಲಿ ನಾಗರಹಾವಿದ್ದರೆ ಆ ವ್ಯತ್ಯಾಸವನ್ನು ಕೂಡ ಗ್ರಹಿಸಲು ಸಾಧ್ಯವಾಗುತ್ತದೆ. ಇದು ಸಾವು ಬದುಕಿನ ಪ್ರಶ್ನೆಯ ಉದಾಹರಣೆ. ಸಾಕಿದ ನಾಯಿ, ಆಕಳು, ಕುರಿ, ಮೇಕೆಯ ಮಂದೆಯ ನಡುವೆ ಹುಲಿಯ ವಾಸನೆಯನ್ನು ಪ್ರತ್ಯೇಕವಾಗಿ ಗ್ರಹಿಸುವುದು ಅವಶ್ಯವಿತ್ತು. ನಾವು ಎಷ್ಟು ರೀತಿಯ ವಾಸನೆಯನ್ನು ಗ್ರಹಿಸಬಲ್ಲೆವು ಊಹಿಸಿ? ಆರೋಗ್ಯಕರ ಕಿವಿಗೆ 34 ಸಾವಿರ ಟೋನ್- ಧ್ವನಿಗಳನ್ನು ಕೇಳಿಸಿಕೊಳ್ಳುವ ಶಕ್ತಿಯಿದೆ. ಆರೋಗ್ಯಕರ ಕಣ್ಣು ಸುಮಾರು ಹತ್ತು ಲಕ್ಷದಷ್ಟು ಬಣ್ಣವನ್ನು ಪ್ರತ್ಯೇಕಿಸಿ ಗ್ರಹಿಸಬಲ್ಲದು. ಇನ್ನು ವಾಸನೆ? ಒಂದು ಟ್ರಿಲಿಯನ್- ಹತ್ತರ ಹದಿನೆಂಟನೇ ಘಾತ- ಅಷ್ಟು ವೈವಿಧ್ಯದ ವಾಸನೆಯನ್ನು ಗ್ರಹಿಸುವ ಸಾಮರ್ಥ್ಯ ನಮ್ಮ ಇಂದ್ರಿಯ ವ್ಯವಸ್ಥೆಗೆ ಇದೆ. ಇದು ಉಳಿದ ಯಾವ ಇಂದ್ರಿಯದ ವ್ಯಾಪ್ತಿಗೂ ಹೋಲಿಸುವಂತೆಯೇ ಇಲ್ಲ.

ಮೂಗಿನ ರಚನೆಯನ್ನ ಉಸಿರೆಳೆಯುವಾಗ ಗ್ರಹಿಸಿ. ಪ್ರತಿ ಬಾರಿ ಶ್ವಾಸ, ಗಾಳಿ ಆರಾಮಾಗಿ ಶ್ವಾಸಕೋಶಕ್ಕೆ ಹೋಗಬೇಕು. ಆದರೆ ಅಲ್ಲಿ ಎಷ್ಟು ಬೇಕೋ ಅಷ್ಟು ತಿರುವೂ ಬೇಕು. ಏಕೆಂದರೆ ಆ ತಿರುವುಗಳಲ್ಲಿಯೇ ಟ್ರಿಲಿಯನ್ ವಾಸನೆಗಳನ್ನು ಗ್ರಹಿಸುವ ಕೋಶಗಳಿರುವುದು. ಅಲ್ಲಿ ಈ ವಾಸನೆಯೆಂಬ ರಾಸಾಯನಿಕ ಹೋಗಿ, ತಾಗಿ, ರಾಸಾಯನಿಕ ಕ್ರಿಯೆಯಾಗಿ, ಆ ಗ್ರಹಿಕೆ ಮಿದುಳಿಗೆ ವಿದ್ಯುತ್ತಾಗಿ ರವಾನೆಯಾಗಿ, ಅದು ಮಿದುಳಿನಲ್ಲಿ ಸಂಸ್ಕರಿಸಿ ಇಂಥದ್ದೇ ವಾಸನೆ ಎಂದು ತಿಳಿಯುವುದು. ಇದೆಲ್ಲವೂ ಕ್ಷಣಮಾತ್ರದಲ್ಲಿ ಆಗಬೇಕು. ಅಷ್ಟರೊಳಗೆ ಗಾಳಿಯಲ್ಲಿ ಎಲ್ಲಿಯದೋ ಕೊಳೆತ ವಾಸನೆ, ಪಕ್ಕದ ಮನೆಯ ದೋಸೆಯ ವಾಸನೆ ಇತ್ಯಾದಿ ಕ್ಷಣಕ್ಷಣಕ್ಕೆ ಒಂದೊಂದು ವಾಸನೆ. ಅವುಗಳನ್ನೆಲ್ಲ ಪ್ರತ್ಯೇಕಿಸಿ ಒಂದಾದ ಮೇಲೊಂದರಂತೆ ಮತ್ತು ಸಮಾನಾಂತರವಾಗಿ ಸಂಸ್ಕರಿಸುತ್ತಲೇ ಇರಬೇಕು. ಅಬ್ಬಾ, ನಮಗರಿವಿಲ್ಲದಂತೆ ಅದೆಷ್ಟೋ ಕೋಟಿ ಕೆಲಸಗಳು ಒಂದು ಉಸಿರು ಒಳಗೆಳೆದು ಹೊರಬರುವುದರೊಳಗೆ ಸಂಭವಿಸಬೇಕು. ನಿರಂತರ ಪ್ರತಿಕ್ಷಣ ನಡೆಯುತ್ತಲೇ ಇರಬೇಕು. ಅದು ಮೂಗು-ವಾಸನೇಂದ್ರಿಯ.

ಹುಲಿ ಮೊದಲಾದ ಪ್ರಾಣಿಗಳು ಮೂತ್ರ ಸಿಂಪಡಿಸುವುದು ಇತ್ಯಾದಿಯಿಂದ ತಮ್ಮ ಸರಹದ್ದನ್ನು ಗುರುತುಮಾಡುವುದು ಗೊತ್ತಿರುತ್ತದೆ. ಅಂತೆಯೇ ಮನುಷ್ಯನ ಸರಹದ್ದಿಗೂ, ವಾಸನೆಗೂ ಸಂಬಂಧವಿದೆ. ನಮ್ಮ ಮನೆ, ಬಟ್ಟೆ, ಕಾರು ಇತ್ಯಾದಿಯ ಅನನ್ಯ ವಾಸನೆ ನಮ್ಮ ಇರುವಿನ ಭಾಗವೇ ಆಗಿದೆ. ಅಂತೆಯೇ ವಾಸನೆ ಸಾಂಸ್ಕೃತಿಕವೂ ಹೌದು. ಈಗ ಕೆಲವು ವರ್ಷದ ಹಿಂದೆ ಅಮೆರಿಕದಲ್ಲಿ ಮನೆ ಖರೀದಿಸುವಾಗ ಈಗಾಗಲೇ ವಾಸಿಸುತ್ತಿದ್ದ, ಮಾರಾಟಕ್ಕಿದ್ದ ಮನೆಗಳನ್ನು ಸಂದರ್ಶಿಸುತ್ತಿದ್ದೆವು. ಹಾಗೆ ನೋಡುವಾಗ ಆ ಮನೆಯ ಮಾಲೀಕ ಅಲ್ಲಿ ಇರುವಂತಿಲ್ಲ, ಸಾಮಾನ್ಯವಾಗಿ ಮಾರಾಟಕ್ಕಿರುವ ಮನೆಯಲ್ಲಿ ಯಾರು ವಾಸಿಸುತ್ತಿದ್ದಾರೆ ಎಂದೇ ತಿಳಿಯದ ರೀತಿಯಲ್ಲಿ ರಿಯಲ್ ಎಸ್ಟೇಟ್ ಏಜೆಂಟುಗಳು ಮನೆಯನ್ನು ಶೃಂಗರಿಸಿಟ್ಟಿರುತ್ತಾರೆ. ಆದರೆ ಅದೇನೇ ಮಾಡಿದರೂ ಮನೆಯ ವಾಸನೆ ಬದಲಿಸಲಿಕ್ಕೆ ಅಷ್ಟು ಸುಲಭದಲ್ಲಿ ಸಾಧ್ಯವಾಗುವುದಿಲ್ಲ. ಈ ಮನೆಯಲ್ಲಿ, ಕೊರಿಯನ್, ಇಂಡಿಯನ್, ಆಫ್ರಿಕನ್ ಹೀಗೆ ಇಂಥ ಸಂಸ್ಕೃತಿಯಲ್ಲಿರುವವರೇ ಇದ್ದಾರೆ ಎಂಬುದು ಮುಂಬಾಗಿಲು ದಾಟುವಾಗಲೇ ವಾಸನೆಯಿಂದ ತಿಳಿದುಬಿಡುತ್ತಿತ್ತು. ಮೃಗಾಲಯದ ಹುಲಿಯ ಎದುರಿಗಿನ ಬೋನಿಗೂ ಹಕ್ಕಿಗಳ ಬೋನಿಗೂ ಇರುವ ವ್ಯತ್ಯಾಸದಂತೆ. ಬಹಳ ಹಿಂದೆ ಅಮೆರಿಕ ಮೊದಲಾದ ಹೊರದೇಶಗಳಿಗೆ ಬರುವ ಭಾರತೀಯರು ತಮ್ಮ ಸಾಂಬಾರ ಪದಾರ್ಥವನ್ನು ಅಡುಗೆಗೆ ಬಳಸುವಾಗ ಹೆದರುತ್ತಿದ್ದರಂತೆ. ಅವರಿದ್ದದ್ದು ಅಮೆರಿಕನ್ನರ ಮನೆಗಳ ನಡುವೆ. ಅವರ ಅಡುಗೆಯ ವಾಸನೆ ಪ್ರತ್ಯೇಕವಾಗಿ ರಸ್ತೆಗಳಲ್ಲಿ ಹರಡಿಕೊಳ್ಳುತ್ತಿತ್ತು. ಅದು ಅವರನ್ನು ಸಾಮಾಜಿಕವಾಗಿ ಪ್ರತ್ಯೇಕಿಸುತ್ತಿತ್ತು, ಅಸಹನೆಗೂ ಕಾರಣವಾಗುತ್ತಿತ್ತು. ಒಟ್ಟಾರೆ ವಾಸನೆ ಎಂಬುದು ಸಂಸ್ಕೃತಿಯೂ, ಗುರುತೂ ಹೌದು.

ಈಗ 3 ವರ್ಷದ ಹಿಂದಿನ ಆ ದಿನ ನನಗಿನ್ನೂ ನೆನಪಿದೆ. ಅದೊಂದು ಮುಂಜಾನೆ ಎದ್ದು ಟೂತ್ ಬ್ರಷ್‌ಗೆ ಪೇಸ್ಟ್ ಹಚ್ಚಿ ಹಲ್ಲಿಗಿಟ್ಟುಕೊಳ್ಳುತ್ತಿದ್ದೇನೆ, ಯಾಕೋ ವಿಚಿತ್ರವೆನಿಸತೊಡಗಿತು. ಪೇಸ್ಟಿಗೆ 'ಅಹಾ-ಹಾಹಾ' ಎಂಬ ಯಾವುದೇ ವಾಸನೆ ತಿಳಿಯುತ್ತಲೇ ಇಲ್ಲ, ಆ ಕ್ಷಣ ಸಿಡಿಲು ಬಡಿದಂತಾಯಿತು. ತಕ್ಷಣ ಹಿತ್ತಲಿಗೆ ಓಡಿ, ಲಿಂಬು ಗಿಡದ ಎಲೆಯನ್ನು ಚಿವುಟಿ ಮೂಸಿ ನೋಡಿದೆ. ಪಕ್ಕದಲ್ಲಿ ಮಜ್ಜಿಗೆ ಹುಲ್ಲಿತ್ತು, ಕುತ್ತುಂಬರಿ ಸೊಪ್ಪಿತ್ತು. ಊಹುಂ, ಯಾವುದಕ್ಕೂ ವಾಸನೆಯೇ ಇಲ್ಲ. ಮನೆಯೊಳಕ್ಕೆ ಬಂದು ಒಳ್ಳೆಯ ಸೆಂಟ್ ಅನ್ನು ಗಾಳಿಯಲ್ಲಿ ಹಾರಿಸಿ ಮೂಸಿ ನೋಡಿದೆ. ಬರ್ಬರಿ ಸೆಂಟ್‌ಗೆ ವಾಸನೆಯೇ ಇಲ್ಲ. ನನಗಂತೂ ಆ ಕ್ಷಣ ಕೋವಿಡ್ ಬಂದಿದೆ ಎಂಬುದಕ್ಕಿಂತ ದೊಡ್ಡ ಆಘಾತವಾಗಿದ್ದು ವಾಸನೆಯನ್ನು ಕಳೆದುಕೊಂಡ ಸ್ಥಿತಿಯಿಂದಾಗಿ. ಆ ದಿನ ಏನಿಲ್ಲವೆಂದರೂ ಸುಮಾರು ನೂರು ವಸ್ತುಗಳನ್ನು ಮೂಸಿರಬೇಕು. ನೆಗಡಿಯಾದಾಗ ವಾಸನೆ ಮಂದವಾಗುವ ಸ್ಥಿತಿಯೇ ಬೇರೆ- ಸಂಪೂರ್ಣ ವಾಸನೆಯೇ ತಿಳಿಯದ ಸ್ಥಿತಿಯೇ ಬೇರೆ. ಜೀವಮಾನವಿಡೀ ಆಗದ ಅನುಭವ ಅದು. ಅನುಭವಿಸಿದರೆ ನಿಮಗೆ ಗೊತ್ತಿರುತ್ತದೆ. ನಂತರದ ಕೋವಿಡ್ ಸೋಂಕಿನಿಂದಾಗಿ ಕಳೆದುಕೊಂಡ ವಾಸನಾಶಕ್ತಿ ಮರಳುವಲ್ಲಿಯವರೆಗೆ ಕಂಡಕಂಡದ್ದನ್ನೆಲ್ಲಾ ಮೂಸುವುದೇ ಕಾಯಕವಾಗಿಬಿಟ್ಟಿತ್ತು. ಅಯ್ಯೋ ನಗಬೇಡಿ. ತಮಾಷೆಗಳಲ್ಲ, ಇಡೀ ಜಗತ್ತಿನ ಸಕಲ ಚರಾಚರ ವಸ್ತುಗಳಿಗೆ ಯಾವುದೇ ವಾಸನೆ ಇಲ್ಲದಿರುವ ವಿಚಿತ್ರ ಲೋಕವೊಂದರ ಅನುಭವವೇ ಇಂದಿಗೂ ನನ್ನ ಕೋವಿಡ್ ನೆನಪುಗಳು.

ಆ ಸಮಯದಲ್ಲಿ ನನ್ನನ್ನು ಅತ್ಯಂತ ಕಾಡಿದ್ದು ವಾಸನೆಯನ್ನು ಗ್ರಹಿಸುವ ಸಾಮರ್ಥ್ಯವನ್ನು ಕಳೆದುಕೊಂಡದ್ದು ಕೂಡ ಅಲ್ಲ. ಬದಲಿಗೆ ನನ್ನ ಸುತ್ತಲಿನ ಎಲ್ಲ ವಸ್ತುಗಳು ಏಕಾಏಕಿ ನಿರ್ಭಾವುಕವಾಗಿಬಿಟ್ಟಿದ್ದವು. ಅಜ್ಜಿ ಮಾಡಿ ಕಳುಹಿಸಿದ ಅಪ್ಪೆ ಮಿಡಿಯ ಉಪ್ಪಿನಕಾಯಿ ಮೂಸಿದರೆ ಅಜ್ಜಿ ಮನೆ ನೆನಪಾಗುವುದು ಬಿಡಿ, ಕನಿಷ್ಠ ಸೌಜನ್ಯಕ್ಕೆ ಬಾಯಿನೀರು ಕೂಡ ಬರುತ್ತಿಲ್ಲ. ಏನನ್ನು ಮೂಸಿದರೂ ಅದೇ ನಿರ್ಭಾವುಕ ಕೃತಘ್ನ ಭಾವ. ಅಪಾಯದ ಸ್ಥಿತಿ ಕೂಡ ಹೌದು. ಮನೆಯ ಯಾವುದೇ ಮಿಥೇನ್ ಲೀಕ್ ಕೂಡ ಗ್ರಹಿಕೆಗೆ ಬರುತ್ತಿಲ್ಲ! ದೇವರೇ, ಕಿವುಡನನ್ನಾದರೂ ಮಾಡು, ಕುರುಡನನ್ನಾದರೂ ಮಾಡು, ಮೂಗನ್ನು ಮಾತ್ರ ಇನ್ಯಾವತ್ತೂ ಕಿತ್ತುಕೊಳ್ಳಬೇಡಪ್ಪ ಎಂದು ಅನಿಸಿದ್ದು ಸುಳ್ಳಲ್ಲ!

ಮೂಗಿಗೆ ಬಿದ್ದ ವಾಸನೆ, ರಾಸಾಯನಿಕ ಸಂಸ್ಕರಣೆಯಾಗುವುದು ಮಿದುಳಿನ Amygdala Hippocampus ಎಂಬ ಭಾಗದಲ್ಲಿ. ನೆನಪುಗಳು ಮತ್ತು ಭಾವನೆಗಳು ಸಂಸ್ಕರಣೆಯಾಗುವುದು ಕೂಡ ಮಿದುಳಿನ ಇದೇ ಭಾಗದಲ್ಲಿ. ಎಂದರೆ ನೆನಪು, ಭಾವನೆ ಮತ್ತು ವಾಸನೆ ಇದು ಮೂರೂ ಏಕಕಾಲದಲ್ಲಿ ಒಂದೇ ಕಡೆ ಸಂಸ್ಕಾರವಾಗುವುದು. ಇದರರ್ಥ ನಾವೇನು ವಾಸನೆ ಮೂಸುತ್ತೇವೆಯೋ ಅದು ಆ ಸನ್ನಿವೇಶ, ವಸ್ತುವನ್ನು ಗ್ರಹಿಸುವಲ್ಲಿ ಬಹುಮುಖ್ಯವಾದದ್ದು, ಜತೆಯಲ್ಲಿಯೇ ನಡೆಯುವುದು ಎಂದಾಯಿತು. What we smell is what we feel ಎಂಬ ಮಾತಿದೆ. ಅದು ಹೀಗೂ ಸತ್ಯ. ಅಸಂಖ್ಯ ವಾಸನೆಗಳಿಗೆ ದುರ್ವಾಸನೆ, ಸುವಾಸನೆ ಇತ್ಯಾದಿಯ ಆಚೆಗೆ ಈ ಮಹತ್ವವಿದೆ.

ಬದುಕುತ್ತಲೇ ವಾಸನೆಗಳನ್ನು ಜಾಗ್ರತವಾಗಿ ಅನುಭವಿಸುವುದು ಮಜಕೂರಿನ ವಿಷಯ. ವಾಸನೆಯ ನಿರಂತರ ಅರಿವಿನ ಜಾಗ್ರತೆ ಇದ್ದರೆ ನೆನಪುಗಳನ್ನು ಯಾವಾಗ ಬೇಕಾದರೂ ಸರಾಗವಾಗಿ ಕರೆದುಬಿಡಬಹುದು. ನಮ್ಮೆಲ್ಲರ ದೇಹ, ಉಸಿರು, ಬಟ್ಟೆ, ಸೋಪು, ಬಳಸುವ ಸೆಂಟು, ಮನೆ ಹೀಗೆ ವಾಸನೆಗಳು ನಮ್ಮ ಇರುವಿನ ಸಾಕ್ಷ್ಯಗಳು, ಮುಂದೊಂದು ದಿನ ಇನ್ನೊಬ್ಬರ ನೆನಪಾಗಿ ಉಳಿಯುವವು.

ಬಾನಿನಲ್ಲೊಂದು ಉಪಗ್ರಹ ನಿರ್ವಹಣೆ ಅಂಗಡಿ!



ರವೀ ಸಜಂಗದ್ದೆ
ವಿಶ್ಲೇಷಣೆ
vveditoped@gmail.com

ಇಸ್ರೋ ಎಂದೇ ಜನಜನಿತವಾಗಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ನಮ್ಮ ದೇಶದ ಹೆಮ್ಮೆಯ ಅಸ್ತಿತ್ವಗಳಲ್ಲೊಂದು. ಭಾರತ ಸರಕಾರದ ಅಧೀನದಲ್ಲಿರುವ ಬಾಹ್ಯಾಕಾಶ ಇಲಾಖೆಯ ಪ್ರಧಾನ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗವಾಗಿ ಕಾರ್ಯನಿರ್ವಹಿಸುವ 'ಇಸ್ರೋ' ತನ್ನ ವಿಭಿನ್ನ ಚಟುವಟಿಕೆಗಳಿಂದಾಗಿ ಎಲ್ಲರ ಮನವನ್ನು ಗೆದ್ದಿದೆ. ಬಾಹ್ಯಾಕಾಶ ಆಧರಿತ ಕಾರ್ಯಯೋಜನೆಗಳು, ಸಂಶೋಧನೆ ಮತ್ತು ಪರಿಶೋಧನೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಾಹ್ಯಾಕಾಶ ವಿಭಾಗದಲ್ಲಿ ಪರಸ್ಪರ ಸಹಾಯ-ಸಹಕಾರ-ತಂತ್ರಜ್ಞಾನ ಅಭಿವೃದ್ಧಿಗಳಲ್ಲಿ ಇಸ್ರೋ ಸಕ್ರಿಯವಾಗಿದ್ದುಕೊಂಡು ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅಗ್ರಮಾನ್ಯವೆನಿಸಿಕೊಂಡಿದೆ. ವಿವಿಧ ಉದ್ದೇಶಗಳಿಗಾಗಿ ಉಡಾವಣೆಗೊಂಡ ಉಪಗ್ರಹಗಳ ನಿಯಂತ್ರಣ, ನಿರ್ವಹಣೆ, ಸಂವಹನ, ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆಯಲ್ಲಿ ಇಸ್ರೋ ತೊಡಗಿಸಿಕೊಂಡಿದೆ.

1962ರಲ್ಲಿ 'ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಸಂಶೋಧನಾ ಸಮಿತಿ' ಹೆಸರಲ್ಲಿ ಸ್ಥಾಪನೆಯಾದ ಈ ಸಂಸ್ಥೆ 1969ರಲ್ಲಿ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ' (ಇಸ್ರೋ) ಎಂದು ಮರುನಾಮಕರಣಗೊಂಡಿತು. ಖಗೋಳಶಾಸ್ತ್ರ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದ ಇತರ ಹಲವು ಸಹ-ಸಂಸ್ಥೆಗಳು ಇಸ್ರೋ ವ್ಯಾಪ್ತಿಗೆ ಒಳಪಟ್ಟಿವೆ.

ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಇಸ್ರೋ ಮಾಡುತ್ತ ಬಂದಿರುವ ಸಾಧನೆ, ದೇಶದ ಸರ್ವತೋಮುಖ ಅಭಿವೃದ್ಧಿಗೆ ನೀಡಿದ ಮತ್ತು ನೀಡುತ್ತಿರುವ ಕೊಡುಗೆ ಅಪಾರ. 1975ರಲ್ಲಿ ಆರ್ಯಭಟ, 1979ರಲ್ಲಿ ಭಾಸ್ಕರ-1, 1980ರಲ್ಲಿ ರೋಹಿಣಿ, 1982ರಿಂದ ತೊಡಗಿ 'ಇನ್ಸಾಟ್' ಸರಣಿಯ ಹಲವು ಯಶಸ್ವಿ ಉಪಗ್ರಹಗಳ ಮತ್ತು 1993ರಿಂದ ಹಲವು ಪಿಎಸ್‌ಎಲ್‌ವಿ ರಾಕೆಟ್ಟುಗಳ ಯಶಸ್ವಿ ಉಡಾವಣೆಯ ಮೂಲಕ, 2004ರಲ್ಲಿ 'ಎಡ್ಯುಸ್ಯಾಟ್' ಉಪಗ್ರಹದ ಉಡಾವಣೆಯೊಂದಿಗೆ ಇಸ್ರೋ ತನ್ನ ಸಾಮರ್ಥ್ಯವನ್ನು ಜಗತ್ತಿಗೇ ಸಾರಿದೆ. 2013ರಲ್ಲಿ ಮಹತ್ವಾಕಾಂಕ್ಷೆಯ ಮಂಗಳ ಕಕ್ಷಾಯಾನದ ನೌಕೆಯನ್ನು ಶ್ರೀಹರಿಕೋಟಾದಿಂದ ಯಶಸ್ವಿಯಾಗಿ ಅಂತರಿಕ್ಷಕ್ಕೆ ಕಳುಹಿಸಿದ ಇಸ್ರೋ, 'ಚಂದ್ರಯಾನ-3' ಯೋಜನೆಯ ಮೂಲಕ ಚಂದ್ರನ ದಕ್ಷಿಣದ ಅಂಗಳದಲ್ಲಿಳಿದ ಪ್ರಪಂಚದ ಮೊಟ್ಟಮೊದಲ ದೇಶ ಎಂಬ ಹೆಗ್ಗಳಿಕೆಯು ಭಾರತಕ್ಕೆ ದಕ್ಕುವುದಕ್ಕೆ ಕಾರಣವಾಯಿತು. ನಂತರದಲ್ಲಿ, ಸೂರ್ಯನ ಕುರಿತಾದ ಅಧ್ಯಯನದ ಉದ್ದೇಶದಿಂದ 'ಆದಿತ್ಯ ಎಲ್-1' ನೌಕೆಯನ್ನು ಅದು ಉಡಾವಣೆ ಮಾಡಿತು. ಇವಿಷ್ಟು ಮಹತ್ತರ ಯೋಜನೆಗಳ ನಂತರ ಇಸ್ರೋ ಈಗ ಸ್ಥಾಪಿಸಿರುವ ಮತ್ತೊಂದು ಮೈಲುಗಲ್ಲಿನ ವಿವರಗಳನ್ನು ಅವಲೋಕಿಸೋಣ.

ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಸೇರಿದಂತೆ ವಿವಿಧ ರಾಷ್ಟ್ರಗಳು ಸೇರಿಕೊಂಡು ನಿರ್ಮಿಸಿರುವ 'ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ' (ಇಂಟರ್‌ನ್ಯಾಷನಲ್ ಸ್ಪೇಸ್ ಸ್ಟೇಷನ್- ಐಎಸ್‌ಎಸ್) ಮಾದರಿಯಲ್ಲಿ 'ಭಾರತೀಯ ಬಾಹ್ಯಾಕಾಶ ನಿಲ್ದಾಣ'ದ ನಿರ್ಮಾಣಕ್ಕೆ ಇಸ್ರೋ ಮುಂದಾಗಿದ್ದು ಕಾರ್ಯಯೋಜನೆ ಪ್ರಗತಿಯಲ್ಲಿದೆ. 'ಸ್ಪೇಸ್ ಡಾಕಿಂಗ್ ಎಕ್ಸ್‌ಪರಿಮೆಂಟ್' ಯಾನೆ 'ಸ್ಪಾಡೆಕ್ಸ್' ಹೆಸರಿನ ಯೋಜನೆಯಿದು. ಸ್ಪಾಡೆಕ್ಸ್ ನಿರ್ಮಾಣ ಕ್ಷೇತ್ರದಲ್ಲಿ ಅಮೆರಿಕ, ರಷ್ಯಾ ಮತ್ತು ಚೀನಾ ಮಾತ್ರ ಇದ್ದು, ಭಾರತವು ಇಂಥ ಸಾಧನೆ ಮಾಡಿದ ನಾಲ್ಕನೆಯ ರಾಷ್ಟ್ರವೆನಿಸಿದೆ.

ಭಾರತದ ಈ 'ಸ್ಪಾಡೆಕ್ಸ್' ಯೋಜನೆಯಲ್ಲಿ ತಲಾ 220 ಕೆ.ಜಿ. ತೂಕದ 'ಚೇಸರ್' (ಎಸ್‌ಡಿಎಕ್ಸ್-01) ಮತ್ತು 'ಟಾರ್ಗೆಟ್' (ಎಸ್‌ಡಿಎಕ್ಸ್-02) ಎಂಬ ಎರಡು ಗಗನನೌಕೆಗಳಿವೆ. ಈ ನೌಕೆಗಳನ್ನು 'ಪಿಎಸ್‌ಎಲ್‌ವಿ- ಸಿ 60' ಹೆಸರಿನ ಬಲು ಶಕ್ತಿಶಾಲಿ ರಾಕೆಟ್ ಹೊತ್ತೊಯ್ದು, ಬಳಿಕ ಭೂಮಿಯಿಂದ 470 ಕಿ.ಮೀ. ದೂರದಲ್ಲಿನ ವೃತ್ತಾಕಾರದ ಕಕ್ಷೆಗೆ ಪ್ರತ್ಯೇಕವಾಗಿರುವ 55 ಡಿಗ್ರಿಯ ಕಕ್ಷೆಯಲ್ಲಿ ಯಶಸ್ವಿಯಾಗಿ ಬಿಡುವುದು ಈ ಯೋಜನೆಯ ಹೂರಣ.



ಇದು 'ಭಾರತೀಯ ಬಾಹ್ಯಾಕಾಶ ನಿಲ್ದಾಣ'ದ ನಿರ್ಮಾಣ ಯೋಜನೆಯ ಮೊದಲ-ಮಹತ್ವದ ಹೆಜ್ಜೆ. ಅಂತರಿಕ್ಷ ನಿಲ್ದಾಣಕ್ಕೆ ಅಗತ್ಯವಾದ ಉಪಕರಣಗಳನ್ನು ಈ ಗಗನನೌಕೆಗಳು, ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಉಡ್ಡಯನ ಕೇಂದ್ರದಿಂದ ಡಿಸೆಂಬರ್ 30ರಂದು, ಭಾರತೀಯ ಕಾಲಮಾನ ರಾತ್ರಿ 9.58ಕ್ಕೆ ಹೊತ್ತು ಸಾಗಿದವು. ಸ್ಪಾಡೆಕ್ಸ್ ಯೋಜನೆಯಲ್ಲಿ, ಭಾರತದ ಸ್ವಂತ ಮತ್ತು ಸ್ವತಂತ್ರ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸಿ, ವಿವಿಧ ಉಪಗ್ರಹಗಳ ಜತೆ ಸಂಪರ್ಕ ಸಾಧಿಸುವ ಮಹದೋದ್ದೇಶ ಇಸ್ರೋ ಸಂಸ್ಥೆಯದ್ದು. ಆ ನಿಟ್ಟಿನಲ್ಲಿ ಈ ಮೊದಲ ಯಶಸ್ವಿ ಉಡ್ಡಯನ ಪ್ರಮುಖ ಪ್ರಗತಿ ಸಾಧಿಸಿದೆ.

'ಡಾಕಿಂಗ್' ಎಂದರೆ ತಂಗುದಾಣ ಅಥವಾ ನಿಲ್ಲುವ ಜಾಗ ಎಂದರ್ಥ. ಉಡಾವಣೆಯಾದ ಐದನೆಯ ದಿನದಿಂದ ಎರಡೂ ಗಗನನೌಕೆಗಳನ್ನು ಹತ್ತಿರಕ್ಕೆ ತರಲಾಗುತ್ತದೆ. ಅವುಗಳ ಸ್ಥಿತಿಗತಿ ಅವಲೋಕಿಸಿ ನಿಗದಿತ ದಿನದಂದು ಡಾಕಿಂಗ್ ಮಾಡಲಾಗುತ್ತದೆ. ತಮ್ಮ ನಡುವಿನ ಅಂತರ ಕಡಿಮೆಯಾಗಿ, ಗಂಟೆಗೆ 28,000 ಕಿ.ಮೀ. ವೇಗದಲ್ಲಿ ಚಲಿಸುವ ಈ ಎರಡು ಉಪಗ್ರಹಗಳು ಪರಸ್ಪರ ಸಂವಹನ ನಡೆಸಿ, ಸಮನ್ವಯದಿಂದ ಕಾರ್ಯನಿರ್ವಹಿಸಲಿವೆ. ಇವುಗಳ ನಡುವಿನ ಅಂತರವು ಹಂತಹಂತವಾಗಿ 5 ಕಿ.ಮೀ.ಗಿಂತ ಕಡಿಮೆಯಾಗುವ ಹಂತದ ಹೆಸರು 'ಹೋಲ್ಡಿಂಗ್ ಪಾಯಿಂಟ್'. ಕ್ರಮೇಣ ಹತ್ತಿರ ಬಂದು, ಒಂದು ಉಪಗ್ರಹದ ಯಾಂತ್ರಿಕ ತೋಳುಗಳು ಎರಡನೆಯ ಉಪಗ್ರಹವನ್ನು ಆವರಿಸಿ, ಅವುಗಳ ಬಂಧ ಬಿಗಿಯಾಗುತ್ತದೆ. ಅಲ್ಲಿಗೆ ಡಾಕಿಂಗ್ ಪ್ರಕ್ರಿಯೆ ಸಂಪನ್ನ! ಈ ಹಂತದಲ್ಲಿ ಎರಡೂ ಉಪಗ್ರಹಗಳು ಒಂದೇ ವ್ಯವಸ್ಥೆಯಡಿ ಬಂದು, ಎರಡರದ್ದೂ ನಿಯಂತ್ರಣವನ್ನು ಒಂದೇ ಉಪಗ್ರಹ ಮಾಡುತ್ತದೆ. ಹೀಗೆ, ಎರಡು ಪ್ರತ್ಯೇಕ ಬಾಹ್ಯಾಕಾಶ ನೌಕೆಗಳನ್ನು ಅಂತರಿಕ್ಷದಲ್ಲಿ ಜೋಡಿಸುವ ಪ್ರಕ್ರಿಯೆಗೆ 'ಡಾಕಿಂಗ್' ಎಂದೂ, ಜೋಡಿಸಿರುವ ನೌಕೆಗಳನ್ನು ಬೇರ್ಪಡಿಸುವ ಪ್ರಕ್ರಿಯೆಗೆ 'ಅನ್‌ಡಾಕಿಂಗ್' ಎಂದೂ ಕರೆಯಲಾಗುತ್ತದೆ. ಇದು ತಾಂತ್ರಿಕವಾಗಿ ತುಂಬಾ ಸವಾಲಿನ ಕೆಲಸ. ಮಾನವನ ಸೀಮಿತ ಹಸ್ತಕ್ಷೇಪದಿಂದ ಇದನ್ನು ನಿಯಂತ್ರಿಸಿ, ನಿರ್ವಹಿಸಬೇಕು. ಡಾಕಿಂಗ್ ಯೋಜನೆಯಲ್ಲಿ, ಸಾವಿರಾರು ಕಿ.ಮೀ. ವೇಗದಲ್ಲಿ ಓಡುತ್ತಿರುವ ಎರಡು ಅಂತರಿಕ್ಷ ನೌಕೆಗಳ ವೇಗವನ್ನು ವಿಶ್ಲೇಷಿಸಿ ನಿಯಂತ್ರಣಕ್ಕೆ ತರಲಾಗುತ್ತದೆ. ಎರಡೂ ನೌಕೆಗಳು ಪರಸ್ಪರ ಸಮೀಪಿಸಿದಾಗ, ಸರಾಗ ಸಂವಹನ ಮತ್ತು ನಿರ್ದೇಶನಗಳ ಮೂಲಕ ಎರಡನ್ನೂ ಜೋಡಿಸಬೇಕು. ಒಂದಿಷ್ಟು ವ್ಯತ್ಯಾಸವಾದರೂ ಪರಸ್ಪರ ಡಿಕ್ಕಿಯಾಗಿ ಎರಡೂ ನೌಕೆಗಳು ನಾಶವಾಗುವ ಸಾಧ್ಯತೆ ಹೆಚ್ಚು. ಇಂಥ ಕೆಲಸವನ್ನು ಸುಸೂತ್ರವಾಗಿ ಮಾಡಲು ಆಗಸದಲ್ಲಿ ಇರಬೇಕಾದ ವ್ಯವಸ್ಥೆಯೇ 'ಬಾಹ್ಯಾಕಾಶ ನಿಲ್ದಾಣ'. ಭಾರತವು ಇಂಥ ನಿಲ್ದಾಣವೊಂದನ್ನು ಸ್ಥಾಪಿಸಿ, ಅದರ ಮಾಲೀಕತ್ವ ಹೊಂದುವತ್ತ ಸಾಗುತ್ತಿದೆ. ಬಾಹ್ಯಾಕಾಶ ನಿಲ್ದಾಣದಂಥ ದೊಡ್ಡ ರಚನೆಗಳಿಗೆ ಅಗತ್ಯವಿರುವ ವಿವಿಧ ಆಕಾರ ಮತ್ತು ಗಾತ್ರದ ಪರಿಕರಗಳನ್ನು ಒಂದೇ ಉಪಗ್ರಹದಲ್ಲಿ ಸಾಗಿಸುವುದು ಕಷ್ಟ, ಅನೇಕ ರಾಕೆಟ್‌ಗಳ ಮೂಲಕ ಕಕ್ಷೆಗೆ ಸಂಯೋಜಿಸಬೇಕು. ಹಾಗಾದಾಗ ಮಾತ್ರವೇ ಬಾಹ್ಯಾಕಾಶ ನಿಲ್ದಾಣದ ನಿರ್ಮಾಣ ಕೈಗೂಡುತ್ತದೆ. 'ಸ್ಪಾಡೆಕ್ಸ್' ಯೋಜನೆ ಈ ದಿಕ್ಕಿನಲ್ಲಿ ಭಾರತದ ಮೊದಲ ಹೆಜ್ಜೆ.

ವಿವಿಧ ಅಂತರಿಕ್ಷ ನೌಕೆಗಳ ಮೂಲಕ ಗಗನಯಾತ್ರಿಗಳು ಮತ್ತು ಸರಕುಗಳನ್ನು ಸಾಗಿಸಲು ಡಾಕಿಂಗ್ ತಂತ್ರಜ್ಞಾನವು ಸಹಕರಿಸುತ್ತದೆ. ಇದು 'ಗಗನಯಾನ' ಹೆಸರಿನ ಭಾರತದ ಮಾನವಸಹಿತ ಗಗನಯಾತ್ರೆಯ ಯೋಜನೆಗೆ ಸಹಕಾರಿಯಾಗಲಿದೆ. ಚಂದ್ರನ ಮೇಲ್ಮೈಯಿಂದ ಮಣ್ಣು, ಅದಿರು ಮತ್ತು ಇತರ ಮಾದರಿಗಳನ್ನು ಭೂಮಿಗೆ ತರಲು 'ಚಂದ್ರಯಾನ-4' ಯೋಜನೆಯನ್ನು ಇಸ್ರೋ ಹಾಕಿಕೊಂಡಿದ್ದು, ಈ ಉದ್ದೇಶಕ್ಕಾಗಿ ಎರಡು ರಾಕೆಟ್‌ಗಳ ಉಡಾವಣೆ ಮಾಡಲಾಗುತ್ತದೆ.

ಹೊಸದಾಗಿ ನಿರ್ಮಾಣವಾಗಲಿರುವ 'ಭಾರತೀಯ ಬಾಹ್ಯಾಕಾಶ ನಿಲ್ದಾಣ'ದ ಸಹಕಾರದಿಂದ ಇವುಗಳನ್ನು ಹಂತಹಂತವಾಗಿ ಭೂಮಿ ಮತ್ತು ಚಂದ್ರನ ಕಕ್ಷೆಗೆ ಡಾಕಿಂಗ್ ಮಾಡಲಾಗುತ್ತದೆ. ಉಡಾವಣೆಗೊಂಡು ಈಗಾಗಲೇ ಕಕ್ಷೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಗ್ರಹಗಳ ದುರಸ್ತಿ, ಇಂಧನ ಸರಬರಾಜು ಮತ್ತು ಆಧುನೀಕರಣವೂ ಈ ನಿಲ್ದಾಣದ ಮೂಲಕ ನೆರವೇರಲಿದೆ. ತನ್ಮೂಲಕ, ಈಗಿರುವ ಉಪಗ್ರಹಗಳ ಜೀವಿತಾವಧಿಯೂ ಹೆಚ್ಚಾಗಲಿದೆ. ಒಟ್ಟಿನಲ್ಲಿ ಈ ನಿಲ್ದಾಣವು ಉಪಗ್ರಹಗಳ ಸರ್ವೀಸ್ ಸೆಂಟರ್, ಇಂಧನ ಪೂರೈಕೆ ಮತ್ತು ದುರಸ್ತಿ/ನಿರ್ವಹಣೆಯ ಅಂಗಡಿಯಾಗಿ ಅಂತರಿಕ್ಷದಲ್ಲಿ ಕಾರ್ಯನಿರ್ವಹಿಸಲಿದೆ. ಎಂಥ ಅದ್ಭುತ ಯೋಚನೆ-ಯೋಜನೆ!

ವಿಶೇಷ ರಾಕೆಟ್ ಎಂಜಿನ್‌ಗಳು, ಉಪಗ್ರಹಗಳ ಸ್ಥಾನ, ಅವುಗಳ ವೇಗ ಮತ್ತು ನಡುವಿನ ಅಂತರ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸುವ ಲೇಸರ್ ರೇಂಜ್ ಫೈಂಡರ್, ಪ್ರಾಕ್ಸಿಮಿಟಿ ಡಿಟೆಕ್ಟರ್, ಡಾಕಿಂಗ್ ಸೆನ್ಸರ್, ರಿಲೇಟಿವ್ ಆರ್ಬಿಟ್ ಡಿಟರ್ಮಿನೇಷನ್, ವಿಡಿಯೋ ಮಾನಿಟರ್, ಸ್ಪೆಷಲ್ ಅಲ್ಗಾರಿದಂ ಮುಂತಾದ ತಂತ್ರಜ್ಞಾನಗಳು/ತಂತ್ರಾಂಶಗಳು ಈ ಡಾಕಿಂಗ್ ತಂತ್ರಜ್ಞಾನದ ಭಾಗವಾಗಿ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳನ್ನೆಲ್ಲಾ ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ. 'ರೇಡಿಯೇಷನ್ ಮಾನಿಟರ್ ಪೇಲೋಡ್' ಎಂಬ ಉಪಕರಣವು ಬಾಹ್ಯಾಕಾಶ ನೌಕೆಯ ವಿಕಿರಣಶೀಲತೆಯನ್ನು ಅಳೆಯುತ್ತದೆ; ಮಾನವಸಹಿತ ಬಾಹ್ಯಾಕಾಶ ಕಾರ್ಯಾಚರಣೆ-ಕಾರ್ಯಯೋಜನೆಗಳಿಗೆ ಈ ವಿವರ ಉಪಯುಕ್ತವಾಗಲಿದೆ. ಇಸ್ರೋದ ಯು.ಆರ್.ರಾವ್ ಉಪಗ್ರಹ ಕೇಂದ್ರವು ಸುಮಾರು 8 ವರ್ಷಗಳ ಸಂಶೋಧನೆ ಮಾಡಿ, ಸೆನ್ಸರ್ ಮತ್ತು ಅಲ್ಗಾರಿದಂ ಅನ್ನು ಸಿದ್ಧಪಡಿಸಿ, 'ಸ್ಪಾಡೆಕ್ಸ್' ಉಪಗ್ರಹಗಳನ್ನು ವಿನ್ಯಾಸಗೊಳಿಸಿದೆ.

ಅಂತರಿಕ್ಷದಲ್ಲಿ ಓಡಾಡುತ್ತಾ ಕಾರ್ಯನಿರ್ವಹಿಸುತ್ತಿರುವ ಉಪಗ್ರಹಗಳ ನಿರ್ವಹಣೆ, ಬಿಡಿಭಾಗಗಳ ದುರಸ್ತಿ-ಬದಲಾವಣೆ, ಇಂಧನ ಪೂರೈಕೆ, ಕಾರ್ಯಕ್ಷಮತೆ ಪರೀಕ್ಷೆ, ಸಾಮರ್ಥ್ಯವೃದ್ಧಿ ಮುಂತಾದ ಬಹುಮುಖಿ ಚಟುವಟಿಕೆಗಳು ಇನ್ನು ಮುಂದೆ ಈ ಬಾಹ್ಯಾಕಾಶ ನಿಲ್ದಾಣದಲ್ಲಿ ನೆರವೇರಲಿವೆ. ಅದರ ಸಂಪೂರ್ಣ ನಿಯಂತ್ರಣ-ನಿರ್ವಹಣೆಯು ಭೂಮಿಯ ಮೇಲಿರುವ ಇಸ್ರೋದ ವಿವಿಧ 'ಕಮಾಂಡ್ ಸೆಂಟರ್'ಗಳಿಂದ ನಡೆಯಲಿದೆ ಎಂದರೆ ನಂಬಲೇಬೇಕು! ವಿಶಿಷ್ಟ ತಂತ್ರಜ್ಞಾನದ ನೆರವಿನಿಂದ ಇಂಥ ಸಜ್ಜಿಕೆಗಳನ್ನು ಅಭಿವೃದ್ಧಿಪಡಿಸಿ ಸಾಧ್ಯವಾಗಿಸಿದ ಹಿರಿಮೆ-ಗರಿಮೆಗಳು ಇಸ್ರೋ ಸಂಸ್ಥೆಗೆ ಮತ್ತು ಅದರ ವಿಜ್ಞಾನಿಗಳಿಗೆ ಸಲ್ಲಬೇಕು. ಅಟಲ್ ಬಿಹಾರಿ ವಾಜಪೇಯಿ ಮತ್ತು ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರುಗಳು ಈಗ ಬದುಕಿದ್ದಿದ್ದರೆ ಇಸ್ರೋದ ಈ ಸಾಧನೆಗಳನ್ನು ನೋಡಿ ಬಹಳ ಸಂತಸ ಪಡುತ್ತಿದ್ದರು. ಕಾರಣ, ಇಸ್ರೋ ದೇಶದ ಉಸಿರು!

ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ವಿಜಯ್ ಹೊಳ್ಳ, ಮಂಗಳೂರು**
ಭಟ್ರೇ, ನಾಗೇಶ ಹೆಗಡೆಯವರು ಕೊನೆಗೂ ಹವ್ಯಕರ ಬಗ್ಗೆ ಹೇಳಿದ್ದೇನು?
– **ಅವರು ಕವಳ ಜಗಿದಿದ್ದೇ ಬಂತು!**

- **ನಾರಾಯಣ ಪಂಡಿತ, ಬೆಂಗಳೂರು**
ಭಟ್ರೇ, ನೀವು ಹವ್ಯಕರು ಎಂಬುದು ಗೊತ್ತೇ ಇರಲಿಲ್ಲವಲ್ಲ?
– **ನನ್ನನ್ನು ಯಹೂದಿ ಎಂದು ಭಾವಿಸಿದ್ದೆಯಾ ?!**

- **ಸಂದೇಶ ಭಟ್, ಶಿರಸಿ**
ಭಟ್ರೇ, ಹವ್ಯಕ ಸಮ್ಮೇಳನ ವಿವಾದಗಳಿಲ್ಲದೇ ಅಚ್ಚುಕಟ್ಟಾಗಿ ನೆರವೇರಿತಂತೆ?
– **ಹೂಂ.. ಬಾಡೂಟ ಬೇಕು ಅಂತಾನೂ ಯಾರೂ ವಿವಾದ ಎಬ್ಬಿಸಲಿಲ್ಲವಪ್ಪ!**

- **ವೀರೇಶ್ ಕಮತಗಿ, ಅಡಗೂರು**
ಭಟ್ರೇ, ನಿಮ್ಮನ್ನು ಕಂಡರೆ ಅಸೂಯೆಪಡುವವರೂ ಸಾಕಷ್ಟು ಇದ್ದಾರಲ್ಲ?
– **ಅಸೂಯೆಗೆ ಮದ್ದನ್ನು ಇನ್ನೂ ಕಂಡುಹಿಡಿದಿಲ್ಲವಲ್ಲ?!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ರಾಜಗುರು ದ್ವಾರಕಾನಾಥರು ಕನಸಲ್ಲಿ ಬಂದರೆ ಏನರ್ಥ?
– **ಏನೋ ಅನರ್ಥ ಕಾದಿದೆ ಎಂದರ್ಥ!**

- **ಅಶೋಕ ಪಾಟೀಲ, ಧಾರವಾಡ**
ಭಟ್ರೇ, ಹವ್ಯಕ ಸಮ್ಮೇಳನದಲ್ಲಿ ದಿಕ್ಸೂಚಿ ಭಾಷಣಕ್ಕೆ ಮೊಯಿಲಿಯವರನ್ನೇಕೆ ಕರೆಯಿಸಲಿಲ್ಲ?
– **ಆಗ ಇಡೀ ಸಮ್ಮೇಳನವೇ ದಿಕ್ಕು ತಪ್ಪಿದಂತಾಗುತ್ತಿತ್ತು!**

- **ಮೋಹನ ಎಂ.ಅಡಿಗ, ಬೆಂಗಳೂರು**
ಭಟ್ರೇ, ಹುಡುಗಿಯರೂ ಕುಡಿಯಲು ಶುರು ಮಾಡಿಬಿಟ್ಟಿದ್ದಾರಲ್ಲ?
– **ಅದಕ್ಕೂ 'ಕುಡಿಯೋಣು ಬಾರಾ' ಕಾರಣ ಎನ್ನಲಿಲ್ಲವಲ್ಲ?!**

- **ಸಂಗೀತಾ ಅಡವಲ್ಲಿ, ಬೆಳಗಾವಿ**
ಭಟ್ರೇ, ಪ್ರಸ್ತುತ ಹವ್ಯಕರ ಮುಂದಿರುವ ಸವಾಲುಗಳೇನು?
– **ಮಾಡು ಇಲ್ಲ ಮಡಿ!**

- **ವಿನುತಾ, (ಇಮೇಲ್ ಮೂಲಕ)**
ಭಟ್ರೇ, ನಿಮಗೆ ಹೊಸ ವರ್ಷ ಯಾವಾಗ ?
– **ನನಗೆ ಎಲ್ಲ ದಿನವೂ ಹೊಸ ವರ್ಷವೇ!**

- **ದಯಾನಂದ ಶೆಟ್ಟಿ, ಬೆಂಗಳೂರು**
ಭಟ್ರೇ, ನಿಮ್ಮ ಸ್ನೇಹ ಮಾಡಲು ಅರ್ಹತೆ ಬೇಕಂತೆ?
– **ಜತೆಗೆ ಯೋಗ ಮತ್ತು ಯೋಗ್ಯತೆ!**

- **ಸತೀಶ ಎಲ್.ವಿ., ಮೈಸೂರು**
ಭಟ್ರೇ, ಹೆಣ್ಣಿನ ನಿಜವಾದ ಆಭರಣ ತಾಳಿ. ಗಂಡಿನದು?
– **ತಾಳ್ಮೆ!**

ರೋಚಕತೆಯನ್ನೇ ಬಯಸುವ ಹೊಸ ದಿನಮಾನ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಭಾರತದಲ್ಲಿ ಮತ್ತೊಮ್ಮೆ ಕ್ರಿಕೆಟ್ ಜ್ವರ ಹರಡುತ್ತಿದೆ. ಆದರೆ, ಅದೇಕೋ ನಮ್ಮ ತಂಡದ ಕೆಲವು ಪ್ರಮುಖ ಆಟಗಾರರು ನೀರಸ ಪ್ರದರ್ಶನ ನೀಡಿದ್ದರಿಂದ, ಈ ಕ್ರಿಕೆಟ್ ಜ್ವರದ ತಾಪವು ಏರಲಿಲ್ಲ; ಟೆಸ್ಟ್ ಕ್ರಿಕೆಟ್ ಆಗಿದ್ದರೂ ರೋಚಕವಾಗಿ ಆಟವಾಡುವ ಪದ್ಧತಿ ಇಂದು ಸಾಮಾನ್ಯ ಎನಿಸಿದೆ! ಆದರೆ, ಈ ಸರಣಿಯಲ್ಲಿ ಅಷ್ಟೊಂದು ರೋಚಕತೆ ಮೂಡಿಬಂದಿಲ್ಲ, ನಮ್ಮವರು ಸೋಲಿನ ಸುಳಿಯಲ್ಲೇ ಇದ್ದಾರೆ. ಹಳೆ ಆಟಗಾರರು ಇನ್ನಾದರೂ ಒಂದಷ್ಟು ರನ್ ಚಚ್ಚಲಿ ಎಂದು ವೀಕ್ಷಕರು ಆಸೆಪಡುತ್ತಿದ್ದಾರೆ, ಆ ಮೂಲಕ ರೋಚಕ ಅನುಭವಕ್ಕಾಗಿ ಕಾಯುತ್ತಿದ್ದಾರೆ.

ಕ್ರಿಕೆಟ್ ಆಟವು ನಮ್ಮಲ್ಲಿ ಸಾರ್ವತ್ರಿಕವಾಗಿ, ಅದನ್ನು ನೋಡುತ್ತಾ ಜನರು ಕಾಲಹರಣ ಮಾಡುತ್ತಿರುವುದರಿಂದಾಗಿ, ಇತರ ಕ್ರೀಡೆಗಳು ಸೊರಗಿ ಹೋಗಿವೆ ಎಂದು ಹಲವರು ಹಳಹಳಿಸುವುದುಂಟು, ಗೊಣಗುವುದೂ ಉಂಟು. ಆ ಗೊಣಗುವಿಕೆಯಲ್ಲಿ ಸತ್ಯವೂ ಇರಬಹುದು ಅಥವಾ ಕೇವಲ ಹತಾಶೆಯೂ ಇರಬಹುದು. ಆದರೆ, ಕ್ರಿಕೆಟ್‌ನಷ್ಟು ಜನಪ್ರಿಯತೆ ಬೇರಾವ ಆಟಕ್ಕೂ ನಮ್ಮಲ್ಲಿ ಒದಗಿಬರಲಿಲ್ಲ ಎಂಬುದು ಐತಿಹಾಸಿಕ ಸತ್ಯ! ಫುಟ್‌ಬಾಲ್, ಹಾಕಿ ಅಲ್ಲಲ್ಲಿ ಬದುಕಿವೆ. ಆದರೆ ಬೇರೆ ಆಟಗಳಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ತೀರಾ ಕಡಿಮೆ. ಉದಾಹರಣೆಗೆ, ಚೆಸ್ ಆಟದಲ್ಲಿ ವಿಶ್ವನಾಥನ್ ಆನಂದ್ ಮತ್ತು ಗುಕೇಶ್ ಡಿ. ಅವರು ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದರೂ, ಆ ಆಟವು ಪಡೆಯಬೇಕಾದಷ್ಟು ಜನಪ್ರಿಯತೆಯನ್ನು ಇನ್ನೂ ಪಡೆದಿಲ್ಲವೆಂದೇ ಹೇಳಬಹುದು.

ಕ್ರಿಕೆಟ್ ಆಡುವುದು ಎಂದರೆ ಆರಾಮಾಗಿ ಕಾಲ ಕಳೆಯುವುದು, ಈ ಆಟದಿಂದ ನಮಗೆ ದೈಹಿಕ ವ್ಯಾಯಾಮ ಸಿಗುವುದಿಲ್ಲ ಎಂದು ವ್ಯಂಗ್ಯವಾಡುವ ಕಾಲವೊಂದಿತ್ತು. ನಮ್ಮ ದೇಶಕ್ಕೆ ಕ್ರಿಕೆಟ್ ಬಂದದ್ದು ವಸಾಹತುಶಾಹಿ ಆಡಳಿತದ ಮೂಲಕ ಎಂಬ ಮತ್ತೊಂದು ಟೀಕೆಯೂ ಇದೆ. ಬ್ರಿಟಿಷರು ಯಾವ ಯಾವ ದೇಶಗಳನ್ನು ಆಳಲು ಆರಂಭಿಸಿದರೋ, ಅಲ್ಲೆಲ್ಲಾ ಕ್ರಿಕೆಟ್ ಜ್ವರವನ್ನು ಹಬ್ಬಿಸಿದರು ಎಂಬ ಮಾತೂ ಇದೆ. ಆದರೆ ಈಗ ಅವರದೇ ಆಟದಲ್ಲಿ ಅವರ ಮಾಜಿ ವಸಾಹತುಗಳು ಅವರನ್ನು ಸೋಲಿಸುತ್ತಿರುವುದು ಒಂದು ವಾಸ್ತವ. ಆದರೆ ಏಕದಿನ ಪಂದ್ಯ ಮತ್ತು 20 ಓವರುಗಳ ಆಟ ರೂಪುಗೊಂಡ ನಂತರ, ಕ್ರಿಕೆಟ್ ಕುರಿತು ಹಳಹಳಿಕೆ ಕಡಿಮೆಯಾಯಿತು. 20 ಓವರ್‌ಗಳ ಆಟ ಜನಪ್ರಿಯತೆಯ ತುತ್ತ ತುದಿಗೆ ಏರಿದ ಮೇಲೆ, ಕ್ರಿಕೆಟ್ ಆಟದ ಸ್ವರೂಪವೇ ಬದಲಾಯಿತು; ಪ್ರತಿ ಪಂದ್ಯದಲ್ಲೂ ರೋಚಕತೆ ತುಂಬಿ ಬಂತು!

ಐದು ದಿನದ ಮ್ಯಾಚ್ ಇರಲಿ, ಒಂದು ದಿನದ ಮ್ಯಾಚ್ ಇರಲಿ, ಅಥವಾ 20 ಓವರ್ ಮ್ಯಾಚ್ ಇರಲಿ, ನಮ್ಮ ದೇಶದಲ್ಲಿ ಕ್ರಿಕೆಟ್‌ನ ಜನಪ್ರಿಯತೆಯ ಖದರ್ ಬೇರೆಯದೇ ಮಜಲಿನದು. ಬೀದಿಗಳಲ್ಲಿ, ಗಲ್ಲಿಗಳಲ್ಲಿ, ಮನೆಯ ಒಳಗೆ, ಅಂಗಳದಲ್ಲಿ, ಗದ್ದೆಯಲ್ಲಿ ತೋಟದಲ್ಲಿ ಹೀಗೆ ಎಲ್ಲೆಂದರಲ್ಲಿ ಕ್ರಿಕೆಟ್ ಆಡುವ ದೇಶ ನಮ್ಮದು. ಬ್ಯಾಟ್ ಸಿಗದಿದ್ದರೆ ತೆಂಗಿನ ಹೆಡೆಮಟ್ಟೆಯೇ ಬ್ಯಾಟ್. ವಿಕೆಟ್‌ಗಳು ಇಲ್ಲದಿದ್ದರೆ ಒಲೆಗೆ ಹಾಕುವ ಸೌದೆಯೇ ವಿಕೆಟ್. ಬಾಲ್ ಇಲ್ಲದಿದ್ದರೆ ಬಟ್ಟೆಯ ಉಂಡೆಯೇ ಬಾಲ್! ಬೆಳಗ್ಗೆ ಕ್ರಿಕೆಟ್ ಆಡಿ, ಹಗಲಿಡೀ ಪಾಠ ಕೇಳಿ, ಸಂಜೆ ಪುನಃ ಕ್ರಿಕೆಟ್ ಆಡುತ್ತಿದ್ದ ಮಕ್ಕಳು ಅದೆಷ್ಟೋ!

ನಮ್ಮ ಬಾಲ್ಯದ ಕ್ರಿಕೆಟ್ ಹುಚ್ಚನ್ನು ನೆನಪಿಸಿಕೊಂಡರೆ, ಈಗಿನ ಮಕ್ಕಳು ಕ್ರಿಕೆಟ್ ಬಗ್ಗೆ ಅಷ್ಟೊಂದು ಆಸಕ್ತಿಯನ್ನು ತೋರುತ್ತಿಲ್ಲವೇನೋ ಎಂದು ನನ್ನ ಅನಿಸಿಕೆ. ನಮ್ಮ ಓರಗೆಯ ಹುಡುಗರಿಗೆ ಹೋಲಿಸಿದರೆ, ನಾನು ಕ್ರಿಕೆಟ್ ನೋಡಲು ಆರಂಭಿಸಿದ್ದು ತುಸು ತಡವಾಗಿ. ಹಾಲಾಡಿಯ ಸರಕಾರಿ ಶಾಲೆಯಲ್ಲಿ 7ನೇ ತರಗತಿಯಲ್ಲಿದ್ದಾಗ ಒಂದು ದಿನ ನಮ್ಮ ಸಹಪಾಠಿಗಳು ಕ್ರಿಕೆಟ್ ಆಡೋಣ ಎಂದು ಹೇಳಿದಾಗ ನಾನೂ ಸೇರಿಕೊಂಡೆ. ಟೆನ್ನಿಸ್ ಬಾಲ್, ಮರದ ಬ್ಯಾಟ್; ಆದರೆ ನಮಗ್ಯಾರಿಗೂ ಸರಿಯಾದ ಬೌಲಿಂಗ್ ಗೊತ್ತಿರಲಿಲ್ಲ; ನಾನು ಮೊದಲ ಆಟ ಆಡಿದ್ದು ಅಂಡರ್‌ಹ್ಯಾಂಡ್ ಬೌಲಿಂಗ್‌ನಲ್ಲಿ! ಅದರಲ್ಲಿ ನಾನು ಯಾವ ರೀತಿ ಕ್ರಿಕೆಟ್ ಕಲಿತೆ ಎಂದು ಈಗ ಸರಿಯಾಗಿ ನೆನಪಿಲ್ಲ. ಆದರೆ 8ನೇ ಕ್ಲಾಸ್ ಓದಲು ಶಂಕರನಾರಾಯಣ ಹೈಸ್ಕೂಲಿಗೆ ಹೋದಾಗ ನನ್ನ ಕ್ರಿಕೆಟ್ 'ಪ್ರತಿಭೆ' ಅರಳಿತು! 8ನೇ ತರಗತಿಗೆ ಸೇರಿದಾಗ ನಾನೂ ಕ್ರಿಕೆಟ್ ಆಡುತ್ತೇನೆಂದು ಸಹಪಾಠಿಗಳ ಜತೆ ಸೇರಿಕೊಂಡು, ಮೊದಲ ಓವರ್ ಬೌಲ್ ಮಾಡಲು ಹೊರಟಾಗ, ಎಲ್ಲರೂ 'ಫೌಳ್' ಎಂದು ನಕ್ಕರು. ''ಏ, ನಿನ್ನ ಅಂಡರ್ ಹ್ಯಾಂಡ್ ಬೌಲಿಂಗ್ ಇಲ್ಲಿ ನಡೆಯುವುದಿಲ್ಲ'' ಎಂದು ಕಪ್ತಾನನು ನನ್ನ ಕೈಯಿಂದ ಬಾಲ್ ಕಿತ್ತುಕೊಂಡ. ಹಾಲಾಡಿ ಶಾಲೆಯಲ್ಲಿ ನಾನು ಕಲಿತದ್ದು ಅಂಡರ್‌ಹ್ಯಾಂಡ್ ಬೌಲಿಂಗ್. ಅದನ್ನು ಹೊರತುಪಡಿಸಿ, ಓವರ್‌ಹ್ಯಾಂಡ್ ಬೌಲಿಂಗ್ (ಅಂದರೆ ಈಗ ನಾವೆಲ್ಲ ಟಿವಿಯಲ್ಲಿ ನೋಡುವ ಬೌಲಿಂಗ್) ಇತ್ತು ಎಂದೇ ನನಗೆ ಗೊತ್ತಿರಲಿಲ್ಲ! ಆಗ ಟಿವಿ ನಮ್ಮ ದೇಶಕ್ಕಿನ್ನೂ ಬಂದಿರಲಿಲ್ಲವಲ್ಲ!

ಬೌಲಿಂಗ್ ಗೊತ್ತಿಲ್ಲದಿದ್ದರೇನು, ಬ್ಯಾಟಿಂಗ್‌ನಲ್ಲಿ ನನ್ನ ಕೌಶಲ ತೋರಿಸಿದಾಗ, ಹೈಸ್ಕೂಲಿನ ಹುಡುಗರೆಲ್ಲ ಬೆರಗಾದರು. 10ನೇ ತರಗತಿಯ ಹುಡುಗರಿಗೆ ಸರಿಸಮನಾಗಿ, 8ನೇ ತರಗತಿಯಲ್ಲಿದ್ದ ನಾನು ಬ್ಯಾಟ್ ಬೀಸುತ್ತಿದ್ದೆ. ಅದೇ ಮೈದಾನದಲ್ಲಿ ಪಿಯುಸಿಯಲ್ಲಿರುವಾಗ ನಾನು ಉತ್ತಮ ಕ್ರಿಕೆಟ್ ಆಡಿದರೂ, ಬೌಲಿಂಗ್ ಕಲಿತಿರಲಿಲ್ಲ. ಇಷ್ಟು ದಿನ ನಾವೆಲ್ಲ ಆಡುತ್ತಿದ್ದುದು ಟೆನಿಸ್ ಬಾಲ್ ಕ್ರಿಕೆಟ್. ಮುಂದೆ ಕಾಲೇಜಿಗೆ ಬಂದಾಗ, ಲೆದರ್ ಬಾಲ್ ಕ್ರಿಕೆಟ್ ನೋಡುವ ಅವಕಾಶವಾಯಿತು. ಕಾಲೇಜಿನ ತಂಡಕ್ಕೆ ಸೇರಲು ನಾನು ಆಸೆ ಪಟ್ಟರೂ, ಪ್ಯಾಡ್ ಕಟ್ಟಿ, ಸೆಂಟರ್ ಪ್ಯಾಡ್ ಸಿಕ್ಕಿಸಿಕೊಂಡು, ಗ್ಲೌಸ್ ಧರಿಸಿ ಆಡಲು ಅದೇಕೋ ಹಿಂಜರಿಕೆ. ಪಕ್ಕಾ ಹಳ್ಳಿಯಿಂದ ಬಂದ ನಾನು, ಅಲ್ಲಿನ ಪೇಟೆ ಹುಡುಗರ ಜತೆ ಬೆರೆತು ಆಡಲು ಹಿಂದೆ ಬಿದ್ದೆ! ನನ್ನ ದೇಹದ ಗಾತ್ರಕ್ಕೆ ಹೋಲಿಸಿದಾಗ ಕ್ರಿಕೆಟ್ ಪ್ಯಾಡುಗಳ ತೂಕವೇ ಅಧಿಕ, ಬ್ಯಾಟ್ ಇನ್ನಷ್ಟು ತೂಕ. ಕುಂದಾಪುರ ಕಾಲೇಜಿನ ಕ್ರಿಕೆಟ್ ತಂಡ ಅಭ್ಯಾಸ ಮಾಡುತ್ತಿದ್ದಾಗ, ನಾನೂ ಸೇರಿಕೊಳ್ಳುತ್ತೇನೆಂದು ನಾಲ್ಕಾರು ದಿನ ಆಡಿದೆ. ಆ ನಂತರ ಸುಮ್ಮನಾದೆ.

ಡಿಗ್ರಿ ಮುಗಿಸಿ ಒಂದು ವರ್ಷ ನಿರುದ್ಯೋಗಿಯಾಗಿ ಮನೆಯಲ್ಲಿದ್ದಾಗ, ನಮ್ಮ ಹಳ್ಳಿಯಲ್ಲೇ ಕ್ರಿಕೆಟ್ ಆಡುವ ಅವಕಾಶ. ಹಾಡಿ, ಹಕ್ಕಲು, ಗುಡ್ಡ, ಗದ್ದೆಗಳ ನಡುವೆ ಇದ್ದ ನಮ್ಮ ಮನೆಯಿಂದ, ಗುಡ್ಡದ ದಾರಿಯಲ್ಲಿ 2 ಕಿ.ಮೀ. ನಡೆದರೆ ಬಸ್ ರಸ್ತೆ ಸಿಗುತ್ತದೆ. ಅದು ಹೈಕಾಡಿ ಎಂಬ ಸಣ್ಣ ಪೇಟೆ. ನಮ್ಮ ಮನೆಯ ಸುತ್ತಲಿನ ಗೆಳೆಯರು ಮತ್ತು ಹೈಕಾಡಿ ಹುಡುಗರ ನಡುವೆ ಕ್ರಿಕೆಟ್ ಮ್ಯಾಚ್! ಈ ನಡುವೆ, ನಮ್ಮ ಮನೆ ಎದುರಿನ ಹಾಳುಮನೆ ಜಡ್ಡಿನ ಹತ್ತಿರ ಕಲ್ಲುಗಳನ್ನು ಎಸೆದು ಎಸೆದು, ಬಿರುಸಾಗಿ ಓವರ್ ಹ್ಯಾಂಡ್ ಬೌಲಿಂಗ್ ಅಭ್ಯಾಸ ಮಾಡಿದೆ. ಸಣ್ಣ ಸಣ್ಣ ಕಲ್ಲುಗಳನ್ನು ಪ್ರತಿದಿನ ಸಂಜೆ ಎಸೆಯುತ್ತಾ, ಬೌಲಿಂಗ್ ಕಲಿತೇಬಿಟ್ಟೆ!

'ಕ್ರಿಕೆಟ್ ಆಡಲು ಮಳೆ ಕಾಟ ಮಾರಾಯರೇ. ವರ್ಷದಲ್ಲಿ ನಾಲ್ಕು ತಿಂಗಳು ಮಳೆ' ಎಂದು ಟೀಕಿಸುತ್ತಾ, ಮಳೆ ಜಾಸ್ತಿ ಬೀಳುವ ಪ್ರದೇಶದಲ್ಲಿ ಕ್ರಿಕೆಟ್ ಕಲಿಯುವುದು ಕಷ್ಟ ಎಂದು ನಾವು ಗೆಳೆಯರು ಗೊಣಗುತ್ತಿದ್ದೆವು. ಅದನ್ನು ಕೇಳಿಸಿಕೊಂಡನೋ ಏನೋ ಆ ದೇವರು, ನನ್ನನ್ನು ದೂರದ ಕಣಕಟ್ಟೆ ಎಂಬ ಹಳ್ಳಿಗೆ ವರ್ಗಾಯಿಸಿದ. ವರ್ಷದಲ್ಲಿ ಕೇವಲ ನಾಲ್ಕಾರು ದಿನ ಮಾತ್ರ ಮಳೆ ಬೀಳುವ, ಬಯಲುಸೀಮೆಯ ಹೃದಯಭಾಗದಲ್ಲಿದ್ದ ಕಣಕಟ್ಟೆಯಲ್ಲಿ ಕೆಲಸಕ್ಕೆ ಸೇರಿಕೊಂಡ ನಾನು, ಪ್ರತಿದಿನ ಸಂಜೆ ಕ್ರಿಕೆಟ್ ಆಡಲು ಹೋಗುತ್ತಿದ್ದೆ. ಆ ಊರಿನಲ್ಲಿ ಮಳೆಯೇ ಕಡಿಮೆಯಾದ್ದರಿಂದ ಅಲ್ಲಿ ವರ್ಷವಿಡೀ ಯಾವುದೇ ಹೊರಾಂಗಣ ಆಟ ಆಡಬಹುದಿತ್ತು! ಆ ಹಳ್ಳಿಯಲ್ಲಿ ಕೆಲವು ವರ್ಷ ಇದ್ದ ನಾನು, ಸ್ಥಳೀಯ ಹುಡುಗರ ಜತೆ ಸೇರಿ ಅದೆಷ್ಟು ಕ್ರಿಕೆಟ್ ಆಡಿದೆನೋ ಲೆಕ್ಕವಿಲ್ಲ.

'ಕಾರ್ಕ್‌ಬಾಲ್' ಕ್ರಿಕೆಟ್ ನಿಮಗೆ ಗೊತ್ತೇ? ಅದರ ಪರಿಚಯ ನನಗಾಗಿದ್ದು ಇಲ್ಲೇ! ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಪಂದ್ಯಗಳಲ್ಲಿ ಇಂದು ಬಳಕೆಯಲ್ಲಿರುವ ಲೆದರ್ ಬಾಲನ್ನು ಸುಮಾರಾಗಿ ಹೋಲುವ ಕಾರ್ಕ್‌ಬಾಲ್ ಉಪಯೋಗಿಸಿ, ಕ್ರಿಕೆಟ್ ಆಡುವ ಅಭ್ಯಾಸ ಆ ಪ್ರದೇಶದಲ್ಲಿತ್ತು. ಮೊದಲ ಬಾರಿ ಕಾರ್ಕ್‌ಬಾಲ್ ಎದುರಿಸಿ ಬ್ಯಾಟ್ ಬೀಸಿದಾಗ, 'ಟಕ್' ಎಂಬ ಶಬ್ದದೊಂದಿಗೆ ಬಾಲು ಬೌಂಡರಿ ಗೆರೆ ದಾಟಿದ್ದೇ ಗೊತ್ತಾಗಲಿಲ್ಲ! ಅಷ್ಟು ದೂರದಿಂದ ಓಡೋಡಿ ಬಂದು ಬಾಲ್ ಎಸೆದಾಗ, ಅದು ಚಲಿಸುವ ವೇಗ ಕಂಡೇ ಅಚ್ಚರಿ. ಟೆನ್ನಿಸ್ ಬಾಲ್‌ಗೆ ಹೋಲಿಸಿದರೆ, ಕಾರ್ಕ್‌ಬಾಲ್‌ನಿಂದ ಬೌಂಡರಿ ಬಾರಿಸುವುದು ಸುಲಭ!

ಆದರೆ ಕೈಗೋ ಕಾಲಿಗೋ ಕಾರ್ಕ್‌ಬಾಲ್ ತಗುಲಿದರೆ, 'ಅಯ್ಯಯ್ಯಪ್ಪೋ' ಎನ್ನುವಷ್ಟು ನೋವು! ಶರವೇಗದಿಂದ ಬರುವ ಕಾರ್ಕ್‌ಬಾಲ್ ಬೌಲಿಂಗ್‌ಗೆ, ಲೆದರ್ ಬಾಲಿಗೆ ನೀಡುವಷ್ಟೇ ಗೌರವ ಕೊಡಬೇಕು. ಇಲ್ಲವಾದರೆ ಹಲ್ಲು ಮುರಿದುಕೊಳ್ಳುವುದು ಖಚಿತ. ನನ್ನ ಮುಖಕ್ಕೆ ಒಮ್ಮೆ ಆ ಬಾಲು ತಾಗಿ, ಮಂಗನ ಮೂತಿ ಆಗಿತ್ತು! ಮತ್ತೊಮ್ಮೆ ಗಲ್ಲಕ್ಕೆ ತಾಗಿ ಗಾಯ, ರಕ್ತದಾನ. ಕಾಲು, ಕೈಗಳಿಗೆ ತಾಗಿದ್ದಷ್ಟು ಬಾರಿಯೋ ಲೆಕ್ಕವೇ ಇಲ್ಲ. ಸೆಂಟರ್ ಪ್ಯಾಡ್ ಧರಿಸದೆ ಇದ್ದಾಗ, ಕಲ್ಲಿನ ರೀತಿಯ ಆ ಕಾರ್ಕ್‌ಬಾಲ್ ಸ್ವಲ್ಪ ತಗುಲಿದರೂ ಪ್ರಾಣ ಹೋಗುವಂಥ ನೋವು. ತಲೆಗೆ ಬಾಲ್ ತಗುಲಿ ನಮ್ಮ ಜತೆಗಾರರು ಬಿದ್ದುಬಿಟ್ಟದ್ದುಂಟು. ಒಬ್ಬರ ಮುಂಗೈಗೆ ಬಾಲ್ ತಗುಲಿ ಫ್ರಾಕ್ಚರ್ ಆಗಿತ್ತು! ಆದರೂ ಕ್ರಿಕೆಟ್ ಹುಚ್ಚು ಹತ್ತಿದವರಿಗೆ, ಪ್ರತಿದಿನ ಸಂಜೆ ಆಟ ಆಡದೇ ಇರಲು ಅಸಾಧ್ಯ! ಆಗಾಗ ಅಕ್ಕಪಕ್ಕದ ಹಳ್ಳಿಯವರ ಜತೆ 'ಫ್ರೆಂಡ್ಲಿ ಮ್ಯಾಚ್'. ಪಂಚನಹಳ್ಳಿ, ಜಾವಗಲ್, ಬಾಣಾವರ, ದೇವನೂರು, ಶ್ರೀರಾಂಪುರ, ದೊಡ್ಡಮೇಟಿಕುರ್ಕೆ, ಕೆ.ಬಿದರೆ ಈ ರೀತಿ ಹಲವು ಹಳ್ಳಿಗಳೊಂದಿಗೆ ಕ್ರಿಕೆಟ್ ಆಡಿದ ನೆನಪು ಮಧುರ.

ಕ್ರಮೇಣ ಕಾರ್ಕ್‌ಬಾಲ್ ಹೋಗಿ, ಅಲ್ಲೂ ಟೆನಿಸ್ ಬಾಲ್ ಕ್ರಿಕೆಟ್ ಆರಂಭವಾಯಿತು. ಎರಡು ಇನ್ನಿಂಗ್ಸ್‌ನ ದಿನವಿಡೀ ನಡೆಯುವ ಆಟ ಮರೆಯಾಗಿ, ಹತ್ತು ಓವರ್ ಮ್ಯಾಚ್ ಆರಂಭವಾಯಿತು. ಇಷ್ಟು ಹೊತ್ತಿಗೆ ಊರಿಗೆ ಕಲರ್ ಟಿವಿ ಬಂದಿತ್ತು, ಕ್ರಿಕೆಟ್‌ನ ಗಂಧ-ಗಾಳಿ ಗೊತ್ತಿಲ್ಲದೇ ಇದ್ದವರು ಮನೆಯಲ್ಲಿ ಕುಳಿತು ಮ್ಯಾಚ್ ನೋಡಿ, ಆ ಆಟದ ನಿಯಮಗಳನ್ನು, ಪಟ್ಟುಗಳನ್ನು ಕಲಿತರು. ಎಷ್ಟರ ಮಟ್ಟಿಗೆ ಎಂದರೆ, ಜೀವಮಾನದದ್ದಕ್ಕೂ ಒಂದೇ ಒಂದು ಕ್ರಿಕೆಟ್ ಮ್ಯಾಚ್ ಆಡದೇ ಇದ್ದವರು ಸಹ, ಕಪಿಲನ ಸಿಕ್ಸರಿಗೆ ವ್ಯಾಖ್ಯಾನ ನೀಡುವಂತಾದರು. 1983ರಲ್ಲಿ ಕಪಿಲ್ ದೇವ್ ನೇತೃತ್ವದ ನಮ್ಮ ದೇಶದ ತಂಡ, ವಿಶ್ವ ಕಪ್ ಕ್ರಿಕೆಟ್ ಗೆದ್ದ ಯಶಸ್ಸಿನಿಂದಾಗಿ, ಹಳ್ಳಿ ಹಳ್ಳಿಗಳಲ್ಲೂ ಕ್ರಿಕೆಟ್ ಗಾಳಿ ಬಲವಾಗಿ ಬೀಸತೊಡಗಿತು.

ಈಚಿನ ದಶಕಗಳಲ್ಲಿ ಕ್ರಿಕೆಟ್ ಆಟಕ್ಕೆ ರೊಕ್ಕದ ಸೊಕ್ಕು ಅಂಟಿಕೊಂಡಿದೆ; ಐಪಿಎಲ್, ಟಿ-20 ಮೊದಲಾದ ಪಂದ್ಯಗಳು, ಕ್ರಿಕೆಟ್ ಆಟದ ಸ್ವರೂಪವನ್ನೇ ಬದಲಿಸಿಬಿಟ್ಟಿವೆ. ಜೂಜು ತರುವ ಮೋಜು ಇಂದು ಕ್ರಿಕೆಟ್‌ಗೂ ಅಂಟಿಕೊಂಡಿದೆ. ಆಟಗಾರರು ಹರಾಜಾಗುವುದು, ಯಾವುದೋ ಪ್ರಾಂತ್ಯದವರು ಇನ್ನೊಂದು ಪ್ರಾಂತ್ಯದ ಆಟಗಾರರಾಗುವುದು ಮಾಮೂಲು ಎನಿಸಿದೆ. ಬೇರೆ ಬೇರೆ ದೇಶದವರು, ಹಣದ ಹರಾಜಿನಲ್ಲಿ ನಮ್ಮ ದೇಶದಲ್ಲಿ ಆಟವಾಡುವ ಕಟ್ಟುಪಾಡಿಗೆ ಬಿದ್ದು, ತಮಗೆ ಸಿಕ್ಕಿದ ನಾಲ್ಕಾರು ಓವರುಗಳಲ್ಲಿ ಹತ್ತಾರು ಸಿಕ್ಸರ್ ಚಚ್ಚಿ, ಪ್ರೇಕ್ಷಕರಿಗೆ ರೋಚಕ ಅನುಭವ ನೀಡುತ್ತಿದ್ದಾರೆ! ಅದೆಲ್ಲೋ ಗುಟ್ಟಾಗಿ ಬೆಟ್ ಮಾಡಿದವರ ಬಿಪಿ ಏರಿಸಿ, ಜೂಜಿನ ಮತ್ತಿಗೆ ಕ್ರಿಕೆಟ್ ಆಟವನ್ನು ಪಣವೊಡ್ಡಿದ್ದಾರೆ. ಇದರಲ್ಲಿ ಯಾರನ್ನೂ ಟೀಕಿಸುವಂತಿಲ್ಲ! ಏಕೆಂದರೆ, ಅದೆಷ್ಟೋ ದೇಶಗಳಲ್ಲಿ ಈ ರೀತಿ ಜೂಜಾಡುವುದು ಅಧಿಕೃತವೆಂಬಂಥ ವಾತಾವರಣವಿದೆ. ಕ್ರಿಕೆಟ್ ಮಾತ್ರವಲ್ಲ, ಎಲ್ಲಾ ವಲಯಗಳಲ್ಲೂ ಇಂದು ಜೂಜಿನ, ರೋಚಕತೆಯ, ಕ್ಷಣಿಕ ಸಂತಸದ, ಹುಚ್ಚು ಉನ್ಮಾದದ ಛಾಯೆ ಇದೆ. ಮಿದುಳಿನ ಆಟ ಎನಿಸಿದ್ದ ಚೆಸ್‌ನಲ್ಲೂ, ಬ್ಲಿಜ್, ರ್‍ಯಾಪಿಡ್ ಎಂಬ ಪ್ರಕಾರಗಳನ್ನು ಹುಟ್ಟುಹಾಕಿ, ಅಲ್ಲೂ ರೋಚಕತೆಯ ಮತ್ತು ಸಮಯಮಿತಿಯ ಉನ್ಮಾದವನ್ನು ತಂದುಹಾಕಿರುವುದನ್ನು ಗಮನಿಸಿದರೆ, ಇಂಥ ರೋಚಕತೆಯು ಇಂದು ನಮ್ಮ ಬದುಕಿನ ಭಾಗವಾಗಿಬಿಟ್ಟಿದೆ ಎನಿಸುತ್ತದೆ! ಬೇಕಿದ್ದರೂ, ಬೇಡವಾದರೂ, ರೋಚಕತೆಯೇ ಬದುಕು ಎನ್ನುವಂತಾಗಿದೆ. ಇದು 21ನೇ ಶತಮಾನದ ಜಾಯಮಾನ ಇರಬಹುದೇನೋ ಎಂದು ವಿಸ್ಮಯಪಡುವಂತಾಗಿದೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ಸರಕಾರದ ಬೊಕ್ಕಸ ತುಂಬಿದ ಹೊಸವರ್ಷದ ಸಂಭ್ರಮ. ಒಂದೇ ದಿನದಲ್ಲಿ 308 ಕೋಟಿ ರುಪಾಯಿ ಮದ್ಯ ವಹಿವಾಟು: ಸುದ್ದಿ**
– ''ಇದೇ ಖುಷಿಯಲ್ಲಿ 'ಅಮಲುದಾರರ ಸಂಘ' ಕಟ್ಟಿಕೊಳ್ಳೋಣ. ಪ್ರತಿತಿಂಗಳೂ 'ಹೊಸವರ್ಷ' ಆಚರಿಸಿ, ಸರಕಾರಿ ಬೊಕ್ಕಸಕ್ಕೆ ನಮ್ಮಿಂದಾದ ಕೊಡುಗೆ ನೀಡೋಣ'' ಎಂದು ಹೇಳುತ್ತಾ 'ತೀರ್ಥರೂಪಿಗಳು' 'ಪೆಗ್' ಬದಲು 'ಮಗ್' ಲೆಕ್ಕದಲ್ಲಿ ವಿಸ್ಕಿ ಪೋಟ್ಕೊಂಡ್ರಂತೆ!!

- **ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಹಲವು 'ಬನಾನಾ' ರಿಪಬ್ಲಿಕ್‌ಗಳನ್ನು ಮಾಡಿಕೊಳ್ಳಲಾಗಿದೆ: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ**
– ''ಮಾಡಿಕೊಳ್ಳಲಿ ಪರವಾಗಿಲ್ಲ! ಆದರೆ 'ಬನಾನ' ತಿಂದುಬಿಟ್ಟು ಎಲ್ಲೆಂದರಲ್ಲಿ 'ಸಿಪ್ಪೆ' ಎಸೆಯದಿರೋ ಹಾಗೆ ಸಂಬಂಧಪಟ್ಟವರು ನೋಡ್ಕೊಂಡ್ರೆ ಸಾಕಾಗಿದೆ'' ಎನ್ನುತ್ತಾ ನಂಜಯ್ಯನವರು ನಂಜನಗೂಡಿನ ರಸಬಾಳೆ ತಿಂದು ಸಿಪ್ಪೆಯನ್ನು ರಸ್ತೆಗೆ ಎಸೆದರಂತೆ!!

- **'ಭಾರತೀಯ ಜನತಾ ಪಾರ್ಟಿ'ಯು ಜನರ ಮಧ್ಯೆ 'ಜಗಳ' ಹಚ್ಚುವ ಕೆಲಸ ಮಾಡುತ್ತಿದೆ: ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ವಾಗ್ದಾಳಿ**
– ಹಾಗಂದ್ರೆ, ಅದಕ್ಕೆ 'ಭಾರತೀಯ ಜಗಳಾ ಪಾರ್ಟಿ' ಅಂತ ಮರುನಾಮಕರಣ ಮಾಡಬೇಕು ಅನ್ನೋದು ನಿಮ್ಮ ಅಭಿಮತವೇ ಸರ್?

- **2024ರ ವರ್ಷಾಂತ್ಯದಲ್ಲಿ ದೇಶದಲ್ಲಿ ಪೆಟ್ರೋಲ್-ಡೀಸೆಲ್ ಮಾರಾಟದಲ್ಲಿ ಶೇ.9.80ರಷ್ಟು ಹೆಚ್ಚಳ: ಸುದ್ದಿ**
– 'ಇಯರ್ ಎಂಡ್'ಗೂ 'ಎಣ್ಣೆ'ಗೂ ಅದೇನೋ ಲಿಂಕು ಇರಬೇಕು ಕಣ್ರೀ; ಯಾಕಂದ್ರೆ, ಅತ್ತ ಕಡೆ ನೋಡಿದ್ರೆ ಹೊಟ್ಟೆಗೆ ಬಿಟ್ಕೊಳ್ಳೋ 'ಎಣ್ಣೆ' ಸಿಕ್ಕಾಪಟ್ಟೆ ಬಿಕರಿ ಆಗಿದೆ, ಇತ್ತ ಕಡೆ ನೋಡಿದ್ರೆ ವಾಹನಗಳ ಹೊಟ್ಟೆಗೆ ತುಂಬಿಸೋ 'ಪೆಟ್ರೋಲ್-ಡೀಸೆಲ್'ನಂಥ ಅದರ 'ಸೋದರ-ಸಂಬಂಧಿ' ಎಣ್ಣೆಗಳ ಮಾರಾಟವೂ ವೃದ್ಧಿಯಾಗಿದೆ!!

- **ಆಲೂಗಡ್ಡೆ ಮತ್ತು ಈರುಳ್ಳಿ ದರದಲ್ಲಿ ಕ್ರಮವಾಗಿ ಶೇ.30 ಮತ್ತು ಶೇ.40ರಷ್ಟು ಕುಸಿತ: ಸುದ್ದಿ**
– ''ಹಾಗಂತ, ದಿನಾಲೂ ಮಸಾಲೆದೋಸೆ ಮಾಡ್ಕೊಡು ಅಂತ ಪ್ರಾಣ ಹಿಂಡಬೇಡಿ'' ಎಂದು ಅಂಬುಜಮ್ಮನವರು ಅಡುಗೆಮನೆಯಿಂದಲೇ ಅನಂತಯ್ಯನೋರಿಗೆ ಆವಾಜ್ ಹಾಕಿದರಂತೆ!

- **ರೈತರಿಗೆ ಪಂಪ್‌ಸೆಟ್ ಮತ್ತು ಬೋರ್‌ವೆಲ್ ಹಾಕಿಸಿಕೊಡುವ ನೆಪದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಹೆಸರಲ್ಲಿ ವಂಚಿಸಿದ ಆರೋಪಿಯನ್ನು ಬಂಧಿಸಿದ ಪೊಲೀಸರು: ಸುದ್ದಿ**
– ಆರೋಪಿಯ 'ಪಂಪ್‌ಸೆಟ್'ಗೆ ಜೋಡಣೆಯಾಗಿರೋ 'ಬೋರ್‌ವೆಲ್'ನಿಂದ ಪೊಲೀಸರು ಸರಿಯಾಗೇ ನೀರು ಇಳಿಸ್ತಾರೆ ಬಿಡಿ!!

- **ಮಹಾರಾಷ್ಟ್ರದ ಜನರು ತಮಗೆ ಸಮಸ್ಯೆ ಎದುರಾದಾಗ ಅವನ್ನು ಬಗೆಹರಿಸುವಂತೆ ನಮ್ಮ ಪಕ್ಷವನ್ನು ಕೋರುತ್ತಾರೆ, ಚುನಾವಣೆ ವೇಳೆ ಮಾತ್ರ ನಮ್ಮ ಪಕ್ಷವನ್ನು ಮರೆತೇಬಿಡ್ತಾರೆ: ಮಹಾರಾಷ್ಟ್ರ ನವನಿರ್ಮಾಣ ಸೇನೆ ಪಕ್ಷದ ಮುಖ್ಯಸ್ಥ ರಾಜ್ ಠಾಕ್ರೆ**
– ಎಂಥಾ ವಿಚಿತ್ರ ನೋಡಿ! ಅದೇ ಥರ ಕೆಲವು ಜನಪ್ರತಿನಿಧಿಗಳು ಚುನಾವಣೆ ವೇಳೆ ಮಾತ್ರ ಮತದಾರರನ್ನು ಅಂಗಲಾಚ್ತಾರೆ; ಗೆದ್ದ ಮೇಲೆ ಮುಂದಿನ 5 ವರ್ಷಗಳವರೆಗೂ ಅದೇ ಮತದಾರರನ್ನ 'ಕ್ಯಾರೇ' ಅನ್ನಲ್ಲ!!

ಮನಮೋಹನ್ ಸಿಂಗ್ ನಿಜಕ್ಕೂ ಕಿಂಗ್ ಆಗಿದ್ದರಾ?

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಮನಮೋಹನ್ ಸಿಂಗ್‌ರವರ ನಿಧನಾನಂತರ ಕಾಂಗ್ರೆಸ್‌ನ ರಾಜಕೀಯ ಪ್ರೇರಿತ ನಡೆಯು ಪಕ್ಷದ ಇಬ್ಬಗೆಯ ನೀತಿಯನ್ನು ಎತ್ತಿ ತೋರಿಸಿದೆ. ''ಭಾರತಮಾತೆಯ ಮಹಾನ್ ಪುತ್ರ ಹಾಗೂ ಸಿಖ್ ಸಮುದಾಯದ ಮೊದಲ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಅಂತಿಮ ಸಂಸ್ಕಾರವನ್ನು ನಿಗಮ್ ಬೋಧ್‌ಘಾಟ್‌ನಲ್ಲಿ ಮಾಡುವ ಮೂಲಕ ಅವರಿಗೆ ಸಂಪೂರ್ಣ ಅವಮಾನ ಮಾಡಲಾಗಿದೆ'' ಎಂದು ರಾಹುಲ್ ಗಾಂಧಿಯವರು 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಕೇಂದ್ರ ಸರಕಾರದ ವಿರುದ್ಧ ಕಿಡಿ ಕಾರಿದ್ದಾರೆ.

ಮನಮೋಹನ್ ಸಿಂಗ್‌ರವರಿಗೆ ಸ್ಮಾರಕ ರಚಿಸಲು ಕೇಂದ್ರ ಸರಕಾರ ಬದ್ಧವಾಗಿದೆ, ಆದರೆ ಅದಕ್ಕೆ ಸೂಕ್ತ ಸ್ಥಳ ಗುರುತಿಸಲು ಕಾಲಾವಕಾಶ ಬೇಕು. ಆತುರದಲ್ಲಿ ಸಾಧ್ಯವಾಗದ ಕಾರಣ ಸದ್ಯ ಅವರ ಅಂತ್ಯಕ್ರಿಯೆಯನ್ನು ನಿಗಮ್ ಬೋಧ್‌ಘಾಟ್‌ನಲ್ಲಿ ನಡೆಸಲು ಅದು ವಿನಂತಿಸಿತ್ತು. ಆದರೆ ದೆಹಲಿ ವಿಧಾನಸಭಾ ಚುನಾವಣೆಯು ಹತ್ತಿರದಲ್ಲಿಯೇ ಇರುವುದರಿಂದ ಮತ್ತು ಸಿಖ್ ಮತದಾರರು ಗಣನೀಯ ಸಂಖ್ಯೆಯಲ್ಲಿರುವ ಕಾರಣ, ಸ್ಮಾರಕ ನಿರ್ಮಾಣದ ರಾಜಕೀಯೀಕರಣದಿಂದ ಲಾಭ ಗಳಿಸಬಹುದು ಎಂಬ ಲೆಕ್ಕಾಚಾರದಲ್ಲಿ ಆ ವಿಷಯವನ್ನು ಕಾಂಗ್ರೆಸ್ ವಿವಾದ ಮಾಡುತ್ತಿದೆ.

ಮನಮೋಹನ್ ಸಿಂಗ್‌ರವರು ಉತ್ತಮ ಆರ್ಥಿಕ ತಜ್ಞ ಮತ್ತು ದೇಶದ ಅರ್ಥವ್ಯವಸ್ಥೆಗೆ ಹೊಸದಿಕ್ಕು ನೀಡಿದವರು ಎಂಬುದು ನಿರ್ವಿವಾದಿತ ಸಂಗತಿ. ಅವರ ನಿಧನದ ತರುವಾಯ, ಅವರ ಜ್ಞಾನ ಮತ್ತು ಕೊಡುಗೆಯ ಕುರಿತು ಪತ್ರಿಕೆಗಳಲ್ಲಿ ಹಾಡಿಹೊಗಳಲಾಗುತ್ತಿದೆ. ದೇಶವನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡಿದ ಮಾಂತ್ರಿಕ ಎಂದು ಬಣ್ಣಿಸಲಾಗುತ್ತಿದೆ. ಮುಂದುವರಿದ ಭಾಗವಾಗಿ ಕಾಂಗ್ರೆಸ್ ನಾಯಕರು ಮತ್ತು ಕೆಲವು ಅಂಕಣಕಾರರು, ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಅವರ ವಿರುದ್ಧ ಬಿಜೆಪಿಯು ನಡೆಸಿದ ಹೋರಾಟ ಮತ್ತು ಮಾಡಿದ ಕಟುಟೀಕೆಗಳ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಅಂದು ಬಿಜೆಪಿ ವಿರೋಧ ಪಕ್ಷವಾಗಿತ್ತು. ಆದರೆ ಅವರಿಗೆ ಸ್ವಪಕ್ಷೀಯರಿಂದಲೇ ಹತ್ತು ವರ್ಷಗಳವರೆಗೆ ಆದ ಅವಮಾನಗಳ ಪಟ್ಟಿ ತುಂಬಾ ಉದ್ದವಿದೆ.

2004ರಲ್ಲಿ ಅನಿರೀಕ್ಷಿತ ರಾಜಕೀಯ ಬೆಳವಣಿಗೆಯಲ್ಲಿ ಅವರು ಪ್ರಧಾನಿ ಪಟ್ಟಕ್ಕೇರಿದರು. ಅದಾಗಲೇ ರಾಜ್ಯಸಭಾ ಸದಸ್ಯರಾಗಿದ್ದ ಅವರು ಮತ್ತೆ ಚುನಾವಣೆ ಎದುರಿಸಲಿಲ್ಲ. 2009ರಲ್ಲಿ ಪಂಜಾಬಿನಿಂದ ಲೋಕಸಭೆಗೆ ಸ್ಪರ್ಧಿಸಲು ಅವರಿಗೆ ಇಚ್ಛೆಯಿತ್ತು; ಆದರೆ ಕಾಂಗ್ರೆಸ್ ಅದಕ್ಕೆ ಸೊಪ್ಪುಹಾಕದೆ, ಅವರು ಮತ್ತೆ ರಾಜ್ಯಸಭೆಯ ದಾರಿಯನ್ನೇ ಹಿಡಿಯುವಂತೆ ಮಾಡಿತು ಎಂದು ಮನಮೋಹನ್ ಸಿಂಗ್‌ರ ಮಾಧ್ಯಮ ಮುಖ್ಯಸ್ಥರಾಗಿದ್ದ ಸಂಜಯ್ ಬಾರು ಅವರು ಹೇಳುತ್ತಾರೆ. ದೇಶದ ಪ್ರಧಾನ ಮಂತ್ರಿಯಾಗಿದ್ದವರು ಚುನಾವಣೆಗೆ ಸ್ಪರ್ಧಿಸಲು ಗಾಂಧಿ ಕುಟುಂಬದ ಅನುಮತಿ ಪಡೆಯಬೇಕಾದ ದಯನೀಯ ಸ್ಥಿತಿಯನ್ನು ಅವರಿಗೆ ತಂದೊಡ್ಡಲಾಗಿತ್ತು. ಇದೆಂಥಾ ದುರದೃಷ್ಟಕರ ಸಂಗತಿಯಲ್ಲವೇ?

ಮನಮೋಹನ್‌ರ 10 ವರ್ಷದ ಅಧಿಕಾರಾವಧಿಯಲ್ಲಿ ಜಾರಿಗೆ ತರಲಾದ ಹಲವು ಜನಪರ ಯೋಜನೆಗಳ ಶ್ರೇಯಸ್ಸನ್ನು ರಾಹುಲ್ ಗಾಂಧಿಯವರಿಗೆ ಅಥವಾ ಸೋನಿಯಾ ನೇತೃತ್ವದ 'ರಾಷ್ಟ್ರೀಯ ಸಲಹಾ ಮಂಡಳಿ'ಗೆ (ಎನ್‌ಎಸಿ) ಸಲ್ಲಿಸಲಾಗುತ್ತಿತ್ತು. ಸಿಂಗ್‌ರವರು 'ಉದ್ಯೋಗ ಖಾತರಿ ಯೋಜನೆ'ಯನ್ನು ಜಾರಿಗೆ ತಂದಾಗ, ಕಾಂಗ್ರೆಸ್ ಪಕ್ಷವು ಅದರ ಶ್ರೇಯಸ್ಸನ್ನು ರಾಹುಲರಿಗೆ ಸಲ್ಲಿಸಿತು. ಇದು ಸಿಂಗ್‌ರವರ ಗಮನಕ್ಕೆ ಬಂದಾಗ, ''ಎಲ್ಲಾ ಶ್ರೇಯಸ್ಸು ಅವರಿಗೆ ಸಲ್ಲಲಿ, ನನಗೆ ಬೇಡ. ನಾನು ನನ್ನ ಕೆಲಸ ಮಾಡುತ್ತಿದ್ದೇನೆ'' ಎಂದರಂತೆ. ಆದರೆ ರಾಹುಲರು, ''ಈ ಯೋಜನೆಯ ಯಶಸ್ಸು ನನ್ನದಲ್ಲ, ಅದು ಪ್ರಧಾನಿಯವರಿಗೆ ಸಲ್ಲಬೇಕು'' ಎಂದು ಅಪ್ಪಿತಪ್ಪಿಯೂ ಹೇಳಲಿಲ್ಲ.



ನ್ಯಾಯಾಲಯದಲ್ಲಿ ಶಿಕ್ಷೆಗೊಳಗಾದ ಶಾಸಕರು ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡುವ ಸುಗ್ರೀವಾಜ್ಞೆಯು 2013ರಲ್ಲಿ ಜಾರಿಯಾಯಿತು. ಆದರೆ ರಾಹುಲ್ ಗಾಂಧಿಯವರು ಪತ್ರಿಕಾಗೋಷ್ಠಿಯಲ್ಲಿ, ''ಈ ಸುಗ್ರೀವಾಜ್ಞೆಯು ಸಂಪೂರ್ಣ ಅಸಂಬದ್ಧ, ಇದನ್ನು ಹರಿದು ಬಿಸಾಡಬೇಕು'' ಎಂದು ಸರಕಾರದ ವಿರುದ್ಧ ಅಬ್ಬರಿಸಿದರು. ವಿದೇಶ ಪ್ರವಾಸದಲ್ಲಿದ್ದ ಮನಮೋಹನ್‌ರು ಇದರಿಂದಾಗಿ ಇನ್ನಿಲ್ಲದ ಮುಜುಗರಕ್ಕೆ ಒಳಗಾಗಬೇಕಾಯಿತು. ಸುಗ್ರೀವಾಜ್ಞೆ ತರಲು ಒಪ್ಪಿಗೆ ನೀಡಿದ್ದ ಸಂಪುಟದ ಒಬ್ಬ ಸದಸ್ಯರೂ ಅವರ ಬೆಂಬಲಕ್ಕೆ ಬರಲಿಲ್ಲ. ಮನಮೋಹನ್‌ರು ನಿಸ್ಸಹಾಯಕರಾಗಿ ತಮಗಾದ ಅಪಮಾನವನ್ನು ಉಸಿರೆತ್ತದೆ ಸಹಿಸಿಕೊಂಡರು. ಪ್ರಧಾನಿಯಾಗುವ ಕನಸನ್ನು ಹೊತ್ತಿದ್ದ ರಾಹುಲರು, ಮನಮೋಹನ್‌ಸಿಂಗ್‌ರ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿ ಆಡಳಿತದ ಅನುಭವ ಪಡೆಯುವ ಆಸಕ್ತಿಯನ್ನೇ ತೋರಲಿಲ್ಲ, ಅವರಡಿಯಲ್ಲಿ ಕೆಲಸ ಮಾಡಲು ರಾಹುಲ್ ಸಿದ್ಧರಿರಲಿಲ್ಲ. ಆದರೆ ಇಂದು ಅವರನ್ನು ಹಾಡಿ ಹೊಗಳುತ್ತಿದ್ದಾರೆ!

ಸೋನಿಯಾ ಗಾಂಧಿಯವರು, ತಮ್ಮ ಮಾತನ್ನು ಮೀರದ ಮನಮೋಹನ್‌ರನ್ನು ಪ್ರಧಾನಿ ಸ್ಥಾನದಲ್ಲಿ ಕೂರಿಸಿ ಸರಕಾರವನ್ನು ಹಿಂಬಾಗಿಲಿನಿಂದ ನಿಯಂತ್ರಿಸಲು ರಾಷ್ಟ್ರೀಯ ಸಲಹಾ ಮಂಡಳಿ ರಚಿಸಿ, ಅದರಲ್ಲಿ ಕೈಗೊಂಡ ನಿರ್ಣಯವನ್ನು ಸರಕಾರದ ಮೇಲೆ ಹೇರುತ್ತಿದ್ದರು. ಈ ಸಂವಿಧಾನಬಾಹಿರ ಮಂಡಳಿಯು ಕೇಂದ್ರ ಸರಕಾರದ ನೀತಿ ನಿರೂಪಣೆಯಲ್ಲಿ ತನ್ನ ಪ್ರಾಬಲ್ಯ ಸ್ಥಾಪಿಸಿ, ಪ್ರಧಾನಿ ಹುದ್ದೆಯನ್ನು ಗೌಣವಾಗಿಸುವಂತೆ ಮಾಡಿದ ಅಪಕೀರ್ತಿಯು ಸೋನಿಯಾರಿಗೆ ಸಲ್ಲುತ್ತದೆ.

ಪತ್ರಕರ್ತರುಗಳಾದ ವೀರ್ ಸಾಂಘ್ವಿ, ಬರ್ಖಾದತ್ ಮತ್ತು ದೆಹಲಿಯ ಕಾರ್ಪೊರೇಟ್ ವಲಯದ ದಲ್ಲಾಳಿ ನೀರಾ ರಾಡಿಯ ನಡುವಿನ ಫೋನ್ ಸಂಭಾಷಣೆಯು ಬಯಲಾದಾಗ, 'ಮನಮೋಹನ್‌ರ ಆಡಳಿತದಲ್ಲಿ ಕೇಂದ್ರ ಸಚಿವರ ನೇಮಕಾತಿಯನ್ನು ದಲ್ಲಾಳಿಯೊಬ್ಬಳು ನಿಯಂತ್ರಿಸುತ್ತಿದ್ದಳು' ಎಂಬ ಆಘಾತಕಾರಿ ಸಂಗತಿಯು ದೇಶದಲ್ಲಿ ತಲ್ಲಣ ಮೂಡಿಸಿತು. 'ಮನಮೋಹನ್‌ರು ಸೋನಿಯಾರಿಂದ ನೇಮಕವಾಗಿದ್ದ ಪ್ರಧಾನಿ, ಸರಕಾರದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವುದು ನಂ.10 ಜನಪಥ್‌ನಲ್ಲಿ' ಎಂಬ ದಟ್ಟ ನಂಬಿಕೆಯ ವಾತಾವರಣವೇ ಇದಕ್ಕೆ ಕಾರಣವಾಗಿತ್ತು. ''ಈ ಭಾವನೆ ತಪ್ಪು. ಅಂತಿಮ ನಿರ್ಣಯ ಕೈಗೊಳ್ಳುವವರು ಪ್ರಧಾನಿಗಳು ಮಾತ್ರ'' ಎಂದು ಹೇಳುವ ಮೂಲಕ ಅವರ ಗೌರವ ಕಾಪಾಡುವ ಸಲುವಾಗಿಯಾದರೂ ಅಮ್ಮ-ಮಗ ಸ್ಪಷ್ಟೀಕರಣ ಕೊಡುವ ಗೋಜಿಗೇ ಹೋಗಲಿಲ್ಲ.

ಸಂಜಯ್ ಬಾರು ಅವರು 'ದಿ ಆಕ್ಸಿಡೆಂಟಲ್ ಪ್ರೈಮ್ ಮಿನಿಸ್ಟರ್' ಎಂಬ ತಮ್ಮ ಪುಸ್ತಕದಲ್ಲಿ, ''ಮನಮೋಹನ್ ಸಿಂಗ್‌ರವರಿಗೆ ಹಣಕಾಸು ಖಾತೆಯನ್ನು ತಮ್ಮ ಬಳಿಯೇ ಇರಿಸಿಕೊಳ್ಳುವ ಇಚ್ಛೆಯಿತ್ತು. ಆದರೆ ಕಾಂಗ್ರೆಸ್ ಹೈಕಮಾಂಡ್ ಇದನ್ನು ತಿರಸ್ಕರಿಸಿ ಪಿ.ಚಿದಂಬರಂ ಅವರನ್ನು ಕೂರಿಸಿತು'' ಎಂದು ಬರೆದಿದ್ದಾರೆ. ತಮಗೆ ಬೇಕಾದ ಖಾತೆ ಪಡೆಯುವ ಸ್ವಾತಂತ್ರ್ಯವನ್ನು ಸಿಂಗ್‌ರವರಿಗೆ ನೀಡದಷ್ಟರ ಮಟ್ಟಿಗಿನ ಉಕ್ಕಿನ ಹಿಡಿತವನ್ನು ಗಾಂಧಿ ಕುಟುಂಬ ಸಾಧಿಸಿತ್ತು. ಪ್ರಧಾನಿಯವರಿಗೆ ಇದಕ್ಕಿಂತ ಅಪಮಾನ ಮಾಡಲು ಸಾಧ್ಯವಾ? 1991ರಲ್ಲಿ ಮನಮೋಹನ್‌ರಿಗೆ ಹಣಕಾಸು ಸಚಿವರಾಗಿ ಇದ್ದ ಸ್ವಾತಂತ್ರ್ಯವು, ಅವರು ದೇಶದ ಪ್ರಧಾನಿಯಾದಾಗ ಇರಲಿಲ್ಲ ಎಂಬುದು ಕಟುಸತ್ಯ.

2011ರಲ್ಲಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ್ ಸಿಂಗ್‌ರವರು 'ಇಂಡಿಯಾ ಟಿವಿ'ಯ ರಜತ್ ಶರ್ಮಾರವರ ಕಾರ್ಯಕ್ರಮದಲ್ಲಿ, ''ನಾನು ರಾಹುಲ್‌ರವರನ್ನು ಪ್ರಧಾನಿಯಾಗಿ ನೋಡಬಯಸುತ್ತೇನೆ'' ಎಂಬ ಹೇಳಿಕೆ ನೀಡಿದರು. ಇಂಥ ಹೇಳಿಕೆಯು ಪ್ರಧಾನಿಯವರಿಗೆ ಮಾಡುವ ಅಪಮಾನವಾಗುತ್ತದೆ ಮತ್ತು ಅವರ ಸ್ಥಾನಕ್ಕಿರುವ ಮಹತ್ವವನ್ನು ಕುಗ್ಗಿಸುತ್ತದೆ ಎಂಬ ಲವಲೇಶ ಚಿಂತೆಯೂ ಆಗ ಅವರಲ್ಲಿರಲಿಲ್ಲ ಮತ್ತು ಇಂಥ ಹೇಳಿಕೆಗಳನ್ನು ನೀಡದಂತೆ ಸೋನಿಯಾರು ಕೂಡ ನಿರ್ಬಂಧ ಹೇರಲಿಲ್ಲ. 'ನಮ್ಮಿಂದ ನೀವು ಪ್ರಧಾನಿ, ನಾವು ಮನಸ್ಸು ಮಾಡಿದ ದಿನ ಬದಲಾವಣೆ ಮಾಡಲಾಗುವುದು' ಎಂಬ ಸಂದೇಶವನ್ನು ಅಂದು ಸಿಂಗ್‌ರಿಗೆ ಹೈಕಮಾಂಡ್ ರವಾನಿಸಿತ್ತು. ''ಮನಮೋಹನ್ ಸಿಂಗ್‌ರವರು ಮೂರನೆಯ ಅವಧಿಗೂ ತಾವಿರುವ ಸಾಧ್ಯತೆ ಇದೆಯೆಂದು ಹೇಳಿದ್ದಾರೆ'' ಎಂಬ ಪತ್ರಿಕಾ ವರದಿಯು 2013ರಲ್ಲಿ ಪ್ರಕಟವಾದಾಗ, ಪಕ್ಷದ ವಕ್ತಾರರಾದ ರಶೀದ್ ಅಲ್ವಿ ಮತ್ತು ರಾಜೀವ್ ಶುಕ್ಲ ಅವರು, ''ಜನರು ರಾಹುಲ್ ಗಾಂಧಿಯವರನ್ನು ಪ್ರಧಾನಿಯಾಗಿ ಕಾಣಬಯಸುತ್ತಾರೆ'' ಎಂದು ಪ್ರತಿಕ್ರಿಯಿಸಿ, 'ನಮಗಿನ್ನು ನಿಮ್ಮ ಅಗತ್ಯವಿಲ್ಲ' ಎಂದು ಸ್ಪಷ್ಟವಾಗಿ ತಿಳಿಸಿದರು! ಪ್ರಧಾನಿಯಾದವರನ್ನು ಗಾಂಧಿ ಕುಟುಂಬವು ನಡೆಸಿಕೊಂಡ ರೀತಿ ಇಷ್ಟು ಹೀನಾಯವಾಗಿತ್ತು.

ರೈಲ್ವೆ ಸಚಿವ ಪವನ್ ಬನ್ಸಲ್ ಅವರ ಸಂಬಂಧಿ ಸಿಂಗ್ಲಾ, ರೈಲ್ವೆಯ ಉನ್ನತ ಹುದ್ದೆಗಳನ್ನು ಮಾರಾಟ ಮಾಡಿ ಹಣ ವಸೂಲಿ ಮಾಡುವಾಗ ಸಿಬಿಐ ಕೈಯಲ್ಲಿ ಸಿಕ್ಕಿಬಿದ್ದರು. ಇದೇ ವೇಳೆ, ಕಾನೂನು ಸಚಿವರಾಗಿದ್ದ ಅಶ್ವಿನಿ ಕುಮಾರ್‌ರವರು ಕಲ್ಲಿದ್ದಲು ಹಗರಣ ವರದಿಯನ್ನು ನಕಲು ಮಾಡಿ ಸಿಕ್ಕಿಬಿದ್ದರು. ಪ್ರಧಾನಿಯವರು ಈ ಸಚಿವದ್ವಯರ ರಾಜೀನಾಮೆಯನ್ನು ಪಡೆದಾಗ, 'ಸೋನಿಯಾರವರ ಮಧ್ಯಪ್ರವೇಶದಿಂದ ಅವರಿಬ್ಬರು ಕೆಳಗಿಳಿಯಬೇಕಾಯಿತು' ಎಂಬರ್ಥದ ಸುದ್ದಿ ಬಿತ್ತರಿಸಿ, 'ಭ್ರಷ್ಟಾಚಾರದ ವಿಷಯದಲ್ಲಿ ಸೋನಿಯಾ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ಅವರಿಗೆ ಶ್ರೇಯಸ್ಸನ್ನು ನೀಡಲಾಯಿತು.

1984ರ ಸಿಖ್ ನರಮೇಧದಲ್ಲಿ ಕಾಂಗ್ರೆಸ್ ಕಾರ್ಯಕರ್ತರು 2,700 ಜನರನ್ನು ಬಲಿಪಡೆದರು, ಗಣನೀಯ ಸಂಖ್ಯೆಯ ಸಿಖ್ಖರ ಆಸ್ತಿಪಾಸ್ತಿಯನ್ನು ಧ್ವಂಸಗೊಳಿಸಿದರು. ಇದರ ಬಗ್ಗೆ ಪ್ರತಿಕ್ರಿಯಿಸಿದ್ದ ರಾಜೀವ್ ಗಾಂಧಿಯವರು, ''ದೊಡ್ಡ ಮರ ಬಿದ್ದಾಗ ಸುತ್ತಮುತ್ತಲಿನ ಭೂಮಿಗೆ ಹಾನಿಯಾಗುವುದು ಸಹಜ'' ಎಂದು ಆ ಹತ್ಯಾಕಾಂಡವನ್ನು ಸಮರ್ಥಿಸಿಕೊಂಡಿದ್ದು ಸಿಖ್ಖರಿಗೆ ಮಾಡಿದ ಘೋರ ಅಪಚಾರವಲ್ಲವಾ? ಧರ್ಮದ ಬಣ್ಣ ಬಳಿದು ಮನಮೋಹನ್‌ರ ಸ್ಮಾರಕದ ವಿಷಯವನ್ನು ಟೀಕಿಸಿರುವ ರಾಹುಲ್ ಗಾಂಧಿಯವರಿಗೆ, ತಮ್ಮ ಕುಟುಂಬದ ಪಾರಮ್ಯವನ್ನು ತೋರಲೆಂದು 2004ರಿಂದ 2014ರವರೆಗೆ ಮನಮೋಹನ್‌ರಿಗೆ ಅದೆಷ್ಟು ಬಾರಿ ಅವಮಾನ ಮಾಡಲಾಯಿತು ಎಂಬ ಸಂಗತಿ ಮರೆತು ಹೋಗಿದೆ. ಮನಮೋಹನ್‌ರು ಬದುಕಿದ್ದಾಗ ಅವರನ್ನು ಕೀಲುಬೊಂಬೆಯಂತೆ ನಡೆಸಿಕೊಂಡು ವ್ಯಕ್ತಿತ್ವಕ್ಕೆ ಮಸಿ ಬಳಿಸಿದ್ದು ಸಾಲದು ಎಂಬಂತೆ, ಅವರು ಮೃತಪಟ್ಟ ನಂತರ ದೆಹಲಿ ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡು ಕೀಳು ಮಟ್ಟದ ರಾಜಕೀಯ ಮಾಡಲು ರಾಹುಲರ ನೇತೃತ್ವದ ಕಾಂಗ್ರೆಸ್ ಮುಂದಾಗಿರುವುದು ಅಸಹ್ಯಕರವಾಗಿದೆ.

ಮನಮೋಹನ್‌ರು ಪ್ರಧಾನಿ ಪಟ್ಟದಿಂದ ಇಳಿದ ತರುವಾಯ, ''ಇತಿಹಾಸ ನನ್ನನ್ನು ದಯೆಯಿಂದ ನೋಡುತ್ತದೆ'' ಎಂದು ಹೇಳಿದ್ದರು. ಭಾರತೀಯ ಸಂಸ್ಕೃತಿಯಲ್ಲಿ, ಮರೆಯಾದವರ ಗುಣಗಾನ ಮಾಡುವರೇ ವಿನಾ, ಅವರ ವೈಫಲ್ಯವನ್ನಾಗಲೀ ಅವಗುಣವನ್ನಾಗಲೀ ಚರ್ಚಿಸುವುದಿಲ್ಲ. ಗಾಂಧಿ ಕುಟುಂಬದವರು ತಮ್ಮ ಪ್ರಾಬಲ್ಯವನ್ನು ನೆನಪಿಸಲು ಒಂದಲ್ಲಾ ಒಂದು ರೀತಿಯಲ್ಲಿ ಉಂಟುಮಾಡುತ್ತಿದ್ದ ಮುಜುಗರವನ್ನು ಸಹಿಸಿಕೊಂಡಿದ್ದ 'ಸಿಂಗ್' ನಿಜಕ್ಕೂ 'ಕಿಂಗ್' ಆಗಿದ್ದರಾ? ಎಂಬ ಪ್ರಶ್ನೆ ಕಾಡುತ್ತದೆ. ಜತೆಗೆ ಅವರ ನಿಷ್ಠೆಯು ದುರ್ಬಳಕೆಯಾಗಿದ್ದರ ಬಗ್ಗೆ ಸಹಜವಾಗಿ ಅನುಕಂಪ ಮೂಡುತ್ತದೆ.

(ಲೇಖಕರು ಬಿಜೆಪಿಯ ವಕ್ತಾರರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

'ತ್ರಿಮತಸ್ಥ'ರ ಅಡ್ಡಾದಲ್ಲಿ ಬದಲಾವಣೆ!

ಶೀರ್ಷಿಕೆ ನೋಡಿ ನೀವು 100% ಕನ್‌ಫ್ಯೂಸ್ ಆಗಿದ್ದೀರಿ ಅಂತ ಕಲಹಪ್ರಿಯ ನಾರದರಿಗೆ ಗೊತ್ತು. ಏಕೆಂದರೆ, ಬ್ರಾಹ್ಮಣರಲ್ಲಿ ಕಾಣಬರುವ 'ಸ್ಮಾರ್ತ', 'ಶ್ರೀವೈಷ್ಣವ' ಮತ್ತು 'ಮಾಧ್ವ' ಪಂಗಡಗಳನ್ನು ಅಥವಾ ಮತಗಳನ್ನು ಒಟ್ಟಾಗಿ 'ತ್ರಿಮತಸ್ಥರು' ಅಂತ ಕರೆಯೋದು ವಾಡಿಕೆ. ''ಇಂಥವರ ಅಡ್ಡಾದಲ್ಲಿ ಅದೇನು ಬದಲಾವಣೆ?'' ಅಂತ ನಮ್ಮಂಥ 'ಯು-ಐ'ಗಳು (ಕನ್‌ಫ್ಯೂಸ್ ಮಾಡ್ಕೋಬೇಡಿ, 'ಯು-ಐ' ಅಂದ್ರೆ, ಓದುಗರಾದ 'ನೀವು' ಮತ್ತು ನಾರದನಾದ 'ನಾನು' ಅಂತ ಅರ್ಥ) ತಲೆಯೊಳಗೆ ಹುಳ ಬಿಟ್ಕೊಳ್ಳೋದು ಬೇಡ. 'ಯು-ಐ'ಗಳ ತಲೆಯಲ್ಲಿ ಈಗಾಗಲೇ ಮುಲುಗುಟ್ಟುತ್ತಿರುವ ಹುಳಗಳೇ ಸಾಕಾಗಿವೆ! ನಾರದರು ಇಲ್ಲಿ 'ತ್ರಿಮತಸ್ಥರು' ಅಂತ ಹೇಳಿದ್ದು 'ಜೆಸಿಬಿ' ಕುರಿತಾಗಿ. ಥೋ... ಮತ್ತೆ ಕನ್‌ಫ್ಯೂಸ್ ಮಾಡ್ಕೋಬೇಡಿ ಕಣ್ರೀ... 'ಜೆಸಿಬಿ' ಅಂದ್ರೆ ಯಂತ್ರ ಅಲ್ಲ, 'ಜಾತ್ಯತೀತ ಜನತಾದಳ', 'ಕಾಂಗ್ರೆಸ್' ಮತ್ತು 'ಬಿಜೆಪಿ' ಎಂಬ ಪಕ್ಷಗಳ ಹೆಸರಿನ ಹ್ರಸ್ವರೂಪವೇ 'ಜೆಸಿಬಿ'! ಅಂದ್ರೆ ರಾಜ್ಯದಲ್ಲಿ ಈ ಮೂರೂ ಪಕ್ಷಗಳ ಸಾರಥ್ಯ ವಹಿಸಿರುವವರ, ಅಂದರೆ 'ಪಕ್ಷಗಳ ರಾಜ್ಯಾಧ್ಯಕ್ಷರ' ಬದಲಾವಣೆ ಆಗಬೇಕು ಎಂಬುದಾಗಿ ಸದರಿ 'ತ್ರಿಮತಸ್ಥರ' ಅಡ್ಡಾದಲ್ಲಿ ಕೂಗು ಕೇಳಿಬಂದಿದೆಯಂತೆ. ಈ ಪೈಕಿ, ಜಾತ್ಯತೀತ ಜನತಾದಳದ ಅಧ್ಯಕ್ಷ ಗಾದಿಗೆ

'ಮರಿ ಕುಮಾರಣ್ಣನನ್ನು' (ಅಯ್ಯೋ ರಾಮಾ... ಮತ್ತೆ ಕನ್‌ಫ್ಯೂಷನ್ನು!) ಅಂದ್ರೆ ನಿಖಿಲ್ ಕುಮಾರಸ್ವಾಮಿಯವರನ್ನು ತಂದು ಕೂರಿಸುವ ಕುರಿತು ಪದ್ಮನಾಭನಗರದಲ್ಲಿ 'ಮಂತ್ರಾಲೋಚನೆ' ನಡೆದಿದೆಯಂತೆ. ಮಿಕ್ಕಂತೆ, ಕಾಂಗ್ರೆಸ್ ಮತ್ತು ಬಿಜೆಪಿ ವತಿಯಿಂದ ಕ್ರಮವಾಗಿ ಪಟ್ಟವನ್ನು ಅಲಂಕರಿಸಿರುವ ಡಿ.ಕೆ.ಶಿವಕುಮಾರ್ ಮತ್ತು ಬಿ.ವೈ.ವಿಜಯೇಂದ್ರ ಅವರ ಬದಲಾವಣೆಯೂ ಆಗಲಿದೆ ಎನ್ನಲಾಗುತ್ತಿದೆ. ಒಂದೇ ವ್ಯತ್ಯಾಸವೆಂದರೆ, ಜೆಡಿಎಸ್ ರಾಜ್ಯಾಧ್ಯಕ್ಷರು 'ಸಂಕ್ರಾಂತಿ' ವೇಳೆಗೆ ಬದಲಾಗಲಿದ್ದರೆ, ಮಿಕ್ಕೆರಡು ಪಕ್ಷಗಳವರಿಗೆ ಇನ್ನೂ 'ಮುಹೂರ್ತ' ನಿಗದಿಯಾಗಿಲ್ಲ ಎಂಬುದು ತ್ರಿಲೋಕ ಸಂಚಾರಿ ನಾರದರ ಕಿವಿಗೆ ಬಿದ್ದಿರುವ ಸುದ್ದಿ.

'ಸಂಕ್ರಾಂತಿ'ಯಂದು ಉತ್ತರಾಯಣ ಪುಣ್ಯಕಾಲ ಶುರುವಾಗೋದ್ರಿಂದ, ಅಂದು ಪಕ್ಷಾಧ್ಯಕ್ಷರ ಬದಲಾವಣೆಯಾದರೆ 'ಜೆಡಿಎಸ್'ಗೂ ಪುಣ್ಯಕಾಲ ಶುರುವಾಗುತ್ತೆ, ದೆಸೆ ಕುದುರುತ್ತೆ ಅಂತ ಯಾರಾದ್ರೂ ಜ್ಯೋತಿಷ್ಯ ಮಾರ್ತಾಂಡರು 'ದಳಪತಿ'ಗಳಿಗೆ ಮುಹೂರ್ತ ಇಟ್ಟುಕೊಟ್ಟಿದ್ದಾರಾ ಅನ್ನೋದು ನಾರದರಿಗಿನ್ನೂ ಖಾತ್ರಿಯಾಗಿಲ್ಲ. ಇನ್ನು, ಬಹಳ ದಿನಗಳಿಂದ 'ಮನೆಯೊಂದು ಮೂರು ಬಾಗಿಲು' ಎಂಬಂತಾಗಿದ್ದ ಬಿಜೆಪಿಯಲ್ಲಿ ಈ ಥರ 'ಪಕ್ಷಾಧ್ಯಕ್ಷರ ಬದಲಾವಣೆ' ಎಂಬ ಪಟಾಕಿ ಆಗಾಗ ಹೊತ್ತಿಕೊಂಡು, ಇನ್ನೇನು 'ಢಂ' ಅನ್ನುತ್ತೆ ಅನ್ನೋವಾಗ 'ಠುಸ್' ಅಂದಿದನ್ನೂ ಜನರು ಈಗಾಗಲೇ ನೋಡಿದ್ದಾರೆ. ಆದರೆ ಈ ಬಾರಿ ತಮ್ಮ 'ಯತ್ನ'ವು 'ಹಾಳ್' ಆಗುವುದಿಲ್ಲ ಎಂಬ ನಂಬಿಕೆಯು 'ಯತ್ನಾಳ'ರಲ್ಲಿ ಗಟ್ಟಿಯಾಗಿದೆಯಂತೆ. ಇನ್ನು, 'ಒಬ್ಬರಿಗೆ ಒಂದೇ ಹುದ್ದೆ' ಎಂಬ ಪ್ರತಿಪಾದನೆಯನ್ನು ಮುಂದುಮಾಡಿಕೊಂಡು ರಾಜ್ಯಾಧ್ಯಕ್ಷರ ಬದಲಾವಣೆಗೆ ಆಗ್ರಹಿಸಿರುವ ಕೆಲ ಕಾಂಗ್ರೆಸ್ಸಿಗರು 'ಆಗ್ರಹದ ಚೆಂಡನ್ನು' ದಿಲ್ಲಿಯ ಕಡೆಗೆ 'ಪುಷ್' ಮಾಡಿದ್ದಾರಂತೆ. ಅದೀಗ ಹೈಕಮಾಂಡ್ ಅಂಗಳದಲ್ಲಿದೆ....

ಮುಂದೇನಾಗುತ್ತದೆ ಎಂಬುದನ್ನು 'ಬೆಳ್ಳಿತೆರೆ'ಯಲ್ಲಿ ನೋಡಿ ಆನಂದಿಸಿ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue:07

ಸಮಾಚಾರ ಸಣ್ಣದಲ್ಲ

ಪತ್ನಿ ಖಾಸಗಿತನಕ್ಕೆ ಧಕ್ಕೆ: ಹೈ ಕೋರ್ಟ್ ಗರಂ

ಷಲಖನೌ: ಗಂಡಂದಿರು ಹಳೆಯ ಕಾಲದ ಮನಸ್ಥಿತಿಯನ್ನು ಬಿಡಬೇಕು. ಹೆಂಡತಿಯ ದೇಹ, ಖಾಸಗಿತನ ಮತ್ತು ಹಕ್ಕುಗಳು ಅವಳ ಸ್ವಂತದ್ದಾಗಿದ್ದು, ಆಕೆಯು ಪತಿಯ ಯಾವುದೇ ನಿಯಂತ್ರಣ ಅಥವಾ ಮಾಲೀಕತ್ವಕ್ಕೆ ಒಳಪಡುವುದಿಲ್ಲ ಎಂಬುದನ್ನು ಅರಿತುಕೊಳ್ಳುವುದಕ್ಕೆ ಇದು ಸಕಾಲ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.ನ್ಯಾಯಮೂರ್ತಿ ವಿನೋದ್ ದಿವಾಕರ್ ಅವರಿದ್ದ ಪೀಠವು, ಪತ್ನಿಯು ಪತಿಯ ಅಧೀನಕ್ಕೆ ಒಳಪಟ್ಟಿರುವುದಿಲ್ಲ. ಆಕೆಯೂ ತನ್ನದೇ ಆದ ಹಕ್ಕುಗಳನ್ನು ಹೊಂದಿರುತ್ತಾಳೆ. ಆಕೆಯ ದೈಹಿಕ ಸ್ವಾಯತ್ತತೆ ಮತ್ತು ಖಾಸಗಿತನವನ್ನು ಗೌರವಿಸುವುದು ಕಾನೂನಿನ ಬಾಧ್ಯತೆ ಮಾತ್ರವಲ್ಲ, ನಿಜವಾದ ಸಮಾನ ಸಂಬಂಧವನ್ನು ಬೆಳೆಸುವಲ್ಲಿ ಗಂಡನ ನೈತಿಕ ಕರ್ತವ್ಯವೂ ಆಗಿದೆ ಎಂದು ಹೇಳಿದೆ. ತನ್ನ ಹೆಂಡತಿಯ ಅರಿವಿಗೆ ಬಾರದೆ ಮತ್ತು ಒಪ್ಪಿಗೆಯಿಲ್ಲದೆ ರಹಸ್ಯವಾಗಿ ಆತ್ಮೀಯ ಕ್ಷಣಗಳ ವಿಡಿಯೋ ರೆಕಾರ್ಡ್ ಮಾಡಿ, ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರ ಅದನ್ನು ಹೆಂಡತಿಯ ಸೋದರಸಂಬಂಧಿಯೊಂದಿಗೆ ಹಂಚಿಕೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ವೇಳೆ ನ್ಯಾಯಾಲಯ ಹೀಗೆ ಅಭಿಪ್ರಾಯಪಟ್ಟಿದೆ.

ಲಾಲು ಪ್ರಸಾದ್ ಆಹ್ವಾನ ನಿತೀಶ್ ನಡೆ ನಿಗೂಢ

ಪಾಟ್ನಾ: ಪ್ರತಿಪಕ್ಷಗಳ ಮೈತ್ರಿಕೂಟ ಇಂಡಿಯಾ ಬ್ಲಾಕ್‌ಗೆ ಸೇರುವಂತೆ ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರ ಪ್ರಸ್ತಾಪಕ್ಕೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸ್ಪಷ್ಟವಾಗಿ ಯಾವುದೇ ಪ್ರತಿಕ್ರಿಯೆ ನೀಡದೇ ರಹಸ್ಯ ಉಳಿಸಿಕೊಂಡಿದ್ದಾರೆ. ನಿತೀಶ್ ಕುಮಾರ್‌ಗೆ ಮೈತ್ರಿ ಬಾಗಿಲು ಸದಾ ತೆರೆದಿರುತ್ತದೆ ಎಂಬ ಲಾಲು ಪ್ರಸಾದ್ ಯಾದವ್ ಅವರ ಹೇಳಿಕೆ ಕುರಿತು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜೆಡಿಯು ಮುಖ್ಯಸ್ಥ, ನೀವು ಏನು ಹೇಳುತ್ತಿದ್ದೀರಿ? ಎಂದು ಮರು ಪ್ರಶ್ನಿಸಿದರು. ಕೇರಳ ರಾಜ್ಯಪಾಲರಾಗಿದ್ದ ಆರಿಫ್ ಮೊಹಮ್ಮದ್ ಖಾನ್ ಅವರು ಬಿಹಾರದ ಹೊಸ ರಾಜ್ಯಪಾಲರಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದ ನಿತೀಶ್ ಕುಮಾರ್ ಅವರನ್ನು ಪತ್ರಕರ್ತರು ರಾಜಭವನದಲ್ಲಿ ಪ್ರಶ್ನಿಸಿದರು. ಖಾನ್ ಮತ್ತು ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಸಮ್ಮುಖದಲ್ಲಿ ಲಾಲು ಪ್ರಸಾದ್ ಹೇಳಿಕೆ ಕುರಿತು ಪತ್ರಕರ್ತರು ಕೇಳಿದಾಗ, ನಿತೀಶ್ ಕುಮಾರ್ ಕೈಮು ಗಿದು ಮುಗುಳ್ನಕ್ಕರು. ಪತ್ರಕರ್ತರು ಮತ್ತಷ್ಟು ಒತ್ತಿ ಕೇಳಿದಾಗ 'ನೀವು ಏನು ಹೇಳುತ್ತಿದ್ದೀರಿ? ಎಂದರು. ರಾಜ್ಯ ಸರಕಾರ ತನ್ನ ಅವಧಿಯನ್ನು ಪೂರ್ಣಗೊಳಿಸುತ್ತದೆಯೇ ಎಂದು ಕೇಳಿದಾಗ, ಖಾನ್ ಮಧ್ಯ ಪ್ರವೇಶಿಸಿ, ''ಇದು ಈ ರೀತಿಯ ಪ್ರಶ್ನೆಗೆ ಉತ್ತರಿ ಸುವ ಸಂದರ್ಭವಲ್ಲ. ಇಂದು ಸಂತೋಷದ ದಿನ, ನಾವು ಒಳ್ಳೆಯ ವಿಷಯಗಳ ಬಗ್ಗೆ ಮಾತ್ರ ಮಾತನಾಡೋಣ'' ಎಂದರು.

ನ್ಯೂ ಓರ್ಲಿಯನ್ಸ್ ಘಟನೆ ಬೆನ್ನಿಗೇ ಟ್ರಂಪ್ ಒಡೆತನದ ಹೊಟೇಲ್ ಮುಂದೆ ಟ್ರಕ್ ಸ್ಫೋಟ

ಟ್ರಕ್ ದಾಳಿ ಭಯೋತ್ಪಾದಕ ಕೃತ್ಯ?

ವಾಷಿಂಗ್ಟನ್: ಅಮೆರಿಕದ ನ್ಯೂ ಓರ್ಲಿಯನ್ಸ್ ನಲ್ಲಿ ಹೊಸ ವರ್ಷದ ಸಂಭ್ರಮಾಚರಣೆಯ ಜನಸಂದಣಿಯ ಮೇಲೆ ವ್ಯಕ್ತಿಯೊಬ್ಬ ಟ್ರಕ್ ಚಲಾಯಿಸಿ ಮತ್ತು ಗುಂಡಿಕ್ಕಿ 15 ಜನರನ್ನು ಕೊಂದ ಕೆಲವೇ ಗಂಟೆಗಳಲ್ಲಿ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಸೇರಿದ ಲಾಸ್ ವೆಗಾಸ್‌ನ ಹೋಟೆಲ್ ಹೊರಗೆ ಟೆಸ್ಲಾ ಸೈಬರ್ ಟ್ರಕ್ ಸ್ಫೋಟ ಗೊಂಡ ಘಟನೆ ನಡೆದಿದೆ. ಈ ಹಿನ್ನೆಲೆಯಲ್ಲಿ ಈ ಘಟನೆ ಭಯೋತ್ಪಾದನಾ ಕೃತ್ಯ ಎಂದು ಶಂಕಿಸಲಾಗಿದೆ.

ಟ್ರಂಪ್ ಇಂಟರ್‌ನ್ಯಾಷನಲ್ ಹೊಟೇಲ್ ಮುಂಭಾಗ ಟ್ರಕ್ ಡಿಕ್ಕಿ ಹೊಡೆಯುತ್ತಿರುವ ವಿಡಿಯೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಆದರೆ ಈ ಘಟನೆಯಲ್ಲಿ ಯಾವುದೇ ಸಾವು ನೋವು ಸಂಭವಿಸಿಲ್ಲ. ಟೆಸ್ಲಾ ಸೈಬರ್ ಟ್ರಕ್ ಸ್ಫೋಟಕ್ಕೂ ಮೊದಲು ಟ್ರಂಪ್ ಅವರ ಇಂಟರ್‌ನ್ಯಾಷನಲ್ ಹೋಟೆಲ್ ಗೇಟ್ ಮುಂದೆಯೇ ಸೈಬರ್ ಟ್ರಕ್ ನಿಲ್ಲಿಸಲಾಗಿತ್ತು. ಈ ಟ್ರಕ್ ಮೊದಲು ಬೆಂಕಿ ಹೊತ್ತಿಕೊಂಡು ನಂತರ ಸ್ಫೋಟ ಸಂಭವಿಸಿದೆ ಎಂದು ತಿಳಿದು ಬಂದಿದೆ. ಹೊಟೇಲ್ ಒಳಭಾಗದಿಂದ ರೆಕಾರ್ಡ್ ಆಗಿರುವ ವಿಡಿ ಯೋದಲ್ಲಿ ವಾಹನಕ್ಕೆ ಬೆಂಕಿ ಹತ್ತಿಕೊಂಡಿರುವ ದೃಶ್ಯಗಳು ರೆಕಾರ್ಡ್ ಆಗಿದ್ದು ಅದೀಗ ಎಲ್ಲೆಡೆ ವೈರಲ್ ಆಗುತ್ತಿದೆ. ಈ ಸ್ಫೋಟವು ಭಯೋತ್ಪಾದಕ ಕೃತ್ಯವೇ ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದೇವೆ ಎಂದು ಎಫ್‌ಬಿಐ ತಿಳಿಸಿದೆ. ಟೆಸ್ಲಾ ಸಿಇಒ ಎಲಾನ್ ಮಸ್ಕ್ ಅವರು ಸೈಬರ್‌ಟ್ರಕ್ ಸ್ಫೋಟ ಮತ್ತು

ನ್ಯೂ ಓರ್ಲಿಯನ್ಸ್ ದಾಳಿಯನ್ನು ಭಯೋತ್ಪಾದನಾ ಕೃತ್ಯ ಎಂದು ಆರೋಪಿಸಿದ್ದು, ಎರಡೂ ವಾಹನ ಗಳನ್ನು ಒಂದೇ ಕಾರು ಬಾಡಿಗೆ ಸೈಟ್‌ನಿಂದ ಬಾಡಿಗೆಗೆ ಪಡೆಯಲಾಗಿದೆ. ಇದು ಭಯೋತ್ಪಾ ದನೆಯ ಕೃತ್ಯದಂತೆ ತೋರುತ್ತಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಸ್ಫೋಟಗೊಂಡ ಸೈಬರ್ ಟ್ರಕ್ ಬುಧವಾರ ಸ್ಥಳೀಯ ಕಾಲಮಾನ ಬೆಳಿಗ್ಗೆ 8.40 ಕ್ಕೆ ಡೊನಾಲ್ಡ್ ಟ್ರಂಪ್ ಅವರ ಲಾಸ್ ವೇಗಾಸ್‌ನಲ್ಲಿರುವ ಟ್ರಂಪ್ ಇಂಟರ್‌ನ್ಯಾಶನಲ್ ಹೋಟೆಲ್‌ನ ಹೊರಗೆ ಬಂದ ಕೆಲವೇ ನಿಮಿಷಗಳಲ್ಲಿ ಸ್ಫೋಟಗೊಂಡಿದೆ. ಹೋಟೆಲ್ ಒಳಗೆ ಮತ್ತು ಹೊರಗೆ ಪ್ರತ್ಯಕ್ಷದರ್ಶಿಗಳು ಸ್ಫೋಟದ ವಿಡಿಯೋವನ್ನು ರೆಕಾರ್ಡ್ ಮಾಡಿದ್ದು, ಬೆಂಕಿಯಿಂದ ಜ್ವಾಲೆ ಆವರಿಸಿಕೊಂಡಿರುವುದನ್ನು ತೋರಿಸಿದೆ.

ಸತ್ತವರ ಸಂಖ್ಯೆ 15ಕ್ಕೆ ಏರಿಕೆ

ವಾಷಿಂಗ್ಟನ್:ಅಮೆರಿಕದ ನ್ಯೂ ಆರ್ಲಿಯನ್ಸ್‌ನಲ್ಲಿ ಬುಧವಾರ ತಡರಾತ್ರಿ ಹೊಸವರ್ಷಾಚರಣೆ ವೇಳೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಸತ್ತವರ ಸಂಖ್ಯೆ 15ಕ್ಕೆ ಏರಿದೆ. ಟ್ರಕ್ ಚಾಲಕನೊಬ್ಬ ಜನರ ಮೇಲೆ ಜನಜಂಗುಳಿ ಮೇಲೆ ವೇಗವಾಗಿ ಟ್ರಕ್ ಹಾಯಿಸಿ, ಮನಬಂದಂತೆ ಗುಂಡುಹಾರಿಸಿದಾಗ ಸ್ಥಳದಲ್ಲೇ ಹತ್ತಕ್ಕೂ ಹೆಚ್ಚು ಜನರು ಬಲಿಯಾಗಿ 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ತೀವ್ರವಾಗಿ ಗಾಯಗೊಂಡವರಲ್ಲಿ ಐವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದು, ಸತ್ತವರ ಸಂಖ್ಯೆ 15 ಕ್ಕೆ ಏರಿದಂತಾಗಿದೆ. ಐಸಿಸ್ ಉಗ್ರಗಾಮಿ ಸಂಘಟನೆಯಿಂದ ಸ್ಫೂರ್ತಿ ಪಡೆದ 42 ವರ್ಷದ ಶಂಸುದ್ದೀನ್ ಜಬ್ಬಾರ್ , ಈ ಹಿಂದೆ ಅಮೆರಿಕ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದ ಸಂಗತಿ ಬೆಳಕಿಗೆ ಬಂದಿದೆ. ಸೇನೆ ಬಿಟ್ಟ ನಂತರ ರಿಯಲ್ ಎಸ್ಟೇಟ್ ವ್ಯಾಪಾರ ಮಾಡಿಕೊಂಡಿದ್ದ ಜಬ್ಬಾರ್, ಕೌಟುಂಬಿಕ ಜೀವನದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಿ, ಒಂದೆರಡು ಪ್ರಕರಣಗಳಲ್ಲಿ ಪೊಲೀಸರಿಗೆ ಸೆರೆಸಿಕ್ಕಿದ್ದ. ಎರಡು ಮದುವೆಯಾಗಿದ್ದ ಜಬ್ಬಾರ್, ಐಸಿಸ್ ಉಗ್ರರಿಂದ ಪ್ರೇರೇಪಣೆ ಪಡೆದ ಬಗ್ಗೆ ವಿಡಿಯೊಗಳು ದೊರಕಿವೆ ಎಂದು ಅಮೆರಿಕ ಪೊಲೀಸರು ತಿಳಿಸಿದ್ದಾರೆ.

ಶೇ.30ರಷ್ಟು ಚಿನ್ನಾಭರಣ ಸಾಲ ಸುಸ್ತಿ ಆರೋಪ

ಮಂಗಳ ಸೂತ್ರಕ್ಕೆ ಕುತ್ತು ತಂದ ಕೇಂದ್ರ ನೀತಿ: ಜೈರಾಮ್ ಟೀಕೆ

ದೆಹಲಿ: ಮೋದಿ ಸರಕಾರದ ಆಪ್ತೇಷ್ಟರನ್ನು ಓಲೈಸುವ ನೀತಿಯಿಂದ ದೇಶದಲ್ಲಿ ಚಿನ್ನದ ಸಾಲ ಪಡೆದು ಮರು ಪಾವತಿ ಸದವರ ಸಂಖ್ಯೆ ಹೆಚ್ಚಾಗು ತ್ತಿದೆ. ಮೋದಿ ಸರಕಾರ ಮಹಿಳೆ ಯರ ಮಂಗಳ ಸೂತ್ರ ಕಸಿಯಲು ಕಾರಣವಾಗಿದೆ ಎಂದು ಕಾಂಗ್ರೆಸ್ ಗುರು ವಾರ ಆರೋಪಿ ಸಿದೆ.

ದೇಶದಲ್ಲಿ ಶೇ.30 ರಷ್ಟು ಜನರು ಚಿನ್ನದ ಸಾಲ ಮರುಪಾವತಿಸದೆ ಮಂಗಳ ಸೂತ್ರ ಸೇರಿದಂತೆ ತಮ್ಮ ಚಿನ್ನಾಭರಣ ಕಳೆದುಕೊಳ್ಳುತ್ತಿದ್ದಾರೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. ಮೋದಿ ಸರಕಾರ ತನ್ನ ತಪ್ಪು ನಡೆಗಳಿಂದ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮಹಿಳೆಯರ ಮಂಗಳಸೂತ್ರಗಳನ್ನು ಕಸಿಯುವ ಏಕೈಕ ಸರಕಾರ ಎಂಬ ಕುಖ್ಯಾತಿ ಗಳಿಸಿದೆ ಎಂದು ಜೈರಾಮ್ ರಮೇಶ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ನಾವು ಅವರ ಅಧಿಕಾರಾವಧಿಯಲ್ಲಿ ಚಿನ್ನದ ಸಾಲಗಳ ತ್ವರಿತ ಏರಿಕೆಯ ವಿಷಯವನ್ನು ಪ್ರಸ್ತಾಪಿಸಿದ್ದೇವೆ. ಭಾರತೀಯ ಕುಟುಂಬಗಳು ಅಂದಾಜು ರೂ. 3 ಲಕ್ಷ ಕೋಟಿಯಷ್ಟು ಚಿನ್ನದ ಸಾಲ ಪಡೆದಿದ್ದು ಶೇ. 30ರಷ್ಟು ಸಾಲ ಸುಸ್ತಿಯಾಗಿದೆ ಎಂದು ಹೇಳಲಾಗಿದೆ. ಹೆಚ್ಚುತ್ತಿರುವ ಋಣಭಾರ ಮತ್ತು ನಿಧಾನಗತಿಯ ಆರ್ಥಿಕತೆಯೊಂದಿಗೆ ಚಿನ್ನದ ಸಾಲ ಪಡೆದು ಮರುಪಾವತಿಸದರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ಮಾರ್ಚ್ ಮತ್ತು ಜೂನ್ 2024 ರ ನಡುವಿನ ಮೂರು ತಿಂಗಳ ಅವಧಿಯಲ್ಲಿ ಚಿನ್ನದ ಸಾಲದ ಪಡೆದು ಮರುಪಾವತಿಸದೆ ಇರುವುದು ರೂ.5,149 ಕೋಟಿಗಳಿಂದ ರೂ.6,696 ಕೋಟಿಗೆ ಅಂದರೆ ಶೇ 30 ರಷ್ಟು ಏರಿಕೆಯಾಗಿದೆ. ಈ ಸಾಲ ಮರುಪಾವತಿಸದೆ ಇರುವವರು ಹೆಚ್ಚಾಗಿ ಚಿನ್ನಾಭರಣಗಳನ್ನು ಕಳೆದುಕೊಳ್ಳುತ್ತಾರೆ. ಮಹಿಳೆಯರು ಮಂಗಳಸೂತ್ರ ಮತ್ತಿತರ ಆಭರಣಗಳನ್ನು ಕಳೆದುಕೊಳ್ಳುತ್ತಾರೆ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

450 ಕೋಟಿ ರೂ ವಂಚನೆ ಪ್ರಕರಣದಲ್ಲಿ ಗುಜರಾತ್ ಟೈಟಾನ್ಸ್ ಆಟಗಾರರಿಗೆ ಸಮನ್ಸ್

ಚೀಟ್ ಫಂಡ್: ನಾಲ್ವರು ಕ್ರಿಕೆಟಿಗರಿಗೆ ಸಂಕಷ್ಟ

ಅಹಮದಾಬಾದ್: ಗುಜರಾತ್‌ನಲ್ಲಿ ನಡೆದ 450 ಕೋಟಿ ರೂಪಾಯಿಗಳ ಚಿಟ್ ಫಂಡ್ ಹಗರಣ ಸಂಬಂಧ ಅಲ್ಲಿನ ಸಿಐಡಿ ಅಪರಾಧ ವಿಭಾಗ ಶುಭ್‌ಮನ್ ಗಿಲ್ ಸೇರಿದಂತೆ ನಾಲ್ವರು ಕ್ರಿಕೆಟಿಗರನ್ನು ಪ್ರಶ್ನಿಸಲು ಮುಂದಾಗಿದೆ. ಶುಭ್‌ಮನ್ ಗಿಲ್ ಮತ್ತು ಗುಜರಾತ್ ಟೈಟಾನ್ಸ್‌ನ ಸಾಯಿ ಸುದರ್ಶನ್ , ರಾಹುಲ್ ತೆವಾಟಿಯಾ ಮತ್ತು ಮೋಹಿತ್ ಶರ್ಮಾ ಸೇರಿದಂತೆ ಅನೇಕ ಆಟಗಾರರು ಕೂಡ ಹಗರಣದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದಾರೆ. 450 ಕೋಟಿಯ ಈ ಹಗರಣವು ಗುಜರಾತ್ ಮೂಲದ ಕಂಪನಿ ಆಘ ಗ್ರೂಪ್‌ಗೆ ಸಂಬಂಧಿಸಿದೆ. ಈ ಪ್ರಕರಣದಲ್ಲಿ ಗುಜರಾತ್ ಅಪರಾಧ ತನಿಖಾ ಇಲಾಖೆ (ಸಿಐಡಿ) ಎಲ್ಲಾ ಕ್ರಿಕೆಟಿಗರಿಗೆ ಸಮನ್ಸ್ ಕಳುಹಿಸಿದೆ.

ಆಘ ಗ್ರೂಪ್ ಹೂಡಿಕೆದಾರರಿಗೆ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿದರಗಳನ್ನು ಭರವಸೆ ನೀಡಿ ತ್ತು. ಆದರೆ, ಠೇವಣಿ ಮರಳಿಸಲು ಸಾಧ್ಯವಾ ಗದಿದ್ದಾಗ ಹೂಡಿಕೆದಾರರು ಪೊಲೀಸರಿಗೆ ದೂರು ನೀಡಿದ್ದಾರೆ. ವರದಿಗಳ ಪ್ರಕಾರ, ಗುಜರಾತ್ ಸಿಐಡಿ ಈ ಪ್ರಕರಣದಲ್ಲಿ ಒಬ್ಬನನ್ನು ಬಂಧಿಸಿದೆ. ಕಳೆದ ತಿಂಗಳು, ಅವರು ಆಘ ಗ್ರೂಪ್ ಹಗರಣಕ್ಕೆ ಸಂಬಂಧಿಸಿದ ಮಾಲೀಕ ಭೂಪೇಂದರ್ ಸಿಂಗ್ ಝೂಲಾನನ್ನು ಮೆಹ್ಸಾನಾ ಜಿಲ್ಲೆಯಿಂದ ಬಂಧಿಸಿದ್ದರು. ಈ ಹಗರಣದಲ್ಲಿ ಶುಭಮನ್ ಗಿಲ್ ಮತ್ತು ಇತರ ಮೂವರು ಕ್ರಿಕೆಟಿಗರು ಭೂಪೇಂದರ್ ಸಿಂಗ್

ಝೂಲಾನ ಜತೆ ನಿಕಟ ನಂಟು ಹೊಂದಿರುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ಈತ ಸಂಪೂರ್ಣ ಹಗರಣದ ಮಾಸ್ಟರ್ ಮೈಂಡ್ ಎಂದು ಸಿಐಡಿ ತಿಳಿಸಿದೆ. 450 ಕೋಟಿ ರೂ.ಗಳ ಈ ಹಗರಣದ ಸಂಪೂರ್ಣ ರೂಪುರೇಷೆಗಳನ್ನು ಕಿಂಗ್‌ಪಿನ್ ಆಗಿ ಜಾಲ ಸಿದ್ಧಪಡಿಸಿದ್ದರು. ಗುಜರಾತ್‌ನ ತಾಲೋದ್, ಹಿಮ್ಮತ್‌ನಗರ ಮತ್ತು ವಡೋದರಾ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕಚೇರಿ ತೆರೆದು ಹೂಡಿಕೆದಾರರಿಂದ ಹಣ ಸಂಗ್ರಹಿಸಲು ಏಜೆಂಟ್‌ಗಳನ್ನು ನಿಯೋಜಿಸಿದ್ದರು. ಕಂಪನಿ ಐಸಿಐಸಿಐ ಮತ್ತು ಐಡಿಎಫ್‌ಸಿ ಬ್ಯಾಂಕ್‌ಗಳ ಮೂಲಕ ಸುಮಾರು 6,000 ಕೋಟಿ ರೂಪಾಯಿ ಮೌಲ್ಯದ ಹಣಕಾಸು ವಹಿವಾಟು ನಡೆಸಿ ಒಟ್ಟು 175 ಕೋಟಿ ರೂಪಾಯಿ ಸಂಗ್ರಹಿಸಿದೆ ಎನ್ನಲಾಗಿದೆ.

ಜಾಹೀರಾತು ಜತೆ ಕಂಪನಿಯಲ್ಲಿ ಹೂಡಿಕೆ

ಗುಜರಾತ್ ಟೈಟಾನ್ಸ್ ಆಟಗಾರರು ಪೊಂಜಿ ಯೋಜನೆಯಲ್ಲಿ ಹಣ ಹೂಡಿಕೆ ಮಾಡಿದ್ದಾರೆ. ಈ ಕುರಿತು ಸಿಐಡಿ ಈಗ ಅವರನ್ನು ವಿಚಾರಣೆ ನಡೆಸಲಿದೆ. ವರದಿಯ ಪ್ರಕಾರ, ಗಿಲ್ 1.95 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದರೆ, ಇತರ ಆಟಗಾರರು ಸಣ್ಣ ಮೊತ್ತವನ್ನು ಹೂಡಿಕೆ ಮಾಡಿದ್ದಾರೆ. ಗಿಲ್ ಪ್ರಸ್ತುತ ಆಸ್ಟ್ರೇಲಿಯಾದಲ್ಲಿರುವುದರಿಂದ, ಹಿಂದಿರುಗಿದ ನಂತರ ಸಿಐಡಿ ಅವರನ್ನು ಪ್ರಶ್ನಿಸುವ ನಿರೀಕ್ಷೆ ಇದೆ.

ಬಂಗಾಳದಲ್ಲಿ ಅಸ್ಥಿರತೆಗೆ ಕೇಂದ್ರ ಸಂಚು ಎಂದ ದೀದಿ

ಗಡಿ ನುಸುಳಲು ಬಿಎಸ್‌ಎಫ್ ಸಹಾಯ: ಮಮತಾ ಆರೋಪ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭದ್ರತಾ ಪಡೆಗಳ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ರಾಜ್ಯವನ್ನು ಅಸ್ಥಿರಗೊಳಿಸಲು ಭದ್ರತಾ ಪಡೆಗಳು ಬಾಂಗ್ಲಾದೇಶದಿಂದ ಒಳನುಸುಳುವಿಕೆಗೆ ನೆರವು ನೀಡುತ್ತಿದ್ದಾರೆ ಎಂಬ ಟಿಎಂಸಿ ನಾಯಕಿ ದೂರಿದ್ದಾರೆ. ಸಾರ್ವಜನಿಕ ಸಮಾರಂಭವೊಂದರಲ್ಲಿ ಮಾತನಾಡಿದ ಬ್ಯಾನರ್ಜಿ, ಇಸ್ಲಾಂಪುರ, ಸೀತಾಯ್ ಮತ್ತು ಚೋಪ್ರಾದಂತಹ ಹಲವಾರು ಗಡಿ ಪ್ರದೇಶಗಳಲ್ಲಿ ಬಾಂಗ್ಲಾ ಪ್ರಜೆಗಳಿಗೆ ಒಳನುಸುಳಲು ಬಿಎಸ್‌ಎಫ್‌ನವರು ಸಹಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕೇಂದ್ರ ಸರಕಾರದ ಮೇಲೆ ಕಿಡಿ ಕಾರಿದ ಮಮತಾ, ಭದ್ರತಾ ಪಡೆಗಳು ಕೇಂದ್ರ ಸರ್ಕಾರದ ಅಡಿಯಾಳಾಗಿವೆ ಎಂದು ಹೇಳಿದ್ದಾರೆ. ನುಸುಳುಕೋರರಿಗೆ ಗಡಿ ಒಳಗೆ ಬರಲು ನೆರವಾಗಿ, ತೃಣಮೂಲ ಕಾಂಗ್ರೆಸ್ ಮೇಲೆ ಆರೋಪ ಮಾಡಿದರೆ ಸಹಿಸುವುದಿಲ್ಲ ಎಂದು ಹೇಳಿದ್ದಾರೆ. ಬಿಎಸ್ ಎಫ್ ಮಾಡುವ ತಪ್ಪನ್ನು ಟಿಎಂಸಿ ಮೇಲೆ ಹೊರಿಸಲಾಗುತ್ತಿದೆ ಎಂದು ದೂರಿದ್ದಾರೆ. ಗಡಿ ಕಾಯುತ್ತಿರುವವರು ಬಿಎಸ್‌ಎಫ್ ಯೋಧರೇ ಹೊರತು ಟಿಎಮ್‌ಸಿ ಪಕ್ಷ ಅಲ್ಲ. ಬಾಂಗ್ಲಾದಿಂದ ರೌಡಿಗಳು ಒಳ ಬರುತ್ತಿದ್ದಾರೆ. ಗಡಿಯುದ್ದಕ್ಕೂ ಕೊಲೆ ಪ್ರಕರಣ ಜಾಸ್ತಿ ಆಗುತ್ತಿದೆ.

ಇವೆಲ್ಲವೂ ಬಿಎಸ್‌ಎಫ್ ಮಾಡುತ್ತಿದೆ ಎಂದು ತಿಳಿದಿದೆ. ಕೇಂದ್ರ ಸರ್ಕಾರದ ಕುಮ್ಮಕ್ಕಿನಿಂದ ಇಷ್ಟೆಲ್ಲಾ ನಡೆಯುತ್ತಿದೆ ಎಂದು ಅವರು ಆಪಾದಿಸಿದ್ದಾರೆ. ಗಡಿಯುದ್ದಕ್ಕೂ ಬಂಗಾಳದ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಈ ಕುರಿತು ಕೇಂದ್ರಕ್ಕೆ ದೂರು ನೀಡಿದ್ದೇವೆ. ಆದರೆ ಇದುವರೆಗೂ ಕೇಂದ್ರ ಸರಕಾರ ಕ್ರಮ ಕೈಗೊಂಡಿಲ್ಲ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ. ಬ್ಯಾನರ್ಜಿಗೆ ತಿರುಗೇಟು ನೀಡಿದ ಕೇಂದ್ರ ಸಚಿವ ಗಿರಿರಾಜ್ ಸಿಂಗ್, ಬಾಂಗ್ಲಾದೇಶದ ಒಳನುಸುಳುವಿಕೆಗೆ ಬಂಗಾಳ ನರ್ಸರಿಯಾಗಿದೆ ಎಂದು ಹೇಳಿದರು. ಯಾರು ಸಿಕ್ಕಿಬೀಳುತ್ತಾರೋ ಅವರು ಬಾಂಗ್ಲಾದೇಶೀಯರು. ಆದರೆ ಅವರ ವಿಳಾಸ ಮಾತ್ರ ಬಂಗಾಳದಲ್ಲಿರುತ್ತದೆ. ಮಮತಾ ಬ್ಯಾನರ್ಜಿ ವೋಟ್‌ಗಾಗಿ ಇದೆಲ್ಲಾ ಮಾಡಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಹಿಮಾಚಲದ ಶಿಮ್ಲಾದಲ್ಲಿ ಪೊಲೀಸರಿಂದಲೇ ದುಷ್ಕೃತ್ಯ

ಮದ್ಯ ಇಲ್ಲ ಎಂದ ಮ್ಯಾನೇಜರ್ ಹತ್ಯೆ

ಶಿಮ್ಲಾ: ಹೊಸ ವರ್ಷದ ಸಂಭ್ರಮಾಚರಣೆಯ ವೇಳೆ ಹಿಮಾಚಲ ಪ್ರದೇಶ ಆಘಾತಕಾರಿ ಘಟನೆ ಒಂದು ನಡೆದಿದ್ದು, ಪೊಲೀಸರೇ ಕೊಲೆ ಮಾಡಿ ಜೈಲು ಪಾಲಾಗಿದ್ದಾರೆ. ಡಾಲ್‌ಹೌಸಿ ಬಳಿಯ ಬನಿಖೇತ್‌ನಲ್ಲಿರುವ ಖಾಸಗಿ ರೆಸಾರ್ಟ್‌ನಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ರೆಸಾರ್ಟ್ ಮ್ಯಾನೇಜರ್‌ನನ್ನು ಕೊಲೆ ಮಾಡಿ ಅಲ್ಲಿರುವ ಭದ್ರತಾ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ್ದ ಇಬ್ಬರು ಪೊಲೀಸರನ್ನು ಹಿಮಾಚಲ ಪ್ರದೇಶದ ಪೊಲೀಸರು ಬಂಧಿಸಿದ್ದಾರೆ.

ಮಂಗಳವಾರ ತಡರಾತ್ರಿ ಮೂವರು ಪೊಲೀಸರು ಮದ್ಯ ಮತ್ತು ಆಹಾರಕ್ಕಾಗಿ ಒತ್ತಾಯಿಸಿ ರೆಸಾರ್ಟ್‌ಗೆ ಬಂದಾಗ ಈ ಘಟನೆ ಸಂಭವಿಸಿದೆ. ಹೊಸ ವರ್ಷದ ಸಂಭ್ರಮಾಚರಣೆಯ ಕರ್ತವ್ಯದಲ್ಲಿದ್ದ ಇಬ್ಬರು ಪೊಲೀಸ್ ಪೇದೆಗಳು ಬನಿಖೇತ್‌ನಲ್ಲಿರುವ ಖಾಸಗಿ ರೆಸಾರ್ಟ್‌ಗೆ ತೆರಳಿದ್ದಾರೆ. ಅದಾಗಲೇ ಸಾಕಷ್ಟು ಸಮಯವಾಗಿದ್ದರಿಂದ ರೆಸಾರ್ಟ್ ಸಿಬ್ಬಂದಿ ಸಚಿನ್ ಊಟ ಹಾಗೂ ಮದ್ಯವನ್ನು ಕೊಡಲು ನಿರಾಕರಿಸಿದ್ದಾನೆ. ಅದಕ್ಕೆ ಕ್ಯಾತೆ ತೆಗೆದ ಅವರು ಆತನ ಮೇಲೆ ಹಲ್ಲೆ ನಡೆಸಿದ್ದಾರೆ.

ರೆಸಾರ್ಟ್‌ನ ಜನರಲ್ ಮ್ಯಾನೇಜರ್ ರಾಜಿಂದರ್ ಮಧ್ಯಸ್ಥಿಕೆ ವಹಿಸಲು ಬಂದಾಗ, ಅವರ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ. ಘರ್ಷಣೆಯ ಸಮಯದಲ್ಲಿ, ರಾಜಿಂದರ್ ಕೆಳಗೆ ಬಿದ್ದಿದ್ದಾರೆ. ಬಿದ್ದವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಘಟನೆಯಿಂದ ಆಕ್ರೋಶಗೊಂಡ ಸ್ಥಳೀಯರು ಬೀದಿಗಿಳಿದು ಚಂಬಾ ಪಠಾಣ್‌ಕೋಟ್ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಪೊಲೀಸರು ಅನೂಪ್ ಮತ್ತು ಅಮಿತ್ ಎಂಬ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಬಂಧಿಸಿ ಅವರ ವಿರುದ್ಧ ಕೊಲೆ ಆರೋಪವನ್ನು ದಾಖಲಿಸಿದ್ದಾರೆ. ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಅವರು ಮದ್ಯ ಸೇವಿಸಿರಬಹುದು ಎಂದು ಊಹಿಸಲಾಗಿದೆ. ಆರೋಪಿಗಳನ್ನು ಪೊಲೀಸ್ ಇಲಾಖೆಯಿಂದ ಅಮಾನತುಗೊಳಿಸಲಾಗಿದೆ. ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562123
ಇ-ಮೇಲ್: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23901864

ಕ್ರ.ಸಂ.: ಮಾ.ನ.ಕಾ/ತಾ.ಶಾ/ಸಿ.ಆರ್/15/2024–25 ದಿನಾಂಕ: 01.01.2025

ಟೆಂಡರ್ ಪ್ರಕಟಣೆ

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ನಗರಸಭೆ ನಿಧಿ ಮತ್ತು 2022–23 ನೇ ಸಾಲಿನ ಎಸ್.ಎಫ್.ಸಿ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ಹಾಗೂ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಮತ್ತು ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗಾಗಿ ನೊಂದಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ
	ಸರ್ವಿಸ್ ಟೆಂಡರ್		
1	DMA/2024-25/SE4324	14.10	ಸಾಮಾನ್ಯ
	ಸರಬರಾಜು ಟೆಂಡರ್		
2	DMA/2024-25/IND4126	1.90	ಸಾಮಾನ್ಯ
	ಹೊಸ ಕಾಮಗಾರಿ ಟೆಂಡರ್		
3	DMA/2024-25/WS/WORK_INDENT34206	15.00	ಸಾಮಾನ್ಯ
4	DMA/2024-25/WS/WORK_INDENT34207	9.00	ಸಾಮಾನ್ಯ
	ಮರುಟೆಂಡರ್ ಕಾಮಗಾರಿಗಳು		
5	DMA/2024-25/WS/WORK_INDENT30494/call-2	35.00	ಸಾಮಾನ್ಯ

(1) ಆಕ್ಷೇಪಣೆ / ಮಾಹಿತಿಯನ್ನು ಸಲ್ಲಿಸಲು ದಿನಾಂಕ: 15.01.2025 ಸಂಜೆ 4.30 ಗಂಟೆ ವರೆಗೆ. (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.01.2025 ಸಂಜೆ 5.00 ಗಂಟೆ ವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 17.01.2025 ಸಂಜೆ 5.15 ಗಂಟೆ ನಂತರ. (4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 21.01.2025 ಬೆಳಿಗ್ಗೆ 11.00 ಗಂಟೆ ನಂತರ. (5) ಹೆಚ್ಚಿನ ಮಾಹಿತಿಯನ್ನು KPPP Portal ನಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ.	ವಿವರ	ಮಾಸಿಕ ಕನಿಷ್ಠ ಮೊತ್ತ (ರೂ. ಗಳಲ್ಲಿ)	ವರ್ಗ
	ಇ–ಹರಾಜು ಟೆಂಡರ್		
1	DMA/2024-25/AUCTION1992	5000/-	ಸಾಮಾನ್ಯ
2	DMA/2024-25/AUCTION1993	5000/-	ಸಾಮಾನ್ಯ

(1) ಮಾಹಿತಿಯನ್ನು ಸಲ್ಲಿಸಲು ದಿನಾಂಕ: 15.01.2025 ಸಂಜೆ 4.30 ಗಂಟೆ ವರೆಗೆ. (2) ಇ–ಹರಾಜುವಿನಲ್ಲಿ ಸ್ಪರ್ಧಿಸಲು ಕೊನೆಯ ದಿನಾಂಕ: 16.01.2025 ಸಂಜೆ 4.30 ಗಂಟೆ ವರೆಗೆ. (3) ಲೈವ್ ಬಿಡ್ ನಡೆಯುವ ದಿನಾಂಕ: 20.01.2025 ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆವರೆಗೆ (ಡೆಲ್ಟಾ ಸಮಯ 5 ನಿಮಿಷಗಳು) (4) ಹೆಚ್ಚಿನ ಮಾಹಿತಿಯನ್ನು KPPP Portal ನಲ್ಲಿ ಪಡೆಯಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ, ಮಾದನಾಯಕನಹಳ್ಳಿ

DIPR/CP/4086/SPAN/2024-25

ಆರೆಸ್ಸೆಸ್ ಕಚೇರಿಗೆ ಭೇಟಿ ನೀಡಿದ್ದರೇ ಅಂಬೇಡ್ಕರ್ ?

ಮುಂಬೈ: ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು 85 ವರ್ಷಗಳ ಹಿಂದೆ ಮಹಾರಾಷ್ಟ್ರದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗೆ ಭೇಟಿ ನೀಡಿದ್ದರು ಎಂದು ಸಂಘದ ಸಂವಹನ ವಿಭಾಗ ಗುರುವಾರ ಹೇಳಿಕೊಂಡಿದೆ.

''ಭೇಟಿ ಸಂದರ್ಭದಲ್ಲಿ ಕೆಲವು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಆರ್‌ಎಸ್‌ಎಸ್ ಅನ್ನು ತಾನು ಆತ್ಮೀಯತೆಯ ಭಾವನೆಯಿಂದ ನೋಡಿದ್ದೇನೆ'' ಎಂದು ಅಂಬೇಡ್ಕರ್ ಹೇಳಿದ್ದರು ಎಂದು ಆರೆಸ್ಸೆಸ್ ಸಂವಹನ ವಿಭಾಗವಾದ ವಿದರ್ಭ ಪ್ರಾಂತ್ಯದ ವಿಶ್ವ ಸಂವಾದ ಕೇಂದ್ರ ಗುರುವಾರ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಮಾಹಿತಿ ನೀಡಿದೆ.

ಡಾ. ಅಂಬೇಡ್ಕರ್ ಅವರು ಜನವರಿ 2, 1940 ರಂದು ಸತಾರಾ ಜಿಲ್ಲೆಯ ಕರಾಡ್‌ನಲ್ಲಿರುವ ಆರ್‌ಎಸ್‌ಎಸ್ ಶಾಖಾ ಕಚೇರಿಗೆ ಭೇಟಿ ನೀಡಿದ್ದ ಅಂಬೇಡ್ಕರ್, ಅಲ್ಲಿನ ಸ್ವಯಂ ಸೇವಕರನ್ನುದ್ದೇಶಿಸಿ ಮಾತನಾಡಿದ್ದರು. ಆರ್‌ಎಸ್‌ಎಸ್ ಶಾಖೆಗೆ ಡಾ ಅಂಬೇಡ್ಕರ್ ಭೇಟಿಯ ಕುರಿತು ಜನವರಿ 9, 1940 ರಂದು ಮರಾಠಿ ದೈನಿಕ ಕೇಸರಿಯಲ್ಲಿ ವರದಿ ಪ್ರಕಟಿಸಲಾಗಿದೆ ಎಂದು ಸುದ್ದಿಯ ಕ್ಲಿಪಿಂಗ್ ನೊಂದಿಗೆ ಆರೆಸ್ಸೆಸ್ ಮಾಹಿತಿ ನೀಡಿದೆ.

ಇಸ್ಕಾನ್ ಸ್ವಾಮೀಜಿ ಜಾಮೀನು ಅರ್ಜಿ ತಿರಸ್ಕರಿಸಿದ ಬಾಂಗ್ಲಾ ಕೋರ್ಟ್

ಚಿನ್ಮಯ್ ಕೃಷ್ಣ ದಾಸ್‌ಗೆ ಜಾಮೀನು ನಕಾರ

ದೆಹಲಿ: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದಾಳಿ ಖಂಡಿಸಿ ಪ್ರತಿಭಟನೆ ನಡೆಸಿ ಢಾಕಾ ಪೊಲೀಸರಿಂದ ಬಂಧನಕ್ಕೊಳಗಾಗಿರುವ ಹಿಂದೂ ಸನ್ಯಾಸಿ ಚಿನಯ್ ಕೃಷ್ಣ ದಾಸ್ ಬ್ರಹ್ಮಚಾರಿಯವರ ಜಾಮೀನು ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ಜಾಮೀನು ಕೋರಿ ಚಟ್ಟೋಗ್ರಾಮ್ ನ್ಯಾಯಾಲಯಕ್ಕೆ ಚಿನ್ಮಯ್ ಕೃಷ್ಣ ದಾಸ್ ಬ್ರಹ್ಮಚಾರಿ ಅರ್ಜಿ ಸಲ್ಲಿಸಿದ್ದರು. ಢಾಕಾದಿಂದ ಬಂದಿದ್ದ ಸುಪ್ರೀಂಕೋರ್ಟ್‌ನ 11 ವಕೀಲರ ತಂಡವು ಚಿನ್ಮಯ್ ದಾಸ್ ಪರ ಅರ್ಧ ಗಂಟೆಗೂ ಹೆಚ್ಚು ಕಾಲ ವಾದ ಮಂಡಿಸಿತ್ತು. ಎರಡೂ ಕಡೆಯ ವಾದವನ್ನು ಆಲಿಸಿದ ನಂತರ ನ್ಯಾಯಾಧೀಶ ಎಂ.ಡಿ ಸೈಫುಲ್ ಇಸ್ಲಾಂ ಅವರ ಪೀಠ ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ.

ಚಟ್ಟೋಗ್ರಾಮ್‌ನ ನ್ಯಾಯಾಲಯವು ಜಾಮೀನು ತಿರಸ್ಕರಿಸಿದ ಹಿನ್ನೆಲೆಯಲ್ಲಿ ಹೈ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಚಿನ್ಮಯ್ ಅವರ ವಕೀಲ ಭಟ್ಟಾಚಾರ್ಜಿ ತಿಳಿಸಿದ್ದಾರೆ. ನಾವು ನ್ಯಾಯಾಲಯದ ಮುಂದೆ ನಮ್ಮ ವಾದವನ್ನು ಮಂಡಿಸಿದ್ದೇವೆ. ಆದರೆ ಪ್ರಾಸಿಕ್ಯೂಷನ್ ಜಾಮೀನನ್ನು ವಿರೋಧಿಸಿತು. ಈ ಹಿನ್ನೆಲೆಯಲ್ಲಿ ನ್ಯಾಯಾಲಯವು ಜಾಮೀನು ತಿರಸ್ಕರಿಸಿದೆ. ನಾವು ಉಚ್ಚ ನ್ಯಾಯಾಲಯಕ್ಕೆ ತೆರಳಿ ಮುಂದಿನ

ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಬಾಂಗ್ಲಾದೇಶದ ಮಾಜಿ ಡೆಪ್ಯುಟಿ ಅಟಾರ್ನಿ ಜನರಲ್ ಅಪೂರ್ವ ಕುಮಾರ್ ಭಟ್ಟಾಚಾರ್ಯ ತಿಳಿಸಿದ್ದಾರೆ.

ತಾಲಿಬಾನ್ ಮೂಲಭೂತವಾದಿಗಳು ಸಾರ್ವಜನಿಕವಾಗಿ ಥಳಿಸುವ ಬೆದರಿಕೆ ಹಾಕಿದ್ದರಿಂದ ಚಟ್ಟೋಗ್ರಾಮ್ ನ್ಯಾಯಾಲಯದಲ್ಲಿ ಹಿಂದೂ ಸಂತ ಚಿನ್ಮಯ್ ದಾಸ್ ಅವರನ್ನು ಪ್ರತಿನಿಧಿಸಲು ಯಾವುದೇ ವಕೀಲರು ಮುಂದಾಗಿರಲಿಲ್ಲ. ಈ ಕಾರಣದಿಂದ ಒಂದು ತಿಂಗಳ ನಂತರ ನಡೆದ ವಿಚಾರಣೆಯ ವೇಳೆ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಚಿನ್ಮಯ್ ಕೃಷ್ಣ ದಾಸ್ ಅವರ ಹಿಂದಿನ ವಕೀಲ ರವೀಂದ್ರನಾಥ್ ಘೋಷ್ ಅವರು ಡಿಸೆಂಬರ್‌ನಲ್ಲಿ ಚಿನ್ಮಯ್ ಅವರಿಗೆ ಕಾನೂನು ಸಹಾಯ ಮಾಡಲು ಮುಂದಾದಾಗ ನ್ಯಾಯಾಲಯದ ಹೊರಗೆ ಅವರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಲಾಗಿತ್ತು. ಶೇಖ್ ಹಸೀನಾ ಅವರ ಆಡಳಿತದ ಪತನದ ನಂತರ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ವ್ಯಾಪಕ ದಾಳಿಯನ್ನು ಖಂಡಿಸಿ ಚಿನ್ಮಯ್ ದಾಸ್ ಅಲ್ಪಸಂಖ್ಯಾತರಿಗೆ, ವಿಶೇಷವಾಗಿ ಹಿಂದೂಗಳ ಪರ ಧ್ವನಿಯೆತ್ತಿ ಸುದ್ದಿಯಾಗಿದ್ದರು. ಪ್ರಚೋದನಕಾರಿ ಭಾಷಣದ ಆರೋಪದ ಮೇಲೆ ಚಿನ್ಮಯ್ ದಾಸ್ ಅವರನ್ನು ಢಾಕಾ ಪೊಲೀಸರು ನವೆಂಬರ್ 25 ರಂದು ದೇಶದ್ರೋಹದ ಆರೋಪದಡಿ ಬಂಧಿಸಿದ್ದರು.

ಬಾಂಗಾ ವಿಮೋಚನೆ ಪಠ್ಯವೇ ಬದಲು !

ಢಾಕಾ: ಕಳೆದ ಆಗಸ್ಟ್‌ನಲ್ಲಿ ನಡೆದ ವಿದ್ಯಾರ್ಥಿ ದಂಗೆಯಲ್ಲಿ ಶೇಖ್ ಹಸೀನಾ ಸರಕಾರ ಪದಚ್ಯುತಗೊಂಡ ನಂತರ ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ನೇತೃತ್ವ ವಹಿಸಿರುವ ಮೊಹಮದ್ ಯೂನುಸ್ ಇದೀಗ ದೇಶದ ಇತಿಹಾಸ ತಿರುಚುವ ಕಾರ್ಯಕ್ಕೆ ಕೈಹಾಕಿದ್ದಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಸರಕಾರ ಹೊಸ ಪಠ್ಯ ಪರಿಚಯಿಸಿದ್ದು, 1971ರಲ್ಲಿ ಬಾಂಗ್ಲಾದೇಶದ ಸ್ವಾತಂತ್ರ್ಯವನ್ನು ಘೋಷಿ ಸಿದ್ದು ಮುಜೀಬುರ್ ರೆಹಮಾನ್ ಬದಲಾಗಿ ಜಿಯಾವುರ್ ರೆಹಮಾನ್ ಎಂದು ಉಲ್ಲೇಖಿಸುವ ಮೂಲ ಇತಿಹಾಸವನ್ನು ತಿರುಚಿದೆ. ಈ ಹಿಂದೆ ಬಾಂಗ್ಲಾದ ಪಿತಾಮಹ ಬಂಗಬಂಧು ಶೇಖ್ ಮುಜಿಬುರ್ ರೆಹಮಾನ್ ಅವರು ಈ ಕುರಿತು ಘೋಷಣೆ ಮಾಡಿದ್ದರು ಎಂದು ಪಠ್ಯದಲ್ಲಿ ಉಲ್ಲೇಖಿಸಲಾಗಿತ್ತು. ಅದನ್ನು ಹೊಸ ಪಠ್ಯದಲ್ಲಿ ಬದಲಿಸ ಲಾಗಿದೆ. ಮುಜಿಬುರ್ ರೆಹಮಾನ್ ಅವರಿಗಿದ್ದ ರಾಷ್ಟ್ರಪಿತ ಬಿರುದನ್ನು ತೆಗೆದಿರುವುದೂ ಸೇರಿದಂತೆ ಕೆಲ ಬದಲಾವಣೆಗಳನ್ನು ಹೊಸಪಠ್ಯದಲ್ಲಿ ಮಾಡಲಾಗಿದೆ ಎಂದು ಬಾಂಗ್ಲಾ ಪತ್ರಿಕೆಯೊಂದು ವರದಿ ಮಾಡಿದೆ. ಬಾಂಗ್ಲಾದೇಶದ ನೋಟುಗಳಲ್ಲಿ ಶೇಖ್ ಮುಜಿಬುರ್ ರೆಹಮಾನ್ ಅವರ ಚಿತ್ರವನ್ನು ಅಳಿಸಲು ಇತ್ತೀಚೆಗೆ ಬಾಂಗ್ಲಾ ಸರ್ಕಾರ ನಿರ್ಧರಿಸಿದೆ. ಅಲ್ಲದೆ, ಹಳೆಯ ನೋಟುಗಳನ್ನು ಹಂತ ಹಂತವಾಗಿ ರದ್ದುಗೊಳಿಸಲು ತೀರ್ಮಾನಿಸಿದೆ. ಮುಜಿಬುರ್ ರೆಹಮಾನ್ ಅವರು ಹತ್ಯೆಯಾದ ದಿನವಾದ ಆಗಸ್ಟ್ 15 ಈ ಮೊದಲು ರಾಷ್ಟ್ರೀಯ ರಜಾದಿನವಾಗಿ ಶೇಖ್ ಹಸೀನಾ ಸರಕಾರ ಘೋಷಿಸಿತ್ತು. ಈಗ ಮಧ್ಯಂತರ ಸರಕಾರ ಅದನ್ನೂ ರದ್ದುಗೊಳಿಸಿದೆ.

183 ಮೀನುಗಾರರ ತ್ವರಿತ ಬಿಡುಗಡೆಗೆ ಭಾರತ ಒತ್ತಾಯ

ಪಾಕ್ ಬಂಧಿತ ಬೆಸ್ತರ ಬಿಡುಗಡೆಗೆ ಆಗ್ರಹ

ದೆಹಲಿ: ಪಾಕಿಸ್ತಾನದ ಜೈಲುಗಳಲ್ಲಿ ಬಂಧಿಯಾಗಿರುವ ಬೆಸ್ತರನ್ನು ಬಿಡುಗಡೆ ಮಾಡುವಂತೆ ಭಾರತ ಪಾಕಿಸ್ತಾನವನ್ನು ಒತ್ತಾಯಿಸಿದೆ. ಉಭಯ ದೇಶಗಳ ಅಧಿಕಾರಿಗಳ ಸಭೆಯಲ್ಲಿ ಭಾರತ ಈ ಬೇಡಿಕೆ ಮಂಡಿಸಿದೆ.

ಪಾಕ್ ಜೈಲುಗಳಲ್ಲಿರುವ ಕೈದಿಗಳ ಪಟ್ಟಿಯನ್ನು ಭಾರತ ಪಾಕ್ ಜತೆ ಹಂಚಿಕೊಂಡಿದ್ದು, ಪ್ರತಿಯಾಗಿ ಪಾಕಿಸ್ತಾಮವೂ ತನ್ನ ದೇಶದ ಪ್ರಜೆಗಳ ಪಟ್ಟಿ ನೀಡಿದೆ. 2008ರ ಒಪ್ಪಂದ ಪ್ರಕಾರ ಪ್ರತಿ ವರ್ಷ ಜನವರಿ 1 ಹಾಗೂ ಜುಲೈ 1 ರಂದು ಎರಡು ರಾಷ್ಟ್ರಗಳು ಈ ಮಾಹಿತಿಯನ್ನು ಹಂಚಿಕೊಳ್ಳುತ್ತವೆ. ಅದರಂತೆ ಜನವರಿ ಒಂದರಂದು ಎರಡು ರಾಷ್ಟ್ರಗಳು ಮಾಹಿತಿ ಹಂಚಿಕೊಂಡಿದ್ದು ಭಾರತವು ಪಾಕಿಸ್ತಾನಿ ಹಾಗೂ ಪಾಕಿಸ್ತಾನಿ ಎಂದು ನಂಬಲಾಗಿರುವ 381 ಸಾರ್ವಜನಿಕರು ಹಾಗೂ 81 ಮೀನುಗಾರರ ಮಾಹಿತಿಗಳನ್ನು ರವಾನಿಸಿದ್ದು, ಪಾಕಿಸ್ತಾನವು ಭಾರತೀಯ ಅಥವಾ ಭಾರತೀಯ



ಎಂದು ನಂಬಲಾಗಿರುವ 49 ಸಾರ್ವಜನಿಕರು ಹಾಗೂ 217 ಮೀನುಗಾರರ ಮಾಹಿತಿಗಳನ್ನು ಹಂಚಿಕೊಂಡಿದೆ.

2014 ರಿಂದ 2,639 ಭಾರತೀಯ ಮೀನುಗಾರರು ಮತ್ತು 71 ಭಾರತೀಯ ನಾಗರಿಕ ಕೈದಿಗಳನ್ನು ಪಾಕಿಸ್ತಾನದಿಂದ ಪುನಃ ಭಾರತಕ್ಕೆ ಮರಳಿ ಕರೆತರಲಾಗಿದೆ. 2023ರ ಬಳಿಕ 478 ಭಾರತೀಯ ಮೀನುಗಾರರು ಮತ್ತು 13 ಭಾರತೀಯ ನಾಗರಿಕ ಕೈದಿಗಳು ಪಾಕ್ ಜೈಲುಗಳಲ್ಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ತ್ವರಿತ ಬಿಡುಗಡೆಗೆ ಆಗ್ರಹ

ಮೀನುಗಾರಿಕೆ ವೇಳೆ ಅಕ್ರಮವಾಗಿ ಗಡಿ ದಾಟಿ ಬಂಧನಕ್ಕೆ ಒಳಗಾಗಿ, ತಮ್ಮ ಬಂಧನದ ಅವಧಿಯನ್ನು ಮುಗಿಸಿರುವ 183 ಜನರನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಭಾರತ ಮನವಿ ಮಾಡಿದೆ. ಮುಖ್ಯವಾಗಿ 18 ಜನರ ವಾಪಸಾತಿಯನ್ನು ವೇಗವಾಗಿ ಪೂರ್ಣಗೊಳಿಸುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಒತ್ತಾಯಿಸಿದೆ. ಭಾರತದ ವಶದಲ್ಲಿರುವ 76 ಪಾಕಿಸ್ತಾನಿ ನಾಗರಿಕ ಕೈದಿಗಳೆಂದು ನಂಬಲಾಗಿರುವ ಮೀನುಗಾರರ ರಾಷ್ಟ್ರೀಯತೆ ಪರಿಶೀಲನೆ ಪ್ರಕ್ರಿಯೆಯನ್ನು ತ್ವರಿತವಾಗಿ ಮುಗಿಸುವಂತೆ ಪಾಕಿಸ್ತಾನ ಒತ್ತಾಯಿಸಿದೆ.

ನಾಗರಿಕ ಕೈದಿಗಳು, ಮೀನುಗಾರರು ಮತ್ತು ಅವರ ದೋಣಿಗಳು ಮತ್ತು ಕಾಣೆಯಾದ ಭಾರತೀಯ ರಕ್ಷಣಾ ಸಿಬ್ಬಂದಿಯನ್ನು ಪಾಕಿಸ್ತಾನದ ವಶದಿಂದ ಶೀಘ್ರ ಬಿಡುಗಡೆ ಮತ್ತು ವಾಪಸಾತಿಗೆ ಭಾರತ ಸರ್ಕಾರ ಒತ್ತಾಯ ಮಾಡಿದೆ.

ಸಮಾಚಾರ ಸಣ್ಣದಲ್ಲ

ಪ್ರಾಧ್ಯಾಪಕರ ನೇಮಕ: ನೇರ ಸಂದರ್ಶನ 11ಕ್ಕೆ

ಶಿವಮೊಗ್ಗ: ಪಶು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಜ. 11 ರಂದು ನೇರ ಸಂದರ್ಶನ ಏರ್ಪಡಿಸಲಾಗಿದೆ. ಪಶುವೈದ್ಯಕೀಯ ಔಷಧ ಹಾಗೂ ವಿಷಶಾಸ್ತ್ರ ವಿಭಾಗ, ಜಾನುವಾರು ಸಾಕಾಣಿಕಾ ಸಂಕೀರ್ಣ ವಿಭಾಗ, ಪಶು ವೈದ್ಯಕೀಯ ಶರೀರಕ್ರಿಯಾ ಮತ್ತು ಜೀವರಸಾಯನ ಶಾಸ್ತ್ರವಿಭಾಗ ಮತ್ತು ಪಶು ವೈದ್ಯಕೀಯ ಚಿಕಿತ್ಸಾ ಸಂಕೀರ್ಣ ವಿಭಾಗಗಳಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ನಿಯಮಾವಳಿಯಂತೆ ಹಾಗೂ ಮಾರ್ಗಸೂಚಿಯಂತೆ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 08182-200872 ಸಂಪರ್ಕಿಸುವಂತೆ ಪಶುವೈದ್ಯಕೀಯ ಮಹಾವಿದ್ಯಾಲಯದ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತುಂಗಾ ನದಿಯ ದಡದಲ್ಲಿ ತೆಪ್ಪೋತ್ಸವ

ತೀರ್ಥಹಳ್ಳಿ: ತುಂಗಾ ನದಿಯ ದಡದಲ್ಲಿ ಶ್ರೀರಾಮೇಶ್ವರ ದೇವರ ಉತ್ಸವಕ್ಕೆ ಭವ್ಯ ಸ್ವಾಗತ ಕೋರಿ, ದೇವರ ತೆಪ್ಪೋತ್ಸವವನ್ನು ವಿಜೃಂಭಣೆಯಿಂದ ನೆಡೆಸಲಾಯಿತು. ಮಾಜಿ ಸಚಿವ ಆರಗ ಜ್ಞಾನೇಂದ್ರ, ಕಿಮ್ಮನೆ ರತ್ನಾಕರ್, ಆರ್.ಎಂ. ಮಂಜುನಾಥಗೌಡ, ಜಾತ್ರ ಉತ್ಸವ ಸಮಿತಿಯ ಅಧ್ಯಕ್ಷರು, ಸಂಚಾಲಕರು ಈ ಸಂದರ್ಭದಲ್ಲಿ ಹಾಜರಿದ್ದು ಶುಭಕೋರಿದರು. ಅಪಾರ ಜನಸ್ತೋಮ ತೆಪ್ಪೋತ್ಸವದ ವೈಭವವನ್ನು ವೀಕ್ಷಿಸಿದರು. ಆಕರ್ಷಕ ಸಿಡಿಮದ್ದುಗಳ ವರ್ಣಮಯ ಪ್ರದರ್ಶನವು ರಂಜನೀಯವಾಗಿತ್ತು. ಬೆಂಕಿಯ ಕಿಡಿ ತಗುಲಿಸಿಕೊಂಡು ಆಕಾಶದೆತ್ತರಕ್ಕೆ ಹಾರಿ ರಂಗುರಂಗಿನ ಚಿತ್ತಾರ ಬೆಳಗಿದಾಗ ಜನರ ಉಲ್ಲಾಸ, ಹರ್ಷೋದ್ಗಾರ ಮುಗಿಲು ಮುಟ್ಟಿತು. 25 ಸಾವಿರಕ್ಕೂ ಹೆಚ್ಚು ಜನಸ್ತೋಮ ತೆಪ್ಪೋತ್ಸವಕ್ಕೆ ಸಾಕ್ಷಿಯಾಯಿತು. ಪೋಲೀಸ್ ವ್ಯವಸ್ಥೆ ಅಚ್ಚುಕಟ್ಟಾಗಿ ತನ್ನ ಕರ್ತವ್ಯ ನಿರ್ವಹಿಸಿತು. ಯಾವುದೇ ಅಹಿತಕರ ಘಟನೆಗಳು ನೆಡೆಯದೆ ಜಾತ್ರೆ ಸಂಪನ್ನವಾಯಿತು.

ನಿಗಮದ ಅಧ್ಯಕ್ಷರ ಜಿಲ್ಲಾ ಪ್ರವಾಸ ಇಂದು

ಶಿವಮೊಗ್ಗ: ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪದ್ಮಾವತಿರವರು ಜ. 3 ರಂದು ಜಿಲ್ಲೆಗೆ ಭೇಟಿ ನೀಡಲಿದ್ದು, ಅಂದು ಬೆಳಗ್ಗೆ 10.30ಕ್ಕೆ ಉಪನಿರ್ದೇಶಕರ ಕಚೇರಿಯಲ್ಲಿ ನಡೆ ಯುವ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 1.30ಕ್ಕೆ ವಿವಿಧ ಫಲಾನುಭವಿಗಳ ಆದೇಶ ಪತ್ರ ವಿತರಣೆ, ಮ. 02.00ಕ್ಕೆ ಅಧಿಕಾರಿಗಳೊಂದಿಗೆ ವಿವಿಧ ಘಟಕಗಳ ವೀಕ್ಷಣೆ ನಡೆಸಲಿದ್ದು, ಸಂಜೆ 6.30ಕ್ಕೆ ಬೆಂಗಳೂರಿಗೆ ತೆರಳಲಿ ದ್ದಾರೆ ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನಾಳೆ ಸಹ್ಯಾದ್ರಿ ಕಲಾ ಪರಿಷತ್ ಉದ್ಘಾಟನೆ

ಶಿವಮೊಗ್ಗ: ಕುವೆಂಪು ವಿವಿ, ಸಹ್ಯಾದ್ರಿ ಕಲಾ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಜ.4ರಂದು ಬೆಳಿಗ್ಗೆ 10.30ಕ್ಕೆ ಸಹ್ಯಾದ್ರಿ ಕಲಾ ಪರಿಷತ್ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿದೆ. ಭಾರತ ಸರಕಾರ ಎನ್.ವಿ.ಎಸ್.ಶಿಕ್ಷಣ ಸಚಿವಾಲಯದ ನಿವೃತ್ತ ಜಂಟಿ ಆಯುಕ್ತ ಎ.ಎನ್.ರಾಮಚಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಾಗರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕ ಡಾ. ಕುಂಸಿ ಉಮೇಶ್, ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಡಾ. ಅವಿನಾಶ್ ಟಿ., ವಿಜ್ಞಾನ ಕಾಲೇಜಿನ ಪ್ರಾಂಶುಪಾಲೆ ಡಾ.ಎನ್.ರಾಜೇಶ್ವರಿ, ಬಿ.ಎಸ್.ರಾಧಕೃಷ್ಣ ಉಪಸ್ಥಿತರಿರುವರು, ಪ್ರಾಂಶುಪಾಲ ಡಾ. ಸೈಯ್ಯದ್ ಸನಾವುಲ್ಲಾ ಅಧ್ಯಕ್ಷತೆವಹಿಸುವರು. ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಆಗಮಿಸಬೇಕು ಎಂದು ಕಾಲೇಜಿನ ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ. ಕೆ.ಎನ್.ಮಂಜುನಾಥ್ ಕೋರಿದ್ದಾರೆ.

ಚೇಂಬರ್ ಮಾಜಿ ಅಧ್ಯಕ್ಷರಿಗೆ ಸನ್ಮಾನ

ಶಿವಮೊಗ್ಗ: ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ಸಂಸ್ಥೆಗೆ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.ಮಾಜಿ ಅಧ್ಯಕ್ಷರಾದ ಟಿ.ಆರ್.ಅಶ್ವತ್ಥ್ ನಾರಾಯಣ ಶೆಟ್ಟಿ, ಎಚ್. ಮಹೇಂದ್ರಪ್ಪ, ಡಿ.ಎಸ್.ಅರುಣ್, ಡಿ.ಎಂ.ಶಂಕರಪ್ಪ, ಜೆ.ಆರ್.ವಾಸುದೇವ್, ಎನ್.ಗೋಪಿ ನಾಥ್ ಅವರಿಗೆ ಸನ್ಮಾನಿಸಲಾಯಿತು. ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಅಧ್ಯಕ್ಷ ಎಂ. ಜಿ.ಬಾಲಕೃಷ್ಣ, ಎಫ್‌ಕೆಸಿಸಿಐ ಉಪಾಧ್ಯಕ್ಷ ಟಿ.ಸಾಯಿರಾಮ್, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಬಿ.ಗೋಪಿನಾಥ್, ಮತ್ತಿತರರಿದರು.

{ **ಎಚ್.ವಿಶ್ವನಾಥ್** } ಎಂಎಲ್‌ಸಿ

ಸರಕಾರದಲ್ಲಿ ಸರಿಯಾದ ಹಿಡಿತ ಇಲ್ಲ. ಹುಚ್ಚು ಹುಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಆರ್ಥಿಕ ಸ್ಥಿತಿ ಅಧೋಗತಿಗೆ ಇಳಿದಿದೆ. ಆಡಳಿತದಲ್ಲಿ ಬಿಗಿ ಇಲ್ಲ. ಸಿಎಂ ಸಿದ್ದರಾಮಯ್ಯ, ಯಾವ ರೀತಿ ಆಡಳಿತ ಕೊಡುತ್ತಾ ಇದ್ದೀರಾ? ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆ ಅಂತ ಶ್ವೇತ ಪತ್ರ ಹೊರಡಿಸಿ ಬಹಿರಂಗ ಪಡಿಸಬೇಕು.

ಶಾಸಕರ ನೇತೃತ್ವದಲ್ಲಿ ಚುನಾವಣಾ ಆಯೋಗಕ್ಕೆ ಬಿಜೆಪಿ ಮುಖಂಡರಿಂದ ಮನವಿ ಸಲ್ಲಿಕೆ

ಪಾಲಿಕೆ ಚುನಾವಣೆಗೆ ಬಿಜೆಪಿ ಒತ್ತಡ

ಶಿವಮೊಗ್ಗ: ಮಹಾನಗರ ಪಾಲಿಕೆಯ ನಿಗದಿತ ಅವಧಿ ಯಲ್ಲಿ ಚುನಾವಣೆ ನಡೆಸಬೇಕೆಂದು ಬಿಜೆಪಿ ನಿಯೋಗ ಚುನಾವಣಾ ಆಯುಕ್ತರಿಗೆ ಮನವಿ ಮಾಡಿದೆ. ಬೆಂಗಳೂ ರಿನಲ್ಲಿ ಶಾಸಕರಾದ ಚೆನ್ನಬಸಪ್ಪ ಹಾಗೂ ಡಿ.ಎಸ್.ಅರು ಣ್ ನೇತೃತ್ವದ ತಂಡ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಪಾಲಿಕೆಯ ಚುನಾವಣೆಯ ಅಗತ್ಯತೆಯ ಬಗ್ಗೆ ಮನವರಿಕೆ ಮಾಡಿತು.

ಪಾಲಿಕೆ ಸದಸ್ಯರ ಅವಧಿಯು 2023 ನವೆಂಬರ್‌ನಲ್ಲಿ ಮುಕ್ತಾಯಗೊಂಡಿದ್ದು, ಒಂದು ವರ್ಷದಿಂದ ಚುನಾಯಿತ ಆಡಳಿತ ಮಂಡಳಿ ಇಲ್ಲದ ಕಾರಣ ಹಾಗೂ ಜನರ ಸಮಸ್ಯೆಗಳನ್ನು ಪಾಲಿಕೆಯಲ್ಲಿ ಆಲಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಇದರಿಂದ ಅನೇಕ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರದ ಅಭಿವೃದ್ಧಿಗೆ ಪಾಲಿಕೆಯ ಆಡಳಿತದಲ್ಲಿ ಜನಪ್ರತಿನಿಧಿಗಳ ಪಾತ್ರ ದೊಡ್ಡದಿದೆ. ಹಾಗಾಗಿ ಚುನಾವಣೆ ನಡೆಸಬೇಕು ಎಂದು ಒತ್ತಾಯ ಮಾಡಿತು. ಈಗಾಗಲೇ ನಗರದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಇದರಲ್ಲಿ ಜನಪ್ರತಿನಿಧಿಗಳು ಪಾತ್ರ ಇಲ್ಲವಾಗಿದೆ. ಎಲ್ಲವೂ ಅಧಿಕಾರಿಗಳ ನೇತೃತ್ವದಲ್ಲಿಯೇ ನಡೆಯುತ್ತಿದೆ. ಜನರಿಂದ ಆಯ್ಕೆಯಾದ ಸದಸ್ಯರು ಇಲ್ಲವಾದ್ದರಿಂದ ಜನರ ಬವಣೆಯನ್ನು ಅಧಿಕಾರಿಗಳ ಬಳಿ ತೆಗೆದುಕೊಂಡು ಹೋಗಿ ಪರಿಹರಿಸುವವರು ಇಲ್ಲದಂತಾಗಿದೆ. ಪಾಲಿಕೆಯ ಆಡಳಿತದಲ್ಲಿ ಒಂದು ವರ್ಷದಿಂದ ಒಂದಿಲ್ಲ ಒಂದು ಸಮಸ್ಯೆಗೆ ಪರಿಹಾರ ಕಲ್ಪಿಸುವಲ್ಲಿ ಅಧಿಕಾರಿಗಳ ತಂಡ ಶ್ರಮ ಹಾಕುತ್ತಿದೆಂಯಾದರೂ, ನಿಗಧಿತ ಜನಸಂಪರ್ಕ ಸಾಧಿ ಸಲು ಸಾಧ್ಯವಿಲ್ಲ ಎಂದು ನಿಯೋಗ ಆಯುಕ್ತರಿಗೆ ವಿವರಣೆ ನೀಡಿತು.

ಜನರಿಂದ ಆಯ್ಕೆಯಾದ ಸದಸ್ಯರಿಗೆ ಪಾಲಿಕೆಯ ಆಡಳಿತಕ್ಕೆ ಜನಸಂಪರ್ಕ ಅವಕಾಶ ಸಿಕ್ಕಂತೆ ಆಗುತ್ತದೆ. ಅನೇಕ ಬಡಾವಣೆಗಳು ಹಾಗೂ ಕಾರ್ಯಗಳು ತ್ವರಿತ ಗತಿಯಲ್ಲಿ ನಡೆಯಲು ಜನರ ಸಹಕಾರವೂ ಬೇಕಾ ಗಿರುತ್ತದೆ. ಪಾಲಿಕೆಯ ಹಾಗೂ ಜನರ ನಡುವೆ ಸದಸ್ಯರು ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಾರೆ. ಆದರೆ, ಚುನಾವಣೆ ನಡೆಯದೇ ಇರುವುದರಿಂದ ಅದರ ಪರಿಣಾಮ ಅಭಿವೃದ್ಧಿ ಕೆಲಸಗಳ ಮೇಲೆ ಆಗುತ್ತಿದೆ ಎಂದು ನಿಯೋಗ ಆಯುಕ್ತರಿಗೆ ಮನವರಿಕೆ ಮಾಡಿತು.

ಬೆಂಗಳೂರಿನ ರಾಜ್ಯ ಚುನಾವಣಾ ಆಯೋಗಕ್ಕೆ ಭೇಟಿ ನೀಡಿ, ಮಾನ್ಯ ಮುಖ್ಯ ಚುನಾವಣಾ ಆಯುಕ್ತರಿಗೆ ಮನವಿಯನ್ನು ಸಲ್ಲಿಸಲಾಯಿತು.

> **ಚುನಾವಣೆಯ ಮೂಲಕ ಆಯ್ಕೆಯಾದ ಜನಪ್ರತಿನಿಧಿಗಳು ಇರುವುದು ಶಿವಮೊಗ್ಗ ನಗರದ ಆಡಳಿತ ಹಾಗೂ ಅಭಿವೃದ್ಧಿಗೆ ಅತಿ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆಗೆ ಶೀಘ್ರ ಚುನಾವಣೆ ನಡೆಸುವಂತೆ ಆಯೋಗಕ್ಕೆ ಮನವಿ ಮಾಡಿದ್ದೇವೆ. ನಮ್ಮ ಮನವಿಗೆ ಆಯೋಗದ ಆಯುಕ್ತರು ಸಕಾರಾತ್ಮಕವಾಗಿ ಸ್ಪಂದಿಸಿ ಮನವಿ ಸ್ವೀಕರಿಸಿದ್ದಾರೆ. ಸರಕಾರವೂ ಇದರ ಬಗ್ಗೆ ಕಾಳಜಿ ವಹಿಸಿ ಪಾಲಿಕೆ ಚುನಾವಣೆ ನಡೆಸುವ ಕುರಿತು ಶೀಘ್ರ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು**
> ಡಿ.ಎಸ್.ಅರುಣ್ ವಿಧಾನಪರಿಷತ್ ಸದಸ್ಯರು

ಈ ಸಂದರ್ಭದಲ್ಲಿ ಶಾಸಕ ಚೆನ್ನಬಸಪ್ಪ ಮಾತನಾಡಿ, ಪಾಲಿಕೆಗೆ ಶೀಘ್ರ ಚುನಾವಣೆ ನಡೆಸುವಂತೆ ಸರಕಾರಕ್ಕೂ ಮನವಿ ಮಾಡಿದ್ದೇವೆ. ಪಾಲಿಕೆಯ ಆಡಳಿತದಲ್ಲಿ ಅಧಿಕಾರಿ ಗಳ ನೇತೃತ್ವ ದೀರ್ಘ ಕಾಲ ಇರುವುದು ಸರಿಯ ಲ್ಲ. ಈಗಾಗಲೇ ಒಂದು ವರ್ಷ ಕಳೆದಿರುವುದರಿಂದ ಚುನಾವಣೆ ನಡೆಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಸರಕಾರ ಇದರ ಬಗ್ಗೆ ಗಂಭೀರವಾಗಿ ಗಮನಹರಿಸಬೇಕು. ಪಾಲಿಕೆಗೆ ಚುನಾವಣೆ ನಡೆಸುವು ದರಿಂದ ಶಿವಮೊಗ್ಗ ಅಭಿವೃದ್ಧಿ ಅನುಕೂಲ ವಾಗುತ್ತದೆ ಎಂಬ ಅಂಶವನ್ನು ನಗರಾಭಿವೃದ್ಧಿ ಸಚಿವರಿಗೂ ಈ ಹಿಂದೆ ಗಮನಕ್ಕೆ ತರಲಾಗಿದೆ. ಈಗ ಚುನಾವಣಾ ಆಯೋಗ ತೀರ್ಮಾನ ಮಾಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಿಎಸ್ ಅರುಣ್, ಭಾರತಿ ಶೆಟ್ಟಿ ಹಾಗೂ ಡಾ. ಧನಂಜಯ್ ಸರ್ಜಿ ಶಿವಮೊಗ್ಗ ಮಹಾನಗರ ಪಾಲಿಕೆಯ ಮಾಜಿ ಸದಸ್ಯರುಗಳು ಹಾಗೂ ಶಿವಮೊಗ್ಗ ನಗರ ಮಂಡಲ ಬಿಜೆಪಿ ಮುಖಂಡರುಗಳು, ಕಾರ್ಯಕರ್ತರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದೇಶಾದ್ಯಂತ ಚಳವಳಿ: ಕೇಂದ್ರಕ್ಕೆ ರೈತರ ಎಚ್ಚರಿಕೆ

ಶಿವಮೊಗ್ಗ: ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ದೆಹಲಿ ಗಡಿಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ನಡೆಸುತ್ತಿರುವ ಚಳವಳಿಯನ್ನು ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸಿ, ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಇಂದು ಜಿಲ್ಲಾಧಿ ಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನೆಡೆಸಲಾಯಿತು.

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಹೆಚ್. ಆರ್.ಬಸವರಾಜಪ್ಪ ಪ್ರತಿಭಟನೆಯಲ್ಲಿ ಮಾತನಾಡಿ, ದೆಹಲಿ ಹೊರವಲಯದಲ್ಲಿ ಈ ಹಿಂದೆ 13 ತಿಂಗಳ ಕಾಲ ರೈತರು ಚಳುವಳಿ ನಡೆಸಿದ ಸಂದರ್ಭದಲ್ಲಿ ಕೇಂದ್ರ ಸರಕಾರ ಚಳುವಳಿಗೆ ಮಣಿದು ರೈತ ವಿರೋಧಿ 3ಕೃಷಿ ಕಾಯ್ದೆಗಳನ್ನು ವಾಪಾಸ್ಸು ಪಡೆಯಿತು. ಅದೇ ವೇಳೆ ಎಂ.ಎಸ್.ಪಿ ಕಾನೂನು ಬದ್ಧವಾಗಿ ಜಾರಿ ಮಾಡುವುದಾಗಿ, ವಿದ್ಯುತ್‌ಶಕ್ತಿ ಖಾಸ ಗೀಕರಣ ಮಾಡುವುದಿಲ್ಲವೆಂದು ಲಿಖಿತ ಭರವಸೆ ಕೊಟ್ಟಿತ್ತು. 2 ವರ್ಷ ಕಳೆದರೂ ಈಡೇ ರಿಲ್ಲ ಎಂದು ದೂರಿದರು.

ಚಳವಳಿ ಪಂಜಾಬ್ ಮತ್ತು ಹರಿಯಾಣ ರೈತರಿಗೆ ಸೀಮಿತವಾಗಿಲ್ಲ: ದೆಹಲಿ ಗಡಿಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ಸಾವಿರಾರು ಮಂದಿ ರೈತರು ನಡೆಸುತ್ತಿರುವ ಚಳವಳಿ ಕೇವಲ ಪಂಜಾಬ್ ಮತ್ತು ಹರಿಯಾಣ ರೈತರಿಗೆ ಮಾತ್ರ ಸೀಮಿತವಾಗಿಲ್ಲ.ಭಾರತ ದೇಶದ ರೈತರ ಪರವಾಗಿ ಚಳುವಳಿ ನಡೆಯುತ್ತಿದೆ. ಜಗತ್ ಸಿಂಗ್ ದಲ್ಲೈವಾಲ್‌ರವರು ಸಹ ಈ ದೇಶದ ರೈತರ ಪರವಾಗಿ ಗಾಂಧಿಜೀಯವರು ಹಾಕಿ ಕೊಟ್ಟಂತಹ ಮಾರ್ಗದಲ್ಲಿ ಅಹಿಂಸಾತ್ಮಕ ವಾದ ಮಾರ್ಗದಲ್ಲಿ ಚಳವಳಿ ನಡೆಸುತ್ತಿದ್ದಾರೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸದಿದ್ದರೆ ರೈತ ಚಳವಳಿಯನ್ನು ದೇಶಾದ್ಯಂತ ತೀವ್ರಗೊಳಿಸಲಾಗುವುದೆಂದು ಎಚ್ಚರಿಸಿ ಜಿಲ್ಲಾಡಳಿತದ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸ ಲಾಯಿತು.

ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ, ರಾಜ್ಯ ಉಪಾಧ್ಯಕ್ಷ ಹಿಟ್ಟೂರು ರಾಜು, ಭದ್ರಾವತಿ ತಾಲೂಕು ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ, ಮತ್ತಿತರರು ಇದ್ದರು.

ಬಿವಿಐ ಸಂಸ್ಥೆ ಸಮಾಜಮುಖಿ ಕಾರ್ಯ ಮಾದರಿ

ಶಿವಮೊಗ್ಗ : ಮನುಷ್ಯ ಮನುಷ್ಯನಿಗೆ ಸಹಾಯ ಹಸ್ತ ಚಾಚುವುದು ನಮ್ಮೆಲ್ಲರ ಧರ್ಮವಾಗಿದ್ದು, ಪ್ರತಿಯೊಬ್ಬರೂ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ ಎಂದು ಮೆಟ್ರೋ ಆಸ್ಪತ್ರೆಯ ವೈದ್ಯರಾದ ಡಾ. ಶಂಕರ್ ನವಲೆ ಹೇಳಿದರು.

ಭಾವಸಾರ ವಿಜನ್ ಇಂಡಿಯಾ ವತಿಯಿಂದ ನಗರದ ಹಕ್ಕಿಪಿಕ್ಕಿ ಕ್ಯಾಂಪ್ ನಿವಾಸಿಗಳಿಗೆ, ಚಳಿಗಾಲದ ಹಿನ್ನೆಲೆಯಲ್ಲಿ ಹೊದಿಕೆ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾವಸಾರ ವಿಜನ್ ಇಂಡಿಯಾ ಸಂಸ್ಥೆಯು ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಈ ವರ್ಷದ ನೂತನ ಸಮಿತಿಯ ಮೊದಲ ಕಾರ್ಯಕ್ರಮ ಹೃದಯ ಸ್ಪರ್ಶಿಯಾಗಿದೆ ಎಂದರು. ಇದರಿಂದ ರಕ್ತದಲ್ಲಿನ ಸಕ್ಕರೆ ಮಟ್ಟ ನಿರ್ವಹಿಸಬಹುದಾಗಿದೆ. ಮಧುಮೇಹ ಹೊಂದಿರುವವರು ತಪ್ಪದೇ ಔಷಧಿಗಳನ್ನು ತೆಗೆದುಕೊಳ್ಳಬೇಕು. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಕೊಳ್ಳಿ. ಎಂದು ಅನೇಕ ಸಲಹೆಗಳನ್ನು ನೀಡಿದರು. ಮುಂದಿನ ದಿನಗಳಲ್ಲಿ ಬಿವಿಐ ಸಂಸ್ಥೆಯೂ ಮತ್ತಷ್ಟು ಸಮಾಜಮುಖಿ ಕಾರ್ಯಗಳು, ಉದಾತ್ತ ಸೇವೆಗಳ ಮೂಲಕ ಬಡವರ, ಶ್ರಮಿಕರ ಸಹಾಯಮಾಡಲಿ ಆಶಿಸಿದರು. ಕಾರ್ಯಕ್ರಮದಲ್ಲಿ ಬಿವಿಐ ಅಧ್ಯಕ್ಷೆ ನಂದಾ ಜಗದೀಶ್ ಅಧ್ಯಕ್ಷತೆ ವಹಿಸಿದ್ದರು. ಬಿವಿಐ ರಾಷ್ಟ್ರೀಯ ಮಾಜಿ ಅಧ್ಯಕ್ಷ ಗಜೇಂದ್ರನಾಥ್ ಮಾಳೋದೆ, ಸದಸ್ಯರಾದ ರಮಾನಂದ್, ಉಪಾಧ್ಯಕ್ಷ ಸಚಿನ್, ಕಾರ್ಯದರ್ಶಿ ಸುನಿಲ್ ಗುಜ್ಜರ್, ಖಜಾಂಚಿ ಸ್ವಪ್ನ ಹರೀಶ್, ಅರ್ಚನಾ, ಕೋಮಲ್ ಸುನಿಲ್, ಇದ್ದರು.

ನಗರದ ಹಕ್ಕಿಪಿಕ್ಕಿ ಕ್ಯಾಂಪ್ ನಿವಾಸಿಗಳಿಗೆ, ಹೊದಿಕೆ ವಿತರಣೆ ಕಾರ್ಯಕ್ರಮಕ್ಕೆ ಡಾ. ಶಂಕರ್ ನವುಲೆ ಚಾಲನೆ ನೀಡಿದರು.

ಚಳಿಗಾಲದಲ್ಲಿ ದೇಹಕ್ಕೆ ಹಲವು ತೊಂದರೆ:

ಶೀತ, ನೆಗಡಿ, ಜ್ವರ, ಅಜೀರ್ಣ, ಅಲರ್ಜಿಯಂತ ಸಮಸ್ಯೆಗಳು ಕಂಡುಬರುತ್ತದೆ. ಚಳಿಯ ತೀವ್ರತೆಯಿಂದ ರಕ್ತ ಸಂಚಾರದಲ್ಲಿ ತೊಂದರೆಯಾಗುವ ಸಂದರ್ಭ ವಿರುವುದು ಪಾರ್ಶ್ವವಾಯು, ಅಧಿಕ ಮಧುಮೇಹ, ಕಡಿಮೆ ರಕ್ತದೊತ್ತಡ, ಹೃದಯಾಘಾತಗಳಾಗುವ ಸಂಭವ ಹೆಚ್ಚಾಗಿ ರುತ್ತದೆ. ಸ್ವಚ್ಛತೆ ಕಾಪಾಡುವುದು, ಜಂಕ್‌ಫುಡ್‌ಗಳ ಸೇವನೆ ಮಾಡಬೇಡಿ. ಯೋಗ, ಧ್ಯಾನ, ವ್ಯಾಯಾಮ, ನಡಿಗೆಯಂಥ ದೈಹಿಕ ಚಟುವಟಿಕೆ ಮಾಡಬೇಕು. ವಿಟ ಮಿನ್-ಡಿ ಹೊಂದಿರುವ ಸೂರ್ಯನ ಬೆಳಕು ಪಡೆಯ ಬೇಕು.ಎಂದು ಮೆಟ್ರೋ ಆಸ್ಪತ್ರೆಯ ವೈದ್ಯರಾದ ಡಾ. ಶಂಕರ್ ನವಲೆ ಹೇಳಿದರು.

ಪರಿವರ್ತಕ ಸರಿಪಡಿಸಲು ಮನವಿ

ಹೊಸನಗರ: ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಆಟವಾಡುತ್ತಿರುವುದರ ಜತೆಗೆ ಪಟ್ಟಣ ಪಂಚಾಯತಿ ವ್ಯಾಪ್ತಿಯ 11ನೇ ವಾರ್ಡ್ ಮಾರಿಗುಡ್ಡ ರುದ್ರಭೂಮಿಯ ಸಮೀಪ ವಿರುವ ಟಿ.ಸಿ ಯಲ್ಲಿ ತಾಂತ್ರಿಕ ದೋಷದಿಂದ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದೆ ಎಂದು 11ನೇ ವಾರ್ಡ್ ನಿವಾಸಿ ಗಳು ಹೊಸನಗರದ ಮೆಸ್ಕಾಂ ಇಲಾಖೆಯ ಸಹಾಯಕ ಕಾರ್ಯ ನಿರ್ವಹಕ ಇಂಜಿನಿಯರ್ ಚಂದ್ರಶೇಖರ್‌ರವರಿಗೆ ಮನವಿ ಪತ್ರ ಸಲ್ಲಿಸಿ ತಕ್ಷಣ ದುರಸ್ತಿ ಪಡೆಸುವಂತೆ ಕೇಳಿಕೊಂಡರು.

ಮನವಿ ಪತ್ರದಲ್ಲಿ ಹೊಸನಗರ ತಾಲೂಕು ಪಟ್ಟಣ ವ್ಯಾಪ್ತಿಯ 11ನೇ ವಾರ್ಡ್ ಮಾರಿಗುಡ್ಡದ ರುದ್ರಭೂಮಿ ಹತ್ತಿರ ವಿದ್ಯುತ್ ಸಂಪರ್ಕದ ಟಿ.ಸಿ ಯ ತಾಂತ್ರಿಕ ದೋಷದಿಂದ ಇಲ್ಲಿನ ನಿವಾಸಿಗಳಿಗೆ ಪ್ರತಿನಿತ್ಯ ತೊಂದರೆ ಯಾಗುತ್ತಿದೆ ಇಲ್ಲಿ ವಾಸ ಮಾಡುವ ಮನೆಯಲ್ಲಿರುವ ಟಿ.ವಿ, ಫ್ರೀಜ್, ಫ್ಯಾನ್ ಮುಂತಾದ ವಿದ್ಯುತ್ ಬಳಕೆಯ ವಸ್ತುಗಳು ವೋಲ್ಟೇಜ್ ವೇರಿ ಯೇಶನ್‌ನಿಂದ ಹಾಳಾ ಗುತ್ತಿದೆ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದೆ ತಕ್ಷಣ ಸ್ಥಳದಲ್ಲಿರುವ ಟಿ.ಸಿಯನ್ನು ಪರಿಶೀಲಿಸಿ ಬದಲಿ ವ್ಯವಸ್ಥೆ ಮಾಡಿ ಇಲ್ಲವಾದರೇ ಮುಂದೆ ಏನಾದರೂ ಅನಾಹುತವಾದರೆ ಇದಕ್ಕೆ ಸಂಪೂರ್ಣ ಜಾವಾಬ್ದಾರಿ ತಮ್ಮ ಇಲಾಖೆಯೇ ಕಾರಣವಾಗುತ್ತದೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.ಈ ಸಂದರ್ಭ ದಲ್ಲಿ ಅಲ್ಲಿನ ನಿವಾಸಿಗಳಾದ ಎಲ್‌ಐ.ಸಿ ಕೆ ಪ್ರದೀಪ್‌ಕುಮಾರ್, ಮಹೇ ಂದ್ರ, ಆಟೋ ಗಣೇಶ್, ಮನೋಜ್‌ಕುಮಾರ್, ರಮೇಶ, ವರದರಾಜ್, ಚಂದ್ರಶೇಖರ ಗೌಡ, ಶ್ರೀನಿವಾಸ್ ಮುಂತಾದವರು ಉಪಸ್ಥಿತರಿದ್ದರು.

ಹೊಸನಗರದ ಮೆಸ್ಕಾ ಇಂಜೇನೀಯರ್ ಚಂದ್ರಶೇಖರ್‌ಗೆ ಮನವಿಪತ್ರ ಸಲ್ಲಿಸು ತ್ತಿರು ವುದು.

ಮೆಸ್ಕಾಂ ಇಲಾಖೆಯಿಂದ ಸ್ಪಂದನೆ:

11ನೇ ವಾರ್ಡ್ ನಿವಾಸಿಗಳು ಮೆಸ್ಕಾಂ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಚಂದ್ರ ಶೇಖರ್‌ರವರು ಮನವಿಗೆ ಸ್ವಂದಿಸಿ ತಕ್ಷಣ ಇಲಾಖೆಯ ಸಿಬ್ಬಂದಿಗಳಿಂದ ಟಿ.ಸಿಯನ್ನು ಪರೀಶೀಲಿಸಲಾಗುವುದು ಎಂದು ಭರವಸೆ ನೀಡಿದರು.

ಅರಣ್ಯ ನಾಶ ತಡೆಯಲು ಮನವಿ

ಸಾಗರ : ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ 74.5ಚ.ಕಿ.ಮೀ (18700 ಎಕರೆ) ಅರಣ್ಯ ಪ್ರದೇಶ ನಾಶವಾಗಿದೆ ಎಂದು ಭಾರತ ಸರಕಾರದ ಭಾರತೀಯ ಅರಣ್ಯ ಸಮೀಕ್ಷಾ ವರದಿ ಪ್ರಕಟಿಸಿದೆ. ಇನ್ನು ನಾಶವಾಗುವ ಭೀತಿ ಇದೆ. ಈ ಹಿನ್ನೆಲೆ ಜಿಲ್ಲೆಯಲ್ಲಿ ಇನ್ನಷ್ಟು ಸಾವಿರ ಎಕರೆ ಅರಣ್ಯ ನಾಶ ಆಗದಂತೆ ತಡೆಗಟ್ಟಲು ಕೈಗೊಳ್ಳಬೇಕಾದ ತುರ್ತು ಕ್ರಮಗಳು , ಪ್ರಚಲಿತ ಸ್ಥಿತಿಗತಿ ಬಗ್ಗೆ ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ರರಾದ ಅನಂತ ಹೆಗಡೆ ಅಶೀ ಸರ, ಸಂಚಾಲ ಕರಾದ ಕವಲಕೋ ಡು ವೆಂಕಟೇಶ, ಪರಿಸರ ತಜ್ಞರಾದ ಆನೇಗೋಳಿ ಸು ಬ್ಬಾ ರಾವ್ ಸಾಗರದ ಡಿಎಫ್‌ಓ ಮೋಹನ ಕುಮಾರ್ ರವರ ಮೂಲಕ ವಿಶೇಷ ವರದಿ, ಶಿಫಾರಸ್ಸುಗಳ ಮನವಿಯನ್ನು ಅರಣ್ಯ ಮಂತ್ರಿಗಳಿಗೆ ಸಲ್ಲಿಸಿದ್ದಾರೆ.

ಇತಿಹಾಸ ವೇದಿಕೆಯಿಂದ ಸಾಗರೋತ್ಸವ 5ಕ್ಕೆ

ಸಾಗರ: ಜನವರಿ 5 ರಂದು ಸಾಗರ ಸುತ್ತ ಪತ್ರಿಕಾ ಸಹೃದಯ ಬಳಗ ಮತ್ತು ತಾಲೂಕು ಇತಿಹಾಸ ವೇದಿಕೆಯಿಂದ ಸಾಗರೋತ್ಸವ 2025 ಕಾರ್ಯಕ್ರಮ ಏರ್ಪಡಿಲಾಗಿದೆ. ಇಲ್ಲಿನ ಗಾಂಧಿ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧ ನೆ ಮಾಡಿದ 9 ಜನ ಸಾಧಕರ ಸನ್ಮಾನ, ರಮೇಶ್ ಬಾಬು ತಂಡದಿಂದ ನಗೆಹಬ್ಬ, ಡಾ. ಹುಲಿಕಲ್ ನಟರಾಜ್ ತಂಡದಿಂದ ಪವಾಡ ರಹಸ್ಯ ಬಯಲು, ಪಂಚಪ್ಪ ತಂಡದ ಕರಾಟೆ ಪ್ರದರ್ಶನ, ಅಲ್ಲದೆ ಭರತನಾಟ್ಯ, ಜೋಗಿ ಪದ, ಚಂಡೆ ವಾದನ, ಗಾಯನ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ. ಇದರ ಅಂಗವಾದ ಭೂಮಣ್ಣಿ ಬುಟ್ಟಿ ಸ್ಪರ್ಧೆ, ಆಹಾರ ಮೇಳ, ವಸ್ತು ಪ್ರದರ್ಶನ ಮತ್ತು ಇತಿಹಾಸ ಸಮ್ಮೇಳನ ನಡೆಯಲಿದೆ ಎಂದು ಸಹೃದಯ ಬಳಗ ತಿಳಿಸಿದೆ.

ಭೂಮಣ್ಣಿ ಬುಟ್ಟಿ

ಜಂಕ್‌ಫುಡ್ ಬಿಡಿ, ಆರೋಗ್ಯ ಕಾಪಾಡಿ

ಶಿವಮೊಗ್ಗ: ಆರೋಗ್ಯ ಕಾಪಾಡಿಕೊಳ್ಳುವುದೇ ಒಂದು ಸವಾಲಾಗಿದ್ದು, ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಆ ದ್ಯತೆ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ಹೇಳಿದರು.

ಅವರು ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘ ಸ್ನೇಹ ಸ್ಪಂದನ ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸುಶ್ರುತ ಆರೋಗ್ಯ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ಆರೋಗ್ಯವೇ ಸಂಪತ್ತು ಎಂಬುವುದು ಎಲ್ಲರಿಗೂ ಗೊತ್ತಿರುವ ವಿಷಯ ಆದರೆ ವಿದ್ಯಾರ್ಥಿಗಳು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನವನ್ನು ಹರಿಸುವುದಿಲ್ಲ. ಹೊರಗಿನ ಆಹಾರ ಪದಾರ್ಥಗಳಿಗೆ ಹೆಚ್ಚು ಬಲಿಯಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಜಂಕ್ ಪುಡ್ ಬಳಕೆ ಹೆಚ್ಚಾಗಿದ್ದು, ಅದು ಕಳಪೆಯಾಗಿರುತ್ತದೆ. ಇದರಿಂದ ಆರೋಗ್ಯ ಕೆಡಿಸಿಕೊಂಡು ವೈದ್ಯರ ಬಳಿ ಬರುತ್ತಾರೆ ಎಂದರು.

ನಮ್ಮದು ಕೆಮಿಕಲ್ ಬಾಡಿ ಇದರಲ್ಲಿ ಪ್ಲಾಸ್ಟಿಕ್ ಅಂಶವಿದೆ. ಶ್ವಾಸಕೋಶದ ಕಾಯಿಲೆಗಳಿಗೆ ಹೆಚ್ಚು ಬಲಿಯಾಗುತ್ತಾರೆ. ಅನೇಕ ರೋಗಗಳು ನಮ್ಮನ್ನು ಕಾಡುತ್ತಲೇ ಇರುತ್ತವೆ. ಇದರಿಂದ ದೂರವಿರಬೇಕಾದರೆ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದರು. ಆರೋಗ್ಯ ಕ್ಷೇತ್ರಕ್ಕೆ ಭಾರತೀಯರ ಕೊಡುಗೆ ಹೆಚ್ಚಾಗಿದೆ. ಶೇ.70ರಷ್ಟು ಕಾಯಿಲೆಗಳು ಇಂದು ಕಲುಷಿತ ನೀರಿನಿಂದಲೇ ಬರುತ್ತವೆ. ವರ್ಷಕ್ಕೆ ದೇಶದಲ್ಲಿ ಸುಮಾರು 10 ಲಕ್ಷ ಮಕ್ಕಳು ಕಲುಷಿತ ನೀರಿನಿಂದಲೇ ಮರಣ ಹೊಂದುತ್ತಾರೆ ಎಂಬುವುದು ವಿಪರ್ಯಾಸ. ಶೇ.40ರಷ್ಟು ಸರಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯವಿದ್ದು, ಇನ್ನೂ ಶೇ.60ರಷ್ಟು ಖಾಸಗಿ ಆಸ್ಪತ್ರೆಗಳಿವೆ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಉಪನ್ಯಾಸಕ ಗಿರೀಶ್ ಕಾರಂತ್ ಸಹ್ಯಾದ್ರಿ ಕಾಲೇಜು ಬಹುದೊಡ್ಡ ಕ್ಯಾಂಪಸ್ ಆಗಿದೆ. 1800ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಹಿಂದುಳಿದ ಪ್ರದೇಶಗಳಿಂದ ಬರುವವರೇ ಹೆಚ್ಚು. ಅದರಲ್ಲೂ ಹೆಣ್ಣುಮಕ್ಕಳು ತಲೆಸುತ್ತಿ ಬಿದ್ದಿದ್ದು ಇದೆ. ಈ ಎಲ್ಲಾ ವಿಷಯ ಗಳನ್ನು ಮನಗಂಡು ನಮ್ಮ ಕಾಲೇಜಿನಲ್ಲಿಯೇ ಕ್ಲಿನಿಕ್ ಆರಂಭಿಸಲಾಗಿದೆ. ಡಾ. ಧನಂಜಯ ಸರ್ಜಿ, ಡಾ.ಶ್ರೀಧರ್ ನಮ್ಮೊಂದಿಗೆ ಕೈ ಜೋಡಿಸಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಅವಿನಾಶ್ ಮಾತನಾಡಿ, ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಸರ್ಜಿ ಆಸ್ಪತ್ರೆಯ ವೈದ್ಯರು ನಮ್ಮ ಕಾಲೇಜಿನ ಕ್ಲಿನಿಕ್‌ಗೆ ಉಚಿತ ಸೇವೆ ನೀಡುತ್ತಿರುವುದು ಸ್ವಾಗತರ್ಹ ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಎಸ್.ಶ್ರೀಧರ್, ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ. ಶಿವಮೂರ್ತಿ ಎ., ಪ್ರೊ. ಕೆ.ಎಸ್.ಸರಳ, ಡಾ.ಚಂದುಶ್ರೀ, ಡಾ.ಪ್ರಕಾಶ್ ಮರ್ಗನಳ್ಳಿ ಇದ್ದರು.

ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸುಶ್ರುತ ಆರೋಗ್ಯ ಕೇಂದ್ರ ಉದ್ಘಾಟಿಸಿ ವಿಧಾನಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ಮಾತನಾಡಿದ ರು.

ಉಚಿತ ಸೇವೆ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಕಾಲೇಜಿನಲ್ಲಿ ಆಸ್ಪತ್ರೆ ತೆರೆದಿದ್ದು, ಪ್ರತಿ ಶುಕ್ರ ವಾರ ಸರ್ಜಿ ಆಸ್ಪತ್ರೆಯಿಂದ ವೈದ್ಯರು ಕಾಲೇ ಜಿನಲ್ಲಿ ಇರುತ್ತಾರೆ. ಮುಖ್ಯವಾಗಿ ವಿದ್ಯಾರ್ಥಿ ನಿಯರ ಆರೋಗ್ಯದ ದೃಷ್ಟಿಯನ್ನು ಇಟ್ಟುಕೊಂಡು ತಿಂಗಳಿಗೆ 2 ಬಾರಿ ಮಹಿಳಾ ವೈದ್ಯರು ಇಲ್ಲಿ ಲಭ್ಯವಿರುತ್ತಾರೆ. ಇನ್ನೆರಡು ವಾರ ಮಾನ ಸಿಕ ಆರೋಗ್ಯ ಹಾಗೂ ಇತರೆ ಕಾಯಿಲೆಗಳಿಗೆ ಸಂಬಂಧಪಟ್ಟಂತೆ ವೈದ್ಯರು ಬರುತ್ತಾರೆ. ನಮ್ಮ ಆಸ್ಪತ್ರೆಯ ಈ ಎಲ್ಲಾ ವೈದ್ಯರು ಈ ಕಾಲೇಜಿನಲ್ಲಿ ಉಚಿತ ಸೇವೆ ಸಲ್ಲಿಸುತ್ತಾರೆ ಎಂದರು.

ಅಡಕೆ ಬೆಳೆಗಾರರ ಸಮಾವೇಶ ಜ.18ಕ್ಕೆ

ಸಾಗರ: ಪ್ರಾಂತ್ಯ ಅಡಕೆ ಬೆಳೆಗಾರರ ಸಂಘದ ಆಶ್ರಯ ದಲ್ಲಿ ಜನವರಿ 18ರಂದು ಅಡಕೆ ಬೆಳೆಗಾರರ ಸಮಾವೇಶ ಸಂತೆ ಮೈದಾನದಲ್ಲಿ ಏರ್ಪಡಿಸಲಾಗಿದೆ ಈ ಸಮಾ ವೇಶದಲ್ಲಿ 25 ಸಾವಿರಕ್ಕೂ ಹೆಚ್ಚು ಬೆಳೆಗಾರರು ಪಾಲ್ಗೊ ಳ್ಳಬೇಕು ಮತ್ತು ಪಾಲ್ಗೊಳ್ಳು ವಂತೆ ಮಾಡುವ ಜವಾ ಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಟಿ.ಡಿ.ಮೇಘರಾಜ್ ಹೇಳಿದರು. ಸಮಾವೇಶದ ಷೋ ಕಾ ರ್ಡ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತ ನಾಡಿ ಇದು ಕೇವಲ ಅಡಕೆ ಬೆಳೆಗಾರರ ಸಮಾವೇಶ ಎನ್ನುವು ದಕ್ಕಿಂತ ಬೆಳೆಗಾರರು, ಅಡಕೆ ಅವಲಂಬಿತರು, ಅದರ ಕೃಷಿ ಕಾರ್ಯದಲ್ಲಿ ತೊಡಗಿರುವವರು ಎಲ್ಲರೂ ಭಾಗವಹಿಸಬೇಕಿದೆ ಈ ಹಿನ್ನೆಲೆಯಲ್ಲಿ ಎಲ್ಲರಿಗೂ ಮಾಹಿತಿ ತಲುಪಿಸುವ ಕಾರ್ಯವಾಗಬೇಕು ಮತ್ತು ಪಕ್ಷಾತೀತವಾಗಿ ಬೆಳೆಗಾರರು ಸಮಾವೇಶದ ಯಶಸ್ಸಿಗೆ ಕಾರಣರಾ ಗಬೇಕು ಎಂದರು. ಸಂಘದ ಅಧ್ಯಕ್ಷ ವ.ಶಂ.ರಾಮ ಚಂದ್ರ ಭಟ್ ಅಧ್ಯಕ್ಷತೆವಹಿಸಿದ್ದರು. ತೋಟಗಾರ್ಸ್ ಅಧಕ್ಷ ಕೆ.ಸಿ.ದೇವಪ್ಪ ಷೋಕಾರ್ಡ್ ಬಿಡುಗಡೆ ಮಾಡಿ ದರು. ಆಪ್ಸ್‌ಕೋಸ್ ಅಧ್ಯಕ್ಷ ಬಿ.ಎ.ಇಂದೂಧರ ಬೇಸೂರು, ತಾಲೂಕು ಪಂಚಾ ಯಿತಿ ಮಾಜಿ ಅಧ್ಯಕ್ಷ ಮಲ್ಲಿ ಕಾರ್ಜುನ ಹಕ್ರೆ, ಆರ್.ಎಸ್.ಗಿರಿ, ಅನಿಲ್ ಒಡೆಯರ್, ಬಿ.ಎಚ್.ರಾಘವೇಂದ್ರ, ಚೇತನರಾಜ್ ಕಣ್ಣೂರು, ರಾಜೇಂದ್ರ ಖಂಡಿಕಾ, ಕೆ. ಆರ್. ಗಣೇಶ್‌ಪ್ರಸಾದ್, ಶ್ರೀಕರ, ಶ್ರೀಧರ್, ನಾರಾಯಣಮೂರ್ತಿ ಇದ್ದರು.

ಕೇಂದ್ರ ಸರಕಾರಕ್ಕೆ ರೈತ ಸಂಘದ ವತಿಯಿಂದ ಎಚ್ಚರಿಕೆ | ಜಿಲ್ಲಾಧಿಕಾರಿಗೆ ಮನವಿ

ಮಾತುಕತೆ ನಡೆಸದಿದ್ದರೆ ಚಳವಳಿ ತೀವ್ರ

ದಾವಣಗೆರೆ: ಹರಿಯಾಣದ ಶಂಭು ಗಡಿಯಲ್ಲಿ ರೈತರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹದ ಒತ್ತಾಯಗಳನ್ನು ತಕ್ಷಣ ಸರಕಾರ ಪರಿಹರಿಸಿ ಜೀವನ್ಮರಣದ ಮಧ್ಯೆ ಹೋರಾಡುತ್ತಿರುವ ಜಗತ್ ಸಿಂಗ್ ದಲ್ಲೈವಾಲಾರವರು ಪ್ರಾಣ ಉಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಘ ಹಾಗೂ ಹಸಿರು ಸೇನೆಯ ವತಿಯಿಂದ ದಾವಣಗೆರೆ ಜಿಲ್ಲಾಧಿಕಾರಿಯಾದ ಜಿ.ಎಂ ಗಂಗಾಧರ ಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಉಪಾಧ್ಯಕ್ಷ ಹೊನ್ನೂರ್ ಮುನಿಯಪ್ಪ ಮಾತನಾಡಿ ಹರಿಯಾಣದ ಶಂಭು ಗಡಿಯಲ್ಲಿ ರೈತರು ನಡೆಸುತ್ತಿರುವ ಚಳುವಳಿ ಅವರಿಗೆ ಮಾತ್ರ ಸೀಮಿತವಲ್ಲ, ಭಾರತ ದೇಶದ ಎಲ್ಲಾ ರೈತರ ಪರವಾಗಿ ನಡೆಯುತ್ತಿರುವ ಚಳುವಳಿ. 3 ವರ್ಷದ ಹಿಂದೆ ದೆಹಲಿಯಲ್ಲಿ 13 ತಿಂಗಳ ರೈತರ ಹೋರಾಟಕ್ಕೆ ಕೇಂದ್ರ ಸರ್ಕಾರ ಮಣಿದು ರೈತ ವಿರೋಧಿ ಕೃಷಿ ಕಾಯ್ದೆಗಳನ್ನ ವಾಪಾಸ್ಸು ಪಡೆಯಿತು. ಆ ಸಂದರ್ಭದಲ್ಲಿ ಲಿಖಿತ ಭರವಸೆ ನೀಡಿದ್ದ ಒಚಿಕ ಕಾನೂನು ಬದ್ಧ ಮಾಡುವುದು, ವಿದ್ಯುತ್ ಖಾಸಗೀಕರಣ ಮಾಡುವುದಿಲ್ಲವೆಂದು ಹೇಳಿ ಇದುವರೆಗೆ ಈಡೇರಿಸಿಲ್ಲ. ಇದಕ್ಕೆ ಒತ್ತಾಯಿಸಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಈ ಚಳುವಳಿಯ ಮುಖಂಡರಾದ ಜಗತ್ ಸಿಂಗ್ ದಲ್ಲೈವಾಲಾ ರವ ರು ಸಹ ಈ ದೇಶದ ರೈತರ ಪರವಾಗಿ ಗಾಂಧಿಜೀಯವರು ಹಾಕಿ ಕೊಟ್ಟಂತಹ ಮಾರ್ಗದಲ್ಲಿ ಅಹಿಂಸಾತ್ಮಕ ವಾದ ಮಾರ್ಗದಲ್ಲಿ ಚಳವಳಿ ನಡೆಸುತ್ತಿದ್ದಾರೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸದಿ ದ್ದರೆ ರೈತ ಚಳವಳಿಯನ್ನು ದೇಶಾದ್ಯಂತ ತೀವ್ರ ಗೊಳಿಸಲಾಗುವುದೆಂದು ಎಚ್ಚರಿಸಿ ಜಿಲ್ಲಾಡಳಿತದ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಪಿ.ಪಿ. ಮರುಳ ಸಿದ್ದಯ್ಯ, ಪ್ರಧಾ ನ ಕಾರ್ಯದರ್ಶಿ ಗೋಶಾಲೆ ಬಸವರಾಜ್, ಸಂಘಟನಾ ಕಾರ್ಯ ದರ್ಶಿ ನೀತಿಗೆರೆ ಗಣೇಶ್, ಜಿಲ್ಲಾ ಹಸಿರು ಸೇನೆ ಸಂಚಾಲಕ ಅಭಿಲಾಷ ಎಂ, ಮಲ್ಲೇನಹಳ್ಳಿ ನಾಗರಾಜ್, ಮಾಯಕೊಂಡ ಬೀರಪ್ಪ, ಕ್ಯಾತನಹಳ್ಳಿ ನಾಗರಾಜಪ್ಪ, ಕೊಡಿಕೊಪ್ಪ ಶಿವಪ್ಪ, ಷಣ್ಮುಖಪ್ಪ, ನಿಂಗಪ್ಪ ನೀತಿಗೆರ ಲಿಂಗೇಶ್, ಕಿರಣ್, ರಂಗಪ್ಪ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ರೈತರು ಹಾಜರಿದ್ದರು.



ಜಿಲ್ಲಾಧಿಕಾರಿ ಗಂಗಾಧರಸ್ವಾ ಮಿಗೆ ಮನವಿ ಸಲ್ಲಿಸಲಾಯಿತು.

ಮಾಜಿ ನಗರಸಭೆ ಸದಸ್ಯ ಆತ್ಮಹತ್ಯೆ

ಶಿವಮೊಗ್ಗ: ಮಾಜಿ ನಗರಸಭೆ ಸದಸ್ಯ ಹಾಗೂ ಕಾಂಗ್ರೆಸ್‌ನ ಧುರೀಣ ತರಕಾರಿ ಸತ್ಯನಾರಾಯಣ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆ ಯಾಗಿದ್ದು, ಇದೊಂದು ಆತ್ಮಹತ್ಯೆ ಪ್ರಕರಣವೆಂದು ತಿಳಿದು ಬಂದಿದೆ.

ಆರೋಗ್ಯವಾಗಿದ್ದ ಮಾಜಿ ಕಾರ್ಪರೇಟರ್ ಮನೆ ಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿರುವ ಘಟನೆ ಬೆಳಕಿಗೆ ಬಂದಿದೆ. ನನ್ನ ಸಾವಿಗೆ ನಾನೇ ಕಾರಣ ಎಂದು ಡೆತ್ ನೋಟ್ ಬರೆದು ಈ ಘಟನೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ತರಕಾರಿ ಸತ್ಯನಾರಾಯಣ ಎಂದೇ ತಮ್ಮ ರಾಜಕೀಯ ಜೀವನದಲ್ಲಿ ಗುರುತಿಸಿಕೊಂಡಿದ್ದರು. 74 ವರ್ಷದ ಮಾಜಿ ಕಾರ್ಪರೇಟರ್ ಆತ್ಮಹತ್ಯೆ ಕುಟುಂಬಸ್ಥರಲ್ಲಿ ತುಂಬಲಾಗದ ದುಃಖ ಆವರಿಸಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ತರಕಾರಿ ಸತ್ಯನಾರಾಯಣ ರಾಜಕೀಯದಲ್ಲಿ ಗುರುತಿಸಿಕೊ ಳ್ಳುವುದು ಕಡಿಮೆಯಾಗಿತ್ತು. ಶ್ರೀಯುತರಿಗೆ ಮೂವರು ಮಕ್ಕಳಿ ದ್ದು ಒಬ್ಬರು ಸರಕಾರಿ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆ, ಮತ್ತೋರ್ವರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಉಪ ನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತೋರ್ವರು ಉದ್ಯ ಮಿಯಾಗಿದ್ದಾರೆ. ವಿನೋಬ ನಗರದ ವಾಟರ್ ಟ್ಯಾಂಕ್ ಬಳಿ ಇವರ ಮನೆಯಿದೆ. ಇದೇ ಮನೆಯಲ್ಲಿ ಮಾಜಿ ಕಾರ್ಪರೇಟರ್ ಸಾವನ್ನಪ್ಪಿದ್ದಾರೆ. ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಚಿತ್ತ ವಿಹಾರ

ಆಸೆಗೆ ಕೊನೆಯಿಲ್ಲವೆ?

ಮಾನವನ ಆಸೆಗಳಿಗೆ ಕೊನೆಯೆಂಬುದೆ ಇಲ್ಲ. ಸಕಲ ಭಾಗ್ಯವಿದ್ದರೂ ಸಹ ಇದು ಬೇಕು, ಅದು ಬೇಕು ಎಂದು ಯಾವಾಗಲೂ ಹುಡುಕುತ್ತಿರುತ್ತಾನೆ. ಸಾಮಾನ್ಯವಾಗಿ ಕಾಲಿಲ್ಲದವನು ನನಗೂ ಕಾಲಿದ್ದಿದ್ದರೆ ಓಡಾಡಿಕೊಂಡಿರುತ್ತಿದ್ದೆ ಎಂದು ಬಯಸುತ್ತಾನೆ, ಕಾಲಿದ್ದವನು ಓಡಾಡಿಕೊಂಡಿರಲು ತುಂಬಾ ಕಷ್ಟ ಹಾಗಾಗಿ ಸೈಕಲ್ ಬೇಕೆಂದು ಬಯಸುತ್ತಾನೆ, ಸೈಕಲ್ ಇದ್ದವನು ತುಳಿಯುವುದು ಕಷ್ಟವೆಂದು ಭಾವಿಸಿ ಸ್ಕೂಟರ್ ಬೇಕೆಂದು ಬಯಸುತ್ತಾನೆ, ಸ್ಕೂಟರ್ ಇದ್ದವನಿಗೆ ಕಾರು, ಕಾರಿದ್ದವನಿಗೆ ದೊಡ್ಡ ಗಾತ್ರದ ಲಕ್ಸುರಿ ಕಾರ್ – ಹೀಗೆ ಬೇಕುಗಳ ಪಟ್ಟಿಯು ಕೊನೆಯಿಲ್ಲದೆ ವಾಮನ ರೀತಿ ಬೆಳೆಯುತ್ತದೆ.

ಆಸೆಗಳ ಪಟ್ಟಿ ವಿಚಿತ್ರ; ಒಂದು ದಿನ ಭಗವಂತ ಮನುಷ್ಯರಲ್ಲಿ ಆಸೆಯ ಕಿಡಿಯನ್ನು ಹೊತ್ತಿಸಿದ್ದಾನೆ. ಯಾವಾಗ ಅದು ಆರಿ ಸಾಕೆಂದು ಹೇಳುತ್ತಾನೆಯೋ ಎಂಬುದು ತಿಳಿಯಲು ಸಾಧ್ಯವಿಲ್ಲ. ಒಮ್ಮೆ 'ಸಂಜೆಯೊಳಗೆ ನಿಮ್ಮ ಆಸೆ ಆಕಾಂಕ್ಷೆಗಳನ್ನೆಲ್ಲ ಚೀಟಿಯಲ್ಲಿ ಬರೆದು, ಊರ ಹೊರಗಿನ ದೇವಸ್ಥಾನದ ಹುಂಡಿಯಲ್ಲಿ ಹಾಕಿದರೆ ಬೆಳಗಾಗುವುದರಲ್ಲಿ ಅವೆಲ್ಲ ಈಡೇರುತ್ತವೆ' ಎಂಬ ಅಶರೀರವಾಣಿಯಾಗುತ್ತದೆ. ಜನರೆಲ್ಲ ತಮ್ಮ ಆಸೆಗಳನ್ನೆಲ್ಲ ಬರೆದ ಚೀಟಿ ಹಾಕಲು ದೌಡಾಯಿಸುತ್ತಿದ್ದರೆ, ಒಬ್ಬ ಭಿಕ್ಷುಕ ಮಾತ್ರ ಇದಾವುದರ ಪರಿವಿಲ್ಲದೆ ಕುಳಿತಿದ್ದನ್ನು ನೋಡಿ 'ಏ ಭಿಕ್ಷುಕ ನೀನು ಬೆಳಗಾಗುವುದರಲ್ಲಿ ಶ್ರೀಮಂತನಾಗಿ ಸುಖದಿಂದಿರಬಹುದು ಬೇಗ ಚೀಟಿ ಬರೆದು ಹಾಕಲು ನಡೆ' ಎಂದಾಗ ಭಿಕ್ಷುಕ ಕೇಳಿಯೂ ಕೇಳದಂತೆ ಸುಮ್ಮನಾಗುತ್ತಾನೆ. ಅದೆಂತಹ ವಿಸ್ಮಯವೆಂದರೆ ಬೆಳಗಾಗುವುದರಲ್ಲಿ ಎಲ್ಲರ ಜೀವನವೇ ಬದಲಾಗಿ ಸಂಭ್ರಮ ಮನೆಮಾಡಿರುತ್ತದೆ. ಆದರೆ ಈ ಸಂಭ್ರಮ ಆಚರಿಸಲು ಮನೆಯಾಚೆ ಬಂದಾಗ ತಮಗಿಂತಲೂ ಹೆಚ್ಚಿನದನ್ನು ಪಡೆದುಕೊಂಡಿದ್ದವರನ್ನು ಕಂಡು ನಾವು ಇನ್ನಷ್ಟು ಕೇಳಿಕೊಳ್ಳಲಿಲ್ಲವಲ್ಲ ಎಂದು ಅಸೂಹೆ ಪಡುತ್ತಾ ಕೈಕೈ ಹಿಸುಕಿಕೊಳ್ಳುತ್ತಾರೆ. ಆದರೆ ಭಿಕ್ಷುಕ ಮಾತ್ರ ಅತೃಪ್ತಿ ಹೊಂದಿದವರನ್ನು ಕಂಡು ನಿರುಮ್ಮಳವಾಗಿರುತ್ತಾನೆ.

ಆಸೆಯ ಬೆನ್ನು ಹತ್ತುವ ಸ್ವಭಾವ ಹೊಂದಿದವರಿಗೆ ಜೀವನದಲ್ಲಿ ಸಂತೃಪ್ತಿಯ ಅನುಭವ ಸಿಗಲು ಸಾಧ್ಯವಿಲ್ಲ. ಅದು ಸಾಧ್ಯವಾಗಬೇಕಾದರೆ ಆಸೆಯ ವ್ಯಾಮೋಹದಿಂದ ಪೆಟ್ಟು ತಿಂದು ಪಶ್ಚಾತಾಪ ಅನುಭವಿಸಿದಾಗಲೇ ಗೊತ್ತಾಗುತ್ತದೆ. ಅತಿಯಾಸೆಯೇ ದುಃಖಕ್ಕೆ ಮೂಲವಾಗಿದ್ದು 'ಬಂದ ಸುಖವ ಬಿಡಬೇಡ, ಬಾರದುದ ಬೇಕೆಂದು ಬಯಸಬೇಡ' ಎಂಬ ರತ್ನಾಕರ ವರ್ಣಿ ಅವರ ಮಾತಿನಂತೆ, ಬೇಕು ಬೇಕೆಂಬ ಆಸೆಯು ಕೊನೆಯಿಲ್ಲದ ಆಗಸದಂತೆ ಇದ್ದೇ ಇರುತ್ತದೆ. ಹಾಗಂತ ನಿರಾಶಾವಾದಿಗಳಾಗಬೇಕಿಲ್ಲ. ಹಾಸಿಗೆ ಇದ್ದಷ್ಟು ಕಾಲುಚಾಚುವಷ್ಟು ಆಸೆ ಇರಬೇಕು. ಆದರೆ ದುರಾಸೆ ಇರಬಾರದು; ಅಲ್ಲವೇ?

● ರವಿ ಕಂಗಳ ಕೊಂಕಣಕೊಪ್ಪ

ಹನಿ ಮಳೆ

ಕ್ಲೀನ್‌ಚಿಟ್ಟು

ಮಂತ್ರಿಯ ಮೇಲೆ
ಆಪಾದನೆ ಬಂದರೆ
ತನಿಖೆಗೂ ಮುನ್ನ
ನೀಡಿಬಿಡುತ್ತಾರೆ
ಕ್ಲೀನ್‌ಚಿಟ್ಟು
ಭ್ರಷ್ಟಾಚಾರ ಗೊತ್ತಿದ್ದರೂ
ಎಲ್ಲವನ್ನೂ ಬಚ್ಚಿಟ್ಟು.

● ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ವಿಶ್ವವಾಣಿ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
@vishwavaninews
ಬೆಂಗಳೂರು ಶುಕ್ರವಾರ 03 | 01 | 2025

ಆರೋಗ್ಯ ಎಂದರೆ ಬರೀ ದೈಹಿಕ ಆರೋಗ್ಯವಂತರಾಗಿರುವುದಲ್ಲ. ಅದರ ಬದಲಾಗಿ ಮನಸ್ಸು ಹಾಗೂ ಭಾವನೆಗಳನ್ನು ಸಮತೋಲನದಲ್ಲಿಟ್ಟುಕೊಳ್ಳುವುದು ಕೂಡಾ ಮುಖ್ಯ.



ದೇಹ ಮನಸುಗಳ ಬಾಂಧವ್ಯ!

● ಡಾ. ಮೈತ್ರಿ ಭಟ್, ವಿಟ್ಲ

ಇಂದಿನ ಒತ್ತಡದ ನಾಗಾಲೋಟದ ಜೀವನದಲ್ಲಿ ಯಾರಿಗೂ ತಮ್ಮ ಆರೋಗ್ಯದ ಬಗೆಗೆ ಕಾಳಜಿ ವಹಿಸುವಷ್ಟು ಸಮಯವಿಲ್ಲ. ಆದರೆ ಬಾಳು ಸುಗಮವಾಗಿ ಸುಖಮಯವಾಗಿ ಸಾಗಲು ನಮ್ಮ ಕೆಲಸದ ಒತ್ತಡದ ಜೊತೆಗೆ ನಾವು ನಮ್ಮ ಆರೋಗ್ಯದ ಬಗೆಗೂ ಗಮನ ಹರಿಸಬೇಕಾದುದು ಅತೀ ಅಗತ್ಯ. ಆರೋಗ್ಯವೇ ಭಾಗ್ಯ ಎಂಬುದನ್ನು ಬಾಲ್ಯದಲ್ಲೇ ಓದಿದ ನಾವೆಲ್ಲ ಆನಂತರ ಅದನ್ನು ಹಾಗೆಯೇ ಮರೆತು ಬಿಟ್ಟಿದ್ದೇವೆ ಎಂದೆನಿಸುತ್ತಿದೆ. ಬದುಕಿನ ಧಾವಂತದಲ್ಲಿ ನಮ್ಮ ಆರೋಗ್ಯ ನಮಗೆಷ್ಟು ಮುಖ್ಯ ಎಂಬುದನ್ನು ಕೂಡಾ ಮರೆತಿದ್ದೇವೆ ಎಂದೇ ಭಾಸವಾಗುತ್ತಿದೆ. ಹೀಗಿರುವಾಗ ದೇಹ-ಮನಸ್ಸಿನ ಸ್ವಾಸ್ಥ್ಯವನ್ನು ನೆನಪಿಸುವುದಕ್ಕಾಗಿಯೇ ಎಂಬಂತೆ ವರುಷದ ಮೊದಲ ತಿಂಗಳ ಮೊದಲ ವಾರದಲ್ಲಿ ಅಂದರೆ ಜನವರಿ 3ರಂದು ಅಂತಾರಾಷ್ಟ್ರೀಯ ಮನಸ್ಸು-ದೇಹ ಸ್ವಾಸ್ಥ್ಯ ದಿನವನ್ನು ಆಚರಿಸಲಾಗುತ್ತದೆ.

ಮಾನಸಿಕ ಮತ್ತು ದೈಹಿಕ ಅರೋಗ್ಯದ ಪರಸ್ಪರ ಬಾಂಧವ್ಯವನ್ನು ಒತ್ತಿಹೇಳುವ ಮೂಲಕ ಸಮಗ್ರ ಆರೋಗ್ಯವನ್ನು ಉತ್ತೇಜಿಸುವ ಗುರಿಯನ್ನು ಇದು ಹೊಂದಿದ್ದು, ಜನರು ತಮ್ಮ ಜೀವನಶೈಲಿಯ ಆಯ್ಕೆಗಳ ಬಗ್ಗೆ ಎಚ್ಚರದಿಂದಿರಲು ನೆನಪಿಸುತ್ತದೆ. ಸಮತೋಲನವನ್ನು ಕಾಯ್ದುಕೊಳ್ಳುವ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ಮನಸ್ಸು-ದೇಹದ ಸಾಮರಸ್ಯದ ಅರಿವನ್ನು ಮೂಡಿಸುತ್ತದೆ.

ಮನುಷ್ಯನ ಮನಸ್ಸು ದೇಹದ ಮಧ್ಯೆ ಒಂದು ಬಿಡಿಸಲಾಗದ ಕೊಂಡಿಯಿದೆ. ಮನಸ್ಸು ನಿರ್ಮಲವಾಗಿದ್ದರೆ ದೇಹವೂ ನಿರ್ಮಲವಾಗಿರುತ್ತದೆ. ಮನಸ್ಸನ್ನು ಸಿಟ್ಟು, ದ್ವೇಷ, ಅಸೂಯೆಗಳಂತಹ ಕಲ್ಮಶ ತುಂಬಿದ ಕಸದ ತೊಟ್ಟಿಯಾಗಿಸದೆ ಅದನ್ನು ಅನುಪಮವಾದ ಆಭರಣದ ಡಬ್ಬಿಯಾಗಿಸಿ ಅದರಲ್ಲಿ ಯಾವಾಗಲೂ ಪ್ರೀತಿ, ಆತ್ಮೀಯತೆ, ಸ್ವೀಕಾರ ಮನೋಭಾವ, ಶಾಂತಿ ಹಾಗೂ ಸೌಹಾರ್ದವೆಂಬ ಆಭರಣಗಳನ್ನು ತುಂಬಬೇಕು.

ಮನಸ್ಸು ನಮ್ಮ ವ್ಯಕ್ತಿತ್ವದ ಬಹು ಮುಖ್ಯ ಆಯಾಮ. ಇಡೀ ಜಗತ್ತು ಪ್ರತಿಫಲಿತವಾಗುವುದು ಮತ್ತು ನಾವು ಅದನ್ನು ಕಾಣುವ ಬಗೆ ನಿರ್ಧರಿತವಾಗುವುದು ಎರಡೂ ಮನಸ್ಸಿನಲ್ಲಿಯೇ. ಶಾಂತಿ, ಸಮಾಧಾನ, ಬದುಕಿನ ಸೊಗಸು ಎಲ್ಲವೂ ನಮ್ಮ ಅರಿವಿಗೆ, ಅನುಭವಕ್ಕೆ ನಿಲುಕುವುದು ಕೂಡಾ ನಮ್ಮ ಮನಸ್ಸಿನ ಮೂಲಕವೇ. ಆದುದರಿಂದ ಮಾನಸಿಕ ಆರೋಗ್ಯ ನಮ್ಮ ಬದುಕಿನ ಸಂತಸ, ನೆಮ್ಮದಿಗೆ ಬುನಾದಿ.

ಸಮತೋಲನದಲ್ಲಿರುವ ತಕ್ಕಡಿಯು ಹೇಗೆ ವಸ್ತುವನ್ನು ಸರಿಯಾಗಿ ತೂಗಬಲ್ಲುದೋ ಅಂತೆಯೇ ಸಮತೋಲನದಲ್ಲಿರುವ ಮನಸ್ಸು ಮಾತ್ರ ಬದುಕಿನ ಮೌಲ್ಯಗಳನ್ನು ಸರಿಯಾಗಿ ಗ್ರಹಿಸಬಲ್ಲದು. ಆದರೆ ಮನಸ್ಸಿನಲ್ಲಿ ಮೂಡುವ ರಾಗದ್ವೇಷಗಳು ಮಾನಸಿಕ ಸಮತೋಲನವನ್ನು ಕೆಡಿಸುವುದರಿಂದ ಜೀವನದಲ್ಲಿ ಏರುಪೇರು ಸಹಜ. ಬಯಕೆಗಳು ಮನಸ್ಸಿನಲ್ಲಿ ಪ್ರಚೋದನೆಗಳನ್ನು ಉಂಟುಮಾಡುತ್ತವೆ. ಇವೆಲ್ಲವ ಜಯಿಸಿ ಮುನ್ನಡೆಯುವುದೇ ಬದುಕು.

ಬೇಕಾದದ್ದು ದೊರೆಯದಾದಾಗ, ದೊರೆತದ್ದು ದಕ್ಕದೇ ಹೋದಾಗ, ದೊರೆತದ್ದು ಜೊತೆಯಲ್ಲಿಯೇ ಉಳಿಯದೇ ಹೋದಾಗ ನೋವು ಸಹಜ. ಆದರೆ ಇಂದು ಮಾತಿನ ಮೊಗದ ಮೇಲಣ ನಗೆಯ ಮೂಲಕ ಸಂತೋಷವು ಕೃತಕತೆಯ ವೇಷವನ್ನು ತೊಟ್ಟಾಗ ಅದನ್ನು ತೊಟ್ಟವರಿಗೂ ಪುರಸ್ಕರಿಸಿದವರಿಗೂ ನೋವೇ ಹೆಚ್ಚು. ದೈಹಿಕ ಗಟ್ಟಿತನದಂತೆ ಮಾನಸಿಕ ದೃಢತೆಯೂ ಸಾಧಿತವಾಗದಿದ್ದಲ್ಲಿ ಶಾಂತಿ, ಸಮಾಧಾನಗಳು ನಮ್ಮಿಂದ ದೂರವಾಗುತ್ತವೆ.

ಇಂದು ಮನಸ್ಸು ದೇಹ ಸ್ವಾಸ್ಥ್ಯ ದಿನ

ಕಲಬೆರಕೆ ಆಹಾರ!

ಆರೋಗ್ಯ ಎಂದರೆ ಬರೀ ದೈಹಿಕ ಆರೋಗ್ಯವಂತರಾಗಿರುವುದಲ್ಲ. ಅದರ ಬದಲಾಗಿ ಮನಸ್ಸು ಹಾಗೂ ಭಾವನೆಗಳನ್ನು ಸಮತೋಲನದಲ್ಲಿ ಟ್ಟುಕೊಳ್ಳುವುದು ಕೂಡಾ ಮುಖ್ಯ. ಇತ್ತೀಚಿನ ದಿನಗಳಲ್ಲಿ ನಾವು ಸೇವಿಸುವ ಆಹಾರ ಪದಾರ್ಥಗಳು ಕಲಬೆರಕೆಯಿಂದ ಕೂಡಿದ್ದು, ಇವುಗಳನ್ನು ಸೇವಿಸುವುದರಿಂದ ಹಲವಾರು ಕಾಯಿಲೆಗಳು ಅವರಿಸಿಕೊಳ್ಳುತ್ತಿವೆ. ನಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಂಡರೆ ಮಾತ್ರ ಕಾಯಿಲೆಗಳಿಂದ ಮುಕ್ತರಾಗಿ ಆರೋಗ್ಯಕರವಾಗಿರಲು ಸಾಧ್ಯ.

ಪೌಷ್ಟಿಕಾಂಶ ಇರುವ ಆಹಾರವನ್ನು ಪ್ರತಿದಿನ ಸೇವಿಸುವುದರಿಂದ ದೈಹಿಕವಾಗಿ ಆರೋಗ್ಯವಾಗಿರಲು ಸಾಧ್ಯ. ಪ್ರಸ್ತುತ ಒತ್ತಡದ ಜೀವನದಲ್ಲಿ ಹೆಚ್ಚಿನ ಜನರು ಆರೋಗ್ಯಕ್ಕೆ ಹಾನಿಕಾರಕವಾಗಿರುವ ಜಂಕ್‌ಫುಡ್‌ಗಳಿಗೆ ಮೊರೆ ಹೋಗಿದ್ದಾರೆ. ಕೆಲವು ಬಾರಿ, ನಮಗೆ ಗೊತ್ತಿಲ್ಲದೆಯೇ ನಾವು ಜಂಕ್ ಫುಡ್ ದಾಸರಾಗುತ್ತಿದ್ದೇವೆ! ಇನ್ನು ಕೆಲವು ಬಾರಿ, ಮಕ್ಕಳ ಒತ್ತಾಯಕ್ಕೆ ಅವರಿಗೂ ಜಂಕ್ ಫುಟ್ ತಿನಿಸಿ, ಮನೆಯವರೂ ಜಂಕ್ ಫುಟ್ ಸೇವಿಸುವ ಅಭ್ಯಾಸ ಮಾಡಿಕೊಂಡಿದ್ದಾರೆ! ಇದು ನಮ್ಮ ಆರೋಗ್ಯವನ್ನು ಹಾನಿ ಮಾಡುತ್ತದೆ. ಆದ್ದರಿಂದ, ಸರಳವಾದ ಆಹಾರ ಸೇವಿಸುವ ಕ್ರಮ ವಿಹಿತ; ಸರಳ ಆಹಾರದಲ್ಲಿ ಕಲಬೆರಕೆ ಪ್ರಮಾಣ ಕಡಿಮೆ!



ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸರಿಯಾದ ಆಹಾರಕ್ರಮ, ಯೋಗಾಭ್ಯಾಸ, ವ್ಯಾಯಾಮ ಅನುಸರಿಸಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಅದರಲ್ಲೂ ಇಂದ್ರಿಯ, ಮನಸ್ಸು ಮತ್ತು ಆತ್ಮವು ಪ್ರಸನ್ನವಾಗಿದ್ದು, ಭೌತಿಕ, ಮಾನಸಿಕ, ಆಧ್ಯಾತ್ಮಿಕ, ಪರಿಪೂರ್ಣ ವಿಕಸನಕ್ಕೆ ಮನಸ್ಸಿನ ಮೇಲೆ ಹತೋಟಿ, ಸಕಾರಾತ್ಮಕ ಚಿಂತನೆ, ಸಕಾರಾತ್ಮಕ ಧೋರಣೆ ಅಗತ್ಯ.

ಕ್ರಿಯೆ ಮತ್ತು ಪ್ರತಿಕ್ರಿಯೆ

ನಮಗೆ ಕಾರ್ಯ ಮಾಡುವ ಅಧಿಕಾರ ಇದೆಯೆ ಹೊರತು ಕರ್ಮಫಲದ ಮೇಲಲ್ಲ ಎಂದು ಕೃಷ್ಣ ಹೇಳುತ್ತಾನೆ. ಇದರ ಅರ್ಥ ನಾವು ನಿಷ್ಕ್ರಿಯತೆ ಅಥವಾ ಪರಿಸ್ಥಿತಿಗೆ ಪ್ರತಿಕ್ರಿಯೆ ಆಗಿರುವ ಅಕರ್ಮದ ಕಡೆ ಹೋಗಬೇಕೆಂದಲ್ಲ. ಕೃಷ್ಣನು 'ಅಕರ್ಮ' (ಶಬ್ದಶಃ ಅರ್ಥ ನಿಷ್ಕ್ರಿಯತೆ) ಎಂಬ ಶಬ್ದವನ್ನು ಉಪಯೋಗ ಮಾಡಿದರೂ ಆ ಸಂದರ್ಭ ಅದಕ್ಕೆ ಪ್ರತಿಕ್ರಿಯೆ ಎಂಬ ಅರ್ಥ ಕೊಡುತ್ತದೆ. 2.47 ರ ಶ್ಲೋಕವು ಜಾಗೃತಿ ಮತ್ತು ಅನುಕಂಪದ ಬಗ್ಗೆ ಹೇಳುತ್ತದೆ. ಕರ್ಮ ಮತ್ತು ಕರ್ಮಫಲ ಬೇರೆ ಬೇರೆ ಎಂಬ ಜಾಗೃತಿ ಮತ್ತು ನಮ್ಮ ಹಾಗೂ ಇತರರ ಬಗ್ಗೆ ಅನುಕಂಪ.

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ನಮ್ಮ ದೇಹವನ್ನು ಕಾಪಾಡಲು ಆಹಾರ ಸೇವನೆಯಂತಹ ಕರ್ಮವನ್ನು ನಾವು ಮಾಡಲೇ ಬೇಕಾಗಿರುವುದರಿಂದ ಕರ್ಮ ಮಾಡದಿದ್ದರೆ ನಮ್ಮ ಉಳಿವು ಅಸಾಧ್ಯವೆಂದು ಕೃಷ್ಣ ಹೇಳುತ್ತಾನೆ. (3.8) ಗುಣಗಳು (ಸತ್ವ, ತಮ, ರಜೋ) ನಮ್ಮನ್ನು ಸತತವಾಗಿ ಕರ್ಮದ ಕಡೆ ಒಯ್ಯುತ್ತವೆ. (3.5) ಆದ್ದರಿಂದ ಅಕರ್ಮಕ್ಕೆ ಯಾವುದೇ ಅವಕಾಶ ಇಲ್ಲ.

ಸುದ್ದಿಗಳನ್ನು ಓದುವಾಗಿನ ನಮ್ಮ ಮನೋಭಾವವನ್ನು ನಾವು ಅವಲೋಕಿಸಿದರೆ ನಾವು ತಿಳಿದ ಪುರಾಣ ಕಥೆಗಳು ಹಾಗೂ ಧರ್ಮ, ಜಾತಿ, ರಾಷ್ಟ್ರೀಯತೆ, ಸಿದ್ಧಾಂತ ಮುಂತಾದವುಗಳ ಬಗ್ಗೆ ಅವು ನಮ್ಮನ್ನು ಬೆಂಬಲಿಸಲಿ ಅಥವಾ ವಿರೋಧಿಸಲಿ ನಾವು ನೋಡಿದ್ದರ, ಕೇಳಿದ್ದರ, ಓದಿದ್ದರ ಕುರಿತು ನಮ್ಮಲ್ಲಿ ಅನೇಕ ಪ್ರತಿಕ್ರಿಯೆ ಉಂಟಾಗುವುದು ನಮಗೆ ತಿಳಿಯುತ್ತದೆ. ನಮ್ಮ ಕುಟುಂಬ ಹಾಗೂ ಕಾರ್ಯಕ್ಷೇತ್ರಗಳಲ್ಲಿಯ ನಮ್ಮ ಪರಸ್ಪರ ಕ್ರಿಯೆಗಳು ಹಾಗೆ ಇರುತ್ತವೆ. ಅಲ್ಲಿ ನಮ್ಮ ನಿರ್ಣಯ ಮಾಡುವ ಮನಸ್ಥಿತಿಯಿಂದ ಹೊರ ಬರಬಹುದಾದ ಮಾತು ಹಾಗೂ ಕೃತಿಗಳ ರೂಪದಲ್ಲಿ ಅವು ಹೆಚ್ಚು ಪ್ರತಿಕ್ರಿಯೆಗಳೇ ಆಗಿರುತ್ತವೆ. ಪರಿಸ್ಥಿತಿ ಹಾಗೂ ಜನರ ಬಗೆಗಿನ ನಮ್ಮ ಅಂತಹ ಪ್ರತಿಕ್ರಿಯೆಗಳು ನಮ್ಮಿಂದ ನಮ್ಮ ಜೀವನದ ಸಂತೋಷವನ್ನು ಕಿತ್ತುಕೊಳ್ಳುತ್ತವೆ. ಯಾಕೆಂದರೆ ನಮ್ಮ ಜಾಗೃತಿ ಹಾಗೂ ಅನುಕಂಪದಿಂದ ಆಗುವ ಕ್ರಿಯೆಯಿಂದ ದೂರ ಹೋಗುತ್ತೇವೆ. ಜಾಗೃತನಾಗಿರುವ ಬುದ್ಧಿವಂತನು ಉಳಿದವರ ದೃಷ್ಟಿಕೋನವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲನು. ಇದರಿಂದ ಅವನು ಸಮರ್ಥವಾಗಿ ಕಾರ್ಯ ನಿರ್ವಹಿಸಬಲ್ಲನು.

ಉಳಿದವರ ಕರ್ಮಕ್ಕೆ ಪ್ರತಿಯಾಗಿ ನಮ್ಮಲ್ಲಿ ಉಂಟಾಗುವ ಅಕರ್ಮ (ಪ್ರತಿಕ್ರಿಯೆ)ದ ಬಗ್ಗೆ ನಾವು ಎಚ್ಚರವಿರಬೇಕೆಂದು ಕೃಷ್ಣ ಹೇಳುತ್ತಾನೆ. ಅದೇ ಕಾಲಕ್ಕೆ ನಾವು ಇತರರಲ್ಲಿ ಪ್ರತಿಕ್ರಿಯೆಯನ್ನು ಹುಟ್ಟುಹಾಕುವ ಸಾಮರ್ಥ್ಯ ಇರುವ ಕರ್ಮಗಳಲ್ಲಿ ತೊಡಗಬಾರದೆಂದು ಹೇಳುತ್ತಾನೆ. ಇದರ ಅನುಷ್ಠಾನವು ನಮ್ಮನ್ನು ಪರಿಪಕ್ವತೆ, ಪೂರ್ಣತೆ ಮತ್ತು ಆನಂದದ ಉನ್ನತ ಮಟ್ಟಕ್ಕೆ ಒಯ್ಯುತ್ತದೆ.

ಅಧ್ಯಾತ್ಮ ಮತ್ತು ನಿಸರ್ಗ

● ವಿಲಾಸ ನಾ ಹುದ್ದಾರ

ದೊಡ್ಡಮಲ್ಲೂರ (ಚನ್ನಪಟ್ಟಣ)ದಲ್ಲಿರುವ ಅಪ್ರಮೇಯ ದೇವಸ್ಥಾನ ನೋಡಲು ಮುಂಜಾನೆ 10.00 ಗಂಟೆಗೆ ಹೊರಟೆವು. ದೇವಸ್ಥಾನ ತಲುಪಿದಾಗ 11.00 ಗಂಟೆ ಆಗಿತ್ತು. ಒಳಗೆ ಪ್ರವೇಶಿಸುತ್ತಲೇ ಗರ್ಭಗುಡಿಯಲ್ಲಿ ಕಂಡು ಬರುವದು ಮೂಲ ಅಪ್ರಮೇಯನ ವಿಗ್ರಹ. ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮ ಕಂಡುಬರುವವು. ಅಲ್ಲಿ ಪೂಜೆ ಸಲ್ಲಿಸಿ , ದೇವಸ್ಥಾನದ ಎಡಬಾಗದಲ್ಲಿರುವ ದೇವಿ ದರ್ಶನ ಪಡೆದೆವು. ನಂತರ ಬಲಭಾಗದಲ್ಲಿರುವ ಅಂಬೆಗಾಲಿಕ್ಕುತ್ತಿರುವ ಬಾಲಕೃಷ್ಣನ ದರ್ಶನದ ಭಾಗ್ಯ ದೊರಕಿತು. ವಿವಾಹವಾಗಿ ಬಹಳ ದಿನಗಳವರೆಗೆ ಮಕ್ಕಳಾಗದಿದ್ದರೆ ಈ ಬಾಲ ಅಪ್ರಮೇಯನನ್ನಲ್ಲಿ ಬೇಡಿಕೊಳ್ಳುವ ಪದ್ಧತಿ ಇದೆ. ಮಕ್ಕಳು ಆದ ಮೇಲೆ ಈ ಬಾಲಗೋಪಿಯ ದರ್ಶನ ಪಡೆದು ಪುನೀತರಾಗುತ್ತಾರೆ. ತೊಟ್ಟಿಲ ಕಟ್ಟುವ ಸಂಪ್ರದಾಯವೂ ಇದೆ.

ನಂತರ, ನಾವು ಹೊರಟದ್ದು ಐತಿಹಾಸಿಕ ಶ್ರೀರಂಗಪಟ್ಟಣಕ್ಕೆ. ಅಲ್ಲಿನ ಕೆ.ಎಸ್.ಟಿ.ಡಿ.ಸಿ. ಅವರ ಹೋಟೆಲ್ ಮಯೂರ ರಿವ್ವರ್‌ವ್ಯು ತಲುಪಿದೆವು. ನಮ್ಮ ಕೋಣೆಗಳ ಪಕ್ಕದಲ್ಲಿ ಪ್ರಶಾಂತವಾಗಿ ಹರಿಯುವ ಕಾವೇರಿಯ ವೈಯಾರವನ್ನು ವೀಕ್ಷಿಸಿ, ಶುಚಿ-ರುಚಿಯಾದ ಊಟ ಮಾಡಿ ನಿಮಿಷಾಂಬ ದೇವಸ್ಥಾನಕ್ಕೆ ತೆರಳಿದೆವು. ದೇವಸ್ಥಾನದ ಪಕ್ಕದಲ್ಲಿಯೂ ನಮಗೆ ಕಾವೇರಿ ಬಳುಕುತ್ತ ಸಾಗುತ್ತಿರುವ ದೃಶ್ಯ ನಮ್ಮ ಗಮನ ಸೆಳೆಯಿತು. ದೇವಿ ನಿಮಿಷಾಂಬ ದೇವಿ ಪಾರ್ವತಿಯ ಅವತಾರ ಎಂದು ನಂಬಲಾಗಿದೆ. ನಂತರ ನಮ್ಮ ಪಯಣ ಶ್ರೀ ರಂಗನಾಥಸ್ವಾಮಿಯ ದೇಗುಲದತ್ತ. ಮಲಗಿರುವ ರಂಗನಾಥಸ್ವಾಮಿಯನ್ನು ನೋಡಿ, ಹೋಟೆಲ್‌ಗೆ ಮರಳಿದೆವು.



ಹೋಟೆಲ್ಲಿನ ಪಾರ್ಶ್ವ ಭಾಗದಲ್ಲಿ ಇರುವ ಮೆಟ್ಟಿಲುಗಳನ್ನು ಇಳಿದು ಹೋದರೆ ಕಾವೇರಿಯಲ್ಲಿ ಜಲವಿಹಾರ ಮಾಡಲು ತೆಪ್ಪಗಳು ಸಿಗುತ್ತವೆ. ತೆಪ್ಪಗಳನ್ನು ಬಿದಿರಿನಿಂದಹೆಣೆದಿರುತ್ತಾರೆ. ನದಿವಿಹಾರದ ಮಜವನ್ನು ತೆಗೆದುಕೊಳ್ಳಲು ನಾವು ಏಳೂ ಜನರು ತೆಪ್ಪ ಏರಿದೆವು. ಸಂಜೆಯ ತಂಪಾದ ವಾತಾವರಣ ದೇಹಕ್ಕೆ ಮತ್ತು ಮನಸ್ಸಿಗೆ ಮುದನೀಡುತ್ತಿತ್ತು. ನದಿಯಲ್ಲಿ ತೆಪ್ಪ ತೇಲುತ್ತಿದ್ದಂತೆಯೇ ಮನಸ್ಸು ಪ್ರಫುಲ್ಲಗೊಂಡಿತು.

ಎಲ್ಲರೂ ಶಾಂತವಾಗಿ ಹರಿಯುತ್ತಿದ್ದ ಜಲಧಾರೆಯನ್ನು, ನದಿ ದಂಡೆಗುಂಟ ಹಸಿರಿನಿಂದ ನಳನಳಿಸುತ್ತಿರುವ ಆಕಾಶಕ್ಕೆ ಮೈಚಾಚಿದ ಮರ-ಗಿಡಗಳನ್ನು ಕಣ್ಣು ತುಂಬಿಸಿಕೊಂಡೆವು. ಇಲ್ಲಿ ನದಿಯ ಆಳ ಸುಮಾರು 10 ಅಡಿ. ಅಲ್ಲಲ್ಲಿ ಕಲ್ಲು ಬಂಡೆಗಳು ಎದ್ದು ಕುಳಿತಂತೆ ಮತ್ತು ಅವುಗಳ ಸುತ್ತಲೂ ನೀರು ಹರಿದು ಒಂದು ಪುಟ್ಟ ದ್ವೀಪದಂತೆ ಕಂಡುಬರುತ್ತಿತ್ತು.

ಆ ಪುಟ್ಟ ದ್ವೀಪಗಳಲ್ಲಿ ಅಲ್ಲಲ್ಲಿ ಪುಟ್ಟ ಪುಟ್ಟ ಮರಗಳು, ಹುಲ್ಲುಗಾವಲು ಹಸಿರಿನಿಂದ ಕಂಗೊಳಿಸುತ್ತಿದ್ದವು. ಹದಿನೈದು ನಿಮಿಷ ಜಲಸಂಚಾರ ಮಾಡಿಸಿ ನಾವಿಕ ಕೊನೆಗೆ ದಂಡೆಯ ಸಮೀಪ ಬಂದಾಗ, ತೆಪ್ಪವನ್ನು ರಭಸದಿಂದ ತಿರುಗಿಸಿದಾಗ ರೋಮಾಂಚನ ಮತ್ತು ಭಯ ಎರಡೂ ಆಯಿತು! ಅಲ್ಲಿಯೇ ಸ್ವಲ್ಪ ಸಮಯ ಮೆಟ್ಟಲುಗಳ ಮೇಲೆ ಕುಳಿತೆವು. ಸೂರ್ಯನು ಅಸ್ತಂಗತನಾಗುತ್ತ ತನ್ನ ಹೊಂಗಿರಣಗಳಿಂದ ಪ್ರಕೃತಿಯನ್ನು ತೋಯಿಸಿದ.

ಸಂಜೆ 7.00 ಗಂಟೆಯ ಸಮಯ. ಬಿಸಿ ಬಿಸಿ ಚಹಾದ ಗ್ಲಾಸನ್ನು ಕೈಯಲ್ಲಿ ಹಿಡಿದುಕೊಂಡು ಬಾಲ್ಕನಿಗೆ ಬಂದಾಗ ಎದುರಿಗೆ ಮಂದವಾಗಿ ಹರಿಯುತ್ತಿದ್ದಳು ಕಾವೇರಿ. ಅಲ್ಲಲ್ಲಿ ಚಿಲಿಪಿಲಿಗುಟ್ಟುತ್ತಿರುವ ಪಕ್ಷಿಗಳ ಕಲರವ, ದೂರದಲ್ಲಿ ಎಲ್ಲೋ ಕೇಕಾರವ ಹಾಕುತ್ತಿರುವ ನವಿಲುಗಳು ಪ್ರಕೃತಿಯ ಸೌಂದರ್ಯಕ್ಕೆ ಕಿರೀಟ ಇಟ್ಟಂತೆ ಕಾಣುತ್ತಿತ್ತು. ಹಾಗೆಯೇ ಆ ನಿಸರ್ಗದ ವಿಸ್ಮಯವನ್ನು ಎಷ್ಟೊತ್ತು ಸವಿಯುತ್ತಿದ್ದೆನೋ, ಕೈಯಲ್ಲಿದ್ದ ಚಹಾ ಯಾವಾಗಲೋ ತೀರಿಹೋಗಿತ್ತು.

ಮರುದಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ. ಪಕ್ಷಿಧಾಮ ಪ್ರವೇಶಿಸುತ್ತಲೇ ನನ್ನ ಗಮನ ಸೆಳೆದದ್ದು 'ಮಹಾರಾಜ ಗೋಪುರ'. ಮೈಸೂರು ಅರಸರ ಕಾಲದ್ದು. ಇದು 20 ಅಡಿ ಎತ್ತರವಿದ್ದು, 8 ಪರ್ಯಾಯ ತೆರೆದ ಮತ್ತು ಅರೆ ಮುಚ್ಚಿದ ಬದಿಗಳೊಂದಿಗೆ ಒಂದೇ ಹಂತದ ರಚನೆಯಾಗಿದೆ. ಗೋಪುರದ ಮೇಲ್ಛಾವಣಿಯನ್ನು ತೇಗದ ಮರದಲ್ಲಿ ಕೆತ್ತಲಾಗಿದ್ದು, ಗೋಡೆಗಳು ಕಲ್ಲಿನವು ಆಗಿವೆ.

ಬೋಟಿನಲ್ಲಿ ಪಕ್ಷಿಧಾಮದ ವೀಕ್ಷಣೆಗೆ ತೆರಳಿದಾಗ ಪೆಲಿಕಾನ್‌ಗಳು, ಲಿಟಲ್ ಕಾರ್ಮೊರೆಂಟ್‌ಗಳು ವಿವಿಧ ರೀತಿಯ ಕೊಕ್ಕರೆಗಳು, ರಣಹದ್ದುಗಳು ಕಾಣಸಿದವು. ಅಲ್ಲಲ್ಲಿ ಮರಗಳಿಗೆ ಬಾವಲಿಗಳು ಜೋತು ಬಿದ್ದದ್ದನ್ನು ಕಂಡೆವು. ಕೆಲವು ಮೊಸಳೆಗಳು ನೀರಿನಲ್ಲಿ ವಿಹರಿಸುತ್ತಿದ್ದರೆ, ಕೆಲವು ಮರಗಳ ನೆರಳಿನಲ್ಲಿ ಮಲಗಿ ವಿಶ್ರಾಂತಿ ಪಡೆಯುತ್ತಿದ್ದವು. ಜಲವಿಹಾರ ಮುಗಿಸಿ ಕಾಜಿನ ಸೇತುವೆ ಮೇಲೆ ಅಡ್ಡಾಡಿದೆವು. ಪಕ್ಷಿಧಾಮದಿಂದ ಹೊರಟು ಚನ್ನಪಟ್ಟಣದ ಬಳಿ ಕಾಮತ್ ಲೋಕರುಚಿಯಲ್ಲಿ ಭಕ್ರಿ(ಜೋಳದ ರೊಟ್ಟಿ) ಊಟದ ರುಚಿಯನ್ನು ಸವಿದು ಮನೆ ತಲುಪಿದಾಗ ಸಂಜೆ 5.30.

ಬಾನಂಗಳದಲ್ಲಿ ಗ್ರಹಗಳ ಸಾಲು

ಈ ಜನವರಿ ತಿಂಗಳಿನಲ್ಲಿ, ಆಗಸದಲ್ಲಿ ಗ್ರಹಗಳ ಸಾಲನ್ನೇ ಕಾಣಬಹುದು! ಇಂದು ಸಂಜೆ ಹೊರಬಂದು ಆಗಸದತ್ತ ದಿಟ್ಟಿ ಹಾಯಿಸಿ; ಹಲವು ಗ್ರಹಗಳು ಬರಿಗಣ್ಣಿಗೆ ಗೋಚರವಾಗುತ್ತವೆ! ಗುರು, ಶನಿ, ಶುಕ್ರ, ಮಂಗಳಗಳು ಸ್ಪಷ್ಟವಾಗಿ ಗೋಚರಿಸುತ್ತವೆ! ಅವುಗಳ ಪೈಕಿ ಗುರು ಮತ್ತು ಶುಕ್ರ ಗ್ರಹಗಳು, ರಾತ್ರಿ ಏಳು ಗಂಟೆಯ ನಂತರ, ಉಜ್ವಲವಾಗಿ ಕಾಣಿಸುತ್ತವೆ. ಫೆಬ್ರವರಿಯಲ್ಲಿ ಬುಧ ಗ್ರಹವೂ ಗೋಚರಿಸುತ್ತದೆ. ಮಾರ್ಚ್ ತನಕ ಇಂತಹದೊಂದು ಅಪರೂಪದ ವಿದ್ಯಮಾನವನ್ನು ಬರಿಗಣ್ಣಿನಿಂದ ಕಾಣಲು ಸಾಧ್ಯ. ಇಂತಹ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಿ; ವಿಶೇಷವಾಗಿ ಮಕ್ಕಳಿಗೆ ಗ್ರಹಗಳನ್ನು ತೋರಿಸಿ, ಆಗಸದ ಕುರಿತು ಆಸಕ್ತಿ ಮೂಡಿಸಿ.

● ಅಜಯ್

ತಿಂಡಿ ತಿನ್ನಲೂ ತಂತ್ರಜ್ಞಾನ!

● ಶ್ರೀರಂಜನಿ ಅಡಿಗ

ಅಜ್ಜಿಗೆ ಹುಷಾರಿಲ್ಲವೆಂದು ಅವಳು ವಾರದ ಮಟ್ಟಿಗೆ ಊರಿಗೆ ಹೊರಟಳು; ಮನೆಯಲ್ಲಿರುವವರಿಗೆ ಮೂರು ನಾಲ್ಕು ದಿನಕ್ಕಾಗುವಷ್ಟು ದೋಸೆ, ಇಡ್ಲಿ ಹಿಟ್ಟು ಅರೆದು, ಎರಡು ದಿನಕ್ಕಾಗುವಷ್ಟು ಕಾಫಿ ಡಿಕಾಕ್ಷನ್ ಹಾಕಿ, ಸ್ವಲ್ಪ ಜಾಸ್ತಿಯೇ ಇರಲಿಯೆಂದು ಸಾರು,ಹುಳಿ ಮಾಡಿಟ್ಟು, ಬಟ್ಟೆಗಳನ್ನೆಲ್ಲ ಒಗೆದು ಇಸ್ತ್ರಿ ಮಾಡಿ ಮಕ್ಕಳಿಗೆ ಯುನಿಫಾರ್ಮು, ಸಾಕ್ಸುಗಳೆಲ್ಲ ಕೈಗೆ ಎಟಕುವಂತೆ ಇಟ್ಟದ್ದಳು; ಮಾತ್ರವಲ್ಲದೆ ಅವುಗಳು ಎಲ್ಲಿದೆ ಎಂದು ಸಾವಿರಬಾರಿ ಹೇಳಿ ಹೋಗಿದ್ದಳು.

ಆನ್‌ಲೈನ್ ತಂತ್ರಜ್ಞಾನ ಉಪಯೋಗಿಸಿ, ಬೆಳಗಿನ ತಿಂಡಿ ತಿನ್ನುವ ಕೆಲಸವನ್ನು ಹಗುರ ಮಾಡಿಕೊಳ್ಳುವುದು ಇಂದು ನಗರಗಳಲ್ಲಿ ತೀರಾ ಸಾಮಾನ್ಯ. ಇದು ಸರಿಯೇ, ತಪ್ಪೇ?

ಆದರೆ ವಾರದ ನಂತರ ಆಕೆ ಮನೆಗೆ ಮರಳಿದಾಗ ಮನೆ ತುಂಬಾ ಆಹಾರದ ಪೊಟ್ಟಣಗಳ ಚೀಲ, ಪ್ಲಾಸ್ಟಿಕ್ ಪ್ಲೇಟುಗಳು, ಡಬ್ಬಿಗಳು ಕಸದಬುಟ್ಟಿಯನ್ನು ತುಂಬಿತ್ತಂತೆ. ಯಾಕೆ ಹೀಗೆ ಮಾಡಿದಿರಿ ಎಂದರೆ 'ದೋಸೆ ಮಾಡಿಕೊಂಡರೆ ನೆಂಜಿಕೊಳ್ಳಲು ಚಟ್ನಿ ಮಾಡಬೇಕು, ಅದಕ್ಕೆ ಕಾಯಿ ತುರಿಯಬೇಕು. ಮಿಕ್ಸಿಗೆ ಹಾಕಿ ಅರೆಯಬೇಕು. ಪ್ಲೇಟು, ಹೆಂಚು, ಚಮಚಗಳು ಎಂದು ಒಂದಷ್ಟು ಪಾತ್ರೆಗಳಾಗುತ್ತವೆ, ಆದ್ದರಿಂದ ಆನ್‌ಲೈನ್ ಆರ್ಡರ್ ಮಾಡಿ, ತಿಂಡಿ ತರಿಸಿಕೊಂಡೆವು' ಎಂದರಂತೆ ನಿರ್ಲಿಪ್ತರಾಗಿ. ಅಕ್ವಾಗಾರ್ಡಿನಿಂದ ನೀರು ತೆಗೆಯಲೂ ಸೋಮಾರಿಯಾಗಿ ಐದು ಲೀಟರ್ ನೀರಿನ ಕ್ಯಾನನ್ನೂ ಆರ್ಡರ್ ಮಾಡಿದ್ದು ಅವಳಿಗೆ ಮತ್ತಷ್ಟು ಆಘಾತ ನೀಡಿತಂತೆ.

ಇಷ್ಟಲ್ಲದೆ ಪ್ರತಿನಿತ್ಯದ ಬಟ್ಟೆಯನ್ನು ವಾಷಿಂಗ್ ಮೆಶಿನ್ನಿಗೆ ಹಾಕಬೇಕು; ಪೌಡರ್ ಹಾಕಿ ಟೈಂ ಸೆಟ್ ಮಾಡಿ ಅಡ್ಜೆಸ್ಟ್ ಮಾಡಬೇಕು; ನಂತರ ಒಣಗಿಸಬೇಕು; ತರಬೇಕು; ಮಡಚಬೇಕು ಎಂಬ ರಗಳೆ ಬೇಡವೆಂದು ಲಾಂಡ್ರಿಗೆ ಕೊಟ್ಟಿದ್ದರು. ಅವರೇ ಒಗೆದು ಮಡಚಿ ಇಸ್ತ್ರಿ ಹಾಕಿ ಬೇರೆ ಕೊಡುವುದಲ್ಲದೆ ಅವರೇ ಪಿಕ್ ಅಪ್ ಮಾಡ್ತಾರೆ. ಡೆಲಿವರಿನೂ ಮಾಡ್ತಾರೆ. ಮತ್ಯಾಕೆ ಕಷ್ಟ ಪಡಬೇಕು ಅಲ್ಲವಾ? ಎಂಬ ಸಮಜಾಯಿಷಿ ಇದ್ದಿತ್ತಂತೆ.

ತಾನಿಲ್ಲದ ನಾಲ್ಕು ದಿನದಲ್ಲಿ ಮನೆಯವರು ಮಕ್ಕಳು ಮನೆಯನ್ನು ಸಂಭಾಳಿಸಿದ ರೀತಿ ಕಂಡು ಇಷ್ಟು ದಿನದ ಶ್ರಮ ನೀರಲ್ಲಿ ಹೋಮ ಮಾಡಿದಂತೆ ಅನಿಸಿತು. ಇಷ್ಟು ದಿನ ಬೇಕುಬೇಕು ಅಂದದ್ದನ್ನೆಲ್ಲ ಮಾಡಿಕೊಟ್ಟ ತನ್ನ ಕಾಳಜಿಗೆ ದ್ರೋಹವೆಸಗಿದಂತೆ ತೋರಿತು ಎಂದು ನನ್ನ ಬಳಿ ಬೇಸರಿಸಿಕೊಂಡಿದ್ದಳು. 'ನಾನಿಲ್ಲದಿದ್ದರೆ ಸಂಸಾರ ನಡೆಯುವುದಿಲ್ಲ ಎಂದುಕೊಂಡಿದ್ದೆ. ಆದರೆ ಈಗ ನೋಡಿದರೆ ತಂತ್ರಜ್ಞಾನಗಳೆಲ್ಲ ಮಹಿಳೆಯರ ಮೇಲಿನ ಅವಲಂಬನೆ ಎಂಬ ಭ್ರಮೆಯನ್ನು ತೆಗೆದುಹಾಕಿದೆ. ಮಕ್ಕಳಿಗೆ ನಾವೇನು ಪಾಠ ಹೇಳಿಕೊಡುತ್ತಿದ್ದೇವೆ. ನಮ್ಮ ಮನೆ ಕೆಲಸಮಾಡಿಕೊಳ್ಳದೆಯೂ ಆರಾಮವಾಗಿ ಇರಬಹುದು ಅಂತಾನೋ? ಮನೆಕೆಲಸ ಅವಮಾನವೆಂದು ನಾವೇ ಹೇಳಿಕೊಟ್ಟಂತೆ ಅಲ್ಲವೇ?' ಸ್ವಾಭಿಮಾನಿ, ಸ್ವಾವಲಂಬಿ ಗೆಳತಿ ಹೇಳುತ್ತಲೇ ಇದ್ದಳು. ಅವಳಿಗೆ ಹೇಗೆ ಪ್ರತಿಕ್ರಿಯೆ ತೋರಬೇಕೆಂದು ಅರಿಯದೆ ಹೋಯಿತು.

ಮೊನ್ನೆ ಮಗನ ಸ್ಕೂಲ್ ಡೇಯಲ್ಲಿ ನನ್ನ ಹಿಂದೆ ಕೂತಿದ್ದ ಮಹಿಳೆ ಇದಕ್ಕೆ ವ್ಯತಿರಿಕ್ತವಾಗಿ ಕಂಡುಬಂದರು. 'ನಾನು ಊರಿಗೆ ಹೊರಟರೆ ಏನೂ ತಯಾರಿ ಮಾಡಿಹೋಗುವುದಿಲ್ಲ. ಹುಳಿ ಸಾರು ಮಾಡಿಟ್ಟು ಹೋಗಿದ್ದರೆ ಅನ್ನ ಮಾಡ್ಕೋಬೇಕು, ಸೀಟಿ ಸರಿಯಾಗಿ ಕೂಗದಿದ್ದರೆ ತಳ ಹತ್ತುತ್ತೆ, ಜಾಸ್ತಿಯಾದರೆ ನೀರೆಲ್ಲ ಸೋರಿಹೋಗುತ್ತೆ, ಕ್ಲೀನ್ ಮಾಡಬೇಕು ಯಾರಿಗೆ ಬೇಕು ತಲೆನೋವು. ಅದಕ್ಕೆ ಫುಡ್ ಆರ್ಡರ್ ಮಾಡಿಬಿಡುತ್ತಾರೆ. ನನಗೂ ಆರಾಮವಾಯಿತು. ನಿಜ ಹೇಳಬೇಕೆಂದರೆ ತಾನು ಊರಿಗೆ ಹೋಗುತ್ತೇನೆ ಅಂದ್ರೆ, ಮಕ್ಕಳಿಗೆ ಖುಷಿ. ಮನೆಯಲ್ಲಿದ್ದಾಗಲೂ ತಾನು ಒಮ್ಮೊಮ್ಮೆ ಹೀಗೇ ಮಾಡುತ್ತೇನೆ. ಕೆಲವು ದಿನ ಬೆಳಗಿನ ತಿಂಡಿ ತರಿಸಿಬಿಡುವುದು! ಸ್ವಲ್ಪ ಬದಲಾವಣೆನೂ ಇರುತ್ತದೆ! ದಿನಾ ಒಂದೇ ನಮೂನೆಯ ಕೆಲಸ ಮಾಡಿ ನಮಗೂ ಬೇಸರವಾಗುತ್ತದೆಯಲ್ಲವೇ?' ಎನ್ನುತ್ತಿದ್ದರು.

ಇಬ್ಬರ ಸಂದರ್ಭ ಒಂದೇ ಆಗಿದ್ದರೂ ಪ್ರತಿಕ್ರಿಯೆ ಮಾತ್ರ ಬೇರೆಬೇರೆ. ಯಾರದ್ದು ಯಾರು ಸರಿ ಎಂದು ತೀರ್ಮಾನ ಕೊಡಲು ಸಾಧ್ಯವಿಲ್ಲ. ಅವರವರ ಸ್ಥಾನದಲ್ಲಿ ನಿಂತಾಗ ಇಬ್ಬರದ್ದೂ ಸರಿ. ಒಬ್ಬಳಿಗೆ ತಂತ್ರಜ್ಞಾನ ಹೊರೆಯಾಗಿ ಕಂಡು ಅದರ ಬಳಸುವಿಕೆ ಅಪರಾಧವಾಗಿ ಕಂಡು ಹಾದಿ ತಪ್ಪಿಸುವಂತೆ ಕಂಡಿತ್ತು. ಇನ್ನೊಬ್ಬಳಿಗೆ ಇರುವ ತಂತ್ರಜ್ಞಾನವನ್ನು ಬಳಸಿಕೊಳ್ಳುವುದರಲ್ಲಿ ತಪ್ಪೇನು ಕಾಣಲಿಲ್ಲ.

ಆದರೆ ಒಂದಂತೂ ಸತ್ಯ. ಇತ್ತೀಚಿನ ದಿನಗಳಲ್ಲಿ ಆಹಾರವೆನ್ನುವುದು ಅನಿವಾರ್ಯತೆ, ಮೂಲಭೂತ ಅವಶ್ಯಕತೆ ಎನ್ನುವುದನ್ನು ಬಿಟ್ಟು ಅದನ್ನು ಮನೆಯಲ್ಲಿ ತಯಾರಿಸುವುದು ದೊಡ್ಡ ಹೊರೆಯೆಂದು ಭಾವಿಸುವ ಮನೋಭಾವ ಹೆಚ್ಚುತ್ತಿದೆ. ಬುತ್ತಿ ತೆಗೆದುಕೊಂಡು ಹೋಗುವ ಅಭ್ಯಾಸವೂ ಕಣ್ಮರೆಯಾಗುತ್ತಿದೆ, ಮಕ್ಕಳೂ 'ಬುತ್ತಿ ಬೇಡ, ಕಾಲೇಜಿಗೇ ಆಹಾರ ತರಿಸಿಕೊಳ್ಳುತ್ತೇವೆ' ಎನ್ನುತ್ತಿದ್ದಾರೆ. ಮೊದಲೆಲ್ಲ ಪ್ರವಾಸ ಹೋಗುವಾಗ ಮೂರುನಾಲ್ಕು ದಿನಕ್ಕಾಗುವಷ್ಟು ಕೆಡದೇ ಇರುವಂಥ ಆಹಾರವನ್ನು ತೆಗೆದುಕೊಂಡು ಹೊರಡುತ್ತಿದ್ದರು. ಈಗ ಹೋದ ಜಾಗದಲ್ಲಿ ತರಿಸಿಕೊಂಡರಾಯಿತು ಎಂಬ ನಿಶ್ಚಿಂತೆ ನಿಧಾನಕ್ಕೆ ಆವರಿಸುತ್ತಿದೆ.

ಸೌಲಭ್ಯವೆನ್ನುವುದು ಕೈಬೆರಳ ತುದಿಯಲ್ಲಿರುವುದರಿಂದ ಆಹಾರದ ವಿಷಯಕ್ಕೆ ಮಾತ್ರವಲ್ಲ ಉಳಿದ ಕೆಲಸಗಳಿಗೂ ತಂತ್ರಜ್ಞಾನದ ಮೇಲಿನ ಅವಲಂಬನೆ ಹೆಚ್ಚುತ್ತಿದೆ. ನಮ್ಮ ಮನೆ, ಬಚ್ಚಲು, ಅಡುಗೆಮನೆ ಚೊಕ್ಕಟ ಮಾಡಿಕೊಡುವವರು ಮೊಬೈಲಿನಲ್ಲಿ ದೊರಕುತ್ತಿದ್ದಾರೆ. ಹೀಗೆ ಮನೆಕೆಲಸಗಳನ್ನು ಮಾಡಿಕೊಳ್ಳದೆ ಬೇರೆಯವರಿಗೆ ವಹಿಸಿಕೊಡುವಂಥ ಲಕ್ಸುರಿ ಬದುಕಿಗೆ ಕಾಲಿಡುವವರ ಸಂಖ್ಯೆ ಏರುತ್ತಿದೆ. ಅಸಹಾಯಕತೆಯ, ಅನಿವಾರ್ಯತೆಯ ದಿನಗಳಲ್ಲಿ ಇವುಗಳು ಆಪತ್ಬಾಂಧವಗಳಾಗಿ ಬರುವವಾದರೂ ಅದೇ ಖುಷಿ, ನೆಮ್ಮದಿ ಎಂಬ ಭ್ರಮೆಗೆ ಸಿಲುಕಿಕೊಳ್ಳುತ್ತಿರುವುದು ಮಾತ್ರ ಆಘಾತಕಾರಿ.

ವಿಶ್ವವಾಣಿ
03.01.2025 ಶುಕ್ರವಾರ
vishwavani.news

ದಿನ ದರ್ಶಿಕೆ

ಪುಷ್ಯ ಮಾಸ, ಶುಕ್ಲ ಪಕ್ಷ, ಚತುರ್ಥಿ ತಿಥಿ, ಧನಿಷ್ಠಾ ನಕ್ಷತ್ರ, ವಜ್ರ ಯೋಗ, ವಣಿಜ ಕರಣ, ಮಕರ ಲಗ್ನ, ಧನು ರಾಶಿ, ಶಿಶಿರ ಋತು, ಕ್ರೋಧಿ ನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಬೆಳ್ಳುಳ್ಳಿ ಎಸಳುಗಳನ್ನು ಹಾಲಿನಲ್ಲಿ ಹಾಕಿ ಕುದಿಸಿ, ಸೋಸಿ ಬೆಲ್ಲ ಸೇರಿಸಿ ರಾತ್ರಿ ಮಲಗುವ ಮುನ್ನ ಕುಡಿಯುವುದರಿಂದ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುವುದು. ಅಲ್ಲದೇ ಎದೆ ಬಡಿತ, ನರಗಳ ಬಳಹೀನತೆ, ರಕ್ತದ ಒತ್ತಡ ಎಲ್ಲವೂ ಪೂರ್ತಿಯಾಗಿ ಶಮನವಾಗುವುದು..

ಸೌಂದರ್ಯ ಸೂತ್ರ

ಮೆಂತ್ಯೆಯನ್ನು ಹಾಲಿನಲ್ಲಿ ಬೆರೆಸಿ ರಾತ್ರಿಯಿಡೀ ನೆನೆಸಿಡಿ. ಮರುದಿನ ಇದನ್ನು ನುಣ್ಣಗೆ ರುಬ್ಬಿ ತಲೆಗೆ ಹಚ್ಚಿಕೊಳ್ಳಿ. ಇದರಿಂದ ಕೂದಲು ಉದುರುವುದು ಕಡಿಮೆಯಾಗುವುದಲ್ಲದೆ, ರೇಷ್ಮೆಯಂತೆ ನುಣುಪಾಗುವುದು.

ದಿನ ಭವಿಷ್ಯ

ಮೇಷ ಆರ್ಥಿಕ ಪ್ರಗತಿ ಸಾಧ್ಯ. ಹೊಸ ಯೋಜನೆಗೆ ಪ್ರಯತ್ನಿಸಿ. ಧೈರ್ಯದಿಂದ ನಿರ್ಧಾರ ಮಾಡಿ. ಪ್ರಯತ್ನಕ್ಕೆ ಪ್ರಶಂಸೆ ಸಿಗಲಿದೆ.

ವೃಷಭ ಕುಟುಂಬದಲ್ಲಿ ಸಂತೋಷದ ಕ್ಷಣ ಬರಲಿದೆ. ಆರೋಗ್ಯದ ಮೇಲೆ ಗಮನ ನೀಡಿ. ಧನವೃದ್ಧಿ ಸಾಧ್ಯತೆ. ಮನಸ್ಸು ಶಾಂತವಾಗಿರುತ್ತದೆ.

ಮಿಥುನ ಹೊಸ ಸಂಬಂಧಗಳ ಆರಂಭ. ಸ್ನೇಹಿತರಿಂದ ಸಹಾಯ. ಪ್ರಯತ್ನಕ್ಕೆ ಪ್ರೋತ್ಸಾಹ. ಚಿಂತೆ ನಿವಾರಣೆಯಾಗುತ್ತದೆ.

ಕಟಕ ಆರೋಗ್ಯದ ಕಡೆ ಹೆಚ್ಚಿನ ಗಮನ ಕೊಡಿ. ವೃತ್ತಿಯಲ್ಲಿ ಉತ್ತಮ ಪ್ರಗತಿ. ಮನೆಯಲ್ಲಿ ಶಾಂತಿ, ಎಲ್ಲ ಕೆಲಸದಲ್ಲೂ ಸ್ನೇಹಿತರ ಬೆಂಬಲ ಇರಲಿದೆ.

ಸಿಂಹ ಹೊಸ ಯೋಜನೆಗಳು ಯಶಸ್ವಿಯಾಗಬಹುದು. ಹಣಕಾಸಿನಲ್ಲಿ ಭರ್ಜರಿ ಲಾಭ, ಸೃಜನಶೀಲತೆಗೆ ಮೆಚ್ಚುಗೆ ಸಿಗುತ್ತದೆ.

ಕನ್ಯಾ ಇಂದು ಮನಸ್ಸು ಸಂತೋಷವಾಗಿರಲಿದೆ. ಶ್ರದ್ಧೆಯಿಂದ ಕೆಲಸ ಮಾಡಿರಿ. ಹೊಸ ಅವಕಾಶಗಳಿಗೆ ಮುನ್ನಡೆ ಸಿಗಲಿದೆ.

ತುಲಾ ವೈಯಕ್ತಿಕ ಸಂಬಂಧಗಳಲ್ಲಿ ಪ್ರಗತಿ. ಹೊಸ ಯೋಜನೆಗಳಿಗೆ ಅವಕಾಶ. ಮನಸ್ಸು ನೆಮ್ಮದಿಯಿಂದ ಇರುತ್ತದೆ. ಸ್ನೇಹಿತರಿಂದ ಧನ ಲಾಭ.

ವೃಶ್ಚಿಕ ಹಣಕಾಸಿನಲ್ಲಿ ಬೆಳವಣಿಗೆಯಾಗಲಿದೆ. ಸ್ನೇಹಿತರ ಬೆಂಬಲ. ಪ್ರಯತ್ನಕ್ಕೆ ಪ್ರಶಂಸೆ. ಹೊಸ ಯೋಜನೆ ಕಾರ್ಯರೂಪ.

ಧನು ಶ್ರದ್ಧೆಯಿಂದ ಅಭ್ಯಾಸ ಮಾಡಿ. ವೃತ್ತಿಯಲ್ಲಿ ಉನ್ನತಿ ಸಾಧ್ಯ. ಸ್ನೇಹಿತರ ಸಹಾಯ. ಆರೋಗ್ಯಕ್ಕೆ ಗಮನ ಕೊಡಿ. ಹೊಸ ಪ್ರಯತ್ನ ಯಶಸ್ವಿ.

ಮಕರ ಶ್ರದ್ಧೆಯಿಂದ ಕಾರ್ಯಾಚರಿಸಿ. ಹೊಸ ಯೋಜನೆ ಕಾರ್ಯಗತಗೊಳ್ಳಲಿದೆ. ಕುಟುಂಬದಲ್ಲಿ ಶಾಂತಿ. ಧೈರ್ಯದಿಂದ ನಿರ್ಧಾರ ಮಾಡಿ.

ಕುಂಭ ವೃತ್ತಿಯಲ್ಲಿ ಉತ್ತಮ ಪ್ರಗತಿ. ಧನವೃದ್ಧಿ ಸಾಧ್ಯತೆ. ಕುಟುಂಬದಲ್ಲಿ ಸಂತೋಷ. ಸ್ನೇಹಿತರ ಸಹಾಯ. ಉತ್ಸಾಹ ಹೆಚ್ಚಿಸಿ.

ಮೀನ ಮನೆಯಲ್ಲಿ ಸಂತೋಷದ ವಾತಾವರಣ. ಹೊಸ ಸ್ನೇಹ ಪ್ರಾರಂಭ. ಪ್ರಯತ್ನಕ್ಕೆ ಪ್ರೋತ್ಸಾಹ. ಸ್ನೇಹಿ ತರ ಬೆಂಬಲ. ಶ್ರದ್ಧೆ ಯಿಂದ ಕಾರ್ಯರತ ವಾಗಿರಿ. ಯಶಸ್ಸು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1831: ದೇಶದ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಅವರ ಹುಟ್ಟುಹಬ್ಬ
- 1653: ಕೇರಳದಲ್ಲಿ ಕೂನನ್ ಕ್ರಾಸ್ ಓತ್ ನಡೆಯಿತು. ಇದು ಭಾರತದಲ್ಲಿ ಚರ್ಚ್‌ನ ಪ್ರಭಾವವನ್ನು ಹೆಚ್ಚಿಸಿತು.
- ಅಂತಾರಾಷ್ಟ್ರೀಯ ಅನಾಥರ ದಿನ

ಚಿತ್ರಸ್ಫೂರ್ತಿ



ಇಂಗ್ಲೆಂಡಿನ ಯಾವುದೋ ಒಂದು ಊರಿನ ಕೆರೆಯಲ್ಲಿ ಮುಂಜಾನೆಯ ಆಟವಾಡುತ್ತಿರುವ ಯುವಕರು. ಚಿತ್ರ ಕೃಪೆ: ದ ಗಾರ್ಡಿಯನ್

ಮುಷ್ಟಿಯಲ್ಲಿ ಜೀವನದ ಪಾಠವನ್ನು ತಿಳಿಸಿದ ಗುರು!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

‘ಒಂದೊಳ್ಳೆ ಮಾತು’ ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅಲ್ಲೊಂದು ಗುರುಗಳ ಆಶ್ರಮವಿದ್ದು, ಅಲ್ಲಿ ಅನೇಕ ಶಿಷ್ಯರಿದ್ದರು. ವಿದ್ಯಾರ್ಜನೆ ಮುಗಿಸಿ ಬದುಕು ಕಟ್ಟಿಕೊಳ್ಳಲು ಹೋಗುತ್ತಿದ್ದರು ಮತ್ತೆ ಹೊಸದಾಗಿ ಶಿಷ್ಯರು ಬರುತ್ತಿದ್ದರು . ಹೀಗೆ ಒಬ್ಬ ಶಿಷ್ಯ ತನ್ನ ವಿದ್ಯಾಭ್ಯಾಸ ಮುಗಿಸಿ ಗುರುಗಳ ಅನುಮತಿ ಪಡೆದು ಮನೆಗೆ ಹೊರಟನು. ಹೊರಡುವ ಮುನ್ನ ಗುರುಗಳಿಗೆ ನಮಸ್ಕರಿಸಿ ಗುರುಗಳೇ ಹೊರಗಿನ ಜಗತ್ತಿಗೆ ನಾನು ಹೇಗೆ ನಡೆದುಕೊಳ್ಳಬೇಕು ತಿಳಿಸಿ ಎಂದನು. ಅವನು ಕೇಳಿದ ಪ್ರಶ್ನೆಗೆ ಒಳಗೆ ಹೋದ ಗುರುಗಳು ಮುಷ್ಟಿಯಲ್ಲಿ ಏನೋ ತಂದು ಅವನಿಗೆ ಕೊಟ್ಟು ಇದರಂತೆ ನಡೆದು ಆದರ್ಶ ಜೀವನ ನಡೆಸು ಎಲ್ಲವೂ ಒಳ್ಳೆಯದಾಗುತ್ತದೆ ಎಂದರು. ಗುರುಗಳು ಏನು ಕೊಟ್ಟಿದ್ದಾರೆ ಎಂದು ಶಿಷ್ಯ ಮುಷ್ಟಿಯನ್ನು ಬಿಚ್ಚಿ ನೋಡಿದ ಅದರಲ್ಲಿ ಹತ್ತಿ - ಸೂಜಿ-ದಾರ- ಮೊಂಬತ್ತಿ ಇತ್ತು. ನೋಡಿ ಪೆಚ್ಚಾದ ಶಿಷ್ಯ, ಗುರುಗಳೇ ಇದರಿಂದ ನಾನು ಆದರ್ಶದಿಂದಿರುವುದು ಹೇಗೆ? ಎಂದು ಕೇಳಿದ. ಗುರುಗಳು ಅವನ ಕೈಯಲ್ಲಿದ್ದ ಒಂದೊಂದನ್ನೇ ತೆಗೆದು ತೋರಿಸಿ ಹೇಳಿದರು.

ಹತ್ತಿ: ಹತ್ತಿಯಿಂದ ಬಟ್ಟೆ ಮಾಡುತ್ತಾರೆ. ಬಟ್ಟೆ ಎಲ್ಲರ ಮಾನ ಕಾಪಾಡುತ್ತದೆ. ಬಟ್ಟೆ ಸಮ್ಮಾನಕ್ಕೂ ಪಾತ್ರವಾಗಿ ರಕ್ಷಣೆಯನ್ನು ಕೊಡುತ್ತದೆ. ನೀನು ಇದರಂತೆ ಇರಬೇಕು. ನೀನು ಸಾಧ್ಯವಾದಷ್ಟು ಅಸಹಾಯಕರ, ದೀನದಲಿತರ ಮಾನ-ಸಮ್ಮಾನವನ್ನು ಕಾಪಾಡಬೇಕು ಎಂದರು.

ಮೊಂಬತ್ತಿ: ಇದು ಉರಿದು, ಬೇರೆಯವರಿಗೆ ಬೆಳಕು ಕೊಟ್ಟು ತಾನು ಕರಗಿ ಹೋಗುತ್ತದೆ. ನಿನ್ನ ಕಷ್ಟಗಳು ಎಷ್ಟೇ ಇರಲಿ, ಅವುಗಳನ್ನು ಬದಿಗಿಟ್ಟು ಕಷ್ಟದಲ್ಲಿರುವವರ ಬಗ್ಗೆ ಮರುಗಿ ನಿನ್ನ ಕೈಲಾದ ಸಹಾಯ ಮಾಡು ನಿನಗೆ ಸಂತೋಷ ಸಿಗುತ್ತದೆ.

ಸೂಜಿ ದಾರ: ಕತ್ತರಿ ತನಗಿರುವ ಎರಡು ಕಣ್ಣಿನಿಂದ ಬಟ್ಟೆಗಳನ್ನು ಕತ್ತರಿಸುತ್ತದೆ. ಅದು ಕತ್ತರಿಸಿದ ಬಟ್ಟೆಗಳನ್ನ ಒಂದು ಕಣ್ಣಿರುವ ಸೂಜಿ, ಸಣ್ಣ ದಾರದಿಂದ ಹೊಲಿದು ಜೋಡಿಸುತ್ತದೆ. ಕತ್ತರಿಗೆ ಕತ್ತರಿಸುವುದು ಅಷ್ಟೇ ಗೊತ್ತು ಅದನ್ನು ಮರು ಜೋಡಿಸಲು ಸಾಧ್ಯವಿಲ್ಲ. ಕೆಲವರು, ಪ್ರೀತಿಸಿ ಒಂದಾಗಿರುವ ಎರಡು ಮನಸ್ಸುಗಳನ್ನು ಕತ್ತರಿಸಿ ಬೇರೆ ಬೇರೆ ಮಾಡುತ್ತಾರೆ. ಮೊದಲು ಒಂದಾಗಿದ್ದ ಜೀವಗಳು ದೂರವಾಗಿ ನೋವು ದುಃಖದಿಂದ ಬಳಲುತ್ತವೆ. ಹಾಗೆ ಬೇರೆ ಬೇರೆಯಾದ ಎರಡು ಮನಸ್ಸುಗಳನ್ನು ನೀನು ಒಂದೇ ಕಣ್ಣಿರುವ ಸೂಜಿ ದಾರದ ಸಹಾಯದಿಂದ ಹೊಲಿದು ಸೇರಿಸಿದಂತೆ ಮನಸ್ಸನ್ನು ಜೋಡಿಸಿ, ಅವರ ಮೊಗದಲ್ಲಿ ನಗು ಅರಳುವಂತೆ ಮಾಡಿ ಒಂದುಗೂಡಿಸಬೇಕು. ಪ್ರೀತಿಸುವ ಮನಸ್ಸುಗಳನ್ನು ಕತ್ತರಿಯಂತೆ ಕತ್ತರಿಸದೆ, ಸೂಜಿ ದಾರದಿಂದ ಸೇರಿಸಿ ಜೋಡಿಸಬೇಕು ಎಂದರು.

ಶಿಷ್ಯನಿಗೆ ಗುರುಗಳ ಉಪದೇಶ ಅರ್ಥವಾಗಿ, ಅದರಿಂದ ಪ್ರಭಾವಿತನಾಗಿ, ಗುರುಗಳೇ ನಾನು ಯಾರ ಮನಸ್ಸಿಗೂ ನೋವಾಗದಂತೆ ಇರುತ್ತೇನೆ. ನೋವುಂಡು ಬೇರ್ಪಟ್ಟ ಮನಸ್ಸುಗಳನ್ನು ಸೂಜಿ, ದಾರದಿಂದ ಹೊಲಿದು ಜೋಡಿಸಿದಂತೆ ನಾನು ಮನಸ್ಸುಗಳನ್ನು ಒಂದುಗೂಡಿಸುತ್ತೇನೆ ಎಂದನು.

ಇಂತಹ ಸೂಕ್ಷ್ಮಗಳನ್ನ ನಾವು ಮನೆಯಲ್ಲೂ ಕೂಡ ನಮ್ಮ ಮಕ್ಕಳಿಗೆ ಹೇಳಿಕೊಡಬೇಕು. ಮಕ್ಕಳು ಬರಿ ವಿದ್ಯಾಭ್ಯಾಸ ಮಾಡಿದರೆ ಸಾಲದು ಜೊತೆಗೆ ಬದುಕುವ ಸೂಕ್ಷ್ಮಗಳು ಕೂಡ ಅವರಿಗೆ ಅರಿವಿರಬೇಕು. ಅವರನ್ನು ದೇಶದ ಸತ್ ಪ್ರಜೆಗಳನ್ನಾಗಿಸುವುದು ತಂದೆ ತಾಯಿಯಾಗಿ ನಮ್ಮ ಜವಾಬ್ದಾರಿ ಕೂಡ. ವಿದ್ಯಾಭ್ಯಾಸ ಹೇಳಿಕೊಡುವ ಪ್ರತಿ ಗುರುಕುಲದಲ್ಲೂ ಜೊತೆಯಲ್ಲಿ ಬದುಕುವ ಕಲೆಯನ್ನು, ಸಹಾಯ ಮಾಡುವ ಗುಣವನ್ನೂ, ನೊಂದು ಬೇರ್ಪಟ್ಟ ಜೀವಗಳಿಗೆ ಸಾಂತ್ವಾನ ಮಾಡಿ ಅವರು ಒಂದಾಗಿ ಬದುಕು ನಡೆಸುವಂತೆ ಮಾಡುವುದು ಕೂಡ ಕಲಿಸುವಂತಾಗಬೇಕು. ಎಷ್ಟೇ ಅಡ್ಡಿಗಳು ಬರಲಿ ಧರ್ಮ ಮಾರ್ಗದಲ್ಲಿ ನಡೆದೇ ಹೋಗಬೇಕು ಎಂಬ ಸಂಕಲ್ಪವನ್ನು ಶಿಷ್ಯರಲ್ಲಿ ಗಟ್ಟಿ ಮಾಡುತ್ತಾ ಸಾವಿರಾರು ಶಿಷ್ಯರನ್ನು ತಿದ್ದಿ ತೀಡಬೇಕು. ಸ್ವಚ್ಛವಾದ ಮನಸ್ಸು ಒಳ್ಳೆಯ ಚಿಂತನೆಗಳನ್ನು ಅವರ ಮನದಲ್ಲಿ ಬಿತ್ತಿ ರಾಷ್ಟ್ರಕ್ಕೆ ಸತ್ಪ್ರಜೆಗಳನ್ನು ರೂಪಿಸಿ ಕೊಡುಗೆಯಾಗಿ ನೀಡುವ ಅರ್ಪಣಾ ಮನೋಭಾವ ಗುರುಕುಲದ ಗುರುಗಳಿಗೆ ಇದ್ದಾಗ ನಮ್ಮ ದೇಶ ಸಂಪೂರ್ಣವಾಗಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಯಾಗುತ್ತದೆ.

ಪ | ದ | ಬಂ | ಧ



ಎಡದಿಂದ ಬಲಕ್ಕೆ:

1. ಲೋಹದ ದ್ರವವನ್ನುಅಚ್ಚಿಗೆಎರೆಯುವಿಕೆ (3)
4. ಮತ್ತೊಬ್ಬ ಸೂರ್ಯನೊಂದಿಗೆ ಬಂದಿರುವ ಗುಬ್ಬಚ್ಚಿ (3)
7. ನಡುಕ ಎನ್ನುವ ಪದ (3)
10. ಹಾಡುವವನು (3)
12. ಗಿಳಿಗಳಲ್ಲಿ ಶ್ರೇಷ್ಠವಾದದು (4)0
13. ಶ್ರೇಷ್ಠನಾದ ಅಭಿನಯಕಾರ (4)
14. ದಟ್ಟವಾದಎಂದರ್ಥ (3)
16. ಬುಟ್ಟಿ, ಹೆಡಿಗೆ (3)
19. ಹಗಲಿರುಳೂಎಂದರ್ಥ (4)
21. ಸದಾಋಣಿಯಾಗಿರುವ ಯುವತಿ (3)

ಮೇಲಿನಿಂದಕೆಳಕ್ಕೆ:

1. ಕಾಲಿಗೆ ಸಿಕ್ಕಿಸಿಕೊಳ್ಳುವ ಚಪ್ಪಲಿ (3)
2. ಇನ್ನೊಂದು ಹಸುವಿನೊಂದಿಗೆ ಬಂದಿರುವ ಸಮರ (3)
3. ಪ್ರಾಣಿ ಪಕ್ಷಿಗಳನ್ನು ಹೊಂದಿರುವ ಸಂಗ್ರಹಾಲಯ (4)
5. ಮಾಡುವರೀತಿ (3)
8. ವಾಯುಪುತ್ರ ಎಂಬರ್ಥದಲ್ಲಿ ಆಂಜನೇಯ (4)
9. ಲೆಕ್ಕ ಬರೆಯುವವನು (4)
10. ಗಾಣದಿಂದ ಎಣ್ಣೆ ತೆಗೆಯುವವನು (3)
11. ಕನವರಿಸುತ್ತಾ ಬರೆದ ಪದ್ಯ (3)
15. ಉಗ್ರವಾದ ಹೊಡೆದಾಟ (4)
16. ಕೂಪದೊಳಗಿನಕಪ್ಪೆ (3)
17. ಹರಿತವಾದ ಅಥವಾ ತೀಕ್ಷ್ಣವಾದ (3)
18. ಇಪ್ಪತ್ತೇಳುನಕ್ಷತ್ರಗಳಲ್ಲಿ ಒಂದಾದ ಕರಂಡಕ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಒರೆಗಲ್ಲು 4. ಅನಾಮಧೇಯ 5. ದಸಕತ್ತು 8. ಅಕಣ 11. ಮಚ್ಚರದಾನಿ 12. ತಾಕತ್ತು 15. ಕೊತವಾಲ 17. ದಾರಿಸವೆಸು 18. ಹಸುಗೂಸು

ಮೇಲಿನಿಂದ ಕೆಳಕ್ಕೆ: 1. ಒಪ್ಪಂದ 2. ಪಿನಾಕಿ 3. ವಿಧೇಯಕ 6. ಕರಾಮತ್ತು 7. ಸಾರಥಿ 8. ಅನಿಕೇತ 9. ಣಬಾ 10.ಯಿತಾ 13. ಕತ್ತರಿಸು 14. ಕಾವೆಲು 18. ಲಭಿಸು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

2858 ಎಕರೆಯ ಶಿಲೀಂಧ್ರ!

ಶಿಲೀಂದ್ರಗಳ ಬಗ್ಗೆ ಗೊತ್ತಾ ಎಷ್ಟೋ ಶಿಲೀಂದ್ರಗಳು ನಮ್ಮ ಕಣ್ಣಿಗೆ ಕಾಣದೆ ಇದ್ದರೂ, ಭೂಮಿಯ ರಚನೆಯ ನಂತರ ಜೀವಿಗಳ ಪ್ರಪಂಚದ ವಿಕಸನದಲ್ಲಿ ಮೊದಲನೇ ಸಾಲಿನಲ್ಲಿ ಬರುವುದೇ ಶಿಲೀಂದ್ರಗಳು. ಆದರೆ, ಶಿಲೀಂದ್ರಗಳಲ್ಲೇ ಅತೀ ದೊಡ್ಡ ಶಿಲೀಂದ್ರ ಯಾವುದು ಅಂತ ಗೊತ್ತಾ? ಅದರ ಹೆಸರು ಆರ್ಮಿಲರಿಯಾ ಆಸ್ಟೊಪಿ ಅಂತ. ಅದು ಪ್ರಪಂಚದಲ್ಲೇ ಅತಿ ದೊಡ್ಡ

ಶಿಲೀಂದ್ರದ ತಳಿ ಎಂದೂ ಗುರುತಿ ಸಲ್ಪಡುತ್ತಾರೆ. ಇದು ಅಮೆರಿಕದ ಮಲ್ಹ್ಯೂರ್ ರಾಷ್ಟ್ರೀಯ ಉದ್ಯಾನವನದಲ್ಲಿದೆ ಒಂದೊಂದೆ ಹಲವಾರು ವರ್ಷಗಳಿಂದ ಬೆಳೆದು, ಸಂಕೀರ್ಣವಾಗುತ್ತ ಹೋಗುತ್ತ ಇದರ ಇಂದಿನ ಅಳತೆ ಸುಮಾರು 2358 ಎಕೆಗಳಷ್ಟು, ಅಂದರೆ ಊಹಿಸಿ! ಈ ಶಿಲೀಂದ್ರಗಳ ಸಂಕೀರ್ಣ 2400 ವರ್ಷಗಳ ಹಿಂದಿನದ್ದು, ಅಂದರೆ, ಕ್ರಿಸ್ತಶಕಕ್ಕೂ ಮುಂಚೆಯೇ ಅಂದರೆ, ಭೂಮಿಮೇಲೆ ಕ್ರಿಸ್ತ ಹುಟ್ಟುವ ಮೊದಲಿಂದನೇ ಇದು ಹುಟ್ಟಿತ್ತು. ಈ ಶಿಲೀಂದ್ರಗಳು ಮೊದಲು ಭೂಮಿಯ ಒಳಗೆ ಬೆಳೆದು, ಕಾಡಿನ ನೆಲದ ಮೇಲೆ ಇರುವ ಮೈಸಿಲಿಯಮ್ ಜತೆ ಬೆರೆತು ಇಡೀ ಕಾಡನ್ನು ಹಬ್ಬುತ್ತವೆ. ಕೆಲವೊಂದು ಸಮಯದಲ್ಲಿ ಭೂಮಿಯ ಮೇಲೆ ಜೇನುತುಪ್ಪ ಬಣ್ಣದ ಅಣಬೆಗಳನ್ನು ಬಿಡುತ್ತದೆ. ಆದರೆ, ಭೂಮಿಯ ಒಳಗೆ ಇದರ ತಾಣವಿದ್ದು, ಇದು ಸರಿಯಾಗಿ ಕಣ್ಣಿಗೆ ಕಾಣಿಸದಿದ್ದರೂ, ಹಲವಾರು ವಿಸ್ಮಯಗಳನ್ನು ಹೊಂದಿದೆ.

ಪುಸ್ತಕ ಲೋಕ

ಖಾಲಿ ಜೋಳಿಗೆಯ ಕನವರಿಕೆಗಳು

ಈ ಕೃತಿಯು ವಾಣಿ ಭಂಡಾರಿ ಅವರ ಕವನ ಸಂಕಲನ. ಒಂದು ಹಂತದಲ್ಲಿ ಪ್ರೀತಿಯೇ ಜಗತ್ತು ಎಂದ ಕವಯತ್ರಿ ಅದರ ವೈರುದ್ಯಗಳನ್ನು ಇನ್ನೊಂದು ಮುಖದಲ್ಲಿ ಕಾಣುತ್ತಾರೆ. ಇಲ್ಲಿ ಕಾಣುವ ಬಹುಪಾಲು ಮಹಿಳೆಯರು ಹೆಚ್ಚಾಗಿ ಬಡತನದ ಬೇಗೆ ಅಥವಾ ತಳಸ್ತರದ ನೋವು, ಸಮಾಜದ ಟೀಕೆ ಟಿಪ್ಪಣಿಗಳಿಗೆ ನರಳಿ ನೊಂದ ಭಾವ, ಹಸನಾದ ಪ್ರೀತಿಗೆ ಹೆಸರಿಡಲಾಗದೆ ನೈತಿಕತೆಯ ನೆಲೆಯ ತಳಮಳ, ಅನ್ಯಾಯ, ಸಂಪ್ರದಾಯದ ಶೋಷಣೆಗೆ ಮೈಯೊಡ್ಡಿ ನಿಂತ ಕರಾಳತೆಯ ಹಿಂಸೆ, ನಂಬಿಕೆಯ ಕೊಲೆಗೆ ಪ್ರೀತಿ ಎಂಬ ಎರಡಕ್ಷರದ ಹಿಂದೆ ನಡೆಯುವ ಆಗೋಚರ ಭಾವಾಂತರಂಗದ ತಲ್ಲಣ, ಹಾಗೂ ಮನುಷ್ಯ ಪ್ರೀತಿಯನ್ನೆ ಕಳೆದು ಕೇವಲ ದಾಸ್ಯದ ನೆರಳಿನಲ್ಲಿ ನೋವುಣ್ಣುವ ಚೋಮನ ಪದದಿಂದ ಬೆಳ್ಳಿಯ ದಿಟ್ಟತೆಯವರೆಗೂ ಹಬ್ಬಿ, ಎಲ್ಲರೊಳಗೆ ನಿಲೆ ನಿಂತ ಅವ್ವ ಈ ನೆಲದ ಒಂದು ಶಕ್ತಿಯಾಗಿ ರೂಪಕವಾಗಿ ಮತ್ತೆ ಕಾಡುತ್ತಾಳೆ, ಜತನಗೈಯ್ದು ಕಾಯುವ ಧೀಃಶಕ್ತಿ ಎಲ್ಲರೊಳಗೆ ಅವ್ವ ಮತ್ತೆ ಮತ್ತೆ ಹೆಣ್ಣಿನಂತರಂಗ ಒಳಹೊಕ್ಕು ಹೊರಹೊಮ್ಮುತ್ತಾಳೆ. ಇಂತಹ ಕವಿತೆಗಳು ಯಾಕೆ ಸೃಷ್ಟಿಯಾದವು ಎಂಬ ಸಹಜ ಚಿಂತನೆಗೆ ನಾನು ಮೊದಲೆ ತಿಳಿಸಿದಂತೆ, ಕವಿ ಸಮಯದ ಚಮತ್ಕಾರ ಮತ್ತು ಜೀವಸೆಲೆಗೆ ಚೈತನ್ಯವನ್ನು ನೀಡುವುದೇ ಈ ದೈವಿಕ ಪ್ರೀತಿಯಾದ್ದರಿಂದ ಅದೊಂದು ಅನನ್ಯ ಆತ್ಮ ಸಾಂಗತ್ಯದ ಸ್ಫೂರ್ತಿ ಚೇತನವೇ ಈ ಕವಿತೆಗಳು.

ಎಲಾನ್ ಮಸ್ಕ್‌ಗೆ ಟಕ್ಕರ್ ಕೊಡಲು ಚೀನಾದಲ್ಲಿ 1000 ರೊಬೊ ತಯಾರಿ

ಎಲ್.ಪಿ.ಕುಲಕರ್ಣಿ

ಅಮೆರಿಕದ ಭೌತಶಾಸ್ತ್ರಜ್ಞ, ಎಂಜಿನೀಯರ್ ಆಗಿದ್ದ ಜೋಸೆಫ್ ಎಫ್.ಎಂಗೆಲ್ಬರ್ಗರ್ ಅವರನ್ನು ರೊಬೊಟಿಕ್ಸ್‌ನ ಪಿತಾಮಹ ಎಂದು ಕರೆಯಲಾಗುತ್ತದೆ. 1956 ರ ಒಂದು ದಿನ ಎಂಗೆಲ್ಬರ್ಗರ್ ಕಾಕ್ಟೈಲ್ ಪಾರ್ಟಿಯಲ್ಲಿ ಅಮೆರಿಕನ್ ಎಂಜಿನಿಯರ್ ಮತ್ತು ಸಂಶೋಧಕ ಜಾರ್ಜ್ ಸಿ. ಡೆವೊಲ್ ಅವರನ್ನು ಭೇಟಿಯಾಗುತ್ತಾರೆ. ಅಲ್ಲಿ ಇಬ್ಬರೂ ಮಾತಿಗಿಳಿಯುತ್ತಾರೆ. ಇಬ್ಬರ ತಲೆಯಲ್ಲೂ ಮಾನವನನ್ನೇ ಹೋಲುವ ಯಂತ್ರಮಾನವನನ್ನು ತಯಾರಿಸಬಹುದೇ ಎಂಬ ವಿಚಾರಗಳೇ ತುಂಬಿರುತ್ತವೆ. ಈ ಮೊದಲೇ ಜಗತ್ತಿನ ಪ್ರಖ್ಯಾತ ಸೈನ್ಸ್ ಫಿಕ್ಷನ್ ಕಥೆಗಳ, ಕಾದಂಬರಿಗಳ ರಚನಕಾರ ಐಸಾಕ್ ಅಸಿಮೋವ್ ತಮ್ಮ ಹಲವಾರು ಕಥೆಗಳಲ್ಲಿ ಕಾಲ್ಪನಿಕವಾಗಿ ರೊಬೊಟ್‌ಗಳ ಬಗ್ಗೆ ಪ್ರಸ್ತಾಪಿಸಿದ್ದರು. ಆದರೆ, ಆ ಕಲ್ಪನೆಗಳನ್ನು ಸಾರ್ಥಕಗೊಳಿಸುವ ನಿಟ್ಟಿನಲ್ಲಿ ಈಗ ಎಂಗೆಲ್ಬರ್ಗರ್ ಮತ್ತು ಜಾರ್ಜ್ ಸಿ.ಡೆವೊಲ್ ಯೋಚಿಸಿ,ಯೋಜಿಸಿ ಕಾರ್ಯರೂಪಕ್ಕೆ ತರುವ ನಿರ್ಧಾರ ಮಾಡುತ್ತಾರೆ. ಅವರ ಕನಸಿನ ಕೂಸಾದ ಮೊದಲ ರೊಬೊಟ್ ‘ಯುನಿಮೇಟ್’ ಹೊರಬರುತ್ತದೆ. ಹೀಗೆ ಈ ರೊಬೊಟ್‌ಗಳ ತಯಾರಿಕೆ ಇಂದಿಗೂ ಮುಂದುವರಿಯುತ್ತಲೇ ಇದೆ.

ಟೆಸ್ಲಾ ಕಂಪನಿ ಸ್ಥಾಪಿಸಿದ ಹಾಗೂ ಹಲವು ಬಾಹ್ಯಾಕಾಶ ಪ್ರಯೋಗಗಳನ್ನು ಮಾಡುತ್ತಿರುವ ಜಗತ್ತಿನ ಪ್ರತಿಭಾನ್ವಿತ ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್ ಬಗ್ಗೆ ಯಾರಿಗೆ ಗೊತ್ತಿಲ್ಲ ಹೇಳಿ. ಅವರೀಗ ಹ್ಯುಮನಾಯ್ಡ್ ರೊಬೋಟ್‌ಗಳನ್ನು ತಯಾರಿಸುವಲ್ಲೂ ಬ್ಯುಜಿಯಾಗಿದ್ದಾರೆ. ಸದ್ಯ, ಈ ಮಸ್ಕ್‌ಗೆ ಟಕ್ಕರ್ ಕೊಡಲು ಚೀನಾದ ರೊಬೊಟಿಕ್ಸ್ ಕಂಪನಿಯೊಂದು ಸಾಕಷ್ಟು ರೊಬೊಗಳನ್ನು ತಯಾರಿಸಿ ಸುದ್ದಿಯಲ್ಲಿದೆ.

ಚೀನಾದ ಶಾಂಘೈನಲ್ಲಿ 2023 ರ ಫೆಬ್ರವರಿಯಲ್ಲಿ ಪೆಂಗ್ ಝಿಹುಯಿ ಅವರ ನೇತೃತ್ವದಲ್ಲಿ ಸ್ಥಾಪನೆಗೊಂಡ ‘ಅಗಿಬಾಟ್’ ಕಂಪನಿ ಜಗತ್ತಿನ ಪ್ರತಿಷ್ಠಿತ ಸ್ಟಾರ್ಟ್‌ಅಪ್ ಕಂಪನಿಯಗಳ ಸಾಲಿಗೆ ಸೇರಿದೆ. ಈ ಅಗಿಬಾಟ್, ಜಿಯುವಾನ್ ರೊಬೊಟಿಕ್ಸ್ ಎಂದೂ ಕರೆಯಲ್ಪಡುತ್ತದೆ. 2024 ರ ಅಂತ್ಯದ ವೇಳೆಗೆ 1,000 ಹುಮನಾಯ್ಡ್ ರೋಬೋಟ್‌ಗಳನ್ನು ಉತ್ಪಾದಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಮುಟ್ಟಿ ಹುಮನಾಯ್ಡ್ ರೊಬೊಟಿಕ್ಸ್ ಉದ್ಯಮದಲ್ಲಿ ಅಲೆಗಳನ್ನು ಸೃಷ್ಟಿಸುತ್ತಿದೆ.

ಫೆಬ್ರವರಿ 2023 ರಲ್ಲಿ ಏಚಡಿಬಿಜಿ ಜೀನಿಯಸ್ ಯೂತ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪೆಂಗ್ ಝಿಹುಯಿ ಸ್ಥಾಪಿಸಿದರು, ಕಂಪನಿಯು ಈಗಾಗಲೇ ತನ್ನ ಶಾಂಘೈ ಸೌಲಭ್ಯದಲ್ಲಿ 960 ಘಟಕಗಳನ್ನು ತಯಾರಿಸಿದೆ. ಅಜಜಿಚಿಟರಿನ ಪ್ರಮುಖ ರೊಬೊಟ್ ಮಾದರಿಗಳಾದ ರೈಸ್ ಅ1 ಮತ್ತು ಯುವಾನ್‌ಜೆಂಗ್ ಅ2, ದೇಶೀಯ ಕೆಲಸಗಳಿಂದ ಹಿಡಿದು ಕೈಗಾರಿಕಾ ಕಾರ್ಯಗಳವರೆಗೆ ವಿವಿಧ ಅಪ್ಲಿಕೇಶನ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಕಂಪನಿಯು ತನ್ನ ರೋಬೋಟ್‌ಗಳ ಕಾರ್ಯವನ್ನು ಹೆಚ್ಚಿಸಲು ದತ್ತಾಂಶ ಸಂಗ್ರಹ ಕಾರ್ಖಾನೆಯನ್ನು ಸ್ಥಾಪಿಸಿದೆ; ಬಟ್ಟೆಗಳನ್ನು ಮಡಚುವುದು ಮತ್ತು ಸ್ವಚ್ಛಗೊಳಿಸುವಂತಹ ನೈಜ ಕೆಲಸಗಳನ್ನು ಈ ರೊಬೊಟ್‌ಗಳು ಮಾಡುತ್ತಿವೆ. ಅದರ ಆಪ್ಟಿಮಸ್ ರೋಬೋಟ್‌ನ ಸಾಮೂಹಿಕ ಉತ್ಪಾದನೆಗೆ 2026 ಅನ್ನು ಗುರಿಪಡಿಸುವ ಟೆಸ್ಲಾದಂತಹ ಅದರ ಯುಎಸ್ ಕೌಂಟರ್‌ಪಾರ್ಟ್‌ಗಳಿಗಿಂತ ಭಿನ್ನವಾಗಿ, ಅಗಿಬಾಟ್ ಓಟದಲ್ಲಿ ಮುಂದಿದೆ. ಚೀನಾದ ಫೋರಿಯರ್

ಇಂಟೆಲಿಜೆನ್ಸ್ ಸಹ ಈ ದೆಸೆಯಲ್ಲಿ ಮುಂದಿದೆ.

ರೈಸ್ ಅ1 ಹುಮನಾಯ್ಡ್ ರೋಬೋಟ್, ಉದಾಹರಣೆಗೆ, 49 ಡಿಗ್ರಿ ಸ್ವತಂತ್ರವಾಗಿ ತಿರುಗುವ, ಸುಧಾರಿತ ಅಐ-ಚಾಲಿತ ಸಂವೇದಕಗಳೊಂದಿಗೆ ಸಜ್ಜುಗೊಂಡಿದೆ. ದಾರದಿಂದ ಕೂಡಿದ ಬಟ್ಟೆ ಹೊಲಿಯುವ ಸೂಜಿಗಳು ಅಥವಾ ಬೋಲ್ಟ್ ಬಿಗಿಗೊಳಿಸುವಿಕೆಯಂತಹ ಸಂಕೀರ್ಣವಾದ ಕಾರ್ಯಗಳನ್ನು ಸಹ ಈ ರೊಬೊಗಳು ಮಾಡುತ್ತವೆ.

ಅಮೆರಿಕದ ಸಂಸ್ಥೆಗಳು ಚಿಪ್ ತಯಾರಿಕೆ ಮತ್ತು ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿ ಉತ್ಕೃಷ್ಟವಾಗಿದ್ದರೆ, ಅಜಜಿಚಿಟರಿನಂತಹ ಚೀನೀ ಕಂಪನಿಗಳು ಚಲನೆಯ ನಿಯಂತ್ರಣ, ಅಐಮತ್ತು ವೈವಿಧ್ಯಮಯ ಅಪ್ಲಿಕೇಶನ್‌ಗಳಲ್ಲಿ ದಾಪುಗಾಲಿಟ್ಟಿವೆ. ವೇಗವಾಗಿ ಬೆಳೆಯುತ್ತಿರುವ ರೊಬೊಟಿಕ್ಸ್ ಮಾರುಕಟ್ಟೆಯಲ್ಲಿ ಜಾಗತಿಕ ಸ್ಪರ್ಧಿಗಳಾಗಿ ತಮ್ಮನ್ನು ತಾವು ಸ್ಥಾಪಿಸಿಕೊಂಡಿವೆ.

ಸುಲಭದ ಸಂಪತ್ತು ತರುವುದು ಆಪತ್ತು!

ವಿದ್ಯಾಶಂಕರ ಶರ್ಮ

ಬದಲಾದ ಕಾಲಘಟ್ಟದಲ್ಲಿ ಜೀವನದ ರೂಪು ರೇಷೆಗಳು ಕೂಡ ಹೊಸ ಪಥ ಹಿಡಿದಿವೆ. ಈ ಬದಲಾದ ಚಿತ್ರಣದಲ್ಲಿ ಎಲ್ಲರ ಚಿತ್ತದಲ್ಲೂ ಒಂದೇ ಗುರಿ, ಅದು ಶೀಘ್ರ ಹಣಗಳಿಕೆ. ಸುಖ ಸೌಲತ್ತುಗಳನ್ನು, ಐಷಾರಾಮಿ ವಸ್ತುಗಳನ್ನು ಹೊಂದುವದು ಮತ್ತು ಅವುಗಳ ಪ್ರದರ್ಶನ ಇವು ಮಾನಸಿಕ ಗೀಳಿನಂತೆ ಹೆಚ್ಚೆಚ್ಚು ಜನರನ್ನು ಕಾಡುತ್ತಿವೆ. ಹೊಸ ಬಗೆಯ ಉದ್ಯೋಗ ಅವಕಾಶಗಳು, ಆರ್ಥಿಕ ವ್ಯವಸ್ಥೆಗಳು ಉತ್ತಮ ಬೆಳವಣಿಗೆಯಾದರೂ ಅದರ ಮತ್ತೊಂದು ಮುಖವೇ ಬಹಳ ಹರಿತವಾದ ಅಲಗಿನಂತೆ. ತುಲನೆ ಮಾಡುವ ಹುಚ್ಚು ಮನಸ್ಸು ಪೈಪೋಟಿಗೆ ಬಿದ್ದು ಮುಗಿಯದ ಹಣ ಗಳಿಕೆಯ ದಾಹಕ್ಕೆ ಬೀಳುತ್ತದೆ. ಹೆಚ್ಚು ಸಂಪಾದನೆಯಿಂದ ಸುಖ ಭೋಗದ ಪರಿಕರಗಳ ಒಡೆತನದಿಂದ ಮನುಷ್ಯ ತನ್ನ ಅಹಂನ ತೃಪ್ತಿಗೆ ತೊಡಗಿದ್ದಾನೆ. ಅದಕ್ಕಾಗಿ ತನ್ನ ಗಳಿಕೆಯ ಗಡಿಯನ್ನು ದಾಟಿ ಪ್ರಯತ್ನಿಸುವ ಸಾಹಸಕ್ಕೆ ಕೈಹಾಕುತ್ತಿದ್ದಾನೆ. ಇದು ಅನಾಹುತಗಳಿಗೆ ದಾರಿ ಮಾಡುತ್ತಿದೆ.

ಉಳ್ಳವರು ತಮ್ಮ ಸಂಪತ್ತಿನ ದೊಂಬರಾಟ ನಡೆಸಿದರೆ, ಅದರ ಆಸೆಯಲ್ಲಿ ಅಮಾಯಕರು ಮೋಸದ ಬಲೆಗೆ ಸಿಲುಕಿ ತಮ್ಮ ಜೀವನವನ್ನು ದಯನೀಯ ಸ್ಥಿತಿಗೆ ತಂದುಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಧೀಡಿರ್ ಹಣದ ಬಯಕೆಗೆ ಬಿದ್ದು ಕಷ್ಟ ಪಟ್ಟು ಸಂಪಾದಿಸಿರುವುದನ್ನೂ ನಾಶ ಮಾಡಿಕೊಂಡು ಜೀವನದ ದಾರಿಯನ್ನು ದುಸ್ತರವಾಗಿಸಿಕೊಳ್ಳುವುದು ಈಗೀಗ ಬಲು ಸಾಮಾನ್ಯವಾಗಿದೆ. ಇದು ಒಂದು ರೀತಿಯ ಮುಳ್ಳಾದರೆ, ಶ್ರೀಮಂತಿಕೆಯ ಬೆನ್ನು ಬಿದ್ದು ಕಾನೂನು ಬಾಹಿರ ಕೃತ್ಯಗಳನ್ನು ಎಸಗಿ ತಮ್ಮ ಬದುಕನ್ನು ದುಃಖ ಗೀತೆಯಾಗಿಸಿಕೊಂಡು ಪರಿತಪಿಸುವ ಪರಿಸ್ಥಿತಿ ಇನ್ನೊಂದು ರೀತಿಯ ಬವಣೆಯಾಗಿದೆ.

ಏಕೆ ಹೀಗೆಲ್ಲ ಎಂದು ಪರಿಶೋಧನೆ ಮಾಡಿದಾಗ ಕಾಣುವ ಸತ್ಯ, ಮನುಜನ ಮುಗಿಯದ ಆಸೆಯ ಚಿಲುಮೆ. ಡಿವಿಜಿಯವರ ಕಗ್ಗವೊಂದು ಇಲ್ಲಿ ಪ್ರಸ್ತುತವೆನಿಸುತ್ತದೆ-

ಅದು ಬೇಕು ಇದು ಬೇಕು ಮತ್ತೊಂದು ಬೇಕೆಂದು।
ಬೆದಕುತಿರುವುದು ಲೋಕ ಸೊಗದಿರವನೆಳಸಿ
ಹೃದಯಗುಹೆಯಾ ಸುಖಧ್ಯಾನದೂಟೆಯೆ ಸಾಕ್ಷಿ।
ಮುದಗಳಮಿತದ ನಿಧಿಗೆ - ಮಂಕುತಿಮ್ಮ

ನಮ್ಮ ಬೇಕುಗಳಿಗೆ ಮಿತಿ ಇಲ್ಲ, ನಮ್ಮ ಹೃದಯದ ಒಳಗೆ ಸುಖದ ಬಯಕೆಯ ಮೂಟೆಯಿದೆ ಅನ್ನುತ್ತಾರೆ ಮಾನ್ಯ ಡಿವಿಜಯವರು. ಇದ್ದುದ್ದರಲ್ಲಿ ಸಂತೃಪ್ತಿ ಹೊಂದುವ ಮನೋಭಾವ ಮರೆಯಾಗಿದೆ. ಅನವರತ ಕೊರತೆಯ ಕೊರಗು ಬಹು ಜನರನ್ನು ಮಾನಸಿಕವಾಗಿ ಕುಗ್ಗಿಸಿ ಮುಗಿಯದ ಆಸೆಗಳ ಗುಲಾಮರನ್ನಾಗಿ ಮಾಡಿದೆ. ಇದು ಇಡಿಯ ಸಮಾಜವನ್ನೇ ತನ್ನ ಹಿಡಿತದಲ್ಲಿ ಇಟ್ಟುಕೊಂಡು ದಿನದಿನವೂ ನ್ಯಾಯರಹಿತ, ವಿವೇಕ ಶೂನ್ಯ ವರ್ತನೆಗಳಿಗೆ ಸಾಕ್ಷಿಯಾಗುತ್ತಿದೆ. ಮುಗಿಯದ ಆಸೆಗಳು ಬಿಸಿಲುಕುದುರೆಯಂತೆ ಭ್ರಮ ನಿರಸನ ಮಾಡುತ್ತವೆ ಎಂಬುದನ್ನು ಅರಿಯುವದರಲ್ಲಿ ನಮ್ಮ ಒಳಿತಿದೆ. ನಮ್ಮ ಬದುಕಿನ ಹಾದಿ ನಮ್ಮದು, ಅವರಿವರ ಜೀವನದ ಜೊತೆಗೆ ಅದನ್ನು ಹೋಲಿಸಿಕೊಂಡು ವ್ಯಥೆ ಪಡುವದು ಮೂರ್ಖತನ. ಇಂತಹ ಹೊಳವು ನಮ್ಮಲ್ಲಿ ಬಂದಾಗ, ಕೊನೆ ಕಾಣದ ಬಯಕೆಗಳ ಮುಸುಕನ್ನು ಸರಿಸಿ ಇತಿ ಮಿತಿಯಲ್ಲಿ ಬಾಳುವ ನಾಗರಿಕ ಸಮಾಜದ ಭಾಗವಾಗುವ ಕನಸು ನನಸಾಗುತ್ತದೆ.

ನೇತ್ರಾನಂದಕರ ಜಾಲಿ ದಾಸವಾಳ

ಮಂಜುನಾಥ ಡಿ. ಎಸ್.

ಕಾಸರಗೋಡಿನ ಚೇವಾರುವಿನ ಸಮೀಪದಲ್ಲಿ ಸಂಚರಿಸುತ್ತಿದ್ದಾಗ ನಾನು ಆವರೆಗೆ ನೋಡಿರದ ವಿರಳ ಪುಷ್ಪಗಳು ದೃಗ್ಗೋಚರವಾದವು. ಆ ಪುಷ್ಪಗಳು ಮೇಲ್ಮುಖವಾಗಿ ಬಾಗಿದ ದಳಗಳು, ಗಮನಸೆಳೆವ ನೀಳ ಶಲಾಕನಳಿಕೆ, ಹಾಗೂ ಕೇಸರಗಳನ್ನು ಹೊಂದಿದ್ದವು. ಸಸ್ಯದ ಸಪೂರ ಕಾಂಡಗಳಿಂದ ಜೋತಾಡುತ್ತಾ, ಗಾಳಿ ಬಂದಾಗ ಲೋಲಕದಂತೆ ಅತ್ತಿತ್ತ ಓಲಾಡುತ್ತಿದ್ದ ಆ ಚಿತ್ತಾಕರ್ಷಕ ಹೂಗಳು ಅಲಂಕಾರಿಕ ತೂಗುದೀಪಗಳನ್ನು ನೆನಪಿಸಿದವು. ಆ ಕುಸುಮಗಳು ಧನ್ಯತಾಭಾವದಿಂದ ಭೂರಮೆಗೆ ನಮಿಸುತ್ತಿರುವಂತೆ ತೋರಿದವು.

ಇದರ ಕುರಿತು ಅರಿಯಲು ಆರಂಭಿಸಿದಾಗ ಇದು ಜಾಲಿ ದಾಸವಾಳ ಎಂದು ತಿಳಿಯಿತು. ಇನ್ನೂರಕ್ಕೂ ಹೆಚ್ಚು ಪ್ರಭೇದಗಳುಳ್ಳ ದಾಸವಾಳಗಳಲ್ಲಿ ಜಾಲಿ ದಾಸವಾಳ ಅಪೂರ್ವವೂ, ಅಪರೂಪವೂ ಆಗಿದೆ. ಇದರ ಹೂಗಳು ಐದು ಅಥವಾ ಹೆಚ್ಚು ದಳಗಳನ್ನು ಹೊಂದಿದ್ದು ಸಾಮಾನ್ಯವಾಗಿ ಕೆಂಪು ಬಣ್ಣದ್ದಾಗಿರುತ್ತವೆ. ಕೇಸರಿ, ಗುಲಾಬಿ, ಮುಂತಾದ ಬಣ್ಣಗಳ ಹೂಗಳೂ ಕಂಡು ಬರುತ್ತವೆ. ಮಾಲ್ವಾಸಿಯೇ ಕುಟುಂಬಕ್ಕೆ ಸೇರಿದ ಈ ಬಗೆಯ ದಾಸವಾಳದ ವೈಜ್ಞಾನಿಕ ಹೆಸರು ಹೈಬಿಸ್ಕಸ್ ಸ್ಕಿಜೋಪೆಟಲಸ್. ಉಷ್ಣವಲಯ ಮೂಲದ ಈ ಸಸ್ಯಕ್ಕೆ ಕೋರಲ್ ಹೈಬಿಸ್ಕಸ್, ಫ್ರಿಂಜ್ಡ್ ಹೈಬಿಸ್ಕಸ್, ಚೈನೀಸ್ ಲ್ಯಾಂಟ್ರನ್, ಜಾಪನೀಸ್ ಲ್ಯಾಂಟ್ರನ್ ಮುಂತಾದ ಹೆಸರುಗಳೂ ಇವೆ. ಈ ಸಸ್ಯದ ಎಲೆ, ಕಾಂಡ, ಕಾಯಿ ಎಲ್ಲವೂ ಔಷಧೀಯ ಗುಣಗಳನ್ನು ಹೊಂದಿವೆ. ನೇತ್ರಾನಂದಕರ ಜಾಲಿ ದಾಸವಾಳ ಬಹೂಪಯೋಗಿ ಸಸ್ಯವೂ ಆಗಿದೆ.

ಸಮಾಚಾರ ಸಣ್ಣದಲ್ಲ

ಭಾರತ ಪಾಕ್ ಪಂದ್ಯಕ್ಕೆ ಅಭಿಮಾನಿಗಳು ಕಾತರ

ಸಿಡ್ನಿ: ಚಾಂಪಿಯನ್ಸ್ ಟ್ರೋಫಿಗಾಗಿ ಭಾರತವು ಪಾಕಿಸ್ತಾನಕ್ಕೆ ತೆರಳದಿರುವುದು ದುರದೃಷ್ಟಕರ ಎಂದು ಆಸ್ಟ್ರೇಲಿಯಾದ ಮಾಜಿ ಆಲ್ರೌಂಡರ್ ಶೇನ್ ವ್ಯಾಟ್ಸನ್ ಅಭಿಪ್ರಾಯಪಟ್ಟಿದ್ದಾರೆ. ಆದರೆ, ಐಸಿಸಿಯ ಈ

ಪಂದ್ಯಾವಳಿಯು ಸ್ಟಾರ್ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರಿಗೆ ದೀರ್ಘಕಾಲದ ಫಾರ್ಮ್ ಕುಸಿತದಿಂದ ಮುಕ್ತಗೊಳ್ಳಲು ಅವಕಾಶ ನೀಡುತ್ತದೆ ಎಂದು ಹೇಳಿದ್ದಾರೆ. ಪಾಕಿಸ್ತಾನಕ್ಕೆ ತೆರಳಲು ಭಾರತ ಸರಕಾರ ಭದ್ರತೆಯ ಕಾರಣದಿಂದ ಅವಕಾಶ ನೀಡದ ಹಿನ್ನೆಲೆಯಲ್ಲಿ ಭಾರತದ ಪಂದ್ಯಗಳನ್ನು ಹೈಬ್ರಿಡ್ ಮಾದರಿಯಲ್ಲಿ ದುಬೈನಲ್ಲಿ ನಡೆಸಲು ಐಸಿಸಿ ನಿರ್ಧರಿಸಿದೆ. ಆದರೆ, ಭಾರತ ಮತ್ತು ಪಾಕಿಸ್ತಾನ ಪಂದ್ಯ ಎಲ್ಲೇ ನಡೆದರೂ ಅಭಿಮಾನಿಗಳು ಕಾತರರಾಗಿತ್ತಾರೆ ಎಂದಿದ್ದಾರೆ. ವಿಶ್ವ ಕ್ರಿಕೆಟ್‌ಗೆ ಚಾಂಪಿಯನ್ಸ್ ಟ್ರೋಫಿ ಬಹಳ ಮುಖ್ಯ. ಏಕೆಂದರೆ, ಏಕದಿನ ಕ್ರಿಕೆಟ್ ವಿಶ್ವಕಪ್‌ನ 4 ವರ್ಷಗಳ ಅಂತರವನ್ನು ಇದು ತುಂಬುತ್ತದೆ. ಟಿ-20 ಅಬ್ಬರದ ನಡುವೆ ಏಕದಿನ ಕ್ರಿಕೆಟ್ ಉಳಿವಿಗೆ ಇದು ಅತ್ಯಂತ ಸಹಾಯಕಾರಿ ಎಂದಿದ್ದಾರೆ. ಏಕದಿನ ಕ್ರಿಕೆಟ್ ಅತ್ಯಂತ ಪ್ರಮುಖವಾದದ್ದು ಎಂದು ತಿಳಿಸಿದ್ದಾರೆ.

ಬಾರ್ಡರ್-ಗವಾಸ್ಕರ್ ಟ್ರೋಫಿಯ ಕೊನೆಯ ಪಂದ್ಯದಲ್ಲಿ ರೋಹಿತ್ ಆಡುವುದು ಅನುಮಾನ

ಸಿಡ್ನಿ ಪಂದ್ಯದಲ್ಲಿ ಶರ್ಮಾ ಔಟ್?

ಸಿಡ್ನಿ: ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಸತತ ಬ್ಯಾಟಿಂಗ್ ವೈಫಲ್ಯ ಅನುಭವಿಸಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಐದನೇ ಹಾಗೂ ಸರಣಿಯ ನಿರ್ಣಾಯಕ ಪಂದ್ಯದಿಂದ ಕೈ ಬಿಡಲಾಗುತ್ತದೆ ಎಂದು ವರದಿಯಾಗಿದೆ. ಆ ಮೂಲಕ ಗಾಯದಿಂದ ಚೇತರಿಸಿಕೊಂಡಿರುವ ಶುಭಮನ್ ಗಿಲ್ ಮೂರನೇ ಕ್ರಮಾಂಕಕ್ಕೆ ಮರಳಲಿದ್ದು, ಕೆ.ಎಲ್.ರಾಹುಲ್ ಎಂದಿನಂತೆ ಯಶಸ್ವಿ ಜೈಸ್ವಾಲ್ ಜೊತೆ ಇನ್ನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ.

ಇದೆಲ್ಲದರ ನಡುವೆ ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವ ಸಾಧ್ಯತೆಯೂ ಇದೆ ಎಂದು ಹೇಳಲಾಗಿದೆ.

ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದ ಕಾರಣ ರೋಹಿತ್ ಶರ್ಮಾ ಅವರು ಪರ್ತ್ ಟೆಸ್ಟ್‌ಗೆ ಅಲಭ್ಯರಾಗಿದ್ದರು. ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದ ಜಸ್ಪ್ರೀತ್ ಬುಮ್ರಾ ನಾಯಕನಾಗಿ ಯಶಸ್ವಿಯಾಗಿದ್ದರು. ಈ ಪಂದ್ಯದಲ್ಲಿ ಭಾರತ ತಂಡ 295 ರನ್‌ಗಳಿಂದ ಭರ್ಜರಿ ಗೆಲುವು ಪಡೆದಿತ್ತು. ನಂತರ ಭಾರತ ತಂಡಕ್ಕೆ ಮರಳಿದ್ದ ರೋಹಿತ್ ಶರ್ಮಾ ಎರಡನೇ ಟೆಸ್ಟ್ ಪಂದ್ಯದಿಂದ ಭಾರತ ತಂಡವನ್ನು ಮುನ್ನಡೆಸಿದ್ದರು. ಆದರೆ, ಇವರು ನಾಯಕನಾಗಿ ಹಾಗೂ ಬ್ಯಾಟರ್ ಆಗಿ ವೈಫಲ್ಯವನ್ನು ಅನುಭವಿಸಿದ್ದರು.

ಟೀಮ್ ಮ್ಯಾನೇಜ್ಮೆಂಟ್ ಜೊತೆ ಮಾತು: ಸಿಡ್ನಿ ಟೆಸ್ಟ್ ಪಂದ್ಯಕ್ಕೂ ಮುನ್ನ ಭಾರತ ತಂಡದ ಟೀಮ್ ಮ್ಯಾನೇಜ್ಮೆಂಟ್ ರೋಹಿತ್ ಶರ್ಮಾ ಜೊತೆ ಮಾತನಾಡಿರಬಹುದು. ಈ ಹಿನ್ನೆಲೆಯಲ್ಲಿ 37ರ ಪ್ರಾಯದ ಬ್ಯಾಟರ್ ಸಿಡ್ನಿ ಟೆಸ್ಟ್ ಪಂದ್ಯದ ಬಳಿಕ ಟೆಸ್ಟ್ ಕ್ರಿಕೆಟ್ ವೃತ್ತಿ ಜೀವನಕ್ಕೆ ವಿದಾಯ ಹೇಳಿದರೂ ಅಚ್ಚರಿ ಇಲ್ಲ. ಏಕೆಂದರೆ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ತೋರುವಲ್ಲಿ ವಿಫಲರಾಗಿದ್ದಾರೆ ಹಾಗೂ ಅವರ ಫುಟ್ವರ್ಕ್ ಕೂಡ ಆಶಾದಾಯಕವಾಗಿಲ್ಲ.

ಸತತ ಬ್ಯಾಟಿಂಗ್ ವೈಫಲ್ಯ

ಕೆ.ಎಲ್.ರಾಹುಲ್‌ಗೆ ಇನ್ನಿಂಗ್ಸ್ ಆರಂಭಿಸಲು ಅವಕಾಶ ಮಾಡಿಕೊಟ್ಟಿದ್ದ ಅವರು, ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದರು. ಆದರೆ ಅವರಿಂದ ಹೇಳಿಕೊಳ್ಳುವಂಥ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದರು. ಮೂರನೇ ಟೆಸ್ಟ್ ಬಳಿಕ ಶುಭಮನ್ ಗಿಲ್ ಗಾಯಕ್ಕೆ ತುತ್ತಾಗಿದ್ದರು. ಈ ಹಿನ್ನೆಲೆಯಲ್ಲಿ ಅವರ ಸ್ಥಾನದಲ್ಲಿ ಕೆಎಲ್ ರಾಹುಲ್ ಆಡಿದ್ದರು ಹಾಗೂ ನಾಯಕ ರೋಹಿತ್ ಶರ್ಮಾ ಇನ್ನಿಂಗ್ಸ್ ಆರಂಭಿಸಿದ್ದರು. ಆದರೆ, ಆರಂಭಿಕ ಬ್ಯಾಟರ್ ಆಗಿಯೂ ರೋಹಿತ್ ಶರ್ಮಾ ವೈಫಲ್ಯ ಅನುಭವಿಸಿದ್ದರು.

ವರದಿಗಳ ಪ್ರಕಾರ ರೋಹಿತ್ ಶರ್ಮಾ ಅವರ ಫಾರ್ಮ್ ಅತ್ಯಂತ ಕಳಪೆಯಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಹೊಸ ವರ್ಷದ ಟೆಸ್ಟ್ ಪಂದ್ಯದಿಂದ ಕೈ ಬಿಡಬಹುದೆಂದು ವರದಿ ಮಾಡಿದೆ. ಒಂದು ವೇಳೆ ರೋಹಿತ್ ಶರ್ಮಾ ಅವರನ್ನು ಉಳಿಸಿಕೊಂಡರೆ, ಶುಭಮನ್ ಗಿಲ್ ಬೆಂಚ್ ಕಾಯಬೇಕಾಗುತ್ತದೆ. ಇಲ್ಲವಾದಲ್ಲಿ ಇನ್ಫಾರ್ಮ್ ಬ್ಯಾಟರ್ ಕೆಎಲ್ ರಾಹುಲ್ ಅವರನ್ನು ಕೈ ಬಿಡಬೇಕಾಗಬಹುದು.

ಟೀಂ ಇಂಡಿಯಾ ಜೆರ್ಸಿ ತೊಟ್ಟು ಆಸ್ಪತ್ರೆಯಿಂದ ಹೊರಬಂದ ಕಾಂಬ್ಳಿ

ಆಸ್ಪತ್ರೆಯಿಂದ ಕಾಂಬ್ಳಿ ಬಿಡುಗಡೆ

ಥಾಣೆ: ಭಾರತದ ಮಾಜಿ ಕ್ರಿಕೆಟಿಗ ವಿನೋದ್ ಕಾಂಬ್ಳಿ ಅವರು ಅನಾರೋಗ್ಯದಿಂದ ಚೇತರಿಸಿಕೊಂಡಿದ್ದು, ಇಲ್ಲಿನ ಭೀವಂಡಿಯಲ್ಲಿರುವ ಖಾಸಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಎರಡು ವಾರಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಕಾಂಬ್ಳಿ, ಬುಧವಾರ ಸಂಜೆ 4ರ ಸುಮಾರಿಗೆ ಆಸ್ಪತ್ರೆಯಿಂದ ತೆರಳಿದ್ದಾರೆ. ಆಸ್ಪತ್ರೆಯಿಂದ ಹೊರನಡೆಯುವಾಗ ಅವರು ಟೀಂ ಇಂಡಿಯಾ ಜೆರ್ಸಿ ತೊಟ್ಟು, ಬ್ಯಾಟ್ ಹಿಡಿದುಕೊಂಡಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಮೂತ್ರನಾಳದ ಸೋಂಕು ಮತ್ತು ಸ್ನಾಯು ಸೆಳೆತದಿಂದ ಬಳಲುತ್ತಿದ್ದ 52 ವರ್ಷದ ಕಾಂಬ್ಳಿ ಅವರನ್ನು ಡಿಸೆಂಬರ್ 21ರಂದು ಆಕೃತಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವುದನ್ನು ನಂತರ ಕಂಡುಬಂದಿತ್ತು.

ಮನೆಗೆ ತೆರಳುವಾಗ ಮಾಧ್ಯಮಗಳೊಂದಿಗೆ ಮಾತನಾಡಿರುವ ಕಾಂಬ್ಳಿ, ಹೊಸ ವರ್ಷದ ಸಂದೇಶ ಹಂಚಿಕೊಂಡಿದ್ದಾರೆ. 'ದುಶ್ಚಟಗಳು ಜೀವನವನ್ನು ನಾಶಮಾಡುತ್ತವೆ' ಎಂದಿರುವ ಅವರು, ಮದ್ಯ ಹಾಗೂ ಮಾದಕ ದ್ರವ್ಯಗಳಿಂದ ದೂರವಿರುವಂತೆ ಜನರಲ್ಲಿ ಮನವಿ ಮಾಡಿದ್ದಾರೆ.



ಆಸ್ಟ್ರೇಲಿಯಾದಲ್ಲೇ ಕಳೆದ ಒಂದು ತಿಂಗಳಿನಿಂದ ಬೀಡುಬಿಟ್ಟಿರುವ ಭಾರತ ಕ್ರಿಕೆಟ್ ತಂಡದ ಆಟಗಾರರು ಮತ್ತು ಆಸ್ಟ್ರೇಲಿಯಾ ತಂಡದ ಆಟಗಾರರನ್ನು ಆಸ್ಟ್ರೇಲಿಯಾದ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು.

ಕರಾಚಿಯಲ್ಲಿ ಇನ್ನೂ ಸಿದ್ಧವಾಗದ ಕ್ರೀಡಾಂಗಣ

ಕರಾಚಿ: ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಆರಂಭಕ್ಕೂ ಮುನ್ನ ಕರಾಚಿಯ ರಾಷ್ಟ್ರೀಯ ಕ್ರೀಡಾಂಗಣವನ್ನು ನವೀಕರಣಗೊಳಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಹರಸಾಹಸ ನಡೆಸುತ್ತಿದೆ. ಹೀಗಾಗಿ, ಇಲ್ಲಿ ನಿಗದಿಯಾಗಿದ್ದ ಪಂದ್ಯಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಪಿಸಿಬಿ ಮುಂದಾಗಿದೆ.

ಚಾಂಪಿಯನ್ಸ್ ಟ್ರೋಫಿಯ ಉದ್ಘಾಟನಾ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ. ಪಂದ್ಯವು ಫೆಬ್ರುವರಿ 19ರಂದು ಇದೇ ಕ್ರೀಡಾಂಗಣದಲ್ಲಿ ನಿಗದಿಯಾಗಿವೆ.

'ನವೀಕರಣ ಹಾಗೂ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿದೆ. ಕೆಲಸವು ಇನ್ನಷ್ಟು ವಿಳಂಬವಾಗಲಿದ್ದು, ಆಟಗಾರರಿಗೆ ತೊಂದರೆಯಾಗಲಿದೆ ಎಂಬ ಕಾರಣಕ್ಕೆ ಕರಾಚಿಯ ನ್ಯಾಷನಲ್ ಸ್ಟೇಡಿಯಂನಲ್ಲಿ (ಎನ್‌ಎಸ್ಕೆ) ಯಾವುದೇ ಪಂದ್ಯಗಳನ್ನು ನಡೆಸದಿರಲು ನಿರ್ಧರಿಸಲಾಗಿದೆ' ಎಂದು ಪಿಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಥಮ ದರ್ಜೆ ಟೂರ್ನಿ 'ಕ್ವಯೆದ್-ಎ-ಅಜಂ ಟ್ರೋಫಿ' ಫೈನಲ್ ಪಂದ್ಯವು ಇದೇ ಕ್ರೀಡಾಂಗಣದಲ್ಲಿ ನಿಗದಿಯಾಗಿತ್ತು. ಅದನ್ನು, ಯುಬಿಎಲ್ ಕಾಂಪ್ಲೆಕ್ಸ್ ಆವರಣಕ್ಕೆ ಸ್ಥಳಾಂತರಿಸಲಾಗಿದ್ದು, ಇಂದಿನಿಂದ (ಜನವರಿ 2ರಿಂದ) ಆರಂಭವಾಗಿದೆ. ವೆಸ್ಟ್ ಇಂಡೀಸ್ ವಿರುದ್ಧ ಇದೇ ತಿಂಗಳ ಕೊನೆಯಲ್ಲಿ ಆರಂಭವಾಗಲಿರುವ ಟೆಸ್ಟ್ ಸರಣಿಯು ಮುಲ್ತಾನ್‌ನಲ್ಲಿ ನಡೆಯಲಿದೆ ಎಂದು ಪಿಸಿಬಿ ಪ್ರಕಟಿಸಿದೆ. ಎರಡು ಪಂದ್ಯಗಳ ಸರಣಿಯ ಮೊದಲ ಪಂದ್ಯವು ಜನವರಿ 16ರಿಂದ 20ರ ವರೆಗೆ ಕರಾಚಿಯಲ್ಲಿ ಹಾಗೂ ಅಂತಿಮ ಟೆಸ್ಟ್ ಜನವರಿ 24ರಿಂದ 28ರ ವರೆಗೆ ಮುಲ್ತಾನ್‌ನಲ್ಲಿ ನಿಗದಿಯಾಗಿತ್ತು.

ಟಿ20 ಸರಣಿಯ ಕೊನೆಯ ಪಂದ್ಯ | 2006ರಲ್ಲಿ ಕೊನೆಯ ಬಾರಿಗೆ ನ್ಯೂಜಿಲೆಂಡ್‌ನಲ್ಲಿ ಗೆದ್ದಿದ್ದ ಶ್ರೀಲಂಕಾ

17 ವರ್ಷದ ನಂತರ ನ್ಯೂಜಿಲೆಂಡ್‌ನಲ್ಲಿ ಲಂಕಾ ಗೆಲುವು

ದೆಹಲಿ: ಕುಸಾಲ್ ಪೆರೇರಾ ಅವರ ಶತಕದ ಬಲದಿಂದ ಶ್ರೀಲಂಕಾ ತಂಡ ಮೂರನೇ ಹಾಗೂ ಟಿ20ಐ ಸರಣಿಯ ಕೊನೆಯ ಪಂದ್ಯದಲ್ಲಿ 7 ರನ್‌ಗಳ ಗೆಲುವು ಪಡೆದಿದೆ. ಆ ಮೂಲಕ 2006ರ ಬಳಿಕ ಅಂದರೆ 17 ವರ್ಷಗಳ ನಂತರ ಇದೇ ಮೊದಲ ಬಾರಿ ನ್ಯೂಜಿಲೆಂಡ್‌ನಲ್ಲಿ ಶ್ರೀಲಂಕಾ ತಂಡ ಟಿ20ಐ ಪಂದ್ಯವನ್ನು ಗೆದ್ದಿದೆ. ಈ ಪಂದ್ಯದ ಸೋಲಿನ ಹೊರತಾಗಿಯೂ ಕಿವೀಸ್ ಟಿ20ಐ ಸರಣಿಯನ್ನು 2-1 ಅಂತರದಲ್ಲಿ ಮುಡಿಗೇರಿಸಿಕೊಂಡಿತು.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾಗಿದ್ದ ಶ್ರೀಲಂಕಾ ತಂಡ ಪವರ್‌ಪ್ಲೇನಲ್ಲಿ ತನ್ನ ಆರಂಭಿಕ ಬ್ಯಾಟರ್‌ಗಳನ್ನು ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿತ್ತು. ಆದರೆ, ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದ ಕುಸಾಲ್ ಪೆರೇರಾ ಅವರು ಸ್ಫೋಟಕ ಬ್ಯಾಟ್ ಮಾಡಿ ಭರ್ಜರಿ ಶತಕವನ್ನು ಸಿಡಿಸಿದ್ದರು.ಇವರು ಎದುರಿಸಿದ ಕೇವಲ 44 ಎಸೆತಗಳಲ್ಲಿ ಸೆಂಚುರಿ ಬಾರಿಸಿದರು. ಆ ಮೂಲಕ ಅಂತಾರಾಷ್ಟ್ರೀಯ ಟಿ20ಐ ಕ್ರಿಕೆಟ್‌ನಲ್ಲಿ ಅತ್ಯಂತ ಸ್ಫೋಟಕ ಬ್ಯಾಟ್ ಮಾಡಿದ ಶ್ರೀಲಂಕಾ ಬ್ಯಾಟರ್ ಎನಿಸಿ ಕೊಂಡರು. ಪೆರೇರಾ ಅವರ ಸ್ಫೋಟಕ ಇನ್ನಿಂಗ್ಸ್ ನಲ್ಲಿ 4 ಸಿಕ್ಸರ್ ಹಾಗೂ 13 ಬೌಂಡರಿಗಳಿವೆ.

ಇವರಿಗೆ ಸಾಥ್ ನೀಡಿದ್ದ ಚರಿತಾ ಅಸಲಂಕ 46 ರನ್‌ಗಳನ್ನು ಕಲೆ ಹಾಕಿದರು. ಅಂತಿಮವಾಗಿ ಶ್ರೀಲಂಕಾ ತಂಡ ತನ್ನ ಪಾಲಿನ 20 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 218 ರನ್‌ಗಳನ್ನು ಕಲೆ ಹಾಕಿತ್ತು. ಇದು ಶ್ರೀಲಂಕಾ ತಂಡದ ಎರಡನೇ ಗರಿಷ್ಠ ಮೊತ್ತವಾಗಿದೆ. ಸ್ಫೋಟಕ ಶತಕ ಸಿಡಿಸಿ ಬ್ಯಾಟ್ ಮಾಡುತ್ತಿದ್ದ ಪೆರೇರಾ ಅವರನ್ನು 19ನೇ ಓವರ್‌ನಲ್ಲಿ ಡ್ಯಾರಿಲ್ ಮಿಚೆಲ್ ಔಟ್ ಮಾಡಿದ್ದರು. ಬಳಿಕ ಶ್ರೀಲಂಕಾ ನೀಡಿದ್ದ 219 ರನ್‌ಗಳ ಗುರಿಯನ್ನು ಹಿಂಬಾಲಿಸಿದ್ದ ನ್ಯೂಜಿಲೆಂಡ್ ತಂಡ ಸ್ಫೋಟಕ ಆರಂಭವನ್ನು ಪಡೆದಿತ್ತು. ಓಪನರ್ ಟಾಮ್ ರಾಬಿನ್ಸನ್ (37 ರನ್) ಹಾಗೂ ರಚಿನ್ ರವೀಂದ್ರ (69 ರನ್) ಪವರ್‌ಪ್ಲೇನಲ್ಲಿ 81 ರನ್‌ಗಳ ಜೊತೆಯಾಟವನ್ನು ಆಡಿದ್ದರು. ಈ ಇಬ್ಬರೂ ಆಕ್ರಮಣಕಾರಿ ಬ್ಯಾಟಿಂಗ್‌ನಿಂದ ಶ್ರೀಲಂಕಾ ಬೌಲರ್‌ಗಳು ಒತ್ತಡಕ್ಕೆ ಒಳಗಾಗಿದ್ದರು. ಈ ಹಂತದಲ್ಲಿ ಕಿವೀಸ್ ಸುಲಭವಾಗಿ ಈ ಗುರಿಯನ್ನು ತಲುಪಬಹುದೆಂದು ನಿರೀಕ್ಷಿಸಲಾಗಿತ್ತು.

ಆದರೆ, ಶ್ರೀಲಂಕಾ ತಂಡದ ಬೌಲರ್‌ಗಳು ನಿರ್ಣಾಯಕ ಸಮಯದಲ್ಲಿ ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದರು.ಅತ್ಯುತ್ತಮ ಬೌಲಿಂಗ್ ಪ್ರದರ್ಶನ ತೋರಿದ ಚರಿತ ಶ್ರೀಲಂಕಾ ಅವರು 50 ರನ್ ನೀಡಿದರೂ 3 ವಿಕೆಟ್‌ಗಳನ್ನು ಕಬಳಿಸಿದ್ದರು. ಆ ಮೂಲಕ ಕಿವೀಸ್ ತಂಡವನ್ನು ಕಡಿವಾಣ ಹಾಕುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಒಂದು ಹಂತದಲ್ಲಿ ಡ್ಯಾರಿಲ್ ಮಿಚೆಲ್ 35 ರನ್ ಗಳಿಸಿ ನ್ಯೂಜಿಲೆಂಡ್‌ಗೆ ಗೆಲುವು ಭರವಸೆಯನ್ನು ಮೂಡಿಸಿದ್ದರು. ಆದರೆ, ಅಂತಿಮವಾಗಿ ಶ್ರೀಲಂಕಾ ತಂಡ 7 ರನ್‌ಗಳಿಂದ ಗೆಲುವು ಪಡೆಯುವಲ್ಲಿ ಸಫಲವಾಯಿತು.

ವಿಟಾಕೀಸ್

ಸಾಮಾನ್ಯವಾಗಿ ಸಂಕ್ರಾಂತಿ ಸಮಯದಲ್ಲಿ ಪರಭಾಷಾ ಚಿತ್ರಗಳು ಬಿಡುಗಡೆಯಾಗುತ್ತವೆ. ಹಾಗಾಗಿ ಕನ್ನಡದ ದೊಡ್ಡ ಸಿನಿಮಾಗಳು ಬಿಡುಗಡೆಯಾಗುವುದಿಲ್ಲ. ನಮ್ಮ ಚಿತ್ರದ ಕಂಟೆಂಟ್ ಚೆನ್ನಾಗಿದೆ, ಜನರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿದೆ. ಹಾಗಾಗಿ ಸುಗ್ಗಿಯ ಸಂದರ್ಭದಲ್ಲಿಯೇ ನಮ್ಮ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ. ನಮ್ಮ ಸಿನಿಮಾ ಪ್ರೇಕ್ಷಕರಿಗೆ ಮೆಚ್ಚುಗೆಯಾಗುತ್ತದೆ ಎಂಬ ಭರವಸೆಯಿದೆ.

-ತರುಣ್ ಶಿವಪ್ಪ ನಿರ್ಮಾಪಕ

ಮೋಡಿ ಮಾಡಿದ ಭೂ ಮಂತರ್

ಶರಣ್, ಭೂಮಂತರ್ ಎನ್ನಲು ಸಿದ್ಧವಾಗಿದ್ದಾರೆ. ಬಹು ದಿನಗಳ ಬಳಿಕ ಶರಣ್ ತೆರೆಯಲ್ಲಿ ಪ್ರತ್ಯಕ್ಷವಾಗಲು ರೆಡಿಯಾಗಿದ್ದಾರೆ. ಹೌದು, ಭೂಮಂತರ್ ಬಿಡುಗಡೆಗೆ ರೆಡಿಯಾಗಿದ್ದು, ಮುಂದಿನ ವಾರ ಅದ್ದೂರಿಯಾಗಿ ತೆರೆಗೆ ಬರಲಿದೆ. ಕರ್ವ ಖ್ಯಾತಿಯ ನವನೀತ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸದ್ಯ ಭೂ ಮಂತರ್ ಚಿತ್ರದ ಟ್ರೇಲರ್ ಸಿನಿಪ್ರಿಯರ ಮೆಚ್ಚುಗೆ ಪಡೆದಿದೆ. ಭೂಮಂತರ್ ಹಾರರ್ ಜತೆಗೆ, ಥ್ರಿಲ್ಲರ್ ಸ್ಟೋರಿಯನ್ನು ಒಳಗೊಂಡಿದೆ. ಚಿತ್ರದ ಕಥೆ ಅದೊಂದು ದೊಡ್ಡ ಬಂಗಲೆಯಲ್ಲಿ ಸಾಗುತ್ತದೆ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ಶರಣ್

ಘೋಸ್ಟ್ ಹಂಟರ್ ಪಾತ್ರದಲ್ಲಿ ನಟಿಸಿದ್ದು, ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಉಳಿದಂತೆ ಚಿಕ್ಕಣ್ಣ, ಮೇಘನಾ ಗಾಂವ್ಕರ್, ಅದಿತಿ ಪ್ರಭುದೇವ, ಪ್ರಭು ಮುಂಡ್ಕರ್ ಮುಂತಾದವರು ತಾರಾಗಣದಲ್ಲಿದ್ದಾರೆ. ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ಮಾನಸಾ ತರುಣ್ ಹಾಗೂ ತರುಣ್ ಶಿವಪ್ಪ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಅನೂಪ್ ಕಟ್ಟುಕರನ್ ಛಾಯಾಗ್ರಹಣ ಹಾಗೂ ಚಂದನ್ ಶೆಟ್ಟಿ ಸಂಗೀತ ನಿರ್ದೇಶನ ಈ ಚಿತ್ರಕ್ಕಿದ್ದು, ಅವಿನಾಶ್ ಬಸುತ್ಕರ್ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ.

ಮಳೆಯಂತೆ ಬಂದ ಗೀತಾ

ದಶಕದ ಹಿಂದೆ ತೆರೆಗೆ ಬಂದ ಸಂಜು ವೆಡ್ಸ್ ಗೀತಾ ಸಿನಿಪ್ರಿಯರನ್ನು ಮೋಡಿ ಮಾಡಿತು .ಈಗ ಸಂಜು ಮತ್ತು ಗೀತಾ ಮತ್ತೆ ತೆರೆಗೆ ಬರುತ್ತಿದ್ದಾರೆ. ಇಲ್ಲಿಯೂ ಕಿಟ್ಟಿ ಸಂಜುವಾಗಿ ಕಾಣಿಸಿಕೊಳ್ಳುತ್ತಿದ್ದು, ರಮ್ಯಾ ಬದಲು ರಚ್ಚು, ಗೀತಾಳಾಗಿ ಕಂಗೊಳಿಸಲಿದ್ದಾರೆ. ಇಲ್ಲಿಯೂ ಮನಸೂರೆಗೊಳ್ಳುವ ಮನಮೋಹಕ ಲವ್ ಸ್ಟೋರಿ ಇದೆ. ಅದರ ಜತೆಗೆ ರೈತ ಹೋರಾಟ ಕಥೆಯೂ ಇದೆ.

ಮೊದಲ ಭಾಗದಂತೆಯೇ ಇಲ್ಲಿಯೂ ಮಧುರ ಹಾಡಗಳಿವೆ. ಅದರಲ್ಲಿಯೂ ಮೆಲೋಡಿಯಾಗಿ ಮೂಡಿಬಂದಿರುವ ಮಳೆಯಂತೆಯೇ ಬಾ.. ಹಾಡು ಕೇಳಲು ಬಲು ಇಂಪಾಗಿದೆ. ಕಿಚ್ಚ ಸುದೀಪ್ ಈ ಕೇಳಿ ಮೆಚ್ಚಿ ಕೊಂಡಾಡಿದ್ದಾರೆ. ಕವಿರಾಜ್ ಸಾಹಿತ್ಯದ ಈ ಹಾಡಿಗೆ ಸಂಗೀತಾ ರವೀಂದ್ರನಾಥ್ ದನಿಯಾಗಿದ್ದು, ಶ್ರೀಧರ್.ವಿ.ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ. ಈ ಹಾಡಿನಲ್ಲಿ ರಚ್ಚು ಬಲು ಮುದ್ದಾಗಿ ಕಂಗೊಳಿಸಿದ್ದು, ಶ್ರೀನಗರ ಕೊಟ್ಟಿ ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ. ಸ್ವಿಟ್ಜರ್ ಲ್ಯಾಂಡ್‌ನ ಸುಂದರ ಲೊಕೇಷನ್‌ನಲ್ಲಿ ಹಾಡಿನ ಚಿತ್ರೀಕರಣ ನಡೆಸಲಾಗಿದೆ. ಶಿಡ್ಲಘಟ್ಟದ ರೇಷ್ಮೆ ಬೆಳೆಗಾರರ ಹೋರಾಟದ ವಿಚಾರವನ್ನು ಹಿನ್ನೆಲೆಯಾಗಿಟ್ಟುಕೊಂಡು ನಾಗಶೇಖರ್ ಈ ಕಥೆ ಹೆಣೆದಿದ್ದು, ಅದಕ್ಕೆ ನವಿರಾದ ಪ್ರೇಮಕಥೆ ಬೆರೆಸಿ ನಿರ್ದೇಶಿಸಿದ್ದಾರೆ. ಕಿಟ್ಟಿ ರೇಷ್ಮೆ ಬೆಳೆಗಾರನಾಗಿ ಅಭಿನಯಿಸಿದ್ದಾರೆ. ನಟ ಚೇತನ್ ಚಂದ್ರ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ರಾಗಿಣಿ ದ್ವಿವೇದಿ ಹಾಡೊಂದರಲ್ಲಿ ಹೆಜ್ಜೆ ಹಾಕಿದ್ದಾರೆ. ಸತ್ಯ ಹೆಗಡೆ ಛಾಯಾಗ್ರಹಣ, ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ, ರಂಗಾಯಣ ರಘು, ಸಾಧು ಕೋಕಿಲ, ಸಂಪತ್ ಕುಮಾರ್, ತಬಲಾ ನಾಣಿ, ಗಿಚ್ಚಿಗಿಲಿಗಿಲಿ ವಿನೋದ್ ಸೇರಿದಂತೆ ಹಲವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಇದು ಅಪ್ಪಟ ಕೌಟುಂಬಿಕ ಕಥೆಯ ಸಿನಿಮಾ, ಜತೆಗೆ ಒಳ್ಳೆಯ ಲವ್ ಸ್ಟೋರಿಯೂ ಇದೆ. ಅಣ್ಣಾವ್ರ ಬಂಗಾರದ ಮನುಷ್ಯ ಚಿತ್ರವನ್ನು ನೆನಪಿಸುತ್ತದೆ ಎಂದು ನಿರ್ಮಾಪಕ ಛಲವಾದಿ ಕುಮಾರ್ ತಿಳಿಸಿದರು.

ಈ ಸಿನಿಮಾದ ಒಂದೊಂದು ಹಾಡೂ ಒಂದೊಂದು ಪ್ಯಾಟ್ರನ್‌ನಲ್ಲಿದೆ. ಚಿತ್ರದಲ್ಲಿ ಹೊಸ ಗಾಯಕರನ್ನು ಪರಿಚಯಿಸಿದ್ದೇವೆ. ಪ್ರತಿಯೊಂದು ಹಾಡು ಕೂಡ ಸಿನಿಪ್ರಿಯರ ಮನದಲ್ಲಿ ಅಚ್ಚಳಿಯದೇ ಉಳಿಯುತ್ತದೆ ಎಂದು ಸಂಗೀತ ನಿರ್ದೇಶಕ ಶ್ರೀಧರ್ ವಿ. ಸಂಭ್ರಮ್ ಹೇಳಿದರು. ಪವಿತ್ರಾ ಇಂಟರ್‌ನ್ಯಾಷನಲ್ ಮೂವಿ ಮೇಕರ್ಸ್ ಬ್ಯಾನರ್‌ನಲ್ಲಿ ಚಲವಾದಿ ಕುಮಾರ್ ಚಿತ್ರ ನಿರ್ಮಾಣ ಮಾಡಿದ್ದಾರೆ.

ಸಂಜು ವೆಡ್ಸ್ ಗೀತಾ 2 ಕಥೆಯ ಕ್ರೆಡಿಟ್ ಸುದೀಪ್ ಅವರಿಗೆ ಸಲ್ಲಬೇಕು. ಮಾಣಿಕ್ಯ ಚಿತ್ರದ ಚಿತ್ರೀಕರಣದ ವೇಳೆ ಈ ಕಥೆಯ ಎಳೆಯನ್ನು ಹೇಳಿದ್ದರು. ಅವರು ಹೇಳಿದ ಕಥೆ ಇಂದು ಸಿನಿಮಾವಾಗಿ ಮೂಡಿಬಂದಿದೆ. ನಮ್ಮ ಚಿತ್ರದ ಮೆಲೋಡಿ ಹಾಡನ್ನು ರಿಲೀಸ್ ಮಾಡುವ ಮೂಲಕ ನಮಗೆ ಮತ್ತೊಮ್ಮೆ ಹರಸಿದ್ದಾರೆ. ಶಿಡ್ಲಘಟ್ಟದಲ್ಲಿ ಪ್ರಾರಂಭವಾಗುವ ಕಥೆ ಸ್ವಿಟ್ಜರ್‌ಲ್ಯಾಂಡ್‌ವರೆಗೂ ಸಾಗುತ್ತದೆ.

-ನಾಗಶೇಖರ್ ನಿರ್ದೇಶಕ

ಪ್ರೇಮಿಗಳ ದಿನಕ್ಕೆ ಭುವನಂ ಗಗನಂ

ಶೀರ್ಷಿಕೆಯಲ್ಲಿಯೇ ಮನಗೆದ್ದಿರುವ ಭುವನಂ ಗಗನಂ ತೆರೆಗೆ ಸಿದ್ಧವಾಗಿದ್ದು ಫೆಬ್ರವರಿ 14ರ ಪ್ರೇಮಿಗಳ ದಿನದಂದು ತೆರೆಗೆ ಬರಲಿದೆ. ಈ ಹಿಂದೆ ರಾಜರು ಚಿತ್ರವನ್ನು ನಿರ್ದೇಶಿಸಿದ್ದ ಗಿರೀಶ್ ಮೂಲಿಮನಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಭುವನಂ ಗಗನಂ ಲವ್, ರೊಮ್ಯಾಂಟಿಕ್, ಫ್ಯಾಮಿಲಿ ಎಮೋಷನ್ ಕಥಾಹಂದರ ಹೊಂದಿದ್ದು, ನಗರ, ಹಳ್ಳಿ ಹೀಗೆ ಎರಡು ಕಡೆಯೂ ಸಾಗುತ್ತದೆ. ಎರಡು ಬ್ಯಾಕ್ ಡ್ರಾಪ್‌ನಲ್ಲಿ ನಡೆಯುವ ಕಥೆಯಾಗಿದ್ದು, ಪ್ರಮೋದ್ ಹಾಗೂ ಪೃಥ್ವಿಅಂಬರ್ ನಾಯಕರಾಗಿ ನಟಿಸಿದ್ದಾರೆ. ಇಬ್ಬರ ಪಾತ್ರಗಳು ಬೇರೆ ಬೇರೆ ಟ್ರ್ಯಾಕ್‌ನಲ್ಲಿ ಸಾಗುತ್ತದೆ. ಇಬ್ಬರು ಬೇರೆಯಾಗಿ ಸಾಗಿದರೂ ಒಂದು ಹಂತದಲ್ಲಿ ಜತೆಯಾಗುತ್ತಾರೆ. ಅದು ಯಾಕೆ, ಅದಕ್ಕೆ ಕಾರಣ ಏನು, ಮುಂದೇನಾಗುತ್ತದೆ ಎಂಬುದೇ ಸಿನಿಮಾದ ಕಥೆ. ಪ್ರಮೋದ್‌ಗೆ ಜತೆಯಾಗಿ ಲವ್ ಮಾಕ್ಟೇಲ್ ಖ್ಯಾತಿಯ ರೆಚೆಲ್ ಡೇವಿಡ್, ಪೃಥ್ವಿ ಜೋಡಿಯಾಗಿ ಅಶ್ವಥಿ ನಟಿಸಿದ್ದಾರೆ. ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ಪ್ರಕಾಶ್ ತುಮ್ಮಿನಾಡು, ಸಿಂಗು ಶ್ರೀಧರ್, ಹರಿಣಿ, ಸ್ಪರ್ಶ ರೇಖಾ, ಚೇತನ್ ದುರ್ಗ ಮುಂತಾದವರು ತಾರಾಬಳಗದಲ್ಲಿದ್ದಾರೆ. ಉದಯ್ ಲೀಲಾ ಛಾಯಾಗ್ರಹಣ, ವಿಜಯ್ ಸಂಗೀತ ನಿರ್ದೇಶನ, ಸುನೀಲ್ ಕಶ್ಯಪ್ ಸಂಕಲನ, ರವಿವರ್ಮ, ಅರ್ಜುನ್, ಥ್ರಿಲ್ಲರ್ ಮಂಜು, ನರಸಿಂಹ ಸಾಹಸ ನಿರ್ದೇಶನ ಈ ಸಿನಿಮಾಕ್ಕಿದೆ. ಮೈಸೂರು, ಹಾವೇರಿ, ಕುದುರೆಮುಖ, ಕಳಸ, ಕನ್ಯಾಕುಮಾರಿ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಎಸ್‌ವಿಸಿ ಫಿಲಂಸ್ ಬ್ಯಾನರ್‌ನಲ್ಲಿ ಎಂ. ಮುನೇಗೌಡ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.